

ಕರ್ನಾಟಕ ವಿಧಾನ ಪರಿಷತ್ತು

ಹಕ್ಕುಬಾಧ್ಯತಾ ಸಮಿತಿಯ

ನೂರ ಐದನೆಯ ವರದಿ

ವಿಧಾನ ಪರಿಷತ್ತಿಗೆ ಸಲ್ಲಿಸಿದ ದಿನಾಂಕ: 21.08.2026

ಕರ್ನಾಟಕ ವಿಧಾನ ಪರಿಷತ್ತು ಸಚಿವಾಲಯ

ವಿಧಾನಸೌಧ, ಬೆಂಗಳೂರು–560001

ಸಮಿತಿಯ ರಚನೆ

(2025–26)

ಅಧ್ಯಕ್ಷರು

ಶ್ರೀ ಮಂಜುನಾಥ ಭಂಡಾರಿ

ಸಮಿತಿಯ ಸದಸ್ಯರು

ಶ್ರೀಯುತರುಗಳಾದ

1.	ಭಾರತಿ ಶೆಟ್ಟಿ	ವಿಧಾನ ಪರಿಷತ್ತಿನ ಸದಸ್ಯರು
2.	ಎಸ್.ವಿ. ಸಂಕನೂರ	ವಿಧಾನ ಪರಿಷತ್ತಿನ ಸದಸ್ಯರು
3.	ನಿರಾಣಿ ಹಣಮಂತ ರುದ್ದಪ್ಪ	ವಿಧಾನ ಪರಿಷತ್ತಿನ ಸದಸ್ಯರು
4.	ಶರವಣ ಟಿ.ಎ.	ವಿಧಾನ ಪರಿಷತ್ತಿನ ಸದಸ್ಯರು
5.	ಡಾ:ಚಂದ್ರಶೇಖರ ಬಿ ಪಾಟೀಲ	ವಿಧಾನ ಪರಿಷತ್ತಿನ ಸದಸ್ಯರು
6.	ಕೆ.ಎಸ್. ನವೀನ್	ವಿಧಾನ ಪರಿಷತ್ತಿನ ಸದಸ್ಯರು
7.	ತಿಪ್ಪಣ್ಣಪ್ಪ ಕಮಕನೂರ	ವಿಧಾನ ಪರಿಷತ್ತಿನ ಸದಸ್ಯರು
8.	ರಾಮೋಜಿಗೌಡ	ವಿಧಾನ ಪರಿಷತ್ತಿನ ಸದಸ್ಯರು

2024–25 ನೇ ಸಾಲಿನ ಸಮಿತಿಯ ವಿವರ

ಶ್ರೀಯುತರುಗಳಾದ

1.	ಎಂ. ನಾಗರಾಜು	ಅಧ್ಯಕ್ಷರು
2.	ಪಿ.ಹೆಚ್. ಪೂಜಾರ್	ಸದಸ್ಯರು
3.	ಕೆ.ಎ. ತಿಪ್ಪೇಸ್ವಾಮಿ	ಸದಸ್ಯರು
4.	ಡಾ:ಎಂ.ಜಿ. ಮುಳೆ	ಸದಸ್ಯರು
5.	ಡಾ:ತಳವಾರ ಸಾಬಣ್ಣ	ಸದಸ್ಯರು
6.	ಕೇಶವಪ್ರಸಾದ್ ಎಸ್	ಸದಸ್ಯರು
7.	ಜಗದೇವ್ ಗುತ್ತೇದಾರ್	ಸದಸ್ಯರು

8.	ಭೀಮರಾವ್ ಬಸವರಾಜ್ ಪಾಟೀಲ್	ಸದಸ್ಯರು
9.	ರಾಮೋಜಿಗೌಡ	ಸದಸ್ಯರು
10.	ಡಿ.ಟಿ. ಶ್ರೀನಿವಾಸ್	ಸದಸ್ಯರು

ಕರ್ನಾಟಕ ವಿಧಾನ ಪರಿಷತ್ತಿನ ಅಧಿಕಾರಿಗಳು

ಶ್ರೀಯುತರುಗಳಾದ

1.	ಕೆ.ಆರ್. ಮಹಾಲಕ್ಷ್ಮಿ	ಕಾರ್ಯದರ್ಶಿ
2.	ಎಸ್. ನಿರ್ಮಲ	ಕಾರ್ಯದರ್ಶಿ–2
3.	ಬಿ.ಎ. ಬಸವರಾಜು	ಉಪ ಕಾರ್ಯದರ್ಶಿ
4.	ಕೆ. ರೇಖಾ	ಅಧೀನ ಕಾರ್ಯದರ್ಶಿ

ಮುನ್ನುಡಿ

ಕರ್ನಾಟಕ ವಿಧಾನ ಪರಿಷತ್ತು ಭಾರತ ಸಂವಿಧಾನದ ಅನುಚ್ಛೇಧ 171ರ ರೀತ್ಯಾ ರಚನೆಗೊಂಡಿದ್ದು, ವಿಧಾನ ಪರಿಷತ್ತಿನಲ್ಲಿ ಒಟ್ಟು 75 ಸದಸ್ಯರುಗಳಿದ್ದು, ಅವರಲ್ಲಿ 11 ಜನ ನಾಮನಿರ್ದೇಶನ ಮೂಲಕ, 25 ಜನರು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ, 7 ಜನರು ಶಿಕ್ಷಕರ ಕ್ಷೇತ್ರದಿಂದ, 7ಜನರು ಪದವೀಧರರ ಕ್ಷೇತ್ರದಿಂದ ಮತ್ತು 25 ಜನರು ವಿಧಾನ ಸಭಾ ಸದಸ್ಯರುಗಳಿಂದ ಚುನಾಯಿತರಾಗಿರುತ್ತಾರೆ. ಮಾನ್ಯ ಸದಸ್ಯರುಗಳು ನೇರವಾಗಿ ಆಯ್ಕೆಯಾಗಿಲ್ಲದಿದ್ದರು, ಪರೋಕ್ಷವಾಗಿ ಜನಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸುತ್ತಾರೆ. ಅವರು ಸದಸ್ಯರಾಗಿ ನಿರ್ವಹಿಸುವಂತಹ ಕಾರ್ಯಗಳಿಗೆ ಅಡಚಣೆಯಾದಲ್ಲಿ ಅವರ ಹಕ್ಕಿಗೆ ಚ್ಯುತಿ ಉಂಟಾಗಿದೆಯೆಂದು ಸದನದಲ್ಲಿ ಸಭಾಪತಿಯವರ ಅನುಮತಿ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 174ರ ರೀತ್ಯಾ ಹಕ್ಕುಚ್ಯುತಿ ಪ್ರಶ್ನೆಯನ್ನು ಹಾಕಬಹುದು. ಸದರಿ ವಿಷಯವು ಕ್ರಮವಾಗಿದೆಯೆಂದು ಭಾವಿಸಿದಲ್ಲಿ ಸದನದಲ್ಲಿ ಪ್ರಸ್ತಾವಿಸಲು ಅವಕಾಶ ನೀಡಲಾಗುತ್ತದೆ. ಸದರಿ ಹಕ್ಕುಚ್ಯುತಿ ಸೂಚನೆಯನ್ನು ಸದನದಲ್ಲಿ ತೀರ್ಮಾನಿಸಬಹುದು ಅಥವಾ ನಿಯಮ 179ರ ರೀತ್ಯಾ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಗೆ ವಹಿಸಲಾಗುತ್ತದೆ.

ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 250ರ ರೀತ್ಯಾ ರಚನೆಗೊಂಡಿದ್ದು, ಸಮಿತಿಗೆ ವಹಿಸಲಾಗುವ ಪ್ರತಿಯೊಂದು ಹಕ್ಕುಬಾಧ್ಯತಾ ಸೂಚನೆಯನ್ನು ಪರಿಶೀಲಿಸತಕ್ಕದ್ದು ಮತ್ತು ಪ್ರತಿಯೊಂದು ಸಂದರ್ಭದ ಸತ್ಯಾಂಶಗಳನ್ನು ನೋಡಿ, ಹಕ್ಕುಬಾಧ್ಯತಾ ಉಲ್ಲಂಘನೆಯು ನಡೆದಿದೆಯೇ ಎಂಬುದನ್ನು ನಿರ್ಧರಿಸತಕ್ಕದ್ದು ಮತ್ತು ಉಲ್ಲಂಘನೆಯಾಗಿದ್ದರೆ ಅದರ ಸ್ವರೂಪ ಮತ್ತು ಸಂದರ್ಭಗಳನ್ನು ಆಧರಿಸಿ ಯುಕ್ತವೆಂದು ತಿಳಿಯುವಂಥ ಶಿಫಾರಸ್ಸುಗಳನ್ನು ಮಾಡತಕ್ಕದ್ದು. ಹಕ್ಕುಬಾಧ್ಯತಾ ಸಮಿತಿಯು ಅರೆನ್ಯಾಯಿಕ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ.

ಭಾರತ ಸಂವಿಧಾನದ ಅನುಚ್ಛೇಧ 105ರ ರೀತ್ಯಾ ಸದನಗಳ ಸದಸ್ಯರುಗಳಿಗೆ ವಿಶೇಷ ಅಧಿಕಾರ/ಹಕ್ಕುಗಳನ್ನು ನೀಡಲಾಗಿರುತ್ತದೆ. ಸಂಸತ್ತಿನ ಎರಡು ಸದನಗಳ ಮತ್ತು ಅದರ ಸದಸ್ಯರುಗಳ ಹಾಗೂ ಸಮಿತಿಗಳ ಅಧಿಕಾರಗಳನ್ನು ವಿಶೇಷಾಧಿಕಾರಗಳನ್ನು ವಿಶೇಷ ವಿನಾಯಿತಿಗಳನ್ನು ಸಂವಿಧಾನದ 105ನೇ ಅನುಚ್ಛೇಧದಲ್ಲಿ ಹೇಳಲಾಗಿದೆ ಈ ಅನುಚ್ಛೇಧದಲ್ಲಿ ಸಂಸತ್ತಿನಲ್ಲಿ ವಾಕ್ ಸ್ವಾತಂತ್ರ್ಯದ ಹಕ್ಕಿಗೆ ಮತ್ತು ಸಂಸತ್ತಿನ ಸದಸ್ಯರಿಗೆ ಸಂಸತ್ತಿನಲ್ಲಿ ಅಥವಾ ಅದರ ಯಾವುದೇ ಸಮಿತಿಯಲ್ಲಿ ತಾನು ಹೇಳಿದ ಯಾವುದೇ ವಿಚಾರಕ್ಕೆ ಅಥವಾ ತಾನು ಕೊಟ್ಟ ಯಾವುದೇ ಮತಕ್ಕೆ ಸಂಬಂಧಿಸಿದಂತೆ ಯಾವುದೇ

ನ್ಯಾಯಾಲಯದಲ್ಲಿ ವ್ಯವಹರಣೆಗಳಿಗೆ ಗುರಿಯಾಗದಂತೆ ವಿಶೇಷ ವಿನಾಯಿತಿಗೆ ನಿರ್ದಿಷ್ಟವಾಗಿ ಉಪಬಂಧ ಕಲ್ಪಿಸಲಾಗಿದೆ.

ಕಾನೂನಿನ ದೃಷ್ಟಿಯಲ್ಲಿ ಎಲ್ಲಾ ನಾಗರೀಕರು ಸಮಾನರು ಎಂದು ಭಾವಿಸಬೇಕಾದುದು ಮೂಲ ತತ್ವವಾಗಿರುತ್ತದೆ. ಸಂಸದೀಯ ಭಾಷೆಯಲ್ಲಿ ವಿಶೇಷ ಅಧಿಕಾರ ಎಂದರೆ ಸಂಸತ್ತಿನ ಪ್ರತಿಯೊಂದು ಸದನಕ್ಕೆ ಮತ್ತು ಪ್ರತಿಯೊಂದು ಸದನದ ಸಮಿತಿಗಳಿಗೆ ಸಮೂಹಿಕವಾಗಿ ಮತ್ತು ಪ್ರತಿಯೊಂದು ಸದನದ ಸದಸ್ಯರಿಗೆ ವ್ಯಕ್ತಿಗತವಾಗಿಇರುವಂತಹ ಕೆಲವೊಂದು ಹಕ್ಕುಗಳು ಮತ್ತು ವಿಶೇಷ ವಿನಾಯಿತಿಗಳು. ಸಂಸದೀಯ ವಿಶೇಷಾಧಿಕಾರಗಳ ಉದ್ದೇಶವು ಸಂಸತ್ತಿನ ಸ್ವಾತಂತ್ರ್ಯ ಪರಮಾಧಿಕಾರ ಮತ್ತು ಘನತೆಯನ್ನು ರಕ್ಷಿಸುವುದೇ ಆಗಿದೆ. ವಿಶೇಷಾಧಿಕಾರಗಳು ಸಂವಿಧಾನವು ಸಂಸತ್ತಿಗೆ ವಹಿಸಿದ ಕರ್ತವ್ಯಗಳನ್ನು ಯುಕ್ತವಾಗಿ ನಿರ್ವಹಿಸಲು ಅವಶ್ಯಕ. ಈ ಅಧಿಕಾರಗಳು ಪ್ರತಿಯೊಬ್ಬ ಸದಸ್ಯರಿಗೂ ಇರುತ್ತವೆ ಏಕೆಂದರೆ ಸದನವು ತನ್ನ ಸದಸ್ಯರ ಸೇವೆಯ ಬಳಕೆಯಲ್ಲಿ ಅಡೆ ತಡೆಯಿದ್ದರೆ ಕರ್ತವ್ಯಗಳನ್ನು ನಿರ್ವಹಿಸಲಾರದು. ಪ್ರಯುಕ್ತ, ಪ್ರತಿಯೊಂದು ಸದನಕ್ಕೆ ತನ್ನ ಸದಸ್ಯರನ್ನು ರಕ್ಷಿಸಲು ಮತ್ತು ತನ್ನ ಪರಮಾಧಿಕಾರವನ್ನು ಮತ್ತು ಘನತೆಯನ್ನು ಸಂರಕ್ಷಿಸಿಕೊಳ್ಳುವುದಕ್ಕಾಗಿ ವಿಶೇಷ ಅಧಿಕಾರಗಳು ಇರುತ್ತವೆ.

ಹಾಗಾಗಿ ಸದಸ್ಯರಿಗೆ ಸದನದಲ್ಲಿ ಅವರ ಕರ್ತವ್ಯಗಳನ್ನು ಯಾವುಧೇ ಭಯ ಮತ್ತು ಅಡ್ಡಿ ಅಡಚಣೆ ಇಲ್ಲದೆ ನಿಭಾಯಿಸಲು ಹಾಗೂ ಸದನದ ಹೊರಗೆ ತನ್ನ ಸಂಸದೀಯ ಪದದ ಕರ್ತವ್ಯಗಳನ್ನು ಅದರ ಪ್ರಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವಷ್ಟರ ಮಟ್ಟಿಗೆ ಅನ್ವಯವಾಗುತ್ತದೆ. ಕಾನೂನುಗಳು ಅನ್ವಯವಾಗುವ ವಿಷಯದಲ್ಲಿ ಹೀಗಾಗಿ ವಿಶೇಷಾಧಿಕಾರಗಳನ್ನು ಅರ್ಥೈಸುವಾಗ ಸಂಸತ್ತಿನ ವಿಶೇಷಾಧಿಕಾರಗಳನ್ನು ಅದರ ಸದಸ್ಯರಿಗೆ ಸಂಸತ್ತಿನಲ್ಲಿ ಅವರ ಕರ್ತವ್ಯಗಳನ್ನು ಯಾವುದೇ ಭಯ ಇಲ್ಲ ಅಥವಾ ಅಡ್ಡಿ ಅಡಚಣೆಯಿಲ್ಲದೆ ನಿಭಾಯಿಸಲು ಸಾಧ್ಯವಾಗುವಂತೆ ಮಾಡುವ ಉದ್ದೇಶಕ್ಕಾಗಿ ಅವರಿಗೆ ನೀಡಲಾಗಿದೆ ಎಂಬ ಸಾಮಾನ್ಯ ತತ್ವಕ್ಕೆ ಗಮನ ನೀಡಬೇಕು ಅವು ಪ್ರತಿಯೊಬ್ಬ ಸದಸ್ಯರಿಗೆ "ಸದನವು ಮುಕ್ತವಾಗಿ ಅದರ ಪ್ರಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವಷ್ಟರ ಮಟ್ಟಿಗೆ ಮಾತ್ರವೇ ಅನ್ವಯವಾಗುತ್ತವೆ. ಬಿಡುಗಡೆ ಮಾಡುವುದಿಲ್ಲ" ಕಾನೂನುಗಳು ಅನ್ವಯವಾಗುವ ವಿಷಯದಲ್ಲಿ ಸಂಸತ್ತಿನ ವಿಶೇಷಾಧಿಕಾರಗಳು ಸಂಸತ್ತಿನ ಒಬ್ಬ ಸದಸ್ಯನನ್ನು ಸಾಮಾನ್ಯ ನಾಗರೀಕನಿಂದ, ಸಂಸತ್ತಿನ ಕಾರ್ಯಗಳು ಅನ್ವಯವಾಗದಿರುವುದಕ್ಕೆ ಯುಕ್ತ ಮತ್ತು ಸಾಕಷ್ಟು ಕಾರಣಗಳಿದ್ದ ಹೊರತು ಬೇರೆ ಮಾಡುವುದಿಲ್ಲ.ಸಂಸದೀಯ ಕರ್ತವ್ಯಗಳನ್ನು ನಿರ್ವಹಿಸಿರುವ ಸಮಯದ ಹೊರತು ಸಾಮಾನ್ಯ ಪ್ರಜೆಗಳಂತೆ ಅದೇ ಹಕ್ಕುಗಳು ಮತ್ತು ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ.

ಪ್ರತಿಯೊಂದು ಸದನವು ತನಗಿರುವ ವಿಶೇಷಾಧಿಕಾರಗಳ ರಕ್ಷಕ, ಪಾಲಕ ಆಗಿರುತ್ತದೆ. ಯಾವುದೇ ರೀತಿಯಲ್ಲಿ ಆ ವಿಶೇಷಾಧಿಕಾರಗಳ ಉಲ್ಲಂಘನೆಯಾಗುವಂತಹ ಯಾವುದೇ ಸಂದರ್ಭಗಳು ಸಂಭವಿಸಿದಲ್ಲಿ ಸದನವೇ ಏಕಮಾತ್ರ ನ್ಯಾಯಾವಾದಿ, ಅಷ್ಟೇ ಅಲ್ಲ ನಿಂದನೆ ಅಪರಾಧ ಮಾಡಿರುವನೆಂದು ಅದು ಭಾವಿಸಿದ ಯಾರೇ ವ್ಯಕ್ತಿಯನ್ನು ಕಾರಾವಾಸ ಅಥವಾ ವಾಗ್ದಂಡನೆ ದಂಡನೆಗೆ ಗುರಿ ಪಡಿಸುವುದು ಸರಿಯೆಂದು ತಾನು ಭಾವಿಸಿದರೆ ಸದನವು ಆ ದಂಡನೆ ವಿಧಿಸಬಹುದು. ಸದನದಿಂದ ದಂಡನೆ ಅಧಿಕಾರ ವ್ಯಾಪ್ತಿಯನ್ನು ಅದರ ಸ್ವಂತ ಸದಸ್ಯರಿಗೆ ಅಥವಾ ಸದನದಲ್ಲೇ ಮಾಡಿದ ಅಪರಾಧಗಳಿಗೆ ಮಾತ್ರ ಸೀಮಿತಗೊಳಿಸಿಲ್ಲ ಆದರೆ ಸದಸ್ಯರು ಅಥವಾ ಸದಸ್ಯರಲ್ಲದ ಇತರ ವ್ಯಕ್ತಿಗಳು ಸದನಕ್ಕೆ ಸದನದ ಒಳಗಾಗಲಿ ಅಥವಾ ಸದನದ ಆಚೆಯಾಗಲಿ ಮಾಡಿದ ಎಲ್ಲಾ ನಿಂದನೆಗಳಿಗೂ ವ್ಯಾಪ್ತವಾಗುತ್ತದೆ.

ಸದನದ ನಿಂದನೆಯನ್ನು ಮಾಡುವ ಅಥವಾ ಅದರ ಯಾವುದೇ ವಿಶೇಷ ಹಕ್ಕುಗಳ ಉಲ್ಲಂಘನೆಯನ್ನು ಮಾಡುವ ಯಾರೇ ವ್ಯಕ್ತಿಯನ್ನು ದಂಡಿಸುವ ಸದನಕ್ಕೆ ಇರುವ ಈ ಅಧಿಕಾರವು ಅತ್ಯಂತ ಪ್ರಮುಖವಾದ ವಿಶೇಷ ಹಕ್ಕು. ಈ ಅಧಿಕಾರವೇ ಸಂಸತ್ತಿನ ವಿಶೇಷ ಹಕ್ಕುಗಳಿಗೆ ಅಸ್ತಿತ್ವವನ್ನು ನೀಡಿದೆ ಮತ್ತು ಅದರ ಹಕ್ಕುಗಳ ರಕ್ಷಣೆಗೆ ಮತ್ತು ಅದರ ಘನತೆಯ ನಿರ್ವಹಣೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಸಂಸತ್ತಿನ ಸಾರ್ವಭೌಮತ್ವ ಸ್ವರೂಪ ಸುಸ್ಪಷ್ಟವಾಗುತ್ತದೆ.

ವಿಧಾನ ಮಂಡಲದ ಮಾನ್ಯ ಸದಸ್ಯರುಗಳನ್ನು ಸರ್ಕಾರಿ ಸಭೆ/ಸಮಾರಂಭಗಳಿಗೆ ಆಹ್ವಾನಿಸುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಶಿಷ್ಟಾಚಾರ ಇಲಾಖೆಯ ವತಿಯಿಂದ ಹಲವಾರು ಸುತ್ತೋಲೆ/ಆದೇಶಗಳನ್ನು ಹೊರಡಿಸಲಾಗಿದ್ದರೂ. ಅವುಗಳನ್ನು ಸರಿಯಾಗಿ ಪಾಲಿಸದೆ ಶಿಷ್ಟಾಚಾರ ಉಲ್ಲಂಘನೆ ಪ್ರಕರಣಗಳು ಜರುಗುತ್ತಿದ್ದು, ಮಾನ್ಯ ಸದಸ್ಯರುಗಳು ಮುಜುಗರ ಅನುಭವಿಸುವಂತಹ ಪರಿಸ್ಥಿತಿ ಉದ್ಭವವಾಗುತ್ತಿವೆ.

ಶಿಷ್ಟಾಚಾರ ಪಾಲನೆಯಾಗದೆ ಉಲ್ಲಂಘನೆಯಾಗುತ್ತಿರುವ ಹಿನ್ನಲೆಯಲ್ಲಿ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳು ಮುಜುಗುರ/ಅವಮಾನ ಅನುಭವಿಸುವಂತಾಗುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮಕೈಗೊಳ್ಳಬೇಕೆಂದು ಕೋರಿ ಸೂಚನಾ ಪತ್ರಗಳನ್ನು ಸಲ್ಲಿಸುತ್ತಿದ್ದು, ಶಿಷ್ಟಾಚಾರ ಉಲ್ಲಂಘನೆ ಪ್ರಕರಣಗಳನ್ನು ಸಮಿತಿಯು ಬಹಳ ಗಂಭೀರವಾಗಿ ಪರಿಗಣಿಸಿರುತ್ತದೆ.

ಸಭೆ/ಸಮಾರಂಭಗಳನ್ನು ಏರ್ಪಡಿಸುವಲ್ಲಿ 7 ದಿನಗಳ ಕಾಲಾವಕಾಶವನ್ನು ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತಂದು ಯಾವುದೇ ಒತ್ತಡಗಳಿಲ್ಲದೆ ಲೋಪಗಳಿಗೆ ಅವಕಾಶ ನೀಡದಂತೆ ಕಾರ್ಯಕ್ರಮಗಳನ್ನು ನಡೆಸುವುದು ಸೂಕ್ತವಾಗಿರುತ್ತದೆ ಎಂದು ಅಭಿಪ್ರಾಯಿಸಲಾಗಿದೆ.

ವಿಧಾನ ಪರಿಷತ್ತಿಗೆ ಆಯ್ಕೆಯಾಗಿರುವ ಸದಸ್ಯರುಗಳ ಕ್ಷೇತ್ರ ವ್ಯಾಪ್ತಿಗೆ ಸಂಬಂಧಿಸಿದಂತೆ ನಾಮನಿರ್ದೇಶನ ಹಾಗೂ ವಿಧಾನ ಸಭೆಯಿಂದ ಚುನಾಯಿತರಾದವರಿಗೆ ನಿರ್ದಿಷ್ಟವಾಗಿ ಚುನಾವಣಾ ಕ್ಷೇತ್ರವು ಇರದ ಕಾರಣ ಅವರುಗಳು ಆಯ್ಕೆ ಮಾಡಿಕೊಂಡಿರುವ ನೋಡಲ್ ಜಿಲ್ಲೆ ಮತ್ತು ನೋಡಲ್

ತಾಲ್ಲೂಕಿನಲ್ಲಿ ನಡೆಯುವ ಸಭೆ/ಸಮಾರಂಭಗಳಿಗೆ ತಪ್ಪದೆ ಆಹ್ವಾನಿಸಬೇಕೆಂದು ಸಮಿತಿಯು ನಿರ್ದೇಶನ ನೀಡಿರುತ್ತದೆ ಹಾಗೂ ಒಂದು ತಾಲ್ಲೂಕಿನಲ್ಲಿ 3–4 ಸದಸ್ಯರುಗಳಿದ್ದ ಸಂದರ್ಭಗಳಲ್ಲಿ ಅವರುಗಳು ಸಲ್ಲಿಸಿರುವ ಸೇವಾ ಅವಧಿಯ ಆಧಾರದ ಮೇಲೆ ಜೇಷ್ಠತೆಗನುಗುಣವಾಗಿ ಅವರುಗಳ ಹೆಸರನ್ನು ಆಮಂತ್ರಣ ಪತ್ರಿಕೆಯಲ್ಲಿ ಮುದ್ರಿಸಬೇಕು ಅಲ್ಲದೆ ಅವರುಗಳಿಗೆ ಆಸನ ವ್ಯವಸ್ಥೆಯನ್ನು ಕಲ್ಪಿಸಬೇಕು. ಹಿರಿಯ ಸದಸ್ಯರನ್ನು ವಿವಿಧ ಯೋಜನೆಗಳಡಿಯಲ್ಲಿ ತಾಲ್ಲೂಕು ಮಟ್ಟದಲ್ಲಿ ರಚಿಸಲಾಗುವ ಸಮಿತಿಗಳ ಸಹ ಅಧ್ಯಕ್ಷರನ್ನಾಗಿ ನೇಮಕ ಮಾಡಿ, ಉಳಿದವರನ್ನು ಸದಸ್ಯರುಗಳನ್ನಾಗಿ ನೇಮಕ ಮಾಡಬೇಕೆಂದು ಸಮಿತಿಯು ನೀಡಿದ ಅಭಿಪ್ರಾಯದ ಮೇರೆಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಸರ್ಕಾರದ ಸಭೆ ಸಮಾರಂಭಗಳ ಆಯೋಜನೆಯಲ್ಲಿ ಪಾಲಿಸಬೇಕಾದ ಶಿಷ್ಟಾಚಾರದ ಕುರಿತು ಸಮಗ್ರವಾದ ಸೂಚನೆಗಳನ್ನು ಸುತ್ತೋಲೆ ಸಂಖ್ಯೆ ಸಿಆಸುಇ/34/ಹೆಚ್‌ಪಿಎ/2018(1) ದಿನಾಂಕ:16.04.2019ರಲ್ಲಿ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖಾ ವತಿಯಿಂದ ಎಲ್ಲಾ ಇಲಾಖೆಗಳಿಗೆ ಅರೆ ಸರ್ಕಾರಿ ಪತ್ರ ಸಂಖ್ಯೆ ಸಿಆಸುಇ/40/ಹೆಚ್‌ಪಿಎ/2018 ದಿನಾಂಕ:10.04.2019 ರಲ್ಲಿ ತಾಲ್ಲೂಕು ಮಟ್ಟದಲ್ಲಿ ರಚಿಸಲಾಗುವ ಸಮಿತಿಗಳಿಗೆ ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಸಹ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಅಧಿನಿಯಮ/ನಿಯಮಗಳಿಗೆ ಸೂಕ್ತ ತಿದ್ದುಪಡಿ ತರುವಂತೆ ನಿರ್ದೇಶನ ನೀಡಲಾಗಿರುವುದನ್ನು ಸಮಿತಿಯು ಶ್ಲಾಘಿಸುತ್ತದೆ.

ಸಂಸತ್ ಸದಸ್ಯರು: ವಿಧಾನ ಮಂಡಲದ ಸದಸ್ಯರುಗಳನ್ನು ಸರ್ಕಾರಿ ಸಮಾರಂಭಗಳಿಗೆ ಆಹ್ವಾನಿಸುವ ಬಗ್ಗೆ: ಅವರುಗಳಿಂದ ಬಂದ ಪತ್ರಗಳಿಗೆ ಉತ್ತರಿಸುವಲ್ಲಿ: ಅವರು ಮಾಹಿತಿ ಕೋರಿ ಕರೆ ಮಾಡಿದಾಗ ರೂರವಾಣಿ ಕರೆಗಳನ್ನು ಹಿಂತಿರುಗಿಸುವ ಬಗ್ಗೆ: ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡಂತಹ ಸಂದರ್ಭದಲ್ಲಿ ಶಿಷ್ಟಾಚಾರ ಕುರಿತಂತೆ ಪಾಲಿಸಬೇಕಾದ ನೀತಿ ನಿಯಮಗಳಿಗೆ ಸಂಬಂಧಿಸಿದ ಆದೇಶ/ಸುತ್ತೋಲೆಗಳ ಸಂಗ್ರಹ, 2025ನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ರಾಜ್ಯ ಶಿಷ್ಟಾಚಾರ) ಯವರು ಪ್ರಕಟಿಸಿರುತ್ತಾರೆ.

ಶಿಷ್ಟಾಚಾರ ಉಲ್ಲಂಘನೆ ಪ್ರಕರಣಗಳು ಮರುಕಳಿಸುತ್ತಿರುವ ಹಿನ್ನಲೆಯಲ್ಲಿ ಸಮಿತಿಯು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯವರೊಂದಿಗೆ ಸುದೀರ್ಘವಾಗಿ ಸಭೆಗಳನ್ನು ನಡೆಸಿ ನೀಡಲಾದ ನಿರ್ದೇಶನಗಳನ್ನು ಅನುಸರಿಸಿ, ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ಕಾರ್ಯಕ್ರಮಗಳಲ್ಲಿ ಅನುಸರಿಸಬೇಕಾದ ಗಣ್ಯರ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿರುತ್ತದೆ.

ಸಾರ್ವಜನಿಕ ಸರ್ಕಾರಿ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಗಳಲ್ಲಿ ಆಹ್ವಾನಿತರ ಹಾಜರಾಗುವಿಕೆಯನ್ನು ಖಚಿತಪಡಿಸಕೊಳ್ಳದೆ ಮುದ್ರಿಸಲಾಗುತ್ತಿರುವ ಹಿನ್ನಲೆಯಲ್ಲಿ ಆಹ್ವಾನಿತರ ಸಂಖ್ಯೆ ಹೆಚ್ಚಾಗುತ್ತಿದ್ದು, ಆಸನ ವ್ಯವಸ್ಥೆ ಏರ್ಪಡಿಸುವಲ್ಲಿ ಗೊಂದಲವಾಗುತ್ತಿರುವುದರಿಂದ ಕಾರ್ಯಕ್ರಮವನ್ನು

ಸುಗಮವಾಗಿ ಯಶಸ್ವಿಗೊಳಿಸಲು ಹಾಗೂ ಘನತೆಯಿಂದ ನಡೆಸಲು ಅನುವಾಗುವಂತೆ ದಿನಾಂಕ:16.04.2019ರಲ್ಲಿ ಹೊರಡಿಸಲಾಗಿದ್ದ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ನು ಮಾರ್ಪಡಿಸಿ, ಅಧಿಸೂಚನೆ ಸಂಖ್ಯೆ:ಸಿಆಸುಇ/39/ಹೆಚ್‌ಪಿಪಿ/2025ನ್ನು ದಿನಾಂಕ:15.10.2025ರಂದು ಹೊರಡಿಸಲಾಗಿದೆ.

ಈ ವರದಿಯನ್ನು ದಿನಾಂಕ:21.08.2026ರಂದು ನಡೆದ ಸಭೆಯಲ್ಲಿ ಸಮಿತಿಯು ಅಂಗೀಕರಿಸಿರುತ್ತದೆ.

ದಿನಾಂಕ:21.08.2026
ಬೆಂಗಳೂರು.

ಮಂಜುನಾಥ ಭಂಡಾರಿ
ಅಧ್ಯಕ್ಷರು
ಹಕ್ಕುಬಾಧ್ಯತಾ ಸಮಿತಿ

ಪೀಠಿಕೆ

ಕರ್ನಾಟಕ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯ ಅಧ್ಯಕ್ಷನಾದ ನಾನು ಸಮಿತಿಯ ಪರವಾಗಿ ಸಮಿತಿಯ 105ನೇ ವರದಿಯನ್ನು ಮಂಡಿಸಲು ಹರ್ಷಿಸುತ್ತೇನೆ.

2024–25ನೇ ಸಾಲಿನಲ್ಲಿ ರಚಿಸಲಾದ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯು ತನ್ನ ಪ್ರಾರಂಭಿಕ ಸಭೆಯನ್ನು ಸೇರಿ ದಿನಾಂಕ:08.09.2024 ರಿಂದ ದಿನಾಂಕ:21.11.2025ರವರೆಗೆ ಒಟ್ಟು 45 ಸಭೆಗಳನ್ನು ನಡೆಸಿರುತ್ತದೆ. ಸಭೆಯಲ್ಲಿ ಹಲವಾರು ಪ್ರಕರಣಗಳನ್ನು ಪರಿಶೀಲಿಸಿದ್ದು, ಮುಕ್ತಾಯಗೊಳಿಸಿದ 10 ಪ್ರಕರಣಗಳ ವಿವರ ಈ ಕೆಳಕಂಡಂತಿದೆ.

ಕ್ರ. ಸಂ	ಸದಸ್ಯರ ಹೆಸರು	ವಿಷಯ	ಸಮಿತಿಗೆ ವಹಿಸಲಾದ ದಿನಾಂಕ	ಸಭೆಗಳ ದಿನಾಂಕ	ಇಲಾಖೆ
1	ಅಡಗೂರು ಹೆಚ್. ವಿಶ್ವನಾಥ	ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಭದ್ರತಾ ಲೋಪವಾಗಿರುವ ವಿಷಯಕ್ಕೆ ಸಂಬಂಧಿಸಿಂತೆ ಒಳಾಡಳಿತ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರು ತಪ್ಪು ಹಿಂಬರಹ ನೀಡಿ ಸದಸ್ಯರ ಹಕ್ಕಿಗೆ ಚ್ಯುತಿ ಎಸಗಿರುವ ಕುರಿತು	15.07.2024	31.07.2025	ಒಳಾಡಳಿತ
2	ಡಾ:ತಳವಾರ ಸಾಬಣ್ಣ	ಬೆಳಗಾವಿ ಮಹಾನಗರ ಪಾಲಿಕೆಯ ಪರಿಷತ್ ಸಭೆಯು ಮುಂದೂಡಲಾಗಿರುವ ಬಗ್ಗೆ ಮಾನ್ಯ ಶಾಸಕರಿಗೆ ಮಾಹಿತಿಯನ್ನು ಒದಗಿಸದೆ ಅಗೌರವ ತೋರಿರುವ ಕುರಿತು	03.05.2025	18.06.2025	ನಗರಾಭಿವೃದ್ಧಿ
3	ಛಲವಾದಿ ಟಿ ನಾರಾಯಣ ಸ್ವಾಮಿ	ಕಲಬುರಗಿ ಚಿತ್ತಾಪುರ ವಸತಿ ಗೃಹದಲ್ಲಿ ವಿರೋಧ ಪಕ್ಷದ ನಾಯಕರ ವಾಹನಕ್ಕೆ ಕಲ್ಲು ಎಸೆದಿರುವುದು ಹಾಗೂ ಅವರನ್ನು ಹೊರಗೆ ಬರದಂತೆ ತಡೆಹಿಡಿದು ಬಂಧನದಲ್ಲಿರಿಸಿರುವ ಕುರಿತು	12.06.2025	31.07.2025	ಒಳಾಡಳಿತ

4	ಟಿ.ಎ. ಶರವಣ	ದಿನಾಂಕ:24.05.2025 ರಂದು ಬೆಂಗಳೂರಿನಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ 2024ರ ಅನುಷ್ಠಾನದ ಕುರಿತು ನಡೆದ ಸಭೆಗೆ ಆಹ್ವಾನಿಸದಿರುವ ಕುರಿತು	03.07.2025	06.10.2025	ನಗರಾಭಿವೃದ್ಧಿ
5	ಎಂ. ನಾಗರಾಜು	ಶ್ರೀಮತಿ ಕ್ರಿಪಾಲಿನಿ ಜಿ.ಕೆ. ಭೂಸ್ವಾಧೀನಾಧಿಕಾರಿ ಇವರು ಮಾನ್ಯ ಸದಸ್ಯರ ಕರೆಯನ್ನು ಸ್ವೀಕರಿಸದೆ ಅಗೌರವ ತೋರಿರುವ ಬಗ್ಗೆ	24.07.2025	29.08.2025 15.09.2025	ನಗರಾಭಿವೃದ್ಧಿ
6	ಡಾ:ಚಂದ್ರಶೇಖರ ಬಿ ಪಾಟೀಲ	ಪಂಡರಗೇರಾ ಗ್ರಮಾದಲ್ಲಿ ಶಾಲಾ ಕೊಠಡಿ ಉದ್ಘಾಟನೆ ಕಾರ್ಯಕ್ರಮಕ್ಕೆ ಆಹ್ವಾನಿಸದಿರುವ ಬಗ್ಗೆ	23.09.2025	13.10.2025	ಶಿಕ್ಷಣ
7	ಬಸವರಾಜ ಶಿವಲಿಂಗಪ್ಪ ಹೊರಟ್ಟಿ	ವಿವಿಧ ಇಲಾಖೆಗಳಿಂದ ಆಯೋಜಿಸಲಾಗುವ ಕಾರ್ಯಕ್ರಮಗಳಲ್ಲಿ ರಾಜ್ಯದ ಜನ ಪ್ರತಿನಿಧಿಗಳನ್ನೊಳಗೊಂಡಂತೆ ಗಣ್ಯರನ್ನು ಆಹ್ವಾನಿಸುವಲ್ಲಿ ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಕುರಿತು	25.01.2024	05.02.2024 02.08.2024 18.09.2024 06.11.2024	
8	ಎಸ್.ಆರ್. ಪಾಟೀಲ್ ಹಾಗೂ ಇತರರು	ಕೆಪಿಎಸ್‌ಸಿ 2011ನೇ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಬಗ್ಗೆ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡಿರುವ ಬಗ್ಗೆ	22.04.2020	17.02.2021 24.02.2021 31.10.2025	ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ
9	ಭೀಮರಾವ್ ಬಸವರಾಜ್ ಪಾಟೀಲ್ ಹಾಗೂ ಡಾ:ಚಂದ್ರಶೇಖರ್ ಪಾಟೀಲ್ 18/2024	ಬೀದರ್ ಜಿಲ್ಲೆ ಹುಮನಾಬಾದ್ ಪಟ್ಟಣದಲ್ಲಿ ನಡೆದ ವಿವಿಧ ಕಾಮಗಾರಿಗಳ ಅಡಿಗಲ್ಲು ಚಾಲನಾ ಕಾರ್ಯಕ್ರಮಕ್ಕೆ ಆಹ್ವಾನಿಸದಿರುವ ಬಗ್ಗೆ	01.10.2024	28.11.2024 04.04.2025 14.11.2025	ಯೋಜನೆ

10	ಡಿ.ಎಸ್. ಅರುಣ್ ಹಾಗೂ ಎನ್. ರವಿಕುಮಾರ್	ಬೆಳಗಾವಿಯಲ್ಲಿ ವಿಧಾನ ಪರಿಷತ್ತಿನ ಅಧಿವೇಶನಕ್ಕೆ ಬರುವಾಗ ಮಾನ್ಯ ಶಾಸಕರುಗಳ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿರುವ ಕುರಿತು	06.02.2025	21.05.2025 28.05.2025 04.06.2025 13.10.2025	ಗೃಹ

ಮೇಲ್ಕಂಡ ದಿನಾಂಕಗಳಲ್ಲಿ ನಡೆದ ಸಮಿತಿ ಸಭೆಗೆ ಹಾಜರಾಗಿ ಸಮಿತಿಯು ಬಯಸಿದ ಮಾಹಿತಿ ಒದಗಿಸಿದ ಎಲ್ಲಾ ಇಲಾಖಾಧಿಕಾರಿಗಳಿಗೆ ಹಾಗೂ ಸಮಿತಿ ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಹಕರಿಸಿದ ಎಲ್ಲಾ ಸದಸ್ಯರುಗಳಿಗೂ ಮತ್ತು ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೂ ಸಮಿತಿಯು ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತದೆ.

ದಿನಾಂಕ:21.08.2026
ಬೆಂಗಳೂರು.

ಮಂಜುನಾಥ ಭಂಡಾರಿ
ಅಧ್ಯಕ್ಷರು
ಹಕ್ಕುಬಾಧ್ಯತಾ ಸಮಿತಿ

ವರದಿ

ಪ್ರಕರಣ–1

ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಶ್ರೀ ಅಡಗೂರು ಹೆಚ್ ವಿಶ್ವನಾಥ ಅವರು ನೀಡಿರುವ ಹಕ್ಕುಚ್ಯುತಿ ಪ್ರಕರಣ

[ಒಳಾಡಳಿತ ಇಲಾಖೆ]

ಸಂಖ್ಯೆ:ಕವಿಪ/ಶಾರಶಾ/09/2024

ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಶ್ರೀ ಅಡಗೂರು ಹೆಚ್ ವಿಶ್ವನಾಥ ಅವರು ಮಾನ್ಯ ಸಭಾಪತಿಯವರಿಗೆ ದಿನಾಂಕ:24.06.2024ರಂದು ಪತ್ರ ಬರೆದು ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು ದಿನಾಂಕ:20.05.2026ರಂದು ಪ್ರಮಾಣ ವಚನ ಸ್ವೀಕರಿಸುವ ಸಂದರ್ಭದಲ್ಲಿ ವೇದಿಕೆಯ ಮೇಲೆ ಶ್ರೀ ಬಿ.ಎಸ್. ಶಿವಣ್ಣನೆಂಬ ಕ್ರಿಮಿನಲ್ ಆಪಾದನೆ ಹಿನ್ನೆಲೆಯುಳ್ಳ ವ್ಯಕ್ತಿ ಕಾಣಿಸಿಕೊಂಡು ಜನರತ್ತ ಕೈಬೀಸಿರುತ್ತಾರೆ. ಅವರನ್ನು ಭದ್ರತಾ ಸಿಬ್ಬಂದಿಗಳು ಕರೆದುಕೊಂಡು ಹೋಗಿರುವುದು ದಾಖಲಾಗಿದೆ. ಸದರಿಯವರು ವೇದಿಕೆಯನ್ನು ಪ್ರವೇಶಿಸಿರುವುದು ಭದ್ರತಾ ಲೋಪವಾಗಿದೆ ಅವರ ಮೇಲೆ ಕ್ರಮಕೈಗೊಳ್ಳಬೇಕೆಂದು ರಾಜ್ಯಪಾಲರ ಕಚೇರಿಗೆ ಪತ್ರ ಬರೆಯಲಾಗಿದ್ದು, ಯಾವ ರೀತಿ ಕ್ರಮಕೈಗೊಳ್ಳಲಾಗಿದೆ ಎಂಬ ಮಾಹಿತಿಯನ್ನು ಒದಗಿಸುವಂತೆ ನಿಯಮ 72ರಡಿಯಲ್ಲಿ ಸರ್ಕಾರದ ಗಮನ ಸೆಳೆಯಲಾಗಿತ್ತು. ಅದಕ್ಕೆ ಗೃಹ ಸಚಿವರು ನೀಡಿರುವ ಉತ್ತರದಲ್ಲಿ "ಉಪ ಪೊಲೀಸ್ ಆಯುಕ್ತರು ಬೆಂಗಳೂರು ನಗರ ಇವರು ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ" ಎಂದು ತಿಳಿಸಿರುತ್ತಾರೆ. ಆದರೆ ದಿನಾಂಕ:10.07.2023ರಂದು ಹಲಸೂರು ಗೇಟ್ ಉಪ ವಿಭಾಗದ ಸಹಾಯಕ ಪೊಲೀಸ್ ಆಯುಕ್ತರು ನೀಡಿರುವ ಹಿಂಬರಹದಲ್ಲಿ ಶ್ರೀ ಶಿವಣ್ಣನವರು ಆರೋಪವನ್ನು ಅಲ್ಲಗಳೆದಿರುತ್ತಾರೆ ಹಾಗೂ ವಿಚಾರಣಾ ವರದಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲಾಗಿದೆ ಎಂದು ತಿಳಿಸಿರುತ್ತಾರೆ. ಸದನದಲ್ಲಿ ನೀಡಿದ ಉತ್ತರ ನೀಡಿರುವುದಕ್ಕಿಂತ ಬೇರೆಯಾಗಿ ಕ್ರಮವಹಿಸಿದ್ದು, ನನ್ನ ಹಕ್ಕುಚ್ಯುತಿಯಾಗಿದೆ ಆದುದರಿಂದ ಪ್ರಕರಣವನ್ನು ಪರಿಶೀಲಿಸಲು ಸಮಿತಿಗೆ ವಹಿಸಬೇಕೆಂದು ಕೋರಿರುತ್ತಾರೆ. ***(ಅನುಬಂಧ – 1)***

ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗೆ ಉದ್ದೇಶ ಪೂರ್ವಕವಾಗಿ ಸದನವನ್ನು ತಪ್ಪು ದಾರಿಗೆ ಎಳೆಯಲು ಉತ್ತರ ಒದಗಿಸಲಾಗಿದೆ ಎಂಬುದು ಸಾಬೀತುಗೊಂಡಲ್ಲಿ ಅದು ಸದನದ ಹಕ್ಕುಚ್ಯುತಿಯಾಗಿರುತ್ತದೆ.

ಶ್ರೀ ಎಂ.ಎನ್. ಕೌಲ್ ಅಂಡ್ ಶ್ರೀ ಎಸ್.ಎಲ್. ಶಕ್ದರ್ ಅವರ ಸಂಸದೀಯ ಪದ್ದತಿ ಮತ್ತು ಪ್ರಕ್ರಿಯೆಗಳ ಪುಸ್ತಕದಲ್ಲಿ. Cases not amounting to breach of Privilege or Contempt of House ಶೀರ್ಷಿಕೆಯಡಿ ಉಲ್ಲೇಖಿಸಲಾಗಿದೆ

"If any statement is made on the floor of the House by a Member or Minister which another Member believes to be untrue, incomplete or incorrect, it does not constitute a breach of privilege. If any incorrect statement is made there was other remedies by which the issue can be decided. In order to constitute a breach of privilege or contempt of the House, it has to be proved that the statement was not only wrong or misleading but it was made deliberately to mislead the House.

A breach of Privilege can arise only when the member or the Minister makes a false statement or an incorrect statement willfully, deliberately and knowingly".

ಸದರಿ ಪ್ರಕರಣವನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಲು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 179ರ ರೀತ್ಯಾ ಮಾನ್ಯ ಸಭಾಪತಿಯವರು ದಿನಾಂಕ:15.07.2024ರಂದು ಹಕ್ಕುಬಾಧ್ಯತಾ ಸಮಿತಿಗೆ ವಹಿಸಿರುತ್ತಾರೆ.

ದಿನಾಂಕ:31.07.2025ರಂದು ನಡೆಯಲಿರುವ ಸಮಿತಿ ಸಭೆಗೆ ಹಾಜರಾಗಬೇಕೆಂದು ಒಳಾಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳನ್ನು ಆಹ್ವಾನಿಸಲಾಗಿತ್ತು.

ಗೃಹ ಇಲಾಖೆಯಿಂದ ಸ್ವೀಕೃತವಾದ ದಿನಾಂಕ:24.02.2025ರ ವರದಿಯನ್ನು ಸಭೆಯಲ್ಲಿ ಮಂಡಿಸಲಾಗಿರುತ್ತದೆ. ***(ಅನುಬಂಧ – 2)***

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀ ಕೆ.ವಿ. ಶರತ್‌ಚಂದ್ರ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಒಳಾಡಳಿತ ಇಲಾಖೆ ಇವರು ಈ ಮುಂದಿನಂತೆ ತಿಳಿಸಿರುತ್ತಾರೆ.

"ಮಾನ್ಯ ಶಾಸಕರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್‌ರವರು ದಿನಾಂಕ:23.05.2023ರಂದು ಗೌರವಾನ್ವಿತ ರಾಜ್ಯಪಾಲರಿಗೆ ಒಂದು ಮನವಿ ಸಲ್ಲಿಸುತ್ತಾರೆ. ಆ ಮನವಿಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ

ಪದಗ್ರಹಣ ವೇದಿಕೆಯಲ್ಲಿ ಕಾನೂನು ಉಲ್ಲಂಘನೆ ಮಾಡಿ, ಭದ್ರತಾ ಲೋಪವೆಸಗಿ ಶ್ರೀ ಬಿ.ಎಸ್. ಶಿವಣ್ಣ ಎಂಬ ವ್ಯಕ್ತಿಯು ಕಾಣಿಸಿಕೊಂಡಿದ್ದು, ಅವರ ವಿರುದ್ಧ ಕ್ರಿಮಿನಲ್ ಕೇಸ್ ಇದೆ. ಆದ್ದರಿಂದ ನಿಯಮಾನುಸಾರ ಪರಿಶೀಲಿಸಿ ಅಗತ್ಯಕ್ರಮ ವಹಿಸಬೇಕೆಂದು ಅವರು ಗೌರವಾನ್ವಿತ ರಾಜ್ಯಪಾಲರನ್ನು ಕೇಳಿಕೊಂಡಿರುತ್ತಾರೆ. ಈ ಸಂಬಂಧ ಉಪ ಪೊಲೀಸ್ ಆಯುಕ್ತರು ಕೇಂದ್ರ ವಿಭಾಗ ಇವರು ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಇವರಿಗೆ ವರದಿ ಸಲ್ಲಿಸಿರುತ್ತಾರೆ. ಇದರ ಬಗ್ಗೆ ಡಿಸಿಪಿ, ವಿಐಪಿ ಯವರು ಏನು ಹೇಳುತ್ತಾರೆಂದರೆ, ಶ್ರೀ ಬಿ.ಎಸ್. ಶಿವಣ್ಣ ಎಂಬುವವರು ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಕಮಿಟಿಯಲ್ಲಿ ಜನರಲ್ ಸೆಕ್ರೆಟರಿ ಆಗಿ ಕೆಲಸ ಮಾಡಿಕೊಂಡಿದ್ದು, ದಿನಾಂಕ:20.05.2023ರಂದು ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸುವ ಸಮಾರಂಭದಲ್ಲಿ ಖುದ್ದು ಸನ್ಮಾನ್ಯ ಸಿದ್ದರಾಮಯ್ಯನವರೆ ಅವರ ಕಾರಿನಲ್ಲಿ ಕರೆದುಕೊಂಡು ಹೋಗಿರುವರು ಹಾಗೂ ಸಮಾರಂಭಕ್ಕೆ ಹಾಜರಾಗಲು ಬೇಕಾದ ಪಾಸ್‌ಗಳನ್ನು ಇಲಾಖಾ ವತಿಯಿಂದ ಒದಗಿಸಿರುವುದು ಅವರ ಹೇಳಿಕೆಯಿಂದ ತಿಳಿದುಬಂದಿರುತ್ತದೆ.

ಸನ್ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ಸಮಾರಂಭದ ವೇದಿಕೆಗೆ ಶ್ರೀ ಬಿ.ಎಸ್. ಶಿವಣ್ಣರವರು ಪೊಲೀಸ್ ಇಲಾಖೆಯ ಭದ್ರತೆಯನ್ನು ವಂಚಿಸಿ ಒಳಗಡೆ ಹೋಗಿರುವುದಿಲ್ಲ. ಸದರಿ ಸಮಾರಂಭಕ್ಕೆ ನಿಗದಿಪಡಿಸಿದ್ದ ಪಾಸ್‌ಗಳನ್ನು ಹೊಂದಿದ್ದ ವ್ಯಕ್ತಿಗಳನ್ನು ಮಾತ್ರ ನಿಯಮಾನುಸಾರ ಪರಿಶೀಲನೆ ಮಾಡಿ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ.

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀ ಅಭಿಜಿನ್ ಬಿ ಉಪ ಕಾರ್ಯದರ್ಶಿ, (ರಾಜ್ಯ ಶಿಷ್ಟಾಚಾರ) ಸಿಆಸುಇ ಇವರು ಈ ಮುಂದಿನಂತೆ ಹೇಳಿಕೆ ನೀಡಿರುತ್ತಾರೆ.

"ಸಾಮಾನ್ಯವಾಗಿ ನಾವು ಎಂ.ಎಲ್.ಎಗಳು ಮತ್ತು ಎಂ.ಎಲ್.ಸಿಗಳಿಗೆ 250 ವಿವಿಐಪಿ ರೆಡ್ ಪಾಸ್‌ಗಳನ್ನು ವಿತರಣೆ ಮಾಡುತ್ತೇವೆ. ಯಾರೂ ವೇದಿಕೆ ಮೇಲೆ ಕೂರುವುದಕ್ಕೆ ಆ ಪಾಸ್‌ನಲ್ಲಿ ಅವಕಾಶವಿಲ್ಲ. ಅವರು ಆ ಪಾಸ್‌ನ್ನು ತೆಗೆದುಕೊಂಡು ಕಾರ್ಯಕ್ರಮಕ್ಕೆ ಪ್ರವೇಶ ಮಾಡಿದ್ದಾರೆ. ವೇದಿಕೆ ಮೇಲೆ ಯಾರು ಕುಳಿತುಕೊಳ್ಳಬೇಕೆಂದು ಗೌರವಾನ್ವಿತ ರಾಜ್ಯಪಾಲರ ಕಚೇರಿಯಲ್ಲಿ ನಿರ್ಧಾರವಾಗುತ್ತದೆ."

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀ ಸಿ. ವಾಮ್‌ಸಿ ಕೃಷ್ಣ, ಜಂಟಿ ಪೊಲೀಸ್ ಆಯುಕ್ತರು, ಪಶ್ಚಿಮ ವಿಭಾಗ, ಬೆಂಗಳೂರು ಇವರು ಈ ಮುಂದಿನಂತೆ ಹೇಳಿಕೆ ನೀಡಿರುತ್ತಾರೆ.

“ಮಾನ್ಯ ಗೃಹ ಸಚಿವರು ಸದನದಲ್ಲಿ ಉತ್ತರ ಕೊಡುವಾಗ ನಾನು ಡಿಸಿಪಿ ಯವರ ಕಡೆಯಿಂದ ವಿಚಾರಣೆ ನಡೆಸಿ ವರದಿ ಪಡೆದುಕೊಂಡು ತಿಳಿಸುತ್ತೇನೆಂದು ಹೇಳಿದ್ದಾರೆ. ಅದರ ಪ್ರಕಾರ ತನಿಖೆ ಮಾಡಿ ವರದಿ ನೀಡಲಾಗಿದೆ. ಎಸಿಪಿ ಹಲಸೂರು ಗೇಟ್, ಪೊಲೀಸ್ ಸ್ಟೇಷನ್, ಇವರು ಕೂಡ ತನಿಖೆ ಮಾಡಿ ಅರ್ಜಿದಾರರಿಗೆ ಹಿಂಬರಹ ನೀಡಿದ್ದಾರೆ. ಸದನದಲ್ಲಿ ಡಿಸಿಪಿ, ವಿವಿಐಪಿ ರವರು ತನಿಖೆ ಮಾಡಲು ಸೂಚಿಸಿದ್ದಾರೆ ಆದರೆ ಇಲ್ಲಿ ಎಸಿಪಿ ರವರು ತನಿಖೆ ಮಾಡಿದ್ದಾರೆ. ಉತ್ತರದಲ್ಲಿ ವ್ಯತ್ಯಾಸ ಇದೆಯೆಂದು ಹಕ್ಕುಚ್ಯುತಿ ಸೂಚನೆ ನೀಡಿದ್ದಾರೆ. ಸದನದಲ್ಲಿ ಸಚಿವರು ನೀಡಿದಂತಹ ಆಶ್ವಾಸನೆಯ ರೀತ್ಯಾ ತನಿಖೆ ನಡೆಸಿ ವರದಿ ನೀಡಲಾಗಿದೆ. ಆದ್ದರಿಂದ ಇಲ್ಲಿ ಹಕ್ಕುಚ್ಯುತಿಯಾಗಿರುವುದಿಲ್ಲ.

ಆದರೆ ರಾಜ್ಯಪಾಲರ ಕಚೇರಿಯಿಂದ ಬಂದಂತಹ ನೋಟಿಸ್‌ಗೆ ನಾರ್ಮಲ್ ಆಗಿ ಎಸಿಪಿರವರು ತನಿಖೆ ಮಾಡಿದ್ದಾರೆ. ಸದನದಲ್ಲಿ ನೀಡಿದ ಉತ್ತರದ ರೀತ್ಯಾ ಡಿಸಿಪಿ, ವಿವಿಐಪಿ ರವರು ಸಹ ತನಿಖೆ ಮಾಡಿ ವರದಿ ನೀಡಿದ್ದು, ಎರಡು ಒಂದೇ ಆಗಿದೆ. ಶ್ರೀ ಬಿ.ಎಸ್. ಶಿವಣ್ಣ ಅವರ ಮೇಲೆ ಯಾವುದೇ ಕ್ರಿಮಿನಲ್ ಮೊಕದ್ದಮೆ ದಾಖಲಾಗಿರುವುದಿಲ್ಲ.”

ಸರ್ಕಾರಿ ಕಾರ್ಯಕ್ರಮಗಳಿಗೆ ಪಾಸ್ ಕೊಡುವಾಗ ನಂಬರ್ ಪ್ರಕಾರ ಪಾಸ್ ವಿತರಿಸುವುದು, ಜೊತೆಗೆ ಪಾಸ್ ಮೇಲೆ ನಂಬರ್ ಹಾಕಿ, ಪಾಸ್ ಕವರ್ ಮೇಲೆ ನಂಬರ್ ಹಾಕಿದರೆ ಯಾರಿಗೆ ಎಷ್ಟು ಪಾಸ್‌ಗಳನ್ನು ವಿತರಿಸಲಾಗಿದೆ ಎಂದು ಗೊತ್ತಾಗುತ್ತದೆ. ಯಾರು ಪಾಸ್ ವಿತರಣೆ ಮಾಡುತ್ತಾರೋ ಅವರೆ ಜವಾಬ್ದಾರರಾಗುತ್ತಾರೆ. ಆಗ ಗುರುತಿನ ಪತ್ರ ತೋರಿಸಿ ಬರುತ್ತಾರೆ. ಇದನ್ನು ಮುಂದಿನ ಕಾರ್ಯಕ್ರಮಗಳ ಸಂದರ್ಭದಲ್ಲಿ ಅಳವಡಿಸಿಕೊಳ್ಳುವುದು ಸೂಕ್ತವಾಗಿರುತ್ತದೆ ಎಂದು ಅಭಿಪ್ರಾಯ ನೀಡುತ್ತಾ, ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ಸಮಾರಂಭದಲ್ಲಿ ಯಾವುದೇ ನಿರ್ದೇಶನಗಳ ತೀರ್ಮಾನ ಮಾಡಬೇಕಾದರೆ ರಾಜ್ಯಪಾಲರ ಕಚೇರಿಯಿಂದ ತೀರ್ಮಾನ ಮಾಡಲಾಗುತ್ತದೆ. ಹಾಗಾಗಿ ಈ ಪ್ರಕರಣವು ಪ್ರಿವಿಲೇಜ್ ವ್ಯಾಪ್ತಿಗೆ ಬರುವುದಿಲ್ಲ. ಆದ್ದರಿಂದ ಇದನ್ನು ಮುಕ್ತಾಯಗೊಳಿಸಬಹುದಾಗಿದೆ ಎಂದು ಸಮಿತಿಯು ತೀರ್ಮಾನಿಸಿತು.

ಸಮಿತಿಯು ನೀಡಿದ ಶಿಫಾರಸ್ಸಿನ ರೀತ್ಯಾ ಇಲಾಖೆಯವರು ಕ್ರಮವಹಿಸಿ ದಿನಾಂಕ:15.10.2025ರಂದು ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ. ***(ಅನುಬಂಧ –3)***

*****

ಪ್ರಕರಣ–2

ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಡಾ:ತಳವಾರ ಸಾಬಣ್ಣ ಅವರು ನೀಡಿರುವ ಹಕ್ಕುಚ್ಯುತಿ

[ನಗರಾಭಿವೃದ್ಧಿ ಇಲಾಖೆ]

ಸಂಖ್ಯೆ:ಕವಿಪ/ಶಾರಶಾ/36/2025

ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಡಾ:ತಳವಾರ ಸಾಬಣ್ಣ ಅವರು ಮಾನ್ಯ ಸಭಾಪತಿಯವರಿಗೆ ದಿನಾಂಕ:08.04.2025ರಂದು ಪತ್ರ ಬರೆದು ಬೆಳಗಾವಿ ಮಹಾನಗರ ಪಾಲಿಕೆ ವತಿಯಿಂದ ದಿನಾಂಕ:05.04.2025ರಂದು ಬೆಳಗ್ಗೆ:11.00ಗಂಟೆಗೆ ನಿಗದಿಪಡಿಸಲಾಗಿದ್ದ ಬೆಳಗಾವಿ ಮಹಾನಗರ ಪಾಲಿಕೆ ಪರಿಷತ್ ಸಭೆಗೆ ಆಹ್ವಾನಿಸಲಾಗಿತ್ತು. ಸದರಿ ಸಭೆಯು ಮಧ್ಯಾಹ್ನ:12.30ಗಂಟೆಗೆ ಮುಂದೂಡಲ್ಪಟ್ಟಿದ್ದು, ಪಾಲಿಕೆಯ ಎಲ್ಲಾ ಸದಸ್ಯರಿಗೆ ಸಭೆಯ ಸಮಯ ಬದಲಾಗಿರುವ ವಿಷಯವನ್ನು ತಿಳಿಸಲಾಗಿರುತ್ತದೆ. ಆದರೆ ಮಾನ್ಯರಿಗೆ ತಿಳಿಸದೆ ಇದ್ದುದರಿಂದ ಬೆಳಗ್ಗೆ:11.10ಗಂಟೆಗೆ ಸ್ಥಳಕ್ಕೆ ಹೋಗಿದ್ದು, ಪಾಲಿಕೆಯ ಸಿಬ್ಬಂದಿಯವರನ್ನು ವಿಚಾರಿಸಿದಾಗ ಆಯುಕ್ತರು ವಿಡಿಯೋ ಕಾನ್ಫರೆನ್ಸ್‌ನಲ್ಲಿರುವುದರಿಂದ ಸಭೆಯನ್ನು ಮುಂದೂಡಲಾಗಿದೆ ಎಂದು ತಿಳಿಸಿರುತ್ತಾರೆ. ಬೆಳಗಾವಿ ಮಹಾನಗರ ಪಾಲಿಕೆಯ ಅಧಿಕಾರಿಗಳು ತಮ್ಮ ಹಕ್ಕಿಗೆ ಚ್ಯುತಿ ಎಸಗಿರುತ್ತಾರೆಂದು ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ. ***(ಅನುಬಂಧ – 4)***

ಸರ್ಕಾರದ ಸುತ್ತೋಲೆಯ ಸಂಖ್ಯೆ:ಸಿಆಸುಇ/120/ರಾರಾಆ/2011 ದಿನಾಂಕ:16.03.2013ರಲ್ಲಿ ಸೂಚಿಸಿರುವ ಮಾರ್ಗಸೂಚಿಯ ಪ್ರಕಾರ ಮಾನ್ಯ ಶಾಸಕರನ್ನು ಬೆಳಗಾವಿ ಮಹಾನಗರ ಪಾಲಿಕೆಯ ಪರಿಷತ್ತಿನ ಸಭೆಗೆ ಆಹ್ವಾನಿಸಿ ಸಭೆ ಮುಂದೂಲ್ಪಟ್ಟಿರುವ ವಿಷಯವನ್ನು ತಿಳಸದೆ ಅವರಿಗೆ ಅಗೌರವ ತೋರಿರುವುದರಿಂದ ಸದರಿ ಪ್ರಕರಣವನ್ನು ಪರಿಶೀಲಿಸಲು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 179ರ ರೀತ್ಯಾ ಮಾನ್ಯ ಸಭಾಪತಿಯವರು ದಿನಾಂಕ:03.05.2025ರಂದು ಹಕ್ಕುಬಾಧ್ಯತಾ ಸಮಿತಿಗೆ ವಹಿಸಿರುತ್ತಾರೆ.

ದಿನಾಂಕ:18.06.2025ರಂದು ನಡೆಯಲಿರುವ ಸಮಿತಿ ಸಭೆಗೆ ಹಾಜರಾಗಬೇಕೆಂದು ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳನ್ನು ಆಹ್ವಾನಿಸಲಾಗಿತ್ತು.

ನಗರಾಭಿವೃದ್ಧಿ ಇಲಾಖೆಯಿಂದ ಸ್ವೀಕೃತವಾಗಿರುವ ದಿನಾಂಕ:17.06.2025ರ ವರದಿಯನ್ನು ಸಭೆಯಲ್ಲಿ ಮಂಡಿಸಲಾಗಿರುತ್ತದೆ. ***(ಅನುಬಂಧ – 5)***

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀ ಕೃಷ್ಣಮೂರ್ತಿ ಹೆಚ್.ಕೆ, ಜಂಟಿ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರು ಈ ಮುಂದಿನಂತೆ ತಿಳಿಸಿರುತ್ತಾರೆ:

"ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ದಿನಾಂಕ:05.04.2025ರಂದು ಬೆಳಗ್ಗೆ 11.00ಗಂಟೆಗೆ ಪರಿಷತ್ ಸಭೆ ಜರುಗಿಸುವ ಕುರಿತು ಎಲ್ಲಾ ಸಿದ್ದತೆ ಮಾಡಿಕೊಳ್ಳಲಾಗಿತ್ತು. ತದನಂತರ ಅದನ್ನು ಮಧ್ಯಾಹ್ನ 12.30ಗಂಟೆಗೆ ಮುಂದೂಡಲಾಗಿತ್ತು. ಹೀಗಾಗಿ ಸುಮಾರು ಒಂದುವರೆ ಗಂಟೆ ತಡವಾಗಿದೆ. ಈ ವಿಚಾರವನ್ನು ಮಾನ್ಯ ಶಾಸಕರಿಗೆ ತಿಳಿಸದೆ ಅವರಿಗೆ ಅವಮಾನ ಉಂಟಾಗಿದೆ. ಈ ಬಗ್ಗೆ ಮಹಾನಗರ ಪಾಲಿಕೆ ಆಯುಕ್ತರಿಗೆ ವಿವರಣೆ ಕೇಳಲಾಗಿದೆ. ಆಯುಕ್ತರು ನೀಡಿರುವ ವರದಿಯ ಪ್ರಕಾರ ಪೂಜ್ಯ ಮಹಾಪೌರರು ಹಾಗೂ ಉಪಮಹಾಪೌರರು ಹಸಿರು ಕ್ರಾಂತಿಯ ಹರಿಕಾರ ಶ್ರೀ ಬಾಬು ಜಗಜೀವನರಾಮ ರವರ ಜನ್ಮ ದಿನಾಚರಣೆ ಅಂಗವಾಗಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಕಾರ್ಯಕ್ರಮ ಮುಗಿಸಿ ಬರಲು ವಿಳಂಭವಾಗಿರುತ್ತದೆ. ಆ ಸಂದರ್ಭದಲ್ಲಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಕೇಸ್ವಾನ್ (kswan) ಕೇಂದ್ರದಲ್ಲಿ ವಿಡಿಯೋ ಸಂವಾದದ ಸಭೆಯಿದ್ದ ಪ್ರಯುಕ್ತ ಆ ಸಭೆಯಲ್ಲಿ ಭಾಗವಹಿಸಿದ್ದು, ತದನಂತರ ಪರಿಷತ್ ಸಭೆಗೆ ಆಗಮಿಸಿರುವುದಾಗಿ ತಿಳಿಸಿರುತ್ತಾರೆ. ಮಹಾಪೌರರು ಬರುವುದು ತಡವಾದ್ದರಿಂದ ಸುಮಾರು ಒಂದುವರೆ ಗಂಟೆ ತಡವಾಗಿದೆ. ಹೀಗಾಗಿ ಕಾರ್ಯಕ್ರಮವನ್ನು ಮುಂದೂಡಲಾಗಿದೆ. ಇದು ಉದ್ದೇಶಪೂರ್ವಕವಾಗಿ ಮಾಡಿರುವುದಿಲ್ಲ. ಆದರೆ ಈ ವಿಚಾರವನ್ನು ಮೊದಲೆ ಶಾಸಕರಿಗೆ ತಿಳಿಸಿದ್ದರೆ ಈ ಸಂದರ್ಭ ಬರುತ್ತಿರಲಿಲ್ಲ."

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀಮತಿ ಶುಭ, ಬಿ. ಆಯುಕ್ತರು, ಬೆಳಗಾವಿ ಮಹಾನಗರ ಪಾಲಿಕೆ ಇವರು ಈ ಮುಂದಿನಂತೆ ಹೇಳಿಕೆ ನೀಡಿರುತ್ತಾರೆ:–

"ಆ ದಿನದಂದು ಒಂದು ಸ್ಮೇರ್‌ಸಿಟಿ ಮೀಟಿಂಗ್ ಕೇಸ್ವಾನ್ ಕೇಂದ್ರದಲ್ಲಿ ಇರುತ್ತದೆ ಎಂದು ಹಿಂದಿನ ದಿನವೇ ಜಿಲ್ಲಾಧಿಕಾರಿಗಳಿಂದ ಮಾಹಿತಿ ಬಂದಿರುತ್ತದೆ ಹಾಗೂ ವಿಸಿ ಲಿಂಕ್ ಬಂದಿರುತ್ತದೆ. ಅಂದು ನಾನು ಜನರಲ್ ಬಾಡಿ ಮೀಟಿಂಗ್ ಇರುತ್ತದೆ ನನ್ನನ್ನು exempt ಮಾಡಿ ಎಂದು ಕೇಳಿಕೊಂಡಿರುತ್ತೇನೆ. ಆ ದಿನ ಕುಡಿಯುವ ನೀರಿನ ಬಗ್ಗೆ ಚರ್ಚೆ ಇರುತ್ತದೆ ಎಂದು ಕರೆದಿದ್ದರು. ಅಲ್ಲದೆ ಆ ದಿನ ಸಮಾಜ ಕಲ್ಯಾಣ ಇಲಾಖೆಯ ಹಲವಾರು ಸಭೆಗಳನ್ನು ದಲಿತ ಸಂಘಟನೆಗಳು ಬಾಬು ಜಗಜೀವನರಾಮ ರವರ ಜನ್ಮ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಜಿಲ್ಲಾದಿಕಾರಿಗಳ ಕಚೇರಿಗೆ ಹೋಗಿ ಎಡಿಸಿಯವರು

ಮತ್ತು ನಾವುಗಳು ರಥವನ್ನು ಬರ ಮಾಡಿಕೊಂಡಿದ್ದೆವು. ಅದಾದನಂತರ ಕೇಸ್ವಾನ್‌ನಲ್ಲಿ ಸಭೆಗೆ ಹೋಗಿದ್ದೆವು. ಈ ವಿಚಾರವನ್ನು ನಾವು ಮಹಾಪೌರರಿಗೆ ತಿಳಿಸಿದ್ದೆವು. ಪಾಲಿಕೆಯ ಪರಿಷತ್ ಸಭೆ ಕರೆಯುವುದು ಕಾರ್ಯದರ್ಶಿಯವರ ಜವಾಬ್ದಾರಿಯಾಗಿರುತ್ತದೆ. ಪ್ರಸ್ತುತ ಸದರಿ ಹುದ್ದೆಯು ಖಾಲಿಯಿದ್ದು, ಅಲ್ಲಿನ ಸಹಾಯಕರಿಗೆ ಕೆಲಸವನ್ನು ವಹಿಸಲಾಗಿದೆ. ಇದು ಅವರಿಗೆ ಮೊದಲನೆ ಬಾರಿ ವಹಿಸಿದ್ದರಿಂದ ಸರಿಯಾದ ಮಾಹಿತಿ ಇಲ್ಲದೆ ಈ ರೀತಿ ಆಗಿದೆ. ಇದಕ್ಕೆ ಕ್ಷಮಾಪಣೆ ಕೋರುತ್ತೇವೆ. ಇನ್ನು ಮುಂದೆ individual liason officer depute ಮಾಡಿ ಈ ರೀತಿಯಾಗದಂತೆ ಗಮನ ಹರಿಸುತ್ತೇವೆ."

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀಮತಿ ಪ್ರಿಯಾಂಕ ಚ ಪರಿಷತ್ ಕಾರ್ಯದರ್ಶಿ (ಪ್ರ) ಬೆಳಗಾವಿ ಮಹಾನಗರ ಪಾಲಿಕೆ ಇವರು ಈ ಮುಂದಿನಂತೆ ಹೇಳಿಕೆ ನೀಡಿರುತ್ತಾರೆ:–

"ಮಾನ್ಯ ಆಯುಕ್ತರವರ ಪಿ.ಎ. ಅವರು ಮಾನ್ಯ ಸದಸ್ಯರಿಗೆ ಆಯುಕ್ತರು ವಿ.ಸಿನಲ್ಲಿ ಇದ್ದಾರೆಂದು ತಿಳಿಸಿದ್ದಾರೆ. ನಂತರ ನಾನು ಮತ್ತು ವ್ಯವಸ್ಥಾಪಕರು ಸಾಹೇಬರನ್ನು ಭೇಟಿಯಾಗಿ ಬಾಬು ಜಗಜೀವನರಾಂ ರವರ ಜನ್ಮ ದಿನಾಚರಣೆಯ ಕಾರ್ಯಕ್ರಮದ ಮೆರವಣಿಗೆಯಲ್ಲಿ ಭಾಗವಹಿಸಿದ್ದಾರೆ. ಸಭೆ ಪ್ರಾರಂಭವಾಗಲು ಸ್ವಲ್ಪ ತಡವಾಗುತ್ತದೆ ಎಂದು ಹೇಳಿದ್ದೆವು. ಸಭೆ ಮುಂದೂಡಿರುವುದಾಗಿ ನಾವು ಯಾರಿಗೂ ಸಹ ತಿಳಿಸಿರುವುದಿಲ್ಲ. ಮಹಾಪೌರರು ಮೆರವಣಿಗೆಯಲ್ಲಿದ್ದರಿಂದ ಅವರು ಬಂದ ನಂತರ ಸಭೆ ಪ್ರಾರಂಭ ಮಾಡುವುದಾಗಿ ತಿಳಿದಿತ್ತು. ಈ ಪ್ರಕರಣದ ಸಂಬಂಧ ಮಾನ್ಯ ಶಾಸಕರಲ್ಲಿ ಕ್ಷಮೆ ಕೇಳುತ್ತೇವೆ."

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀಮತಿ ಅಂಜನಾ ಹೆಚ್. ಭಜಂತ್ರಿ ಕಚೇರಿ ವ್ಯವಸ್ಥಾಪಕರು, ಬೆಳಗಾವಿ ಮಹಾನಗರ ಪಾಲಿಕೆ ಇವರು ಈ ಮುಂದಿನಂತೆ ಹೇಳಿಕೆ ನೀಡಿರುತ್ತಾರೆ:–

"ಮಾನ್ಯ ಶಾಸಕರು ಸಭೆಗೆ ಬಂದಿದ್ದರು. ಆಯುಕ್ತರು ಸಭೆ ತಡವಾಗುವುದಾಗಿ ತಿಳಿಸದ್ದರು. ನಾನು ಮತ್ತು ಕಾರ್ಯದರ್ಶಿಯವರು ಕೆಳಗಡೆ ಹೋಗಿ ಮಾನ್ಯ ಸದಸ್ಯರಿಗೆ ವಿಷಯ ತಿಳಿಸಿದ್ದೇವೆ."

ಶಿಷ್ಟಾಚಾರ ಪಾಲನೆ ಕುರಿತು ಎರಡು ಮೂರು ತಿಂಗಳಿಗೊಮ್ಮೆ ಸಭೆ ಮಾಡಿ ಜನ ಪ್ರತಿನಿಧಿಗಳು, ಅಧಿಕಾರಿಗಳ ಸಮನ್ವಯ ಸಾಧಿಸುವ ಪದ್ದತಿಯನ್ನು ಅಳವಡಿಸಿಕೊಳ್ಳಬೇಕು ಇದರ ಬಗ್ಗೆ ಪರಿಪಾಲನೆ ಮಾಡುವ ಕುರಿತು ತರಬೇತಿ ನೀಡಬೇಕೆಂದು ಸೂಚನೆ ನೀಡುತ್ತಾ ಇಲಾಖಾಧಿಕಾರಿಗಳು ಕ್ಷಮೆಯಾಚಿಸಿದ ಹಿನ್ನಲೆಯಲ್ಲಿ ಪ್ರಕರಣವನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು.

****

ಪ್ರಕರಣ–3

ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಛಲವಾದಿ ಟಿ ನಾರಾಯಣಸ್ವಾಮಿ ಅವರು ನೀಡಿರುವ ಹಕ್ಕುಚ್ಯುತಿ

[ಒಳಾಡಳಿತ ಇಲಾಖೆ]

ಸಂಖ್ಯೆ:ಕವಿಪ/ಶಾರಶಾ/41/2025

ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ ಅವರು ಮಾನ್ಯ ಸಭಾಪತಿಯವರಿಗೆ ದಿನಾಂಕ:23.05.2025ರಂದು ಪತ್ರ ಬರೆದು "ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ನಡೆದ ತಿರಂಗಾ ಯಾತ್ರೆಯಲ್ಲಿ ಭಾಗವಹಿಸಲು ತೆರಳಿದ್ದ ಸಂದರ್ಭದಲ್ಲಿ ವಾಸ್ತವ್ಯಕ್ಕೆಂದು ಚಿತ್ತಾಪುರದ ಸರ್ಕಾರಿ ವಸತಿ ಗೃಹಕ್ಕೆ ದಿನಾಂಕ:21.05.2025ರಂದು ಮಧ್ಯಾಹ್ನ 3.30ಕ್ಕೆ ತಲುಪಿದಾಗ, ಕೆಲವು ಗೂಂಡಾಗಳು ಅತಿಥಿ ಗೃಹವನ್ನು ಸುತ್ತುವರಿದು ಘೋಷಣೆಗಳನ್ನು ಕೂಗುತ್ತಾ ಮುಖ್ಯದ್ವಾರದ ಎದುರು ಪ್ರತಿಭಟನೆ ನಡೆಸಿರುತ್ತಾರೆ ಹಾಗೂ ರಾತ್ರಿ ಸುಮಾರು 7.38ರ ಸಮಯದಲ್ಲಿ ಸರ್ಕ್ಯೂಟ್ ಹೌಸ್ ಆವರಣಕ್ಕೆ ನುಗ್ಗಿ ಅವರ ಅಧಿಕೃತ ವಾಹನಕ್ಕೆ ನೀಲಿ ಬಣ್ಣ ಎರಚಿ ವಾಹನವನ್ನು ಜಖಂಗೊಳಿಸಿರುವುದಲ್ಲದೆ ಅವರ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿ ಜೀವ ಬೆದರಿಕೆ ಹಾಕಿರುತ್ತಾರೆ ಹಾಗೂ ಅದೇ ದಿನ ರಾತ್ರಿ 9.30ಗಂಟೆಯ ಸಮಯದಲ್ಲಿ ಸರ್ಕಾರಿ ವಸತಿ ಗೃಹದಿಂದ ಹೊರಬರುವಾಗ ಪ್ರತಿಭಟನಾ ನಿರತ ಗೂಂಡಾಗಳು ಅಧಿಕೃತ ವಾಹನಕ್ಕೆ ಕಲ್ಲುಗಳನ್ನು ತೂರಿರುತ್ತಾರೆ. ಈ ಸಂದರ್ಭದಲ್ಲಿ ಹಾಜರಿದ್ದ ಕಲಬುರ್ಗಿ ಎಸ್‌ಪಿ ಅಡುರು ಶ್ರೀನಿವಾಸುಲು ಹಾಗೂ ಸ್ಥಳದಲ್ಲಿದ್ದ ಹೆಚ್ಚುವರಿ ಎಸ್‌ಪಿ ಮಹೇಶ ಮೇಘಣ್ಣನವರ್ ಡಿವೈಎಸ್‌ಪಿ ಶಂಕರಗೌಡ ಪಾಟೀಲ್ ಸಿಪಿಐಗಳಾದ ಚಂದ್ರಶೇಖರ ತಿಗಡಿ, ನಟರಾಜ ಲಾಡೆ, ಪಿಎಐಗಳಾದ ಶ್ರೀಶೈಲ್ ಅಂಬಾಟಿ ತಿಮ್ಮಯ್ಯ ಚಂದ್ರಕಾಂತ ಮೆಕಾಲೆ ಶೀಲಾದೇವಿ ಹಾಗೂ ಇತರರು ನನಗೆ ಭದ್ರತೆ ಒದಗಿಸುವಲ್ಲಿ ಲೋಪವೆಸಗಿರು ಅಧಿಕಾರಿಗಳ ವಿರುದ್ದ ಶಿಸ್ತು ಕ್ರಮ ಜರುಗಿಸುವಂತೆ ಕೋರಿರುತ್ತಾರೆ." *(ಅನುಬಂಧ – 6)*

ಸರ್ಕಾರಿ ಸುತ್ತೋಲೆ ಸಂಖ್ಯೆ:ಸಿಆಸುಇ/5 ಹೆಚ್ ಡಬ್ಲ್ಯೂಸಿ/2012 ದಿನಾಂಕ:23.11.2012ರ ಕ್ರಮ ಸಂಖ್ಯೆ 6ರಲ್ಲಿ ವಿರೋಧ ಪಕ್ಷದ ನಾಯಕರು ಯಾವುದೇ ಕ್ಷೇತ್ರಕ್ಕೆ ಭೇಟಿ ನೀಡಿದಾಗ, ಅವರನ್ನು

ಶಿಷ್ಟಾಚಾರದಂತೆ ಅಧಿಕಾರಿಗಳು ಸ್ವಾಗತಿಸಲು, ಜಿಲ್ಲಾಧಿಕಾರಿಗಳು ಮತ್ತು ಕಾರ್ಯನಿರ್ವಾಹಣ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಅವರು ಕ್ರಮಕೈಗೊಳ್ಳುವುದು. ಶಿಷ್ಟಾಚಾರ ಉಲ್ಲಂಘನೆ ಮಾಡಿದಂತಹ ಅಧಿಕಾರಿಗಳ ವಿರುದ್ದ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮ 1957ರ ಪ್ರಕಾರ ಕ್ರಮಕೈಗೊಳ್ಳಲು ಸೂಚಿಸಲಾಗಿರುತ್ತದೆ.

ಭಾರತೀಯ ಸೈನಿಕರ ಗೌರವಾರ್ಥವಾಗಿ ದಿನಾಂಕ:21.05.2025ರಂದು ಆಯೋಜಿಸಲಾಗಿದ್ದ **"ಆಪರೇಷನ್ ಸಿಂಧೂರ"** ಕಾರ್ಯಕ್ರಮದ ಅಂಗವಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಕಲಬುರಗಿ ಜಿಲ್ಲೆಯ ಚಿತ್ತಾಪುರಕ್ಕೆ ಅಧಿಕೃತ ಪ್ರವಾಸ ಕೈಗೊಂಡಿದ್ದು, ಇದು ಪೂರ್ವ ನಿರ್ಧರಿತ ಪ್ರವಾಸ ಕಾರ್ಯಕ್ರಮವಾಗಿರುವುದರಿಂದ ಅವರಿಗೆ ಶಿಷ್ಟಾಚಾರದನ್ವಯ ಸೂಕ್ತ ಭದ್ರತಾ ವ್ಯವಸ್ಥೆ ಕಲ್ಪಿಸುವುದು ಜಿಲ್ಲಾಡಳಿತದ ಕರ್ತವ್ಯವಾಗಿರುತ್ತದೆ. ಚಿತ್ತಾಪುರ ಸರ್ಕಾರಿ ವಸತಿ ಗೃಹದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರ ಅಧಿಕೃತ ವಾಹನಕ್ಕೆ ಕಲ್ಲು ತೂರಿರುವುದು, ನೀಲಿ ಬಣ್ಣ ಎರಚಿರುವುದು ಹಾಗೂ ಅವರನ್ನು ಅವಮಾನಿಸಿ ಹಲ್ಲೆ ಮಾಡಲು ಪ್ರಯತ್ನಿಸಿರುವುದು ಕಾನೂನು ಭದ್ರತೆ ಒದಗಿಸದೆ ಲೋಪವಾಗಿರುತ್ತದೆ.

ಸದರಿ ಘಟನಾ ಸ್ಥಳದಲ್ಲಿ ಕಲಬುರಗಿ ಎಸ್‌ಪಿ ಅಡುರು ಶ್ರೀನಿವಾಸಲು ಹಾಗೂ ಹೆಚ್ಚುವರಿ ಎಸ್.ಪಿ. ಮಹೇಶ್ ಮೇಘಣ್ಣನವರ್, ಡಿವೈಎಸ್‌ಪಿ ಶಂಕರಗೌಡ ಪಾಟೀಲ್, ಸಿಪಿಐಗಳಾದ ಚಂದ್ರಶೇಖರ ತಿಗಡಿ, ನಟರಾಜ ಲಾಡೆ, ಪಿಎಐಗಳಾದ ಶ್ರೀಶೈಲ್ ಅಂಬಾಟಿ, ತಿಮ್ಮಯ್ಯ, ಚಂದ್ರಕಾಂತ ಮೆಕಾಲೆ, ಶೀಲಾದೇವಿ ಹಾಗೂ ಇನ್ನುಳಿದ ಡಿವೈಎಸ್ಪಿಗಳು, ಸಿಪಿಐಗಳು ಮತ್ತು ಪಿಎಸ್‌ಐಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಬಲವಂತವಾಗಿ ಗುಂಪೊಂದು ವಸತಿ ಗೃಹಕ್ಕೆ ನುಗ್ಗಿ ಸರ್ಕಾರಿ ವಾಹನಕ್ಕೆ ಕಲ್ಲು ಹೊಡೆದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಜೀವ ಬೆದರಿಕೆ ಹಾಕಿ ಸುಮಾರು 6 ಗಂಟೆಗಳ ಕಾಲ ಅಕ್ರಮ ಬಂಧನದಲ್ಲಿ ಉಳಿಸಿ ಅವರ ಹಕ್ಕಿಗೆ ಚ್ಯುತಿ ಉಂಟು ಮಾಡಿರುತ್ತಾರೆ.

ಆದುದರಿಂದ ಸದರಿ ಪ್ರಕರಣವನ್ನು ಪರಿಶೀಲಿಸಲು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 179ರ ರೀತ್ಯಾ ಮಾನ್ಯ ಸಭಾಪತಿಯವರು ದಿನಾಂಕ:12.06.2025ರಂದು ಹಕ್ಕುಬಾಧ್ಯತಾ ಸಮಿತಿಗೆ ವಹಿಸಿರುತ್ತಾರೆ.

ದಿನಾಂಕ:31.07.2025ರಂದು ನಡೆಯಲಿರುವ ಸಭೆಗೆ ಹಾಜರಾಗಬೇಕೆಂದು ಗೃಹ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರನ್ನು ಆಹ್ವಾನಿಸಲಾಗಿರುತ್ತದೆ.

ಗೃಹ ಇಲಾಖೆಯಿಂದ ಸ್ವೀಕೃತವಾದ ದಿನಾಂಕ:29.07.2025ರ ವರದಿಯನ್ನು ಸಭೆಯಲ್ಲಿ ಮಂಡಿಸಲಾಗಿರುತ್ತದೆ. ***(ಅನುಬಂಧ – 7)***

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀ ಕೆ.ವಿ. ಶರತ್‌ಚಂದ್ರ, ಪ್ರಧಾನ ಕಾರ್ಯದರ್ಶಿ, ಒಳಾಡಳಿತ ಇಲಾಖೆ ಇವರು ಈ ಮುಂದಿನಂತೆ ತಿಳಿಸಿರುತ್ತಾರೆ:–

"ಈ ಪ್ರಕರಣದ ವಿಚಾರಣೆಯಲ್ಲಿ ತಿಳಿದುಬಂದಿರುವುದೇನೆಂದರೆ, ಸದರಿ ಘಟನೆಯು ಹಠಾತ್ತಾಗಿ ನಡೆದಿದ್ದು, ಸಿಬ್ಬಂದಿಗಳ ಕೊರತೆ ಇದ್ದರೂ ಸಹ ಹಾಜರಿದ್ದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಯಾವುದೇ ಅಹಿತಕರ ಘಟನೆಯಾಗದಂತೆ ಚಿತ್ತಾಪುರದಲ್ಲಿ ನಡೆದ ತಿರಂಗಾ ಯಾತ್ರೆಯಲ್ಲಿ ಭಾಗವಹಿಸಲು ಅನುಕೂಲ ಮಾಡಿಕೊಟ್ಟಿದ್ದಾರೆ. ಎಲ್ಲಾ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಿದ್ದು, ಅವರಿಗೆ ಸೂಕ್ತ ಬಂದೋಬಸ್ತರ ಒದಗಿಸಿದ್ದಾರೆ. ಎಸ್.ಪಿ. ಯಾದಗಿರಿಯ ಎಸ್‌ಪಿಯವರ ಜೊತೆಗೆ ಸಂಪರ್ಕದಲ್ಲಿದ್ದು ವಿರೋಧ ಪಕ್ಷದ ನಾಯಕರು ಕ್ಷೇಮವಾಗಿ ತಲುಪುವಂತೆ ನೋಡಿಕೊಂಡಿದ್ದಾರೆ. ಅವರನ್ನು ಅಕ್ರಮ ಬಂಧನದಲ್ಲಿ ಇರಿಸಿರಲಿಲ್ಲ.

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀ ಅಡ್ಡೂರು ಶ್ರೀನಿವಾಸುಲು, ಎಸ್.ಪಿ ಕಲಬುರಗಿ ಇವರು ಈ ಮುಂದಿನಂತೆ ಹೇಳಿಕೆ ನೀಡಿರುತ್ತಾರೆ:–

"ದಿನಾಂಕ:21.05.2025ರಂದು ಮಾನ್ಯ ವಿರೋಧ ಪಕ್ಷದ ನಾಯಕರು ಕಲಬುರಗಿ ಜಿಲ್ಲೆಗೆ ಮಧ್ಯಾಹ್ನ:12.00ಗಂಟೆಗೆ ಬಂದಿದ್ದರು. ಆಗ ಸುದ್ದಿಗೋಷ್ಠಿ ನಡೆಸಿದರು. ಅಲ್ಲಿಂದ ಚಿತ್ತಾಪುರಕ್ಕೆ ಮಧ್ಯಾಹ್ನ:3.30ಗಂಟೆಗೆ ತಲುಪಿದ್ದರು. ಕಾರ್ಯಕ್ರಮ ಸಂಜೆ:4.30ಗಂಟೆಗೆ ಇದ್ದುದರಿಂದ ಐಬಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಈ ವಿಷಯ ತಿಳಿದ ಕಾಂಗ್ರೆಸ್ ಕಾರ್ಯಕರ್ತರು ತಕ್ಷಣವೇ ವಿಶ್ರಾಂತಿ ಗೃಹದಲ್ಲಿ ಸೇರಿ ಮಾನ್ಯ ವಿರೋಧ ಪಕ್ಷದ ನಾಯಕರು ಕ್ಷಮೆ ಕೇಳಬೇಕೆಂದು ಪ್ರತಿಭಟನೆ ಪ್ರಾರಂಭ ಮಾಡಿದರು. ಹೆಚ್ಚುವರಿ ಎಸ್.ಪಿ ಮತ್ತು ಡಿವೈಎಸ್‌ಪಿ ರವರ ಜೊತೆ ಮಾತನಾಡಿ ತಕ್ಷಣವೇ ಅಲ್ಲಿಗೆ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನಿಯೋಜಿಸಲಾಯಿತು. ಮಾನ್ಯರ ಹಕ್ಕಿಗೆ ಯಾವುದೇ ರೀತಿಯಲ್ಲಿ ಚ್ಯುತಿ ಬಾರದೆಂದು ಮತ್ತು ಶಿಷ್ಟಾಚಾರ ಪಾಲನೆಯಲ್ಲಿ ಯಾವುದೇ ರೀತಿಯ ಕೊರತೆಯುಂಟಾಗಬಾರದೆನ್ನುವ ದೃಷ್ಟಿಯಿಂದ ಅಲ್ಲಿಗೆ ಡಿವೈಎಸ್‌ಪಿ ಮತ್ತು ಸಿಪಿಐ ಅವರನ್ನು ಕಳುಹಿಸಿ ಎಲ್ಲ ರೀತಿಯ ಭದ್ರತಾ ವ್ಯವಸ್ಥೆಯನ್ನು ಮಾಡಿದ್ದೇವೆ.

ಆ ಸಮಯದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾಧ್ಯಮದವರೊಂದಿಗೆ ಮಾತನಾಡಬೇಕೆಂದು ತಿಳಿಸಿದ ಹಿನ್ನಲೆಯಲ್ಲಿ ಎರಡು ಬಾರಿ ಪತ್ರಿಕಾ ಗೋಷ್ಠಿ ನಡೆಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಒಂದು ಕಡೆ ಪ್ರತಿಭಟನೆಗಳು ನಡೆಯುತ್ತಿತ್ತು ಮತ್ತೊಂದು ಕಡೆ ತಿರಂಗಾ ಯಾತ್ರೆಯು ನಡೆಯುತ್ತಿತ್ತು. ಮಾನ್ಯರಿಗೆ ಬೇರೆ ವಾಹನದ ವ್ಯವಸ್ಥೆ ಮಾಡುತ್ತೇವೆಂದು ತಿಳಿಸಿದಾಗ ಬೇಡವೆಂದರು. ಹೊರಗಡೆ ಗಲಾಟೆ ಮಾಡುತ್ತಿದ್ದವರ ಮೇಲೆ ಕೇಸ್ ದಾಖಲು ಮಾಡಲಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಚಿತ್ತಾಪುರದಿಂದ ಯಾದಗಿರಿಗೆ ಕಳುಹಿಸಿಕೊಡಲಾಗಿದೆ.”

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀ ಶಂಕರಗೌಡ ಪಾಟೀಲ್, ಡಿವೈಎಸ್.ಪಿ ಶಹಾಪುರ ಇವರು ಈ ಮುಂದಿನಂತೆ ಹೇಳಿಕೆ ನೀಡಿರುತ್ತಾರೆ:–

“ಮಾನ್ಯ ವಿರೋಧ ಪಕ್ಷದ ನಾಯಕರು ಎರಡು ಬಾರಿ ಪತ್ರಿಕಾ ಗೋಷ್ಠಿಯನ್ನು ನಡೆಸಿದರು. ಕಲಬುರಗಿಯಿಂದ ಕೆಲವು ಜನರು ಬಂದು ಗಲಭೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದರು. ನಾನು ಸಂಜೆ 4.30ಗಂಟೆಗೆ ಅಲ್ಲಿಗೆ ತಲುಪಿದೆ. ನೂರಾರು ಜನರು ಗೇಟ್ ಒಳಗಡೆ ಆಗಮಿಸಿದ್ದರು. ಅವರನ್ನು ನಿಯಂತ್ರಿಸುವುದಕ್ಕೆ ಅರ್ಧ ಗಂಟೆ ಕಾಲಾವಕಾಶಬೇಕಾಗಿತ್ತು. ಇದರಿಂದಾಗಿ ಸ್ವಲ್ಪ ತಡವಾಯಿತು. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಚಿತ್ತಾಪುರದಿಂದ ಯಾದಗಿರಿಗೆ ಹೋಗಬೇಕಾಗಿತ್ತು. ಸುಮಾರು 62ಕಿಮೀ ಇದ್ದು, ಎಲ್ಲ ರಸ್ತೆಗಳಿಗೂ ಬಂದೋಬಸ್ತ್ ಮಾಡಿ ಅವರಿಗೆ ಎಸ್ಕಾರ್ಟ್ ಕೊಟ್ಟು ಕಳುಹಿಸಿದ್ದೇವೆ. ಮಾನ್ಯರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಂಡಿದ್ದೇವೆ.”

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀ ಚಂದ್ರಶೇಖರ ತಿಗಾಡಿ, ಸಿಪಿಐ, ಚಿತ್ತಾಪುರ ಇವರು ಈ ಮುಂದಿನಂತೆ ಹೇಳಿಕೆ ನೀಡಿರುತ್ತಾರೆ:–

“ಮಾನ್ಯ ವಿರೋಧ ಪಕ್ಷದ ನಾಯಕರು ಕಲಬುರಗಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಹೇಳಿದಂತಹ ವಿಚಾರಕ್ಕೆ ಸಂಬಂಧಪಟ್ಟಂತೆ ಕಾಂಗ್ರೆಸ್ ಕಾರ್ಯಕರ್ತರು ಚಿತ್ತಾಪುರ ಐಬಿ ಮುಂದೆ ಪ್ರತಿಭಟನೆ ಮಾಡಲು ಜಮಾಯಿಸಿದ್ದರೆಂದು ಪಿಐಎಸ್ಐ ಚಿತ್ತಾಪುರ ಠಾಣೆಯವರು ತಿಳಿಸಿದಾಗ ವಾಡಿ ಪಟ್ಟಣದಿಂದ ಚಿತ್ತಾಪುರಕ್ಕೆ ಬಂದು ಐಬಿಗೆ ಹೋಗಿರುತ್ತೇನೆ. ಅಲ್ಲಿನ ವಿಷಯವನ್ನು ಮೇಲಾಧಿಕಾರಿಗಳಿಗೆ ತಿಳಿಸಿರುತ್ತೇನೆ. ಡಿವೈಎಸ್ಪಿಯವರು ಸ್ಥಳಕ್ಕೆ ಆಗಮಿಸಿ ಅಲ್ಲಿನ ಚಲನವಲನವನ್ನು ಗಮನಿಸಿದರು. ರಾತ್ರಿ ಸುಮಾರು 8.30ಗಂಟೆಯಲ್ಲಿ ಪ್ರತಿಭಟನಾ ಕಾರರು ವಾಪಸ್ಸು ಹೋಗಿದ್ದರು. ಆಗ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಎಸ್ಕಾರ್ಟ್ ಕೊಟ್ಟು ಯಾದಗಿರಿಗೆ ಕಳುಹಿಸಿಕೊಟ್ಟೆವು.

ಸದರಿ ಪ್ರಕರಣದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಕಲಬುರಗಿ ನಗರದಲ್ಲಿ ಹಮ್ಮಿಕೊಂಡ ಪತ್ರಿಕಾಗೋಷ್ಠಿಯಲ್ಲಿ ಅಚಾನಕ್ ಆಗಿ ಆನೆ ಹೋಗುವಾಗ ಶ್ವಾನ ಬೊಗಳಿದರೆ, ಆನೆ ಶ್ವಾನಕ್ಕೆ ಹೆದರುವುದಿಲ್ಲ ಎಂದು ಹೇಳಿಕೆ ಕೊಟ್ಟಿದ್ದರಿಂದ ಈ ಎಲ್ಲಾ ಗೊಂದಲಕ್ಕೆ ಕಾರಣವಾಗಿರುವುದು ಮೇಲ್ನೋಟಕ್ಕೆ ಕಾಣುತ್ತಿದೆ. ನಾವೆಲ್ಲರೂ ನಮ್ಮ ಇತಿಮಿತಿಯೊಳಗೆ ಮಾತನಾಡಬೇಕಾಗಿರುವುದು ನಮ್ಮ ಕರ್ತವ್ಯವಾಗಿದೆ. ಅಲ್ಲಿ ನಿರೀಕ್ಷೆಗೂ ಮೀರಿದಷ್ಟು ಜನರು ಸೇರಿದ್ದು, Maintaining law and order providing security and safety to Hon'ble Leader of Opposition is very important. ಅವರಿಗೆ ದಕ್ಕೆಯಾಗದಿರುವಂತಹ ರೀತಿಯಲ್ಲಿ ಸೌಲಭ್ಯಗಳನ್ನು ಕೊಡಬೇಕಾಗಿರುವುದು ಪೊಲೀಸರ ಕರ್ತವ್ಯವಾಗಿತ್ತು. ಗೃಹ ಇಲಾಖೆಯ ಅಧಿಕಾರಿಗಳು ನೀಡಿರುವ ಹೇಳಿಕೆಯನ್ನು ಗಮನಿಸಿದಾಗ ಮಾನ್ಯರಿಗೆ ಯಾವುದೇ ತೊಂದರೆಯಾಗದಂತೆ ರಕ್ಷಣೆ ನೀಡಿ, ಪೊಲೀಸ್ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ನಿಭಾಯಿಸಿರುತ್ತಾರೆ. ಮುಂದಿನ ದಿನಗಳಲ್ಲಿ ಇನ್ನು ಹೆಚ್ಚು ಮುಂಜಾಗ್ರತಾ ಕ್ರಮಗಳನ್ನು ವಹಿಸಬೇಕೆಂದು ಸೂಚನೆಯನ್ನು ನೀಡುತ್ತಾ ಪ್ರಕರಣವನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು.

****

ಪ್ರಕರಣ–4

ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಟಿ.ಎ. ಶರವಣ ಅವರು ನೀಡಿರುವ ಹಕ್ಕುಚ್ಯುತಿ

[ನಗರಾಭಿವೃದ್ಧಿ ಇಲಾಖೆ]

ಸಂಖ್ಯೆ:ಕವಿಪ/ಶಾರಶಾ/43/2025

ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಶ್ರೀ ಟಿ.ಎ. ಶರವಣ ಅವರು ಮಾನ್ಯ ಸಭಾಪತಿಯವರಿಗೆ ದಿನಾಂಕ:24.05.2025ರಂದು ಪತ್ರ ನೀಡಿ "ಬೆಂಗಳೂರಿನಲ್ಲಿ ಮಳೆಯಿಂದ ಉಂಟಾಗಿರುವ ಹಾನಿಗೆ ಸಂಬಂಧಿಸಿದಂತೆ ಹಾಗೂ ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ 2024ರ ಅನುಷ್ಠಾನದ ಕುರಿತು ಚರ್ಚಿಸಲು ದಿನಾಂಕ:24.05.2025ರಂದು ವಿಧಾನಸೌಧದಲ್ಲಿ ಸಭೆ ಕರೆಯಲಾಗಿದ್ದು, ಸಭಾ ಸೂಚನಾ ಪತ್ರವನ್ನು ಹೊರಡಿಸಲಾಗಿರುತ್ತದೆ. ಸದರಿ ಸಭೆಗೆ ತಮ್ಮನ್ನು ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘಿಸಿರುವ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳಬೇಕೆಂದು ಕೋರಿರುತ್ತಾರೆ. ***(ಅನುಬಂಧ – 8)***

ಸರ್ಕಾರದ ಸುತ್ತೋಲೆ ದಿನಾಂಕ:16.04.2019ರ ರೀತ್ಯಾ ಜಿಲ್ಲೆಯನ್ನು ಪ್ರತಿನಿಧಿಸುವ ಶಾಸಕರನ್ನು ಸರ್ಕಾರಿ ಸಭೆ/ಸಮಾರಂಭಗಳಿಗೆ ತಪ್ಪದೇ ಆಹ್ವಾನಿಸಬೇಕಾಗಿದ್ದು, ಇಲ್ಲವಾದಲ್ಲಿ ಶಿಸ್ತಿನ ಕ್ರಮಕೈಗೊಳ್ಳಲಾಗುವುದೆಂದು ಸೂಚಿಸಲಾಗಿರುತ್ತದೆ. ಮಾನ್ಯ ಶಾಸಕರು ಬೆಂಗಳೂರು ನಗರ ಜಿಲ್ಲೆಯನ್ನು ನೋಡೆಲ್ ಜಿಲ್ಲೆಯೆಂದು ಆಯ್ಕೆ ಮಾಡಿಕೊಂಡಿದ್ದು, ಮಾನ್ಯರನ್ನು ಬೆಂಗಳೂರಿನಲ್ಲಿ ಆಯೋಜಿಸಿದ ಸಭೆಗೆ ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘನೆಯಾಗಿರುತ್ತದೆ. ಆದುದರಿಂದ ಸದರಿ ಪ್ರಕರಣವನ್ನು ಪರಿಶೀಲಿಸಲು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 179ರ ರೀತ್ಯಾ ಮಾನ್ಯ ಸಭಾಪತಿಯವರು ದಿನಾಂಕ:03.07.2025ರಂದು ಹಕ್ಕುಬಾಧ್ಯತಾ ಸಮಿತಿಗೆ ವಹಿಸಿರುತ್ತಾರೆ.

ದಿನಾಂಕ:06.10.2025ರಂದು ನಡೆಯಲಿರುವ ಸಮಿತಿ ಸಭೆಗೆ ಹಾಜರಾಗುವಂತೆ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳನ್ನು ಆಹ್ವಾನಿಸಲಾಗಿತ್ತು.

ನಗರಾಭಿವೃದ್ಧಿ ಇಲಾಖೆಯಿಂದ ಸ್ವೀಕೃತವಾದ ದಿನಾಂಕ:04.10.2025ರ ವರದಿಯನ್ನು ಸಭೆಯಲ್ಲಿ ಮಂಡಿಸಲಾಗಿರುತ್ತದೆ. ***(ಅನುಬಂಧ – 9)***

ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರು ಸಮಿತಿಗೆ ಪತ್ರ ನೀಡಿ ದಿನಾಂಕ:06.10.2025ರಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿಗೆ ಸಂಬಂಧಿಸಿದಂತೆ ಕೆ–ರೈಡ್ ಹಾಗೂ ಬಿ–ರೈಡ್ ಮಂಡಳಿ ಸಭೆಗಳಿರುವುದರಿಂದ ಹಾಜರಾತಿ ವಿನಾಯಿತಿ ಕೋರಿದ್ದು, ಸರ್ಕಾರದ ವಿಶೇಷ ಕಾರ್ಯದರ್ಶಿ ಹಾಗೂ ಅಧೀನ ಕಾರ್ಯದರ್ಶಿಯವರು ಹಾಜರಾಗುವುದಾಗಿ ತಿಳಿಸಿರುತ್ತಾರೆ. ಸಮಿತಿಯು ಅನುಮತಿ ನೀಡಿರುತ್ತದೆ.

ದಿನಾಂಕ:06.10.2025ರ ಸಭೆಯಲ್ಲಿ ಹಾಜರಿದ್ದ ಶ್ರೀ ಜೆ.ಡಿ. ಮಧುಚಂದ್ರ ತೇಜಸ್ವಿ, ವಿಶೇಷ ಕಾರ್ಯದರ್ಶಿ, ಗ್ರೇಟರ್ ಬೆಂಗಳೂರು ಅಥಾರಿಟಿ ಇವರು ಈ ಮುಂದಿನಂತೆ ತಿಳಿಸಿರುತ್ತಾರೆ:

“ಉಪ ಮುಖ್ಯಮಂತ್ರಿಗಳ ಕಚೇರಿಯಿಂದ 24ಗಂಟೆಗಳ ಮುಂಚಿತವಾಗಿ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಮುಂಗಾರು ಪೂರ್ವ ಮಳೆಯಿಂದ ಉಂಟಾಗಿರುವ ಹಾನಿ ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಸಂಬಂಧಪಟ್ಟಂತೆ ಸಭೆಯನ್ನು ಏರ್ಪಡಿಸಲು ಸೂಚನೆಯನ್ನು ನೀಡಲಾಗಿತ್ತು. ಸದರಿ ಕೆಲಸಗಳನ್ನು ನಿರ್ವಹಿಸುವ ಅಧೀನ ಕಾರ್ಯದರ್ಶಿ, ಬಿಬಿಎಂಪಿ–2ರವರು ರಜೆಯ ಮೇಲೆ ತೆರಳಿದ್ದರು. ಆದ್ದರಿಂದ ಈ ಕೆಲಸವನ್ನು ಅಧೀನ ಕಾರ್ಯದರ್ಶಿ, ಬಿಬಿಎಂಪಿ–1 ರವರಿಗೆ ವಹಿಸಲಾಗಿತ್ತು. ಅವರ ಆಪ್ತ ಸಹಾಯಕರು ಇರಲಿಲ್ಲವಾದ್ದರಿಂದ ಖುದ್ದಾಗಿ ಸಭೆ ಸೂಚನಾ ಪತ್ರವನ್ನು ತಯಾರಿಸಿದ್ದರು. ಬೆಂಗಳೂರಿಗೆ ಸಂಬಂಧಪಡುವ ಜನಪ್ರತಿನಿಧಿಗಳ ಪಟ್ಟಿಯನ್ನು ತರಿಸಿಕೊಳ್ಳಲಾಗಿತ್ತು. ಪಕ್ಷವಾರು ಪಟ್ಟಿಯನ್ನು ನೀಡಲಾಗಿದ್ದು, ಜನತಾದಳ (ಜಾತ್ಯಾತೀತ) ಪಟ್ಟಿಯ ಎರಡು ಪುಟಗಳು ಬಿಟ್ಟು ಹೋಗಿದ್ದವು. ಕಣ್ತಪ್ಪಿನಿಂದ ಬಿಟ್ಟು ಹೋಗಿರುವುದು ನಂತರದಲ್ಲಿ ಗೊತ್ತಾಗಿ ಮಾನ್ಯ ಶಾಸಕರ ಹೆಸರುಗಳನ್ನು ಸೇರಿಸಿ ಪುನ: ಹೊಸದಾಗಿ ಸಭೆಯ ಸೂಚನಾ ಪತ್ರವನ್ನು ಹೊರಡಿಸಲಾಯಿತು. ಪಾಲಿಕೆ ವತಿಯಿಂದಲೇ ಎಲ್ಲಾ ಜನಪ್ರತಿನಿಧಿಗಳ ಆಪ್ತ ಶಾಖಾ ಕಚೇರಿಗಳಿಗೆ ಸಭೆಯ ಸೂಚನಾ ಪತ್ರವನ್ನು ನೀಡಲಾಗಿದ್ದು, ಸ್ವೀಕೃತಿ ಇರುತ್ತದೆ. ಮಾನ್ಯ ಶಾಸಕರಾದ ಶ್ರೀ ಟಿ.ಎ. ಶರವಣ ಅವರಿಗೆ ನೀಡುವಾಗ ಪರಿಷ್ಕೃತ ಪ್ರತಿಯನ್ನು ನೀಡದಿರುವುದು ಕಂಡು ಬರುತ್ತದೆ. ಒತ್ತಡದಲ್ಲಿ ಅಚಾತುರ್ಯವಾಗಿದೆಯೇ ವಿನ: ದುರುದ್ದೇಶವಿರುವುದಿಲ್ಲ. ಅಧೀನ ಕಾರ್ಯದರ್ಶಿಯವರು ವಿಷಾದವನ್ನು ವ್ಯಕ್ತಪಡಿಸಿ ಕ್ಷಮೆ ಕೋರಿರುತ್ತಾರೆ.

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀ ಲಕ್ಷ್ಮೀಸಾಗರ್ ಎನ್.ಕೆ. ಅಧೀನ ಕಾರ್ಯದರ್ಶಿ, ಬಿಬಿಎಂಪಿ–1 ಇವರು ಈ ಮುಂದಿನಂತೆ ಹೇಳಿಕೆ ನೀಡಿರುತ್ತಾರೆ:–

“ದಿನಾಂಕ:24.05.2025ರಂದು ಕರೆಯಲಾಗಿದ್ದ ಸಭೆಯ ಕಾರ್ಯವನ್ನು ಬಿಬಿಎಂಪಿ–2 ಶಾಖೆಯಿಂದ ನಿರ್ವಹಿಸಬೇಕಾಗಿದ್ದು, ಅವರು ರಜೆಯ ಮೇಲೆ ತೆರಳಿದ್ದರಿಂದ ಉಪ ಮುಖ್ಯಮಂತ್ರಿಗಳ

ಕಚೇರಿಯಿಂದಲೇ ಸಭೆಯ ಸೂಚನಾ ಪತ್ರವನ್ನು ಹೊರಡಿಸಬೇಕಾಗಿತ್ತು. ಇಲಾಖೆಯ ಮೇಲಾಧಿಕಾರಿಗಳ ನಿರ್ದೇಶನದ ಮೇರೆಗೆ ಬಿಬಿಎಂಪಿ–2ರ ಶಾಖಾ ಮುಖ್ಯಸ್ಥರ ಅನುಪಸ್ಥಿತಿಯಲ್ಲಿ ನಾನು ಸೂಚನಾ ಪತ್ರವನ್ನು ಹೊರಡಿಸಿರುತ್ತೇನೆ. ಈ ಸಂದರ್ಭದಲ್ಲಿ ನಾನು ಉಪ ಮುಖ್ಯಮಂತ್ರಿಗಳ ಕಚೇರಿಯೊಂದಿಗೆ ದೂರವಾಣಿ ಸಂಪರ್ಕ ಮಾಡಿರುತ್ತೇನೆ. ಮೊದಲಿಗೆ ವಿಧಾನ ಸಭಾ ಶಾಸಕರನ್ನು ಆಹ್ವಾನಿಸಬೇಕಾಗಿತ್ತು. ನಂತರ ಸಂಸದರನ್ನು ಹಾಗೂ ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಆಹ್ವಾನಿಸುವಂತೆ ನಿರ್ದೇಶನಗಳು ದೊರೆತವು. ಸಭೆಯ ಸೂಚನಾ ಪತ್ರವನ್ನು ನಾನೇ ಖುದ್ದಾಗಿ ಬೆರಳಚ್ಚು ಮಾಡಿದ್ದೇನೆ. ಈ ವಿಚಾರದಲ್ಲಿ ನನ್ನ ಕಡೆಯಿಂದಲೇ ತಪ್ಪಾಗಿರುವುದರಿಂದ ದಯಮಾಡಿ ಕ್ಷಮಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಶಾಸಕರುಗಳನ್ನು ಭೇಟಿ ಮಾಡಿ ಕ್ಷಮೆಯಾಚಿಸಿರುತ್ತೇನೆ.

ಸಾಮಾನ್ಯ ಸಭೆಗಳನ್ನು ಕರೆದಾಗ 7 ದಿವಸಗಳ ಕಾಲಾವಕಾಶವಿರುತ್ತದೆ. ಆದರೆ ತುರ್ತು ಸಭೆಗಳಿಗೆ ಆ ರೀತಿಯ ಅವಕಾಶವಿರುವುದಿಲ್ಲ. ಬೆಂಗಳೂರು ಜಿಲ್ಲೆಯನ್ನು ಪ್ರತಿನಿಧಿಸುವ ಎಲ್ಲಾ ಜನಪ್ರತಿನಿಧಿಗಳನ್ನು ಪಕ್ಷಾತೀತವಾಗಿ ಕಡ್ಡಾಯವಾಗಿ ಆಹ್ವಾನಿಸಬೇಕು ಎಂದು ಆದೇಶವನ್ನು ನೀಡುತ್ತಾ ಬಿಬಿಎಂಪಿ–1 ಅಧೀನ ಕಾರ್ಯದರ್ಶಿಯವರು ಅವರದಲ್ಲದ ಕೆಲಸದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದು, ಒತ್ತಡದಲ್ಲಿ ಅಚಾತುರ್ಯವಾಗಿ ಆಗಿರುವ ತಪ್ಪನ್ನು ಸರಿಪಡಿಸಿಕೊಂಡಿರುವುದರ ಜೊತೆಗೆ ಕ್ಷಮೆಯಾಚಿಸಿರುವುದರಿಂದ ಪ್ರಕರಣವನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು.

****

ಪ್ರಕರಣ–5

ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಶ್ರೀ ಎಂ. ನಾಗರಾಜ ಅವರು ನೀಡಿರುವ ಹಕ್ಕುಚ್ಯುತಿ

[ನಗರಾಭಿವೃದ್ಧಿ ಇಲಾಖೆ]

ಸಂಖ್ಯೆ:ಕವಿಪ/ಶಾರಶಾ/48/2025

ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಶ್ರೀ ಎಂ. ನಾಗರಾಜ ಅವರು ಮಾನ್ಯ ಸಭಾಪತಿಯವರಿಗೆ ದಿನಾಂಕ:13.06.2025ರಂದು ಪತ್ರ ಬರೆದು ಬಿಡಿಎ ಕಚೇರಿ ವ್ಯಾಪ್ತಿಗೆ ಸಂಬಂಧಿಸಿದಂತೆ ಸಾರ್ವಜನಿಕ ಸಮಸ್ಯೆಗಳ ಮಾಹಿತಿ ಪಡೆಯಲು ದಿನಾಂಕ:11.06.2025ರಂದು ಶ್ರೀಮತಿ ಜಿ.ಎ. ಕ್ರಿಪಾಲಿನಿ ಭೂಸ್ವಾಧೀನಾಧಿಕಾರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರನ್ನು ದೂರವಾಣಿ ಮೂಲಕ ಸಂಪರ್ಕಿಸಲು ಪದೇ ಪದೇ ಪ್ರಯತ್ನಿಸಿದರೂ ಕರೆಗಳನ್ನು ಸ್ವೀಕರಿಸಿರುವುದಿಲ್ಲ. ತದನಂತರ ವಾಟ್ಸಾಪ್ ಮೂಲಕ ಮೆಸೇಜ್ (ಮ:2.43ಗಂಟೆ)ಕಳುಹಿಸಿದರೂ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ತದನಂತರ ಅವರ ಉನ್ನತ ಅಧಿಕಾರಿಯವರಾದ ಶ್ರೀಮತಿ ಸುಮ ಆರ್. ಉಪ ಆಯುಕ್ತರು (ಭೂಸ್ವಾಧೀನ) ಇವರನ್ನು ಸಂಪರ್ಕಿಸಲಾಯಿತು. ತದನಂತರ ಶ್ರೀಮತಿ ಜಿ.ಎ. ಕ್ರಿಪಾಲಿನಿ ಅವರು ಸಂಜೆ 5.00ಗಂಟೆಗೆ ಕರೆ ಮಾಡಿ ಬೇಜವಾಬ್ದಾರಿಯಿಂದ ಉತ್ತರಿಸುತ್ತಾ ನಾನು ರಜೆಯಲ್ಲಿ ಇದ್ದೇನೆ ಕರೆಗಳನ್ನು ಹೇಗೆ ಸ್ವೀಕರಿಸಲು ಸಾಧ್ಯ ಎಂದು ಏರು ಧ್ವನಿಯಲ್ಲಿ ಮಾತನಾಡತೊಡಗಿದರು. ಆದ್ದರಿಂದ ಸದರಿ ಅಧಿಕಾರಿಯವರ ರಜೆ ಕುರಿತು ಮೇಲಾಧಿಕಾರಿಗಳಿಗೆ ವಿಚಾರಿಸಿದಾಗ ಅವರು ಕಚೇರಿಗೆ ಹಾಜರಾಗಿರುವುದಾಗಿ ತಿಳಿಸಿರುತ್ತಾರೆ. ಶ್ರೀಮತಿ ಕ್ರಪಾಲಿನಿ ಅವರು ಜನಪ್ರತಿನಿಧಿಯೊಂದಿಗೆ ಈ ರೀತಿ ಅಗೌರವದಿಂದ ಮಾತನಾಡಿ ನನ್ನ ಹಕ್ಕಿಗೆ ಚ್ಯುತಿ ಎಸಗಿರುತ್ತಾರೆ. ಅವರ ಮೇಲೆ ಕ್ರಮಕೈಗೊಳ್ಳಬೇಕೆಂದು ಕೋರಿರುತ್ತಾರೆ. ***(ಅನುಬಂಧ – 10)***

ದಿನಾಂಕ:16.07.2015ರ ಸುತ್ತೋಲೆಯಲ್ಲಿ ವಿಧಾನ ಮಂಡಲದ ಸದಸ್ಯರುಗಳು ದೂರವಾಣಿ ಕರೆಗಳನ್ನು ಮಾಡಿದಾಗ ಇಲಾಖಾಧಿಕಾರಿಗಳು ಸೌಜನ್ಯದಿಂದ ಉತ್ತರಿಸಬೇಕು ಹಾಗೂ ಅವರು ಸಭೆಯಲ್ಲಿದ್ದಾಗ ಅವರ ಆಪ್ತ ಸಹಾಯಕರು ಪಟ್ಟಿ ಮಾಡಿ ತೋರಿಸಬೇಕು ಹಾಗೂ ಅಂತಹ ದೂರವಾಣಿ ಕರೆಗಳನ್ನು ಕಡ್ಡಾಯವಾಗಿ ಹಿಂತಿರುಗಿಸತಕ್ಕದ್ದು ಎಂಬುದಾಗಿರುತ್ತದೆ. ಸದರಿ ಪ್ರಕರಣದಲ್ಲಿ ಮಾನ್ಯ ಶಾಸಕರ ಕರೆಯನ್ನು ಸ್ವೀಕರಿಸದೆ ತದನಂತರ ಅವರೊಂದಿಗೆ ಏರು ಧ್ವನಿಯಲ್ಲಿ ಮಾತನಾಡಿ ಅವರಿಗೆ ಅಗೌರವ ತೋರಿ ಹಕ್ಕಯಚ್ಯುತಿ ಎಸಗಿರುತ್ತಾರೆ. ಸದರಿ ಪ್ರಕರಣವನ್ನು ಪರಿಶೀಲಿಸಲು ಕರ್ನಾಟಕ ವಿಧಾನ ಪರಿಷತ್ತಿನ

ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 179ರ ರೀತ್ಯಾ ಮಾನ್ಯ ಸಭಾಪತಿಯವರು ದಿನಾಂಕ:24.07.2025ರಂದು ಹಕ್ಕುಬಾಧ್ಯತಾ ಸಮಿತಿಗೆ ವಹಿಸಿರುತ್ತಾರೆ.

ದಿನಾಂಕ:29.08.2025ರಂದು ನಡೆಯಲಿರುವ ಸಮಿತಿ ಸಭೆಗೆ ಹಾಜರಾಗಬೇಕೆಂದು ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳನ್ನು ಆಹ್ವಾನಿಸಲಾಗಿರುತ್ತದೆ.

ನಗರಾಭಿವೃದ್ಧಿ ಇಲಾಖೆಯವರಿಂದ ಸ್ವೀಕರಿಸಲಾದ ದಿನಾಂಕ:28.08.2025ರ ವರದಿಯನ್ನು ಸಭೆಯಲ್ಲಿ ಮಂಡಿಸಲಾಗಿರುತ್ತದೆ. ***(ಅನುಬಂಧ – 11)***

ಸದರಿ ಸಭೆಯಲ್ಲಿ ಹಾಜರಿದ್ದ ಡಾ:ಪ್ರಶಾಂತ್, ಅಪರ ಕಾರ್ಯದರ್ಶಿ, ಇವರು ಈ ಮುಂದಿನಂತೆ ತಿಳಿಸಿರುತ್ತಾರೆ:

"ಈ ಪ್ರಕರಣದ ಬಗ್ಗೆ ಸಂಬಂಧಪಟ್ಟ ಅಧಿಕಾರಿಯಿಂದ ವಿವರಣೆಯನ್ನು ಪಡೆದು ಬಿಡಿಎ ಆಯುಕ್ತರವರ ಕಡೆಯಿಂದ ಸರ್ಕಾರಕ್ಕೆ ಸಲ್ಲಿಸಿದಾರೆ. ಶ್ರೀಮತಿ ಕ್ರಿಪಾಲಿನಿ ಜಿ.ಕೆ. ರವರ 2 ವರ್ಷದ ಮಗನಿಗೆ ಅನಾರೋಗ್ಯವಾದ ಕಾರಣ ಮಗುವನ್ನು ದಿನಾಂಕ:11.06.2025ರಂದು ಆಸ್ಪತ್ರೆಗೆ ದಾಖಲು ಮಾಡಿದ್ದರು. ಮೊಬೈಲ್ ಸೈಲೆಂಟ್ ಮೋಡ್‌ನಲ್ಲಿದ್ದು ಕರೆಯನ್ನು ಸ್ವೀಕರಿಸಲು ಸಾಧ್ಯವಾಗಿರುವುದಿಲ್ಲ. ಮಗುವನ್ನು ಡಿಸ್‌ಚಾರ್ಜ್ ಮಾಡಿದ ನಂತರ ಮಾನ್ಯ ಶಾಸಕರೊಂದಿಗೆ ಅದೇ ದಿನ ಸಂಜೆ ಮಾತನಾಡಿರುವುದಾಗಿ ತಿಳಿಸಿರುತ್ತಾರೆ.

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀ ಸಿ.ಎಲ್ ಶಿವಕುಮಾರ್ ಕಾರ್ಯದರ್ಶಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಇವರು ಈ ಮುಂದಿನಂತೆ ತಿಳಿಸಿರುತ್ತಾರೆ:

"ಆವತ್ತಿನ ದಿವಸ ಅವರ ಮೇಲಾಧಿಕಾರಿಯಾದ ಉಪ ಆಯುಕ್ತರು (ಭೂಸ್ವಾಧೀನ) ಇವರಿಗೆ ಮೊಬೈಲ್‌ನಲ್ಲಿ ಮೆಸೇಜ್ ಮಾಡುವುದರ ಮೂಲಕ ರಜೆ ಪಡೆದಿದ್ದರು. ಬಯೋ ಮೆಟ್ರಿಕ್ ಹಾಜರಾತಿಯನ್ನು ಪಡೆಯಲಾಗಿದ್ದು, ಅವರ ಹಾಜರಾತಿ ಬಂದಿರುವುದಿಲ್ಲ. ಆದ್ದರಿಂದ ರಜೆಯ ಮೇಲೆ ಇರುವುದಾಗಿ ಗಮನಕ್ಕೆ ತರುತ್ತೇನೆ.

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀಮತಿ ಸುಮಾ ಉಪ ಆಯುಕ್ತರು ಭೂಸ್ವಾದೀನ (ಬಿಡಿಎ) ಇವರು ಈ ಮುಂದಿನಂತೆ ತಿಳಿಸಿರುತ್ತಾರೆ:

"ಶ್ರೀಮತಿ ಕ್ರಿಪಾಲಿನಿ ಅವರು ನನಗೆ ಬೆಳಗ್ಗೆ 11.37ಗಂಟೆಗೆ ಮೆಸೇಜ್ ಮಾಡಿದ್ದಾರೆ. ನಾನು ಸಹ ನೋಡಿರಲಿಲ್ಲ. ಅಂದಿನ ದಿವಸ ನಾನು ವಿಧಾನಸೌಧದಲ್ಲಿಯೇ ಏರ್ಪಡಿಸಲಾಗಿದ್ದ ಆಯುಕ್ತರ ಸಭೆಯಲ್ಲಿದ್ದೆನು. ಸಭೆ ಮುಗಿಸಿಕೊಂಡು ಹೊರಗೆ ಬಂದಾಗ ತಕ್ಷಣ ಮಾನ್ಯ ಶಾಸಕರ ಕರೆ ಬಂದಿದ್ದು, ಮಾನ್ಯ ಶಾಸಕರು ಕರೆ ಮಾಡಿದ ಸಂದರ್ಭದಲ್ಲಿ ನಾನು ಮೆಸೇಜ್ ನೋಡಿರುವುದಿಲ್ಲ. ಅವರು ಆಫೀಸ್‌ನಲ್ಲಿ ಇರಬಹುದು ಎಂದು ತಿಳಿದುಕೊಂಡಿದ್ದೆ, ಹಾಗಾಗಿ ನಾನು ಹೊರಗಡೆ ಮೀಟಿಂಗ್‌ನಲ್ಲಿದ್ದೆ 'she may be in the office sir, I will ask her to call you' ಎಂದು ತಿಳಿಸಿರುತ್ತೇನೆ. ಅದಾದ ಮೇಲೆ ಮಾನ್ಯ ಶಾಸಕರು ಯಾರನ್ನೋ ನನ್ನ ಹತ್ತಿರ ಕಳುಹಿಸಿದ್ದು, ನಾನು ಅವರಿಗೆ ಸ್ಪಂದಿಸಿದ್ದೇನೆ."

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀಮತಿ ಜಿ.ಕೆ. ಕ್ರಿಪಾಲಿನಿ ಭೂಸ್ವಾದೀನಾಧಿಕಾರಿ (ಬಿಡಿಎ) ಇವರು ಈ ಮುಂದಿನಂತೆ ಹೇಳಿಕೆ ನೀಡಿರುತ್ತಾರೆ:–

"ನಾನು ಹೇಳಿದ ವಿಚಾರ ಸತ್ಯ. 10ನೇ ತಾರೀಖಿನಂದು ಮಗನಿಗೆ ಆರೋಗ್ಯ ಸರಿಯಿರಲಿಲ್ಲ. ಅವನು ಆಹಾರ ಸೇವಿಸದೆ ಶುಗರ್ ಲೆವೆಲ್ ಕಡಿಮೆಯಾಗಿ ಫೈಂಟ್ ಆಗುವ ಹಂತದಲ್ಲಿದ್ದ ಕಾರಣ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಮತ್ತು ಮನೆಗೆ ಬಂದೆವು ನಂತರ 11ನೇ ತಾರೀಖಿನಂದು ಬೆಳಗ್ಗೆ 4.00ಗಂಟೆಯಲ್ಲಿ ಆರೋಗ್ಯ ಏರುಪೇರಾದ ಕಾರಣ ಮತ್ತೆ ಚಿಕಿತ್ಸೆ ಕೊಡಿಸಲು ಕರೆದುಕೊಂಡು ಹೋಗಿದಾಗ ಅಡ್ಮಿಟ್ ಮಾಡಿಕೊಂಡರು. ಆದುದರಿಂದ ರಜೆ ಕೋರಿ ವಾಟ್ಸ್ ಆಪ್‌ನಲ್ಲಿ ಮೆಸೇಜ್ ಮಾಡಿರುತ್ತೇನೆ. ತದನಂತರ ಸಂಜೆ ರಜೆಯನ್ನು ಕಳುಹಿಸಿಕೊಟ್ಟೆನು. ನನ್ನ ಮೊಬೈಲ್ 'ಡು ನಾಟ್ ಡಿಸ್ಟರ್ಬ್' ಮೋಡ್‌ನಲ್ಲಿದ್ದರಿಂದ ಮಾನ್ಯ ಸದಸ್ಯರ ಕರೆಯನ್ನು ಸ್ವೀಕರಿಸಲು ಸಾಧ್ಯವಾಗಿರುವುದಿಲ್ಲ. ಉಪ ಆಯುಕ್ತರು ಕರೆ ಮಾಡಿ ವಿಷಯ ತಿಳಿಸಿದ ನಂತರ ನಾನು ಶಾಸಕರ ಮೆಸೇಜ್ ನೋಡಿದ್ದು, ಆ ನಂತರ ಕರೆ ಮಾಡಿರುತ್ತೇನೆ. ಆ ದಿನ ನಾನು ಒತ್ತಡದಲ್ಲಿದ್ದೆ, ದಯವಿಟ್ಟು ಕ್ಷಮಿಸಿ. ಎಲ್ಲಾ ಶಾಸಕರ ಮೊಬೈಲ್ ನಂಬರನ್ನು ಸೇವ್ ಮಾಡಿಟ್ಟುಕೊಂಡು, ಅವರ ಕರೆಗೆ ತಕ್ಷಣವೇ ಸ್ಪಂದಿಸಿ, ಮಾನ್ಯ ಶಾಸಕರು ಕಳುಹಿಸುವ ಸಂದೇಶಕ್ಕೆ ಆಗಿಂದಾಗ್ಗೆ ಮರು ಸಂದೇಶವನ್ನು ಕಳುಹಿಸುತ್ತೇನೆ.ಮಾನ್ಯ ಸದಸ್ಯರಲ್ಲಿ ಕ್ಷಮೆ ಕೋರುತ್ತೇನೆ. ಇನ್ನು ಮುಂದೆ ನಾನು ಎಂತಹ ಪರಿಸ್ಥಿತಿಯಲ್ಲಿಯೂ ಈ ರೀತಿಯ ತಪ್ಪುಗಳಾಗದಂತೆ ನಡೆದುಕೊಳ್ಳುತ್ತೇನೆಂದು ತಿಳಿಸಬಯಸುತ್ತೇನೆ."

ಮುಂದಿನ ಸಭೆಗೆ ಇಲಾಖಾ ಮುಖ್ಯಸ್ಥರು ಹಾಗೂ ಆಯುಕ್ತರನ್ನು ಆಹ್ವಾನಿಸಲು ಸೂಚಿಸಲಾಯಿತು.

ದಿನಾಂಕ:15.09.2025ರಂದು ನಡೆಯಲಿರುವ ಸಮಿತಿ ಸಭೆಗೆ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಆಯುಕ್ತರನ್ನು ಆಹ್ವಾನಿಸಲಾಗಿರುತ್ತದೆ. ಆಯುಕ್ತರು ದಿನಾಂಕ:15.09.2025ರಂದು ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಲಾಗಿದ್ದರಿಂದ ಹಾಜರಾತಿ ವಿನಾಯಿತ ಕೋರಿ ಪತ್ರ ನೀಡಿರುತ್ತಾರೆ.

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀ ತುಷಾರ್ ಗಿರಿನಾಥ್ ಅಪರ ಮುಖ್ಯ ಕಾರ್ಯದರ್ಶಿಯವರು ಈ ಮುಂದಿನಂತೆ ತಿಳಿಸಿರುತ್ತಾರೆ:–

“it is clear that the land acquisition officer has committed the mistake. ತಾವು ಫೋನ್ ಮಾಡಿದರೂ ವಾಟ್ಸಾಆಪ್ ಮಾಡಿದಾಗ ತಾವೆಂದು ಗೊತ್ತಾಗಿ Immediately the officer should have responded to you about this matter. I apologize before the committee on her behalf and she should be more careful in future.

ಇಲಾಖಾಧಿಕಾರಿಗಳ ಹೇಳಿಕೆಗಳನ್ನು ಪರಿಶೀಲಿಸಿದ ಸಮಿತಿಯು ಶ್ರೀಮತಿ ಕ್ರಿಪಾಲಿನಿ ಅವರು ಕ್ಷಮೆಯಾಚಿಸಿರುವುದನ್ನು ಪರಿಗಣಿಸಿ, ಆಕಸ್ಮಿಕವಾಗಿ ಆದಂತಹ ತಪ್ಪುಗಳಿಗೆ ಹಿರಿಯ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಪರಿಹಾರ ಕಂಡುಕೊಂಡು ಪರಿಹರಿಸಿಕೊಳ್ಳಬೇಕೆಂದು ನಿರ್ದೇಶನ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು.

*****

ಪ್ರಕರಣ–6

ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಡಾ:ಚಂದ್ರಶೇಖರ ಬಿ. ಪಾಟೀಲ ಅವರು ನೀಡಿರುವ ಹಕ್ಕುಚ್ಯುತಿ ಪ್ರಕರಣ

[ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ]

ಸಂಖ್ಯೆ:ಕವಿಪ/ಶಾರಶಾ/54/2025

ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಡಾ:ಚಂದ್ರಶೇಖರ ಬಿ ಪಾಟೀಲ ಅವರು ಮಾನ್ಯ ಸಭಾಪತಿಯವರಿಗೆ ಪತ್ರ ಬರೆದು ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಹುಮನಾಬಾದ್ ಮತಕ್ಷೇತ್ರದ ಪಂಡರಗೇರಾ ಗ್ರಾಮದಲ್ಲಿ ದಿನಾಂಕ:08.09.2025ರಂದು ಶಾಲಾ ಕೋಣೆ ಉದ್ಘಾಟನೆ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಸದರಿ ಕಾರ್ಯಕ್ರಮಕ್ಕೆ ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಅಧಿಕಾರಿಗಳ ಮೇಲೆ ಶಿಸ್ತು ಕ್ರಮಕೈಗೊಳ್ಳಬೇಕೆಂದು ಕೋರಿರುತ್ತಾರೆ. ***(ಅನುಬಂಧ – 12)***

ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ/34/ಹೆಚ್‌ಪಿಪಿ/2018(1) ದಿನಾಂಕ:16.04.2019ರಲ್ಲಿ ಸೂಚಿಸಿರುವ ಮಾರ್ಗಸೂಚಿಯನ್ವಯ ಜಿಲ್ಲೆಯನ್ನು ಪ್ರತಿನಿಧಿಸುವ ಶಾಸಕರುಗಳನ್ನು ತಪ್ಪದೆ ಸರ್ಕಾರಿ ಸಭೆ ಸಮಾರಂಭಗಳಿಗೆ ಆಹ್ವಾನಿಸಬೇಕಾಗಿರುತ್ತದೆ. ಮಾನ್ಯ ಶಾಸಕರು ಈಶಾನ್ಯ ಪದವೀಧರರ ಕ್ಷೇತ್ರದಿಂದ ಚುನಾಯಿತರಾಗಿದ್ದು, ಬೀದರ್, ಗುಲಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳು ಅವರ ಕ್ಷೇತ್ರ ವ್ಯಾಪ್ತಿಗೊಳಪಟ್ಟಿರುತ್ತದೆ. ಮಾನ್ಯರ ಕ್ಷೇತ್ರದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮಕ್ಕೆ ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘನೆಯಾಗಿರುತ್ತದೆ. ಆದುದರಿಂದ ಸದರಿ ಪ್ರಕರಣವನ್ನು ಪರಿಶೀಲಿಸಲು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 179ರ ರೀತ್ಯಾ ಮಾನ್ಯ ಸಭಾಪತಿಯವರು ದಿನಾಂಕ:23.09.2025ರಂದು ಹಕ್ಕುಬಾಧ್ಯತಾ ಸಮಿತಿಗೆ ವಹಿಸಿರುತ್ತಾರೆ.

ದಿನಾಂಕ:13.10.2025ರಂದು ನಡೆಯಲಿರುವ ಸಮಿತಿ ಸಭೆಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಸಂಬಂಧಪಟ್ಟ ಅಧಿಕಾರಿಯವರನ್ನು ಆಹ್ವಾನಿಸಲಾಗಿರುತ್ತದೆ.

ಶಾಲಾ ಶಿಕ್ಷಣ ಇಲಾಖೆಯವರಿಂದ ಸ್ವೀಕೃತವಾಗಿರುವ ದಿನಾಂಕ:10.10.2025ರ ವರದಿಯನ್ನು ಸಭೆಯಲ್ಲಿ ಮಂಡಿಸಲಾಗಿರುತ್ತದೆ. ***(ಅನುಬಂಧ – 13)***

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀಮತಿ ರಶ್ಮಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ, ಇವರು ಈ ಮುಂದಿನಂತೆ ತಿಳಿಸಿರುತ್ತಾರೆ:–

"ಬೀದರ್‌ನಲ್ಲಿ ಕ್ಲಸ್ಟರ್ ಮಟ್ಟದ ಕ್ರೀಡಾ ಕೂಟ ನಡೆಯುತ್ತದೆ. ರಾಜೇಶ್ವರ ಎನ್ನುವುದು ಹೋಬಳಿ ಇದಕ್ಕೆ ಮೂರು ಕ್ಲಸ್ಟರ್‌ಗಳನ್ನು ಸೇರಿಸಿ ಸುಮಾರು 100 ಮಕ್ಕಳಿರುತ್ತಾರೆ. ಈ ರೀತಿಯ ಕ್ಲಸ್ಟರ್ ಮಟ್ಟದ ಕ್ರೀಡಾ ಕೂಟಕ್ಕೆ ಯಾವುದೇ ರೀತಿಯ ಆಹ್ವಾನ ಪತ್ರಿಕೆ ಇರುವುದಿಲ್ಲ. ಯಾವ ಶಾಲೆಯವರು ಅದನ್ನು ಹೋಸ್ಟ್ ಮಾಡುತ್ತಾರೋ ಆ ಶಾಲೆಯ ಮುಖ್ಯ ಗುರುಗಳು ಮತ್ತು ಎಸ್.ಡಿ.ಎಂ.ಸಿಯವರು ಅದನ್ನು ಉದ್ಘಾಟನೆ ಮಾಡಿ ಕಾರ್ಯಕ್ರಮ ನಡೆಸುತ್ತಾರೆ. ಈ ಪ್ರಕರಣ ನಡೆದಿರುವುದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಂಡರಗೇರಾ. 2022–23ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಭಿವೃದ್ಧಿ ಮಂಡಳಿಯಿಂದ 4 ಕೊಠಡಿಗಳ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗಿತ್ತು. ಅದು ನಿರ್ಮಿತಿ ಕೇಂದ್ರದ ಮೂಲಕ ಅನುಷ್ಠಾನಗೊಂಡು ಅದರ ಪೂರ್ಣ ಕೆಲಸ ಮುಗಿದಿದೆ. ಅಲ್ಲಿನ ಎಸ್‌ಡಿಎಂಸಿ ಅಧ್ಯಕ್ಷರು ನೇರವಾಗಿ ಹುಮ್ನಾಬಾದ್ ಶಾಸಕರಿಗೆ ದೂರವಾಣಿ ಮೂಲಕ ಸಂಪರ್ಕಿಸಿರುವುದಾಗಿ ಬಿಇಓರವರ ವರದಿಯಿಂದ ತಿಳಿದುಬಂದಿದೆ. ಮಾನ್ಯ ಶಾಸಕರು ಪಕ್ಕದ ಊರಿನಲ್ಲಿ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು, ಇಲ್ಲಿಯೂ ಬಂದು ಉದ್ಘಾಟನೆ ಮಾಡಿರುತ್ತಾರೆ. ಕೊಠಡಿ ನಿರ್ಮಾಣಕ್ಕೆ ಅನುದಾನ ನೀಡಿರುವುದರಿಂದ ನಮ್ಮ ಹೊಣೆಗಾರಿಕೆ ಇರುತ್ತದೆ. ಅನೌಪಚಾರಿಕವಾಗಿ ಉದ್ಘಾಟನೆಗೆ ಅವಕಾಶ ಕೊಡಬಾರದು ಎಂದು ಕ್ಷಮೆಯಾಚಿಸುತ್ತಾ ಇನ್ನು ಮುಂದೆ ಈ ರೀತಿಯಾಗದಿರುವಂತೆ ನೋಡಿಕೊಳ್ಳುತ್ತೇನೆ. ಒಂದು ಸುತ್ತೋಲೆಯ ಮೂಲಕ ವಿವರವಾದ ನಿರ್ದೇಶನವನ್ನು ಕೊಡುತ್ತೇನೆ."

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀ ಚನ್ನಪ್ಪ ಬಿರಾದಾರ, ಪ್ರಭಾರಿ ಮುಖ್ಯೋಪಾಧ್ಯಾಯರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಪಂಡರಗೇರಾ ಇವರು ಈ ಮುಂದಿನಂತೆ ಹೇಳಿಕೆ ನೀಡಿರುತ್ತಾರೆ:–

"ದಿನಾಂಕ:08.09.2025ರಂದು ರಾಜೇಶ್ವರ, ನೀಲಗುಡಿ, ಇಸ್ಲಾಂಪುರ ಮೂರು ಸೇರಿ ಹೋಬಳಿ ಮಟ್ಟದ ಕ್ರೀಡಾಕೂಟವನ್ನು ನಮ್ಮ ಶಾಲೆಯಲ್ಲಿ ಆಯೋಜನೆ ಮಾಡಲಾಗಿತ್ತು. ಅದಕ್ಕೆ ಯಾವುದೇ ರೀತಿಯ ಆಹ್ವಾನ ಪತ್ರಿಕೆ ಇರುವುದಿಲ. ಪಕ್ಕದ ಗ್ರಾಮಕ್ಕೆ ಬಂದಿದ್ದ ಮಾನ್ಯ ಶಾಸಕರ ಬಳಿ ಕ್ರೀಡಾಕೂಟ ಉದ್ಘಾಟನೆ ಮಾಡುವಂತೆ ಎಸ್‌ಡಿಎಂಸಿ ಅಧ್ಯಕ್ಷರು ಮಾನವಿ ಮಾಡಿಕೊಂಡ ಹಿನ್ನಲೆಯಲ್ಲಿ ಮಾನ್ಯ ಶಾಸಕರು ಉದ್ಘಾಟನೆ ಮಾಡಿದರು. ಅನುಭವದ ಕೊರತೆಯಿಂದ ಶಿಷ್ಟಾಚಾರ ಪಾಲನೆಯಲ್ಲಿ ಅನಿರೀಕ್ಷಿತವಾಗಿ ಈ ಘಟನೆ ನಡೆದಿದೆ. ಮುಂದೆ ಇಂಥ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆಯನ್ನು ವಹಿಸುತ್ತೇನೆ."

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀ ನಾಗನಾಥ ದುಬಲಗುಂಡೆ, ದೈಹಿಕ ಶಿಕ್ಷಣ ಪರಿವೀಕ್ಷಕರು, ಕ್ಷೇತ್ರಶಿಕ್ಷಣಾಧಿಕಾರಿಗಳ ಕಚೇರಿ, ಬಸವಕಲ್ಯಾಣ ಇವರು ಈ ಮುಂದಿನಂತೆ ಹೇಳಿಕೆ ನೀಡಿರುತ್ತಾರೆ:–

"ವಲಯ ಮಟ್ಟದ ಕ್ರೀಡಾ ಕೂಟಗಳು ನಡೆಯುವಾಗ ಆಯಾ ವಲಯದ ಮುಖ್ಯ ಗುರುಗಳಿಗೆ ಜವಾಬ್ದಾರಿಯನ್ನು ನೀಡಲಾಗಿರುತ್ತದೆ. ಕ್ರೀಡಾ ಕೂಟಗಳನ್ನು ಸರಳವಾಗಿ ನಡೆಸಿ ಫಲಿತಾಂಶವನ್ನು ನೀಡಲು ಸರ್ಕಾರ ಆದೇಶ ಮಾಡಿರುತ್ತದೆ. ಸಮಯದ ಕೊರತೆಯಿರುವುದರಿಂದ ಬೇಗನೆ ಕ್ರೀಡಾಕೂಟಗಳನ್ನು ಮುಗಿಸಿ ಎಂದು ಇಲಾಖೆಯಿಂದ ಸೂಚನೆ ನೀಡಲಾಗಿರುತ್ತದೆ."

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀ ಸಿದ್ದವೀರಯ್ಯ ಹದ್ನೂರ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಬಸವಕಲ್ಯಾಣ ಇವರು ಈ ಮುಂದಿನಂತೆ ಹೇಳಿಕೆ ನೀಡಿರುತ್ತಾರೆ:–

"ಇದು ಮೂರು ಕ್ಲಸ್ಟರ್‌ಗಳ ಕ್ರೀಡಾಕೂಟ ಈಗ ಸಿಆರ್‌ಪಿ ಮತ್ತು ಸಂಬಂಧಪಟ್ಟ ಮುಖ್ಯೋಪಾಧ್ಯಾಯರು ಆಯಾಯ ವಲಯದಿಂದ ಬಂದಿರುತ್ತಾರೆ. ಆ ಸಂದರ್ಭದಲ್ಲಿ ಎಸ್.ಡಿ.ಎಂ.ಸಿ ಅಧ್ಯಕ್ಷರನ್ನು ಸಹ ಕರೆಸಿರುತ್ತಾರೆ. ಅದನ್ನು ಸಿ.ಆರ್.ಪಿ ಮತ್ತು ಟಿ.ಪಿ.ಓದವರು ಕೂಡಿಕೊಂಡು ಮಾಡಿರುತ್ತಾರೆ. ನನಗೆ ಬಂದ ಮಾಹಿತಿ ಮೇರೆಗೆ ಎಂ.ಎಲ್.ಎ ಸಾಹೇಬರನ್ನು ಎಸ್.ಡಿ.ಎಂ.ಸಿ ಅಧ್ಯಕ್ಷರು ಆಹ್ವಾನಿಸಿದ್ದು, ಕ್ರೀಡಾ ಕೂಟದ ಜೊತೆಗೆ ಶಾಲಾ ಕೊಠಡಿಗಳ ಉದ್ಘಾಟನೆ ಕಾರ್ಯಕ್ರಮ ನಡೆಸಲಾಗಿರುತ್ತದೆ. ಇಲಾಖಾ ವತಿಯಿಂದ ಕಾರ್ಯಕ್ರಮವನ್ನು ಆಯೋಜಿಸಿರುವುದಿಲ್ಲ."

ಶಾಲಾ ವಿಚಾರ ಬಂದಾಗ ಸಾರ್ವಜನಿಕ ವಿಚಾರವಾಗಿರುತ್ತದೆ. ಅದಕ್ಕೆ ಕಾರ್ಯಾಂಗ ಮತ್ತು ಶಾಸಕಾಂಗ ಈ ಎರಡೂ ಸಹ ಒಟ್ಟುಗೂಡಿಕೊಂಡು ಕೆಲಸ ಮಾಡಬೇಕು. ಕಾರ್ಯದರ್ಶಿಯವರು ಕೊಡತಕ್ಕಂತಹ ನಿರ್ದೇಶನಗಳನ್ನು ಮತ್ತು ಸರ್ಕಾರದ ಸುತ್ತೋಲೆಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು. ಮತ್ತೊಂದು ಬಾರಿ ಈ ರೀತಿ ಪುನರಾವರ್ತನೆಯಾಗದೆ ಇರುವ ರೀತಿ ನೋಡಿಕೊಳ್ಳುವಂತಹ ಜವಾಬ್ದಾರಿ ನಿಮ್ಮದು ಎಂದು ನಿರ್ದೇಶನ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಲಾಯಿತು

****

ಪ್ರಕರಣ– 7

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು ನೀಡಿರುವ ಹಕ್ಕುಚ್ಯುತಿ ಪ್ರಕರಣ

[ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ(ಶಿಷ್ಟಾಚಾರ) ಇಲಾಖೆ]

ಕವಿಪ/ಶಾರಶಾ/45/ಹಚ್ಯೂಪ್ರ/2023

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿರವರು ವಿವಿಧ ಇಲಾಖೆಗಳಿಂದ ನಡೆಯುವ ಸರ್ಕಾರಿ ಕಾರ್ಯಕ್ರಮಗಳಲ್ಲಿ ರಾಜ್ಯದ ಜನಪ್ರತಿನಿಧಿಗಳನ್ನೊಳಗೊಂಡಂತೆ ಇತರೆ ಗಣ್ಯರನ್ನು ಆಹ್ವಾನಿಸುವ ಸಂಬಂಧ ಆಹ್ವಾನ ಪತ್ರಿಕೆಯನ್ನು ಮುದ್ರಿಸುವ ಸಂದರ್ಭಗಳಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ವತಿಯಿಂದ ಹೊರಡಿಸಿರುವ ಶಿಷ್ಟಾಚಾರದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿರುವುದರಿಂದ ಸಂವಿಧಾನದತ್ತ ಹುದ್ದೆಯಲ್ಲಿರುವ ಗಣ್ಯರಿಗೆ ಹಾಗೂ ಜನಪ್ರತಿನಿಧಿಗಳಿಗೆ ಮುಜುಗರ ಉಂಟಾಗುತ್ತಿರುವ ವಿಷಯದ ಬಗ್ಗೆ ಚರ್ಚಿಸಲು ದಿನಾಂಕ: 25.01.2024 ರಂದು ಹಕ್ಕುಬಾಧ್ಯತಾ ಸಮಿತಿಗೆ ವಹಿಸಲಾಗಿರುತ್ತದೆ. ***(ಅನುಬಂಧ – 14)***

ದಿನಾಂಕ:05.02.2024ರಂದು ನಡೆಯಲಿರುವ ಸಮಿತಿ ಸಭೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಇಲಾಖಾಧಿಕಾರಿಗಳನ್ನು ಆಹ್ವಾನಿಸಲಾಗಿತ್ತು.

ಇಲಾಖೆಗಳಿಂದ ಸ್ವೀಕೃತವಾದ ವರದಿಯ ಪ್ರತಿಗಳನ್ನು ಸಮಿತಿ ಸಭೆಯಲ್ಲಿ ಮಂಡಿಸಲಾಗಿರುತ್ತದೆ. ***(ಅನುಬಂಧ – 15)***

ದಿನಾಂಕ:17.10.2023ರಂದು ಹಮ್ಮಿಕೊಳ್ಳಲಾಗಿದ್ದ ಕರ್ನಾಟಕ ಸಂಭ್ರಮ–50 ಲಾಂಚನ ಬಿಡುಗಡೆ ಕಾರ್ಯಕ್ರಮ ಹಾಗೂ ದಿನಾಂಕ:31.08.2023ರಂದು ಆಯೋಜಿಸಿದ್ದ ಕಾಯಕ ಯೋಗಿ ಶರಣ ನುಲಿ ಚಂದಯ್ಯನವರ 916ರ ಜಯಂತೋತ್ಸವ–2023 ಆಹ್ವಾನ ಪತ್ರಿಕೆಗಳಲ್ಲಿ ಮಾನ್ಯ ಸಭಾಪತಿಯವರ

ಹೆಸರನ್ನು ಆದ್ಯತಾ ಸೂಚಿ ಪಟ್ಟಿಯ ರೀತ್ಯಾ ಮುದ್ರಿಸದಿರುವ ಬಗ್ಗೆ ಸದರಿ ಸಭೆಯಲ್ಲಿ ಹಾಜರಿದ್ದ ಡಾ:ಮಂಜುಳ ಎನ್, ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಸಭಾಪತಿ ಮತ್ತು ಸಭಾಧ್ಯಕ್ಷರ ಹೆಸರು ಆಹ್ವಾನ ಪತ್ರಿಕೆಯಲ್ಲಿ ಒಂದೇ ಸಾಲಿನಲ್ಲಿ ಮುದ್ರಿಸಲಾಗಿದೆ. ಈ ಬಗ್ಗೆ ಸಭೆಯೊಂದನ್ನು ಮಾಡಿ ಕಾರ್ಯಕ್ರಮಗಳಿಗೆ ಯಾರನ್ನು ಆಹ್ವಾನಿಸಬೇಕೆಂದು ತೀರ್ಮಾನವಾಗಿರುವ ಬಗ್ಗೆ ಒಂದು ಸುತ್ತೋಲೆಯನ್ನು ಹೊರಡಿಸುತ್ತೇವೆ ಎಂದು ತಿಳಿಸಿರುತ್ತಾರೆ.

ದಿನಾಂಕ:22.11.2023ರಂದು ಆಯೋಜಿಸಿದ್ದ ಅನೀಮಿಯ ಮುಕ್ತ ಪೌಷ್ಠಿಕ ಕರ್ನಾಟಕ ಎಂಬ ಕಾರ್ಯಕ್ರಮದ ಆಹ್ವಾನ ಪತ್ರಿಕೆಯಲ್ಲಿ ಮಾನ್ಯ ಸಭಾಪತಿಯವರ ಹೆಸರನ್ನು ಆದ್ಯತಾ ಸೂಚಿ ಪಟ್ಟಿಯ ರೀತ್ಯಾ ಮುದ್ರಿಸದಿರುವ ಬಗ್ಗೆ ಆರೋಗ್ಯ ಇಲಾಖೆಯ ಕಾರ್ಯದರ್ಶಿಯವರು ಕ್ಷಮಾಪಣಾ ಪತ್ರವನ್ನು ಮಾನ್ಯ ಸಭಾಪತಿಯವರಿಗೆ ನೀಡಿರುತ್ತಾರೆ.

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀ ಅಜಯ್ ನಾಗಭೂಷನ್ ಹೆಚ್ ಎನ್ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಇವರು ಆಹ್ವಾನ ಪತ್ರಿಕೆಯಲ್ಲಿ ಕೇಂದ್ರ ಸಚಿವರ ಹೆಸರು ಮೊದಲು ಬರುತ್ತದೆ. ಕರ್ನಾಟಕ ರಾಜ್ಯದ ಆಧ್ಯತಾ ಸೂಚಿಯಲ್ಲಿ ಕೇಂದ್ರ ಕ್ಯಾಬಿನೆಟ್ ದರ್ಜೆಯ ಸಚಿವರು ಬರುತ್ತದೆ. ಇಲ್ಲಿ ತಪ್ಪಾಗಿದೆ ಎಂದು ತಿಳಿಸಿರುತ್ತಾರೆ. ಇದರ ಬಗ್ಗೆ ಪರಿಶೀಲಿಸಿ ಕ್ರಮವಹಿಸುತ್ತೇವೆ.

ಇಲಾಖಾಧಿಕಾರಿಗಳು ಪ್ರೊಟೋಕಾಲ್ ಫಾಲೋ ಮಾಡಿ ಎಂದು ಹೇಳಿದರೆ, ಅವರು ಹಳೆಯ ಸುತ್ತೋಲೆಯನ್ನು ಅಥವಾ ಆದ್ಯತಾ ಸೂಚಿಯನ್ನು ಎರಡರಲ್ಲೂ ಕನ್‌ಫ್ಯೂಸ್ ಆಗಿ ಸರಿಯಾಗಿ ತಿಳಿದುಕೊಳ್ಳದೆ ಮತ್ತೆ ಮತ್ತೆ ತಪ್ಪುಗಳನ್ನು ಪುನರಾವರ್ತನೆ ಮಾಡುತ್ತಾರೆ. ಆದ್ದರಿಂದ ಸರಿಯಾದ ರೀತಿಯಲ್ಲಿ ನ್ಯೂನತೆಗಳನ್ನು ಗುರುತಿಸಿ ಮಾರ್ಪಡಿಸಿ ಹೊಸದಾದ ಸುತ್ತೋಲೆ ಮತ್ತು ಆದ್ಯತಾ ಸೂಚಿಗಳನ್ನು ಮಾಡಿ ಅದನ್ನು ಅನುಸರಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ದಿನಾಂಕ:02.08.2024ರಂದು ನಡೆಯಲಿರುವ ಸಮಿತಿ ಸಭೆಗೆ ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ(ಶಿಷ್ಟಾಚಾರ) ಇವರನ್ನು ಆಹ್ವಾನಿಸಲಾಗಿತ್ತು.

ಸದರಿ ಸಭೆಯಲ್ಲಿ ಹಾಜರಿದ್ದ, ಶ್ರೀ ರಂದೀಪ್ ಡಿ. ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ(ಶಿಷ್ಟಾಚಾರ) ಇವರು ಈ ಮುಂದಿನಂತೆ ತಿಳಿಸಿರುತ್ತಾರೆ:–

“ಜಿಲ್ಲಾ ಮಟ್ಟದಲ್ಲಿ ನಡೆಯುವಂತಹ ಸರ್ಕಾರಿ ಸಭೆ/ಸಮಾರಂಭಗಳ ಆಹ್ವಾನ ಪತ್ರಿಕೆಯಲ್ಲಿ ಕೆಲವೊಂದು ಲೋಪವಾಗಿರುವ ಬಗ್ಗೆ ಸಮಿತಿ ಸಭೆಯಲ್ಲಿ ಪ್ರಸ್ತಾಪವಾಗಿರುತ್ತದೆ. ರಾಜ್ಯ ಶಿಷ್ಟಾಚಾರ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರು 2019ರಲ್ಲಿ ಹೊರಡಿಸಿರುವಂತಹ ಸುತ್ತೋಲೆಯ ದೃಢೀಕೃತ ಪ್ರತಿ ನಮ್ಮ ಬಳಿ ಇರುತ್ತದೆ. ಇದರ ಜೊತೆಗೆ ಕೇಂದ್ರ ಸರ್ಕಾರ ಹೊರಡಿಸಿರುವಂತಹ Table of Precedence ಎನಿದೆ ಅದು ಕೂಡ ರೆಕಾರ್ಡ್ ಆಗಿರುತ್ತದೆ. ರಾಜ್ಯ ಸರ್ಕಾರ ಕೂಡ ಸರ್ಕಾರಿ ಸಭೆ/ ಸಮಾರಂಭಗಳಲ್ಲಿ ಯಾವ ಯಾವ ಗಣ್ಯರನ್ನು ಯಾವ ಸ್ಥಾನಗಳಲ್ಲಿ ಕೂರಿಸಬೇಕು ಮತ್ತು ಯಾವ ರೀತಿ ಶಿಷ್ಟಾಚಾರ ಪಾಲನೆ ಮಾಡಬೇಕೆಂಬ ಬಗ್ಗೆ ಬಹಳ ಸ್ಪಷ್ಟವಾಗಿ ಆದೇಶ/ಸುತ್ತೋಲೆಗಳನ್ನು ಹೊರಡಿಸಿರುತ್ತದೆ. ಈ ವಿಷಯದಲ್ಲಿ ಕರ್ನಾಟಕ ರಾಜ್ಯ ವಿಧಾನ ಪರಿಷತ್ತಿನ ಸಭಾಪತಿಯವರ ಹೆಸರನ್ನು ಮುದ್ರಿಸುವ ವಿಷಯಕ್ಕೆ ಸಂಬಂಧಪಟ್ಟಂತೆ ನಾವು Table of Precedence ಪರಿಶೀಲಿಸಿದಾಗ ಅವರು ಕರ್ನಾಟಕ ರಾಜ್ಯದ ಸಚಿವ ಸಂಪುಟದ ಮಂತ್ರಿಗಳಿಗಿಂತಲೂ ಉನ್ನತ ಸ್ಥಾನದಲ್ಲಿ ಬರುತ್ತಾರೆ. ಈ ಪ್ರಕರಣದಲ್ಲಿ 3–4ಇಲಾಖೆಗಳ ಆಹ್ವಾನ ಪತ್ರಿಕೆಯಲ್ಲಿ ಮಾನ್ಯ ಸಭಾಪತಿಯವರ ಸ್ಥಾನ ತಪ್ಪು ಮುದ್ರಣವಾಗಿರುವ ಬಗ್ಗೆ ಪ್ರಸ್ತಾಪ ಆಗಿರುತ್ತದೆ. ಈ ಬಗ್ಗೆ ನಾವು ಪರಿಶೀಲಿಸಿದಾಗ ಪ್ರತಿಯೊಂದು ಇಲಾಖೆಯ ಆಹ್ವಾನ ಪತ್ರಿಕೆಯಲ್ಲಿ ತಪ್ಪಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

ಈ ರೀತಿಯ ಶಿಷ್ಟಾಚಾರ ಉಲ್ಲಂಘನೆ ಪ್ರಕರಣಗಳಲ್ಲಿ ನಮ್ಮ ಕಡೆಯಿಂದ ಯಾವುದೇ ರೀತಿಯ ಶಿಸ್ತಿನ ಕ್ರಮ ಆಗಿರುವುದಿಲ್ಲ. ಹಾಗಾಗಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಸೂಕ್ತ ಸುತ್ತೋಲೆ ಹೊರಡಿಸಿ ಎಲ್ಲಾ ಇಲಾಖೆಯ ಮುಖ್ಯಸ್ಥರಿಗೆ ಕಳುಹಿಸಿ ನಂತರ ಸಮಿತಿಗೆ ಅನುಪಾಲನಾ ವರದಿ ನೀಡುತ್ತೇವೆ.”

ಸಮಿತಿಯು ಇಲಾಖಾಧಿಕಾರಿಗಳು ಸಮಯವಾಕಾಶ ಕೋರಿದ್ದರಿಂದ ಮುಂದಿನ ಸಭೆಗೆ ವಿಸ್ತೃತ ವರದಿಯೊಂದಿಗೆ ಹಾಜರಾಗುವಂತೆ ಸೂಚಿಸಿತು.

ದಿನಾಂಕ:18.09.2024ರಂದು ನಡೆಯಲಿರುವ ಸಮಿತಿ ಸಭೆಗೆ ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ(ಶಿಷ್ಟಾಚಾರ) ಇವರನ್ನು ಆಹ್ವಾನಿಸಲಾಗಿತ್ತು.

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀಮತಿ ಸತ್ಯವತಿ ಜಿ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ(ಶಿಷ್ಟಾಚಾರ) ಇವರು ಈ ಮುಂದಿನಂತೆ ತಿಳಿಸಿರುತ್ತಾರೆ:–

“ದಿನಾಂಕ:12.09.2024ರಂದು ಸುತ್ತೋಲೆಯನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಂದ ಹೊರಡಿಸಿದ್ದೇವೆ. ಮುಂದಿನ ದಿನಗಳಲ್ಲಿ ಆಹ್ವಾನ ಪತ್ರಿಕೆಗಳನ್ನು ಮುದ್ರಿಸುವಲ್ಲಿ ಶಿಷ್ಟಾಚಾರ ಉಲ್ಲಂಘನೆ ಪ್ರಕರಣಗಳು ಮರುಕಳಿಸಿದಲ್ಲಿ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಮತ್ತು ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿಸಿ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದೆಂದು ತಿಳಿಸಲಾಗಿದೆ.

ಭಾರತ ಸರ್ಕಾರದಿಂದ ಹೊರಡಿಸಿರುವ ಅನ್ನು ಫಾಲೋ ಮಾಡಿಕೊಂಡು ಬರುತ್ತಿದ್ದೇವೆ. ಕರ್ನಾಟಕ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಎಲ್ಲಾ ಕಾರ್ಯಕ್ರಮಗಳಿಗೂ ಅನ್ವಯಿಸುತ್ತದೆ. ಜಿಲ್ಲಾ ಮಟ್ಟದಲ್ಲಿ ಯಾವುದೇ ಒಂದು ಆಹ್ವಾನ ಪತ್ರಿಕೆಯ ಅನುಮೋದನೆಯನ್ನು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿರುವಂತಹ ಶಿಷ್ಟಾಚಾರದ ಶಾಖೆಗೆ ಬರುತ್ತದೆ. ರಾಜ್ಯ ಮಟ್ಟದಲ್ಲಿ ಯಾವುದೇ ಒಂದು ಕಾರ್ಯಕ್ರಮ ನಡೆದಾಗ ಬೆಂಗಳೂರು ನಗರ ಜಿಲ್ಲಾಧಿಕಾರಿಗಳಿಂದ ಅನುಮೋದನೆಯನ್ನು ತೆಗೆದುಕೊಳ್ಳುತ್ತಾರೆ. ಶಿಷ್ಟಾಚಾರ ಪಾಲನೆ ಮಾಡುವುದು ನಮ್ಮ ಆದ್ಯ ಕರ್ತವ್ಯವಾಗಿದೆ.”

ಸುತ್ತೋಲೆ 12.09.2024ರ ಪ್ರತಿಯನ್ನು ಸಭೆಯಲ್ಲಿ ಮಂಡಿಸಲಾಗಿರುತ್ತದೆ. ***(ಅನುಬಂಧ – 16)***

ಕೇಂದ್ರದ ಯಾವುದೇ ಕಾರ್ಯಕ್ರಮ ರಾಜ್ಯ ಮಟ್ಟದಲ್ಲಿ ನಡೆದಾಗ ಕೇಂದ್ರ ಸಚಿವರನ್ನು ಕರೆದಾಗ ಹಾಗೂ ಪ್ರಧಾನ ಮಂತ್ರಿಗಳ ಕಾರ್ಯಕ್ರಮ ಇದ್ದಾಗ ಯಾವ ರೀತಿಯಲ್ಲಿ ಶಿಷ್ಟಾಚಾರ ಪಾಲನೆ ಮಾಡಬೇಕೆಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಕೇಂದ್ರ ಗೃಹ ಮಂತ್ರಾಲಯದವರೊಂದಿಗೆ ಚರ್ಚಿಸಿ ಮಾರ್ಗಸೂಚಿಗಳನ್ನು ರಚಿಸಲು ಕ್ರಮವಹಿಸಬೇಕು ಹಾಗೂ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳಿಂದ ಈ ಸಂಬಂಧ ಮಾಹಿತಿಯನ್ನು ಪಡೆದುಕೊಳ್ಳಲು ಸಮಿತಿಯು ನಿರ್ದೇಶನ ನೀಡಿತು.

ದಿನಾಂಕ:06.11.2024ರಂದು ನಡೆಯಲಿರುವ ಸಮಿತಿ ಸಭೆಗೆ ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ(ಶಿಷ್ಟಾಚಾರ) ಇವರನ್ನು ಆಹ್ವಾನಿಸಲಾಗಿತ್ತು.

ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀಮತಿ ಸತ್ಯವತಿ ಜಿ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ(ಶಿಷ್ಟಾಚಾರ) ಇವರು ಈ ಮುಂದಿನಂತೆ ತಿಳಿಸಿರುತ್ತಾರೆ:–

“ರಾಜ್ಯಮಟ್ಟದ ಕಾರ್ಯಕ್ರಮಗಳಿಗೆ ಸೀಮಿತಗೊಳಿಸುವ ಪ್ರತ್ಯೇಕ ಆಧ್ಯತಾ ಪಟ್ಟಿಯನ್ನು ಹೊರಡಿಸಲು ಕೇಂದ್ರ ಗೃಹ ಸಚಿವಾಲಯಕ್ಕೆ ಮಾಹಿತಿ ಕೋರಿ ಪತ್ರ ಬರೆಯಲಾಗಿದೆ. ಮಹಾರಾಷ್ಟ್ರ, ತಮಿಳುನಾಡು, ಗೋವಾ, ತೆಲಂಗಾಣ, ಕೇರಳ, ಆಂಧ್ರಪ್ರದೇಶ ಮತ್ತು ಬಿಹಾರ್ ರಾಜ್ಯಗಳಲ್ಲಿ ಅನುಸರಿಸುತ್ತಿರುವ ಮಾರ್ಗಸೂಚಿಗಳನ್ನು ಕಳುಹಿಸಿಕೊಡುವಂತೆ ಇತರೆ ರಾಜ್ಯಗಳಿಗೆ ಪತ್ರ ಬರೆಯಲಾಗಿದೆ.

ಗೋವಾ ರಾಜ್ಯದಲ್ಲಿ ರಾಜ್ಯಮಟ್ಟದ ಕಾರ್ಯಕ್ರಮಗಳಿಗೆ ತಮ್ಮದೇ ಆಗಿರುವ ಪ್ರತ್ಯೇಕ ಆಧ್ಯತಾ ಪಟ್ಟಿಯನ್ನು ಮಾಡಿಕೊಂಡಿದ್ದು, ಇತರೆ ರಾಜ್ಯಗಳಿಂದ ಮಾಹಿತಿ ಸ್ವೀಕರಿಸಿದ ನಂತರ ನಮ್ಮದೇ ಆಗಿರುವ ಪ್ರತ್ಯೇಕ ನಿಯಮಗಳನ್ನು ರೂಪಿಸಬಹುದಾಗಿದೆ.”

ಇಲಾಖೆಯಿಂದ ವರದಿ ಬರುವವರೆಗೂ ಈ ಪ್ರಕರಣವನ್ನು ಬಾಕಿ ಇಡಲು ಸಮಿತಿಯು ಸೂಚಿಸಿರುತ್ತದೆ.

ಸಮಿತಿಯ ನಿರ್ದೇಶನದಂತೆ ಕೇಂದ್ರ ಸರ್ಕಾರ ಹಾಗೂ ಇತರೆ ರಾಜ್ಯಗಳಿಂದ ಮಾಹಿತಿಯನ್ನು ಪಡೆದುಕೊಂಡು ರಾಜ್ಯದಲ್ಲಿ ಸರ್ಕಾರಿ ಸಭೆ/ಸಮಾರಂಭ/ಕಾರ್ಯಕ್ರಮಗಳಿಗೆ ಗಣ್ಯರುಗಳನ್ನು ಆಹ್ವಾನಿಸುವಾಗ ಶಿಷ್ಟಾಚಾರ ಕುರಿತಂತೆ ಪಾಲಿಸಬೇಕಾದ ನೀತಿ ನಿಯಮಗಳ:ಆದೇಶ:ಸುತ್ತೋಲೆಗಳ ಸಂಗ್ರಹದ ಪ್ರತಿಯನ್ನು ಇಲಾಖೆಯವರಿಂದ ಸ್ವೀಕರಿಸಲಾಗಿದ್ದು, ದಿನಾಂಕ:24.10.2025ರಂದು ನಡೆದ ಸಭೆಯಲ್ಲಿ ಮಂಡಿಸಲಾಗಿರುತ್ತದೆ. ಸಮಿತಿಯ ನಿರ್ದೇಶನದ ರೀತಿ ಕ್ರಮವಹಿಸಿರುವುದನ್ನು ಪರಿಗಣಿಸಿ ಪ್ರಕರಣವನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು.

*****

ಪ್ರಕರಣ– 8

ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಶ್ರೀ ಎಸ್.ಆರ್. ಪಾಟೀಲ್ ಹಾಗೂ ಇತರರು ನೀಡಿರುವ ಹಕ್ಕುಚ್ಯುತಿ ಪ್ರಕರಣ

[ವಾರ್ತಾ ಮತ್ತು ಪ್ರಚಾರ ಇಲಾಖೆ]

ಸಂಖ್ಯೆ:ಕವಿಪ/ಶಾರಶಾ/26/ಹಚ್ಯುಸೂ/2020

ವಿಧಾನ ಪರಿಷತ್ತಿನ 140ನೇ ಅಧಿವೇಶನದ ದಿನಾಂಕ:17.03.2020ರ ಉಪವೇಶನದಲ್ಲಿ ಶ್ರೀಯುತರುಗಳಾದ ಪಿ.ಆರ್. ರಮೇಶ್, ಬಸವರಾಜ ಶಿವಲಿಂಗಪ್ಪ ಹೊರಟ್ಟಿ, ಮರಿತಿಬ್ಬೇಗೌಡ, ಕೆ.ಟಿ. ಶ್ರೀಕಂಠೇಗೌಡ, ಆರ್. ಚೌಡರೆಡ್ಡಿ ತೂಪಲ್ಲಿ ಅವರುಗಳು ನಿಯಮ 330ರ ಅಡಿಯಲ್ಲಿ 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್‌ನ 362 ಹುದ್ದೆಗಳ ನೇಮಕಾತಿಯಲ್ಲಿ ಆಗಿರುವ ಅಕ್ರಮಗಳ ಕುರಿತು ಪ್ರಸ್ತಾಪಿಸಿದ್ದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಾನೂನು ಸಚಿವರು ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳಿಗೆ ನಡೆದ ನೇಮಕಾತಿ ವಿಷಯದಲ್ಲಿ ಕೋರ್ಟ್‌ಗೆ ರಾಜ್ಯ ಸರ್ಕಾರ ಮರುಪರಿಶೀಲನಾ ಅರ್ಜಿ ಸಲ್ಲಿಸಲಿದೆ ಎಂದು ಸದನದಲ್ಲಿ ಉತ್ತರಿಸಿರುತ್ತಾರೆ.

ಆದರೆ, ದಿನಾಂಕ:20.03.2020ರ ಪ್ರಜಾವಾಣಿ ಕನ್ನಡ ದಿನಪತ್ರಿಕೆಯಲ್ಲಿ **"ಕೆಪಿಎಸ್‌ಸಿ ಮರುಪರಿಶೀಲನಾ ಅರ್ಜಿ ಸಲ್ಲಿಸುವ ನಿರ್ಧಾರ ಸರಿಯಲ್ಲ"** ಎಂಬ ಶೀರ್ಷಿಕೆಯಡಿಯಲ್ಲಿ ಕಾನೂನು ಸಚಿವರ ಮತ್ತು ಸದಸ್ಯರ ವಾದ ನೋಡಿ ಅಳಬೇಕೋ, ನಗಬೇಕೋ ಎಂದು ಗೊತ್ತಾಗುತ್ತಿಲ್ಲ. ಕೋರ್ಟ್ ತೀರ್ಪನ್ನು ನೀಡಿದ ನಂತರವು ಸಚಿವರು ಈ ಅಭ್ಯರ್ಥಿಗಳ ಪರವಾಗಿ ನಿಲ್ಲುವುದು ಹಾಗೂ ಮುಖ್ಯ ಪರೀಕ್ಷೆ ಹಾಗೂ ಸಂದರ್ಶನದಲ್ಲಿ ನಡೆದ ಅಕ್ರಮಗಳ ಬಗ್ಗೆ ಸಿಐಡಿ ತನ್ನ ವರದಿಯಲ್ಲಿ ದಾಖಲೆ ಸಮೇತ ವಿವರಿಸಿದೆ. ಆರೋಪ ಎದುರಿಸುತ್ತಿರುವವರ ಮೇಲೆ ಕಠಿಣ ಕೈಗೊಳ್ಳಬೇಕೆಂದು ಒತ್ತಾಯಿಸುವ ಬದಲು ಅಕ್ರಮ ನಡೆಸಿರುವವರ ಪರ ನಿಲ್ಲುವುದು ವಿಧಾನ ಪರಿಷತ್ ಸದಸ್ಯರ ಘನತೆಗೆ ತಕ್ಕುದಾದ ನಡವಳಿಕೆಯು ಅಲ್ಲ ಎಂದು ಅಣಕ ಮಾಡಿ, ಪ್ರಜಾವಾಣಿ ಪತ್ರಿಕೆಯ ಸಂಪಾದಕೀಯ ಸ್ವಯಂ ಪ್ರೇರಿತರಾಗಿ ಪ್ರಕಟಿಸಿದ್ದು, ಈ ಪ್ರಕಟಣೆಯು ಸಾರ್ವಜನಿಕ ಅವಹೇಳನಕಾರಿ ಪ್ರಕಟಣೆಯಾಗಿರುವುದರಿಂದ ವಿಧಾನ ಪರಿಷತ್ತಿನ ಶಾಸಕರ ಹಾಗೂ ಸದನದ ಗೌರವಕ್ಕೆ ಹಕ್ಕುಚ್ಯುತಿ ಉಂಟಾಗಿರುವುದಾಗಿ ತಿಳಿಸಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇನ್ನಿತರೆ ಶಾಸಕರು ದಿನಾಂಕ:23.03.2020ರಂದು ಮಾನ್ಯ ಸಭಾಪತಿಯವರಿಗೆ

ನೀಡಿರುವ ಹಕ್ಕುಚ್ಯುತಿ ಸೂಚನೆಯನ್ನು ಪರಿಶೀಲಿಸಲು ದಿನಾಂಕ:22.04.2020ರಂದು ಹಕ್ಕುಬಾಧ್ಯತಾ ಸಮಿತಿಗೆ ವಹಿಸಲಾಗಿರುತ್ತದೆ. ***(ಅನುಬಂಧ – 17)***

ಸದರಿ ಪ್ರಕರಣವನ್ನು ಪರಿಶೀಲಿಸಿ ವರದಿ ನೀಡುವಂತೆ ಕೋರಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯವರಿಗೆ ದಿನಾಂಕ:03.06.2020ರಂದು ಪತ್ರ ಬರೆಯಲಾಗಿರುತ್ತದೆ.

ದಿನಾಂಕ:17.02.2021ರಂದು ನಡೆಯಲಿರುವ ಸಮಿತಿ ಸಭೆಗೆ ಹಾಜರಾಗಬೇಕೆಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರನ್ನು ಆಹ್ವಾನಿಸಲಾಗಿರುತ್ತದೆ.

ಸದರಿ ಸಭೆಯಲ್ಲಿ ಶ್ರೀ ಸುದೇಶ ದೊಡ್ಡಪಾಳ್ಯ, ಪ್ರಜಾವಾಣಿ ನ್ಯೂಸ್ ಎಡಿಟರ್ ಹಾಗೂ ಶ್ರೀ ವೈ.ಗ ಜಗದೀಶ, ರಾಜಕೀಯ ವಿಭಾಗದ ಮುಖ್ಯಸ್ಥರು, ಪ್ರಜಾವಾಣಿ ದಿನಪತ್ರಿಕೆ ಇವರುಗಳು ಉಪಸ್ಥಿತರಿದ್ದು, ಈ ದಿನ ಇಲಾಖೆಯವರೊಂದಿಗೆ ಚರ್ಚೆ ಮಾಡುತ್ತೇವೆ ಅವಶ್ಯಕತೆ ಬಿದ್ದಾಗ ತಮ್ಮನ್ನು ಆಹ್ವಾನ ಮಾಡುತ್ತೇವೆ ಎಂದು ತಿಳಿಸಿ ಅವರನ್ನು ಸಭೆಯಿಂದ ನಿರ್ಗಮಿಸುವಂತೆ ಸಮಿತಿಯು ನಿರ್ದೇಶನ ನೀಡಿತು.

ಸದರಿ ಸಭೆಯಲ್ಲಿ ಹಾಜರಿದ್ದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಈ ಮುಂದಿನಂತೆ ತಿಳಿಸಿರುತ್ತಾರೆ:–

- ದಿನಾಂಕ:15.06.2020ರಂದು ಮತ್ತು 12.01.2021ರಂದು ಪ್ರಜಾವಾಣಿ ಸಂಪಾದಕರಿಗೆ ಪತ್ರಗಳನ್ನು ಬರೆಯಲಾಗಿದ್ದು, ಇದುವರೆವಿಗೂ ಉತ್ತರ ಸ್ವೀಕರಿಸಿರುವುದಿಲ್ಲ.
- ಪತ್ರಿಕೆಗಳಿಗೆ ಭಾರತ ಸರ್ಕಾರ ಅನುಮತಿಯನ್ನು ಕೊಡುತ್ತದೆ. ಇಲಾಖೆಯಿಂದ ನೀಡಿರುವುದಿಲ್ಲ.
- ನಾವು ಕಳುಹಿಸಿರುವ ಪತ್ರಗಳಿಗೆ ಉತ್ತರ ಕೊಡದಿದ್ದರೆ ಅವರಿಗೆ ನೋಟಿಸ್ ಕೊಡಬೇಕು ಅಥವಾ ಅವರ ಅನುಮತಿಯನ್ನು ರದ್ದುಪಡಿಸಲು ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು ಎಂಬುದರ ಕುರಿತು ಪರಿಶೀಲಿಸಲು ಸ್ವಲ್ಪ ಸಮಯಾವಕಾಶ ಬೇಕಾಗುತ್ತದೆ.
- ಈ ಪ್ರಕರಣದ ಸಂಬಂಧ ವರದಿ ನೀಡುವಂತೆ ಮತ್ತೊಮ್ಮೆ ಪ್ರಜಾವಾಣಿ ಸಂಪಾದಕರಿಗೆ ಪತ್ರ ಬರೆಯುತ್ತೇವೆ.
- ಇಲಾಖೆಯ ವತಿಯಿಂದ ಯಾವ ರೀತಿ ಜರುಗಿಸಬಹುದೆಂದು ಮಾಹಿತಿಯನ್ನು ಮುಂದಿನ ಸಭೆಯಲ್ಲಿ ಒದಗಿಸಲಾಗುವುದು.

ಸದರಿ ಸಭೆಯಲ್ಲಿ ಹಾಜರಿದ್ದ ಜಂಟಿ ನಿರ್ದೇಶಕರು ಈ ಮುಂದಿನಂತೆ ತಿಳಿಸಿರುತ್ತಾರೆ:–

"ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸರ್ಕಾರದ ಜಾಹಿರಾತು ಹೊರಡಿಸುವಂಥ ಕೆಲಸವನ್ನು ಮಾಡುವುದು. ಪತ್ರಿಕಾ ಪ್ರಕಟಣೆ ಮತ್ತು ಜಾಹಿರಾತು ಬಿಡುಗಡೆ ಮಾಡುವುದಕ್ಕೆ ಮಾತ್ರ ಸೀಮಿತವಾಗಿ ಕಾರ್ಯನಿರ್ವಹಿಸುತ್ತೇವೆ. ದಿನಪತ್ರಿಕೆಯವರ ಮೇಲೆ ಕ್ರಮತೆಗೆದಕೊಳ್ಳಲು ಇಲಾಖೆಯವರಿಗೆ ಅವಕಾಶವಿರುವುದಿಲ್ಲ".

ಮುಂದಿನ ಸಭೆಗೆ ಪ್ರಜಾವಾಣಿ ಕನ್ನಡ ದಿನಪತ್ರಿಕೆಯವರನ್ನು ಹಾಗೂ ಇಲಾಖೆಯವರನ್ನು ಆಹ್ವಾನಿಸಲು ತೀರ್ಮಾನಿಸಲಾಯಿತು

ದಿನಾಂಕ:24.02.2021ರಂದು ನಡೆಯಲಿರುವ ಸಮಿತಿ ಸಭೆಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರನ್ನು ಹಾಗೂ ಪ್ರಜಾ ವಾಣಿ ಪತ್ರಿಕೆಯ ಸಂಪಾದಕರನ್ನು ಆಹ್ವಾನಿಸಲಾಗಿರುತ್ತದೆ.

ಸಭೆಯಲ್ಲಿ ಹಾಜರಿದ್ದ ಪ್ರಧಾನ ಕಾರ್ಯದರ್ಶಿಯವರು ಈ ಮುಂದಿನಂತೆ ತಿಳಿಸಿರುತ್ತಾರೆ:–

ವಾರ್ತಾ ಇಲಾಖೆಯ ವತಿಯಿಂದ ಪ್ರಜಾವಾಣಿ ಸಂಪಾದಕರಿಗೆ 2–3 ಪತ್ರಗಳನ್ನು ಬರೆಯಲಾಗಿದ್ದು, ಉತ್ತರ ಸ್ವೀಕೃತವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ವಿಚಾರದಲ್ಲಿ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬಹುದು ಎನ್ನುವ ಬಗ್ಗೆ ನಿವೃತ್ತ ನ್ಯಾಯಾಧೀಶರ ಅಭಿಪ್ರಾಯವನ್ನು ಪಡೆದುಕೊಂಡಿದ್ದು, ಈ ಕೆಳಗಿನಂತಿವೆ:

1. ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ ಸಕ್ಷಮ ಪ್ರಾದಿಕಾರವಾಗಿದ್ದು, ಇಲ್ಲಿ ದಿನಪತ್ರಿಕೆಯು ನೋಂದಾಯಿಸಲ್ಪಟ್ಟಿರುತ್ತದೆ. ಅವರಿಗೆ ನಾವು ದೂರನ್ನು ನೀಡಿದರೆ, ಪರಿಶೀಲನೆ ಮಾಡಿ ಆಪಾದನೆಗಳು ಸಾಬೀತಾದರೆ ದಿನಪತ್ರಿಕೆಯನ್ನು ಸೆನ್ಸೂರ್ ಮಾಡುವ ಅಧಿಕಾರ ಅವರಿಗಿರುತ್ತದೆ;
2. ರಿಜಿಸ್ಟ್ರಾರ್ ಆಫ್ ನ್ಯೂಸ್ ಪೇಪರ್ಸ್ ಫಾರ್ ಇಂಡಿಯಾ ಎನ್ನುವ ಸಂಸ್ಥೆಯಡಿಯಲ್ಲಿ ಯಾವುದೇ ದಿನಪತ್ರಿಕೆಯವರು ಆಯಾ ಜಿಲ್ಲಾಧಿಕಾರಿಗಳ ಮುಖಾಂತರ ಪರವಾನಗಿಯನ್ನು ಪಡೆದುಕೊಂಡಿರಬೇಕು;

3. ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ ಯಾವುದೇ ದಿನಪತ್ರಿಕೆಯನ್ನು ಸೆನ್ಸೂರ್ ಮಾಡಿದ ಮೇಲೆ ಅದನ್ನು ರಿಜಿಸ್ಟ್ರಾರ್ ಆಫ್ ನ್ಯೂಸ್ ಪೇಪರ್ಸ್ ಫಾರ್ ಇಂಡಿಯಾ ಇವರಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಕಳುಹಿಸಿಕೊಡುತ್ತಾರೆ;
4. ಇಲಾಖೆಯವರು ನೇರವಾಗಿ ದಿನಪತ್ರಿಕೆಯವರ ವಿರುದ್ದ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ.
5. ಸಿಆರ್‌ಪಿಸಿ ಸೆಕ್ಷನ್ 199(2) ಅಡಿಯಲ್ಲಿ ಮಾನ ಹಾನಿ ಮೊಕದ್ದಮೆ ಹೂಡಬಹುದಾಗಿದೆ.

ಇಲಾಖೆಯ ಪತ್ರಗಳಿಗೆ ದಿನಪತ್ರಿಕೆಯವರು ಯಾವುದೇ ರೀತಿಯಾಗಿ ಪ್ರತಿಕ್ರಿಯಿಸದೆ ಹೀಗೆಯೇ ಪ್ರಕಟಿಸುವುದನ್ನು ಮುಂದುವರೆಸಿದರೆ, ಇಲಾಖೆಯ ವ್ಯಾಪ್ತಿಯಲ್ಲಿ ಅವರ ವಿರುದ್ದ ಯಾವ ರೀತಿಯಾದ ಕಾನೂನು ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ ಎನ್ನುವ ಬಗ್ಗೆ ತಿಳಿಸುವಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಸೂಚಿಸಲಾಯಿತು.

ದಿನಾಂಕ:31.10.2025ರ ಸಭೆಯಲ್ಲಿ ಸದರಿ ಪ್ರಕರಣವನ್ನು ಚರ್ಚಿಸಿ ಈ ಕೆಳಗಿನ ಅಂಶಗಳನ್ನು ಅವಲೋಕಿಸಿತು.

"ಈ ಪ್ರಜಾವಾಣಿ ದಿನ ಪತ್ರಿಕೆಯು ತುಂಬಾ ಹಳೆಯ ಪತ್ರಿಕೆಯಾಗಿದ್ದು, ಅವರನ್ನು ಪ್ರಶ್ನೆ ಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರ ಇಲ್ಲ. ಭಾರತ ಸರ್ಕಾರದಿಂದ ಅನುಮತಿ ಪಡೆಯಲಾಗಿದ್ದು, ಶಾಸಕಾಂಗ, ನ್ಯಾಯಾಂಗ ಮತ್ತು ಪತ್ರಿಕಾರಂಗವು ಕೋ–ಆಪರೇಟಿವ್ ಆಗಿ ಕೆಲಸಮಾಡಬೇಕಾಗುತ್ತದೆ. ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಆಗುವಂತಹ ನಡವಳಿಕೆಯ ಬಗ್ಗೆ ಪುನರ್ ಪರಿಶೀಲಿಸಿ, ಸತ್ಯಾಸತ್ಯತೆಯನ್ನು ಒಳಗೊಂಡಂತೆ ಪ್ರಕಟ ಮಾಡುವುದು ಅವರ ಜವಾಬ್ದಾರಿಯಾಗಿರುತ್ತದೆ. ಪತ್ರಿಕಾ ವಲಯಕ್ಕೆ ಅದರದೇ ಆದಂತಹ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸ್ವಾತಂತ್ರ್ಯವಿದೆ. ಸರ್ವೋಚ್ಚ ನ್ಯಾಯಾಲಯವು ಅನೇಕ ಪ್ರಕರಣಗಳಲ್ಲಿ–Legislative Privileges donot extend to private acts of the Legislators' outside the House and misuse of privileges may infringe on civil rights ಎಂದು ತೀರ್ಪು ನೀಡಿದೆ.

ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿರುವ ಅಂಕಣದಲ್ಲಿ ಯಾರ ಬಗ್ಗೆಯೂ ವೈಯಕ್ತಿಕವಾಗಿ ನಿಂದನೆ ಮಾಡಿಲ್ಲ ಹಾಗೂ ಸದನದ ನಿಂದನೆಯು ಆಗಿರುವುದಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿ ಪ್ರಕರಣವನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು.

***

ಪ್ರಕರಣ– 9

ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಾದ ಡಾ:ಚಂದ್ರಶೇಖರ ಬಿ ಪಾಟೀಲ ಹಾಗೂ ಶ್ರೀ ಭೀಮರಾವ್ ಬಸವರಾಜ್ ಪಾಟೀಲ್ ಅವರುಗಳು ನೀಡಿರುವ ಹಕ್ಕುಚ್ಯುತಿ ಪ್ರಕರಣ

[ಯೋಜನೆ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ]

ಸಂಖ್ಯೆ:ಕವಿಪ/ಶಾರಶಾ/18/ಹಚ್ಯುಸೂ/2024

ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಾದ ಶ್ರೀ ಭೀಮರಾವ್ ಬಿ ಪಾಟೀಲ ಹಾಗೂ ಡಾ:ಚಂದ್ರಶೇಖರ ಬಿ ಪಾಟೀಲ್ ಅವರುಗಳು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ 2023–24ನೇ ಸಾಲಿನ ಯೋಜನೆ ಅಡಿಯಲ್ಲಿ ಹುಮನಾಬಾದ್ ಪಟ್ಟಣದಲ್ಲಿ ದಿನಾಂಕ:27.08.2024ರಂದು ಬೆಳಗ್ಗೆ 11.00ಗಂಟೆಗೆ ನಿಗದಿಪಡಿಸಲಾಗಿದ್ದ ವಿವಿಧ ಕಾಮಗಾರಿಗಳ ಅಡಿಗಲ್ಲು ಸಮಾರಂಭ ಕಾರ್ಯಕ್ರಮದ ಕುರಿತು ದಿನಾಂಕ:26.08.2024ರಂದು ನಿರ್ಮಿತಿ ಕೇಂದ್ರದ ಸಿಬ್ಬಂದಿಯೊಂದಿಗೆ ಮಾಹಿತಿ ಕೋರಲಾಗಿದ್ದು, ಸರಿಯಾದ ಮಾಹಿತಿ ನೀಡದೆ ಉದ್ದೇಶಪೂರ್ವಕವಾಗಿ ಮರುದಿನ ನಡೆದ ಕಾರ್ಯಕ್ರಮಕ್ಕೆ ಹಾಜರಾಗದಂತೆ ತಡೆಯುವ ಮೂಲಕ ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿ ಮಾನ್ಯ ಸಭಾಪತಿಯವರಿಗೆ ದಿನಾಂಕ:28.08.024ರಂದು ಪತ್ರ ನೀಡಿರುತ್ತಾರೆ. ***(ಅನುಬಂಧ – 18)***

ಸರ್ಕಾರದ ಸುತ್ತೋಲೆಯ ಸಂಖ್ಯೆ:ಸಿಆಸುಇ/34/ಹೆಚ್‌ಪಿಎ/2018(1) ದಿನಾಂಕ:16.04.2019ರಲ್ಲಿ ಸೂಚಿಸಿರುವ ಮಾರ್ಗಸೂಚಿಯಲ್ಲಿನ ಅಂಶಗಳನ್ನು ಸರಿಯಾಗಿ ಪಾಲಿಸದೆ ಮಾನ್ಯ ಶಾಸಕರಿಗೆ ಅಗೌರವ ತೋರಿರುವುದರಿಂದ ಸದರಿ ಪ್ರಕರಣವನ್ನು ಪರಿಶೀಲಿಸಲು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 179ರ ರೀತ್ಯಾ ಮಾನ್ಯ ಸಭಾಪತಿಯವರು ದಿನಾಂಕ:01.10.2024ರಂದು ಹಕ್ಕುಬಾಧ್ಯತಾ ಸಮಿತಿಗೆ ವಹಿಸಿರುತ್ತಾರೆ.

ದಿನಾಂಕ:28.11.2024ರಂದು ನಡೆಯಲಿರುವ ಸಮಿತಿ ಸಭೆಗೆ ಸರ್ಕಾರದ ಕಾರ್ಯದರ್ಶಿ, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳನ್ನು ಆಹ್ವಾನಿಸಲಾಗಿತ್ತು.

ದಿನಾಂಕ:26.11.2024ರಂದು ಸ್ವೀಕರಿಸಲಾದ ಇಲಾಖಾ ವರದಿಯನ್ನು ಸಭೆಯಲ್ಲಿ ಮಂಡಿಸಲಾಗಿರುತ್ತದೆ. ***(ಅನುಬಂದ– 19)***

ಸಭೆಯಲ್ಲಿ ಹಾಜರಿದ್ದ ಶ್ರೀ ಮನೋಜ್ ಜೈನ್, ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರು ಈ ಮುಂದಿನಂತೆ ತಿಳಿಸಿರುತ್ತಾರೆ:–

"ನಿರ್ಮಿತಿ ಕೇಂದ್ರದ ತಾಲ್ಲೂಕು ಇಂಜಿನಿಯರ್‌ರವರು ವಿವರಣೆ ನೀಡಿದ್ದು, ಈ ಕಾರ್ಯಕ್ರಮಕ್ಕೆ ಸಂಬಂಧಿಸಿದ ಮಾಹಿತಿಯನ್ನು ಯೋಜನಾ ನಿರ್ದೇಶಕರು ಮಾನ್ಯ ಶಾಸಕರಿಗೆ ನೀಡಬೇಕಾಗಿದ್ದು, ಅವರು ನೀಡಿರುವುದಿಲ್ಲ. ನಂತರ ನನ್ನ ಗಮನಕ್ಕೆ ಬಂದ ಕೂಡಲೇ ಮಾಹಿತಿ ನೀಡಿರುತ್ತೇನೆ. ಕಾರ್ಯಕ್ರಮವಾದ 7 ದಿನಗಳಲ್ಲಿ ಯೋಜನಾ ನಿರ್ದೇಶಕರು ಮರಣ ಹೊಂದಿರುತ್ತಾರೆ.

ನಿರ್ಮಿತಿ ಕೇಂದ್ರದವರಿಂದ ಶಿಷ್ಟಾಚಾರ ಉಲ್ಲಂಘನೆಯಾಗಿದ್ದು, ಇದು ಜಿಲ್ಲಾಧಿಕಾರಿಯವರ ನಿಯಂತ್ರಣದಲ್ಲಿ ಬರುವುದರಿಂದ ಅವರೇ ಇದಕ್ಕೆ ಜವಾಬ್ದಾರರಾಗಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಶ್ರೀ ಡಿ. ಚಂದ್ರಶೇಖರಯ್ಯ, ನಿರ್ದೇಶಕರು, ಪ್ರದೇಶಾಭಿವೃದ್ಧಿ ಮಂಡಳಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರು ಈ ಮುಂದಿನಂತೆ ತಿಳಿಸಿರುತ್ತಾರೆ:–

"ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಯೋಜನೆಯಡಿಯಲ್ಲಿ ಹುಮನಾಬಾದ್ ಪಟ್ಟಣದಲ್ಲಿ ದಿನಾಂಕ:27.08.2024ರಂದು ವಿವಿಧ ಕಾಮಗಾರಿಗಳ ಅಡಿಗಲ್ಲು ಸಮಾರಂಭ ಕಾರ್ಯಕ್ರಮ ನಿಗದಿಪಡಿಸಲಾಗಿರುತ್ತದೆ. ಸಂಬಂಧಪಟ್ಟ ನಿರ್ಮಿತಿ ಕೇಂದ್ರದ ತಾಲ್ಲೂಕು ಇಂಜಿನಿಯರ್‌ರವರು ಸದರಿ ಕಾರ್ಯಕ್ರಮಕ್ಕೆ ಮಾನ್ಯ ಶಾಸಕರು ಆಹ್ವಾನಿಸಿ, ಅವರ ಆಪ್ತ ಸಹಾಯಕರ ಸಹಿ ಪಡೆದಿರುತ್ತಾರೆ. ತದನಂತರ, ಮಾನ್ಯ ಶಾಸಕರು ನಿರ್ಮಿತಿ ಕೇಂದ್ರದ ಸಿಬ್ಬಂದಿಯಾದ ಶ್ರೀ ನಾವೇದ್ ಅವರಿಗೆ ಕಾರ್ಯಕ್ರಮದ ಒಂದು ದಿವಸ ಮುಂಚೆ 4–5 ಬಾರಿ ಫೋನ್ ಮಾಡಿ ಅಡಿಗಲ್ಲು ಸಮಾರಂಭದ ಮಾಹಿತಿ ಕೇಳಿರುತ್ತಾರೆ. ಆದರೆ ಅವರು ವಿಧಾನ ಸಭೆಯ ಶಾಸಕರಿಂದ ನಿಖರವಾದ ಮಾಹಿತಿ ಪಡೆದು ತಿಳಿಸುವಲ್ಲಿ ವಿಫಲರಾಗಿರುತ್ತಾರೆ. ಏಕೆಂದರೆ ಅವರಿಗೂ ಸಹ ಸರಿಯಾದ ಮಾಹಿತಿ ಇರುವುದಿಲ್ಲ. ವಿಧಾನ ಪರಿಷತ್ತಿನ ಶಾಸಕರಿಗೆ ಮಾಹಿತಿ ದೊರೆಯದ ಕಾರಣ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಿರುವುದಿಲ್ಲ. ಆದುದರಿಂದ ಅವರು ಯೋಜನಾ ವ್ಯವಸ್ಥಾಪಕರ ವಿರುದ್ಧ ದೂರು ನೀಡಿರುತ್ತಾರೆ. ಸದರಿ ಅಧಿಕಾರಿಯವರು ಅಪಘಾತದಲ್ಲಿ ಮರಣ ಹೊಂದಿದ್ದರಿಂದ ಈ ಪ್ರಕರಣದ ಸಂಬಂಧ ಅವರಿಂದ

ವಿವರಣೆ ಪಡೆಯಲು ಸಾಧ್ಯವಾಗಿರುವುದಿಲ್ಲ. ಇಂಜಿನಿಯರ್ ಅವರಿಗೆ ನೋಟಿಸ್ ನೀಡಿದ್ದು, ಇದರಲ್ಲಿ ನನ್ನ ತಪ್ಪು ಇಲ್ಲ, ಆದರೂ ಇನ್ನು ಮುಂದೆ ಎಚ್ಚರಿಕೆ ವಹಿಸುತ್ತೇನೆ ಎಂದು ವಿವರಣೆ ನೀಡಿರುತ್ತಾರೆ."

ನಿರ್ಮಿತಿ ಕೇಂದ್ರದ ಮುಖ್ಯಸ್ಥರು, ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ ಹಾಗೂ ಅಪರ ಜಿಲ್ಲಾಧಿಕಾರಿಗಳನ್ನು ಮುಂದಿನ ಸಭೆಗೆ ಕರೆಸಲು ತೀರ್ಮಾನಿಸಲಾಯಿತು.

ದಿನಾಂಕ:04.04.2025ರಂದು ನಡೆಯಲಿರುವ ಸಮಿತಿ ಸಭೆಗೆ ಸರ್ಕಾರದ ಕಾರ್ಯದರ್ಶಿ, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕಾರ್ಯದರ್ಶಿ, ವಸತಿ ಇಲಾಖೆ ಬೀದರ್ ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳನ್ನು ಆಹ್ವಾನಿಸಲಾಗಿತ್ತು.

ಸದರಿ ಸಭೆಗೆ ಬೀದರ್ ಜಿಲ್ಲಾಧಿಕಾರಿಗಳು ಹಾಜರಾತಿ ವಿನಾಯಿತಿ ಕೋರಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಶ್ರೀಮತಿ ಸುಶೀಲಮ್ಮ, ಎನ್ ವ್ಯವಸ್ಥಾಪಕ ನಿರ್ದೇಶಕರು (ರಾಜೀವ್‌ಗಾಂಧಿ ವಸತಿ ನಿಗಮ ನಿಯಮಿತ) ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಕರ್ನಾಟಕ ರಾಜ್ಯ ನಿರ್ಮಾಣ ಕೇಂದ್ರ) ಇವರು ಈ ಮುಂದಿನಂತೆ ತಿಳಿಸಿರುತ್ತಾರೆ:–

"ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ನಿರ್ಮಿತಿ ಕೇಂದ್ರದ ಆಡಳಿತ ಮತ್ತು ಅಧ್ಯಕ್ಷತೆಯನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳೇ ವಹಿಸುತ್ತಾರೆ. ಅಲ್ಲಿ ಯಾವುದೇ ಒಂದು ಕಾರ್ಯಕ್ರಮವಾಗಲಿ ಅಥವಾ ಆಕ್ಷನ್ ಪ್ಲಾನ್ ಆಗಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿಯೇ ನಡೆಯುತ್ತದೆ. ಈ ಕಾರ್ಯಕ್ರಮದ ಬಗ್ಗೆ ನಮಗೆ ಮಾಹಿತಿ ಇರುವುದಿಲ್ಲ.

ನಿರ್ಮಿತಿ ಕೇಂದ್ರಗಳು ಕರ್ನಾಟಕ ಸೋಸೈಟಿಸ್ ರಿಜಿಸ್ಟ್ರೇಷನ್ ಆಕ್ಟ್, 1960ರ ಅಡಿಯಲ್ಲಿ ಎಸ್ಟಾಬ್ಲಿಷ್ ಆಗಿರುವಂತೆ ಅವರದ್ದೇ ಆದಂತಹ ಒಂದು ಆಡಳಿತ ಮಂಡಳಿ ಇರುತ್ತದೆ. ಅದಕ್ಕೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಈ ಒಂದು ಕಾರ್ಯಕ್ರಮ ಏನು ಆಯೋಜನೆಯಾಗಿತ್ತು. ಅದರ ಪ್ರಕ್ರಿಯೆಯ ಬಗ್ಗೆ ರಾಜ್ಯಮಟ್ಟದಲ್ಲಿ ಮಾಹಿತಿ ಇರುವುದಿಲ್ಲ. ಜಿಲ್ಲಾಧಿಕಾರಿಗಳು ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವ ಮಾಹಿತಿ ಸಂಗ್ರಹ ಮಾಡುತ್ತೇವೆ."

ಸಭೆಯಲ್ಲಿ ಹಾಜರಿದ್ದ ಶ್ರೀ ಮಹಮದ್ ನವೀದ್, ಕಿರಿಯ ಇಂಜಿನಿಯರ್ ಪ್ರದೇಶಾಭಿವೃದ್ಧಿ ಮಂಡಳಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರು ಈ ಮುಂದಿನಂತೆ ತಿಳಿಸಿರುತ್ತಾರೆ:–

"ಈ ಕಾರ್ಯಕ್ರಮದ ಮಾಹಿತಿಯನ್ನು ದಿನಾಂಕ:24.08.2024ರಂದು ಮಾನ್ಯ ಶಾಸಕರ ಆಪ್ತ ಸಹಾಯಕರಿಗೆ ನೀಡಿರುತ್ತೇನೆ. ಮಾನ್ಯ ವಿಧಾನ ಪರಿಷತ್ತಿನ ಶಾಸಕರು ದಿನಾಂಕ:26.08.2024ರಂದು ರಾತ್ರಿ ಫೋನ್ ಮಾಡಿ ಮುಂಜಾನೆ ಕಾರ್ಯಕ್ರಮ ಇದೆಯೇ ಹಾಗೂ ಸಮಯದ ಬಗ್ಗೆ ಕೇಳಿದರು. ನಾನು ಕಾರ್ಯಕ್ರಮವಿದೆ ಸಮಯವನ್ನು ಮುಂಜಾನೆ ಖಚಿತಪಡಿಸಿಕೊಂಡು ಹೇಳುತ್ತೇನೆಂದು ತಿಳಿಸಿದೆ. ದಿನಾಂಕ:27.08.2024ರಂದು ಅವರ ಪಿ.ಎ. ಅವರು ಕರೆ ಮಾಡಿದ್ದು, ಕಾರ್ಯಕ್ರಮ ಬೆಳಗ್ಗೆ 11.00ಕ್ಕೆ ನಿಗದಿಯಾಗಿದೆ. ಅರ್ಧ ತಾಸು ವಿಳಂಬವಾಗಬಹುದೆಂದು ತಿಳಿಸಿರುತ್ತೇನೆ. ಅದರಂತೆ 11.30ಕ್ಕೆ ಕಾರ್ಯಕ್ರಮ ಜರುಗಿರುತ್ತದೆ."

ಮುಂದಿನ ಸಭೆಯಲ್ಲಿ ಜಿಲ್ಲಾಧಿಕಾರಿಗಳನ್ನು ಆಹ್ವಾನಿಸಲು ಸೂಚಿಸಲಾಯಿತು.

ದಿನಾಂಕ:14.11.2025ರಂದು ನಡೆಯಲಿರುವ ಸಮಿತಿ ಸಭೆಗೆ ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ, ನಿರ್ಮಿತಿ ಕೇಂದ್ರದ ಅಧಿಕಾರಿಗಳು ಹಾಗೂ ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳನ್ನು ಆಹ್ವಾನಿಸಲಾಗಿತ್ತು.

ದಿನಾಂಕ:14.11.2025ರಂದು ಸ್ವೀಕರಿಸಲಾದ ಇಲಾಖಾ ವರದಿಯನ್ನು ಸಭೆಯಲ್ಲಿ ಮಂಡಿಸಲಾಗಿರುತ್ತದೆ. ***(ಅನುಬಂದ– 20)***

ಸದರಿ ಸಭೆಗೆ ಬೀದರ್ ಜಿಲ್ಲಾಧಿಕಾರಿಗಳು ಹಾಜರಾತಿ ವಿನಾಯಿತಿ ಕೋರಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಶ್ರೀ ಡಿ. ಚಂದ್ರಶೇಖರಯ್ಯ, ನಿರ್ದೇಶಕರು, ಪ್ರದೇಶಾಭಿವೃದ್ಧಿ ಮಂಡಳಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರು ಈ ಮುಂದಿನಂತೆ ತಿಳಿಸಿರುತ್ತಾರೆ:–

"ಈಗಾಗಲೇ ಸಮಿತಿಯಲ್ಲಿ ಪ್ರಕರಣದ ಸಂಬಂಧ ತಿಳಿಸಲಾಗಿದ್ದು, ಕಾರ್ಯಕ್ರಮದ ಬಗ್ಗೆ ಮಾನ್ಯ ಶಾಸಕರ ಆಪ್ತ ಸಹಾಯಕರಿಗೆ ತಿಳಿಸಲಾಗಿದ್ದು, ಆಹ್ವಾನ ಪತ್ರಿಕೆ ನೀಡಲಾಗಿದೆ. ಹಿಂದಿನ ದಿನ ಇಂಜಿನಿಯರ್ ಅವರು

ಫೀಲ್ಡ್ ನಲ್ಲಿದ್ದಂತಹ ಸಂದರ್ಭದಲ್ಲಿ ಕರೆ ಮಾಡಿದ್ದು, ಅವರು ಕಚೇರಿಯಲ್ಲಿ ವಿಚಾರಿಸಿ ಸಂಜೆ ತಿಳಿಸಿರುತ್ತಾರೆ. ಇಲ್ಲಿ ಅಧಿಕಾರಿಗಳಿಂದ ಯಾವುದೇ ಲೋಪವಾಗಿರುವುದಿಲ್ಲ. ಆದಾಗ್ಯೂ ಸಂಬಂಧಪಟ್ಟ ಅಧಿಕಾರಿಗೆ ನೋಟಿಸ್ ಕೊಟ್ಟು ಉತ್ತರ ಪಡೆದುಕೊಂಡು ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಬೀದರ್ ಜಿಲ್ಲಾಧಿಕಾರಿಗಳು ಇನ್ನು ಮುಂದೆ ಶಿಷ್ಟಾಚಾರ ಉಲ್ಲಂಘನೆ ಪ್ರಕರಣಗಳು ಜರುಗದಂತೆ ಎಲ್ಲಾ ಅಧಿಕಾರಿಗಳಿಗೆ ಪತ್ರ ಬರೆದಿರುತ್ತಾರೆ."

ಸಭೆಯಲ್ಲಿ ಹಾಜರಿದ್ದ ಶ್ರೀ ಮಹಮದ್ ನವೀದ್, ಕಿರಿಯ ಇಂಜಿನಿಯರ್ ಇವರು ಮಾನ್ಯ ಶಾಸಕರಲ್ಲಿ ಕ್ಷಮೆಯಾಚಿಸಿದ್ದಾರೆ ಹಾಗೂ ಸಭೆಯಲ್ಲಿಯೂ ಕ್ಷಮೆ ಕೋರಿರುತ್ತಾರೆ.

ಇನ್ನು ಮುಂದೆ ಯಾವುದೇ ಒಂದು ಸರ್ಕಾರಿ ಕಾರ್ಯಕ್ರಮ ಮಾಡುವಾಗ ಗೌರವಾನ್ವಿತ ಶಾಸಕರನ್ನು ಬಿಟ್ಟು ಮಾಡಬಾರದು. ಯಾವುದೇ ಜನಪ್ರತಿನಿಧಿಗಳ ಬಗ್ಗೆ ಅಧಿಕಾರಿಗಳಿಗೆ ನಿರ್ಲಕ್ಷ್ಯ ಭಾವ ಇರಬಾರದು. ಸಂವಿಧಾನಬದ್ದವಾಗಿ ಎಂ.ಎಲ್.ಸಿಗಳು ಮೇಲ್ಮನೆ ಸದಸ್ಯರಾಗಿರುತ್ತಾರೆ. ಸ್ಥಳೀಯ ರಾಜಕಾರಣದ ಕಾರಣದಿಂದ ಇಂತಹ ಘಟನೆಗಳಿಗೆ ಅಧಿಕಾರಿಗಳು ಅವಕಾಶ ಮಾಡಿಕೊಡಬಾರದು ಎಂದು ಕಟ್ಟುನಿಟ್ಟಿನ ಆದೇಶ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು.

****

ಪ್ರಕರಣ– 10

ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಶ್ರೀ ಡಿ.ಎಸ್. ಅರುಣ್ ಹಾಗೂ ಶ್ರೀ ಎನ್. ರವಿಕುಮಾರ್ ಅವರುಗಳು ನೀಡಿರುವ ಹಕ್ಕುಚ್ಯುತಿ

[ಗೃಹ ಇಲಾಖೆ]

ಕವಿಪ/ಶಾರಶಾ/24/ಹಚ್ಯೂ/2024

ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಾದ ಶ್ರೀ ಡಿ.ಎಸ್. ಅರುಣ್ ಹಾಗೂ ಶ್ರೀ ಎನ್. ರವಿಕುಮಾರ್ ಅವರುಗಳು ಮಾನ್ಯ ಸಭಾಪತಿಯವರಿಗೆ ಪತ್ರ ಬರೆದು "ದಿನಾಂಕ:19.12.2024ರಂದು ಸುವರ್ಣವಿಧಾನಸೌದದಲ್ಲಿ ನಡೆದ 154ನೇ ಅಧಿವೇಶನದ ಕೊನೆಯ ದಿನದಂದು ಕಲಾಪ ನಡೆಯುವ ಸಂದರ್ಭದಲ್ಲಿ ಕಾರಿನಲ್ಲಿ ಬರುವಾಗ ಮುಖ್ಯ ದ್ವಾರದ ಬಳಿ ದೈಹಿಕ ಹಲ್ಲೆ ಮಾಡಲು ಪ್ರಯತ್ನಿಸಿರುವುದು ಹಾಗೂ ಅಧಿವೇಶನವನ್ನು ಅನಿರ್ಧಿಷ್ಟ ಕಾಲದವರೆಗೆ ಮುಂದೂಡಿದ ನಂತರ ಮುಖ್ಯದ್ವಾರದ ಮೆಟ್ಟಿಲುಗಳ ಬಳಿ ಮಾನ್ಯ ಶಾಸಕರುಗಳು ಧರಣಿ ಕುಳಿತಿರುವಾಗ ಪೊಲೀಸರು ಅವರನ್ನು ಬಂಧಿಸಿ ಹಿರೇಬಾಗೆವಾಡಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿರುವುದಲ್ಲದೆ ಠಾಣೆಯಲ್ಲಿ ನಡೆದಿರುವ ಘಟನೆಗಳಿಂದಾಗಿ ಮಾನ್ಯ ಶಾಸಕರುಗಳ ಹಕ್ಕಿಗೆ ಚ್ಯುತಿ ಉಂಟು ಮಾಡಿದ್ದು, ಈ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬೇಕೆಂದು ಕೋರಿರುತ್ತಾರೆ. ***(ಅನುಬಂಧ – 21)***

ಮಾನ್ಯ ಶಾಸಕರು ನೀಡಿರುವ ಅರ್ಜಿಯಲ್ಲಿ ಈ ಕೆಳಕಂಡ ಅಂಶಗಳನ್ನು ಒಳಗೊಂಡಿರುತ್ತದೆ.

1. ವಿಧಾನ ಪರಿಷತ್ತಿನ ಶಾಸಕರುಗಳು ಕಾರಿನಲ್ಲಿ ಮುಖ್ಯದ್ವಾರದಲ್ಲಿ ಬರುವಾಗ ಕೆಲವು ಕಿಡಿಗೇಡಿಗಳು ದೈಹಿಕ ಹಲ್ಲೆ ಮಾಡಲು ಪ್ರಯತ್ನ ನಡೆಸಿರುವುದು;

   ಕೌಲ್ ಅಂಡ್ ಶಕ್ದರ್ ಅವರ ಪ್ರಾಕ್ಟೀಸ್ ಅಂಡ್ ಪ್ರೊಸೀಜರ್ ಆಫ್ ಪಾರ್ಲಿಮೆಂಟ್ ಪುಸ್ತಕದಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಲಾಗಿರುತ್ತದೆ.

   Molestation of members: It is breach of privilege and contempt of the house to obstruct or molest a member while in the execution of his duties, that is while he is attending the House or when he is coming to or going from the House. Thus insults offered to Members on their way to or from the Houses have always been deemed to be high breaches of privilege. Molestation or obstruction caused to a member while going to parliament house or coming from the Parliament House

is a breach of Privilege but it would be a breach of Privilege even if that molestation or obstruction is caused to him.

ಶಾಸಕರನ್ನು ಅಧಿವೇಶನಕ್ಕೆ ಹೋಗುವಾಗ ತಡೆಯುವುದು ಹಕ್ಕುಚ್ಯುತಿ ವ್ಯಾಪ್ತಿಗೊಳಪಡುತ್ತದೆ. ಅವರ ಮೇಲೆ ದೈಹಿಕ ಹಲ್ಲೆ ನಡೆಸಲು ಯತ್ನಿಸಿದ್ದು, ಆ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪೊಲೀಸ್ ಸಿಬ್ಬಂದಿಗಳಿಂದ ಸಾಕ್ಷಾಧಾರಗಳನ್ನು ಪರಿಶೀಲಿಸಿಕೊಳ್ಳಬೇಕಾಗಿರುತ್ತದೆ.

2. ಬೆಳಗಾವಿ ಸುವರ್ಣಸೌಧದ ಮೊಗಸಾಲೆಯಲ್ಲಿ ಮಾನ್ಯ ಶಾಸಕರುಗಳು ನಡೆದುಕೊಂಡು ಹೋಗುವ ಸಂದರ್ಭದಲ್ಲಿ ಮಾನ್ಯ ಸಚಿವರಾದ ಲಕ್ಷ್ಮಿ ಹೆಬ್ಬಾಳ್ಕರ್ ಅವರ ಆಪ್ತ ಸಹಾಯಕರು ಮತ್ತು ಕೆಲವು ಕಿಡಿಗೇಡಿಗಳು ಹಲ್ಲೆ ಮಾಡಿದರು;

ಕೌಲ್ ಅಂಡ್ ಶಕ್ದರ್ ಅವರ ಪ್ರಾಕ್ಟೀಸ್ ಅಂಡ್ ಪ್ರೊಸೀಜರ್ ಆಫ್ ಪಾರ್ಲಿಮೆಂಟ್ ಪುಸ್ತಕದಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಲಾಗಿರುತ್ತದೆ.

Harassment and ill treatment of a member while coming to or returning after attending the session of the House or a Committee Meeting and assaulting members with in the precincts of the House are punishable.

ಮಾನ್ಯ ಸದಸ್ಯರು ಸದನದ ಒಳಗಡೆ ಆಡಿದರು ಎನ್ನಲಾದ ಮಾತುಗಳ ಸಂಬಂಧವಾಗಿ ಸದನದ ಮೊಗಸಾಲೆಯಲ್ಲಿ ಹಾಗೂ ಆವರಣಗಳಲ್ಲಿ ಮಾನ್ಯ ಸದಸ್ಯರುಗಳ ಮೇಲೆ ದೈಹಿಕ ಹಲ್ಲೆ ನಡೆಸುವುದರಿಂದ ಜನಪ್ರತಿನಿಧಿಗಳು ನಿರ್ಭೀತಿಯಿಂದ ಸದನದಲ್ಲಿ ಮಾತನಾಡಲು ಅಡ್ಡಿಪಡಿಸಿದಂತಾಗುತ್ತದೆ. ಸದನದ ಆವರಣದಲ್ಲಿ ಮಾನ್ಯ ಶಾಸಕರುಗಳಿಗೆ ರಕ್ಷಣೆ ಒದಗಿಸುವುದು ಮಾನ್ಯ ಸಭಾಪತಿಯವರ ಕರ್ತವ್ಯವಾಗಿರುತ್ತದೆ.

3. ಸದರಿ ದಿನದ ಕಲಾಪ ಮುಗಿದ ನಂತರ ಮುಖ್ಯ ದ್ವಾರದ ಮೆಟ್ಟಿಲುಗಳ ಮೇಲೆ ಶಾಂತಿಯುತ ಧರಣಿ ಕುಳಿತಿದ್ದ ಸಂದರ್ಭದಲ್ಲಿ ಶಾಸಕರುಗಳನ್ನು ಏಕಾಏಕಿ ಪೊಲೀಸರು ಎಳೆದುಕೊಂಡು ವಾಹನದಲ್ಲಿ ಕುಳ್ಳಿರಿಸಿ ಕೆಲವು ಶಾಸಕರನ್ನು ಹಿರೇಬಾಗೇವಾಡಿ ಪೊಲೀಸ್ ಠಾಣೆಗೆ ಕರೆದೊಯ್ದಿರುತ್ತಾರೆ. ತಮ್ಮನ್ನು ಯಾವ ಕಾರಣಕ್ಕೆ ಬಂಧಿಸಿದ್ದೀರಿ ಎಂದು ಕೇಳಿದಾಗ ಅಧಿಕಾರಿಗಳು ಯಾವುದೇ ರೀತಿಯ ಉತ್ತರ ನೀಡದೆ ತದನಂತರ ಬಿಟ್ಟು ಕಳುಹಿಸಿರುತ್ತಾರೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 181ರ ರೀತ್ಯಾ ಸಭಾಪತಿಯವರ ಅನುಮತಿ ಪಡೆಯದೆ ಸದನದೊಳಗೆ ದಸ್ತಗಿರಿ ಮಾಡತಕ್ಕದ್ದಲ್ಲ ಹಾಗೂ ಸಿವಿಲ್ ಸ್ವರೂಪದ ಮತ್ತು ಕ್ರಿಮಿನಲ್ ಸ್ವರೂಪದ ಕಾನೂನು ಕ್ರಮ ಜರುಗಿಸತಕ್ಕದ್ದಲ್ಲ.

ಕೌಲ್ ಅಂಡ್ ಶಕ್ದರ್ ಅವರ ಪ್ರಾಕ್ಟೀಸ್ ಅಂಡ್ ಪ್ರೊಸೀಜರ್ ಆಫ್ ಪಾರ್ಲಿಮೆಂಟ್ ಪುಸ್ತಕದಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಲಾಗಿರುತ್ತದೆ.

Immunity from service of legal process and arrest within the precincts of the House: No arrest can be within the precincts of the House nor a legal process, civil or criminal, served without obtaining the permission of the speaker and the permission is necessary whether the House is in session or not.

4. ರಾತ್ರಿ 8.00ಗಂಟೆಯ ಸಮಯದಲ್ಲಿ ಮಾನ್ಯ ಶಾಸಕರಾದ ಶ್ರೀ ಸಿ.ಟಿ. ರವಿ ಅವರನ್ನು ಪೊಲೀಸ್ ಠಾಣೆಗೆ ಏಕೆ ಕರೆದುಕೊಂಡು ಬಂದಿದ್ದೀರಿ ಎಂದು ಕೇಳಿದಾಗ ಯಾವುದೇ ಉತ್ತರ ನೀಡಲಿಲ್ಲ. ಆಯುಕ್ತರು ಹಾಗೂ ಡಿಸಿಪಿ ಅವರು ಉಪಸ್ಥಿತರಿದ್ದರೂ ನಮಗೆ ಸ್ಪಂದನೆ ನೀಡಲಿಲ್ಲ. ಶಾಸಕರನ್ನು ಹೊರಗೆ ಕಳುಹಿಸಿ, ಶ್ರೀ ಸಿ.ಟಿ. ರವಿ ಅವರನ್ನು ಬೆಂಗಳೂರಿಗೆ ಕರೆದುಕೊಂಡು ಹೋಗುತ್ತೇವೆ ಎಂದು ಹೇಳಿ ಇಡೀ ರಾತ್ರಿ ಪೊಲೀಸ್ ವಾಹನದಲ್ಲಿ ಬೆಳಗಾವಿ ಸುತ್ತಾಡಿಸಿರುತ್ತಾರೆ.

ಹಿರಿಯ ಅಧಿಕಾರಿಗಳು ಮಾನ್ಯ ಶಾಸಕರುಗಳಿಗೆ ಸೂಕ್ತ ಸ್ಪಂದನೆ ನೀಡದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಪೊಲೀಸ್ ಅಧಿಕಾರಿಗಳಿಂದ ಸಾಕ್ಷ್ಯ/ಮಾಹಿತಿಯನ್ನು ಪಡೆದುಕೊಳ್ಳಬೇಕಾಗುತ್ತದೆ.

ಭಾರತ ಸಂವಿಧಾನದ ಅನುಚ್ಛೇದ 194(2)ರ ಅನ್ವಯ ರಾಜ್ಯ ವಿಧಾನ ಮಂಡಲದ ಮತ್ತು ಅವುಗಳ ಸದಸ್ಯರ ಅಧಿಕಾರಗಳು, ವಿಶೇಷಾಧಿಕಾರಗಳು ಮತ್ತು ಉನ್ಮುಕ್ತಿಗಳ ಅನ್ವಯ ಸದನದ ಒಳಗೆ ಮಾನ್ಯ ಸದಸ್ಯರು ಆಡಿರುವ ಮಾತುಗಳು ಕೋರ್ಟ್‌ನಲ್ಲಿ ಪ್ರಶ್ನಿತವಾಗುವಂತಿಲ್ಲ. ಒಬ್ಬ ಸದಸ್ಯರ ದಸ್ತಗಿರಿ, ಬಂಧನ, ಅಪರಾಧಿ ನಿರ್ಣಯ, ಕಾರಾಗೃಹ ವಾಸ ಮತ್ತು ಬಿಡುಗಡೆ ಬಗೆಗಿನ ಮಾಹಿತಿಯನ್ನು ತಕ್ಷಣ ಪಡೆಯುವ ಹಕ್ಕು ಸದನಕ್ಕೆ ಇದೆ. ಸದನದ ಆವರಣದೊಳಗೆ ಬಂಧಿಸುವುದರಿಂದ ಸದಸ್ಯರಿಗೆ ವಿನಾಯಿತಿಯು ಇದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಈ ಪ್ರಕರಣದಲ್ಲಿ ಮಾನ್ಯ ಸದಸ್ಯರುಗಳ ಹಕ್ಕುಚ್ಯುತಿ ಆಗಿರುವುದು ಕಂಡು ಬರುವುದರಿಂದ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 205 ಮತ್ತು 206ಅನ್ವಯ ಸೂಕ್ತ ಸಾಕ್ಷ್ಯಧಾರಗಳೊಂದಿಗೆ ಪರಿಶೀಲಿಸಿಕೊಳ್ಳಲು

ನಿಯಮ 179ರ ರೀತ್ಯಾ ಹಕ್ಕುಬಾಧ್ಯತಾ ಸಮಿತಿಗೆ ಮಾನ್ಯ ಸಭಾಪತಿಯವರು ದಿನಾಂಕ:06.02.2025ರಂದು ವಹಿಸಿರುತ್ತಾರೆ.

ಸಮಿತಿಯು ದಿನಾಂಕ:21.05.2025, 28.05.2025, 04.06.2025 ಹಾಗೂ 13.10.2025ಗಳಂದು ಸಭೆ ನಡೆಸಿ ಗೃಹ ಇಲಾಖೆಯ ಅಧಿಕಾರಿಗಳಿಂದ ಹೇಳಿಕೆಯನ್ನು ಪಡೆದುಕೊಂಡು ಪ್ರಕರಣವನ್ನು ಪರಿಶೀಲಿಸಿರುತ್ತದೆ.

ಒಳಾಡಳಿತ ಇಲಾಖೆಯವರು ದಿನಾಂಕ:20.05.2025, 28.05.2025 ಹಾಗೂ 03.06.2025ರಂದು ನೀಡಿರುವ ಲಿಖಿತ ವರದಿಗಳನ್ನು ಸಭೆಯಲ್ಲಿ ಮಂಡಿಸಲಾಗಿರುತ್ತದೆ. ***(ಅನುಬಂಧ – 22)***

ದಿನಾಂಕ:21.05.2025ರ ಸಭೆಯಲ್ಲಿ ಹಾಜರಿದ್ದ ಶ್ರೀ ಮೊಹಮ್ಮದ್ ರೋಶನ್, ಜಿಲ್ಲಾಧಿಕಾರಿಗಳು ಬೆಳಗಾವಿ ಜಿಲ್ಲೆ ಇವರು ಬೆಳಗಾವಿ ಅಧಿವೇಶನಕ್ಕೆ ಹಾಜರಾಗುವ ಮಾನ್ಯ ಶಾಸಕರು ಅಧಿವೇಶನಕಾರ್ಯಕ್ಕೆ ಬರುವ ಅಧಿಕಾರಿಗಳು ಹಾಗೂ ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ಈ ಎಲ್ಲಾ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ:–

"ನಾವು ಚಳಿಗಾಲದ ಪೂರ್ವಸಿದ್ದತೆಗಾಗಿ ಪೊಲೀಸ್ ಆಯುಕ್ತರು, ಎಸ್‌ಪಿಯವರು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಇನ್ನಿತರೆ ಅಧಿಕಾರಿಗಳೊಂದಿಗೆ ಸಭೆ ನಡೆಲಾಗುತ್ತದೆ. ಅಧಿಕಾರಿಗಳ ಜವಾಬ್ದಾರಿ ಏನು ಎನ್ನುವುದರ ಬಗ್ಗೆ ನಿಗದಿ ಮಾಡಿ ಆದೇಶ ಹೊರಡಿಸಲಾಗುತ್ತದೆ. ಎಲ್ಲಾ ಸಮಿತಿಗಳಿಗೆ ಒಬ್ಬ ನೋಡಲ್ ಆಫೀಸರ್‌ನ್ನು ನಾವು ನೇಮಕಾತಿ ಮಾಡಿದ್ದೇವೆ. ಅದರಲ್ಲಿ ಕಾನೂನು ಸುವ್ಯವಸ್ಥೆಗೋಸ್ಕರ ಮೂಲತ: ಆಯುಕ್ತರ ವ್ಯಾಪ್ತಿಯಲ್ಲಿ ಪೊಲೀಸ್ ಆಯುಕ್ತರಿಗೆ ಮುಖ್ಯವಾದ ನೋಡಲ್ ಎಂದು ಕರೆಯುತ್ತೇವೆ. ಅದಕ್ಕೆ ಕಾನೂನಿನ ಪ್ರಕಾರ ಅವಕಾಶ ಇರುತ್ತದೆ. ಈಲ್ಲಾ ಮಟ್ಟದಲ್ಲಿ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಆ ಜವಾಬ್ದಾರಿಯನ್ನು ವಹಿಸುತ್ತೇವೆ. ಒಟ್ಟು 6000 ಜನ ಪೊಲೀಸ್ ಸಿಬ್ಬಂದಿಯನ್ನು ನಾವು ಪೊಲೀಸ್ ಇಲಾಖೆಯ ಮುಖಾಂತರ ಅಲ್ಲಿ ನಿಯೋಜನೆ ಮಾಡಿದ್ದೇವೆ.

ಅದಲ್ಲದೆ ಪ್ರೊಟೆಸ್ಟ್ ಸೈಟ್ ಎಂದು ಹೇಳಿ ಬೆಳಗಾವಿ ಅಧಿವೇಶನದ ಸಮಯದಲ್ಲಿ ಬಹಳಷ್ಟು ಧರಣಿಗಳು ನಮ್ಮ ಉತ್ತರ ಕರ್ನಾಟಕ ಭಾಗದವರು ಬಂದು ತಮ್ಮ ಎಲ್ಲಾ ಬೇಡಿಕೆಗಳನ್ನು ತೋರಿಸಿಕೊಳ್ಳುವುದಕ್ಕೆ ಅಲ್ಲಿ ಅವರಿಗೆ ಅವಕಾಶ ಇರುತ್ತದೆ. ಅದರಂತೆ ನಾವು ಸುವರ್ಣ ಗಾರ್ಡನ್ ಎನ್ನು ಒಂದು ಜಾಗ ಹಾಗೂ ಕೊಂಡಸ್‌ಕೊಪ್ಪ ಎನ್ನುವ ಇನ್ನೊಂದು ಜಾಗದಲ್ಲಿ ಎಲ್ಲಾ ಸುವ್ಯವಸ್ಥೆಯನ್ನು

ಕಲ್ಪಿಸಿ ಅಲ್ಲಿ ಧರಣಿ ಮಾಡಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ. ಸುವರ್ಣವಿಧಾನಸೌಧದ ಹೊರಗಡೆ ನೋಡಲ್ ಆಫೀಸರ್ ಅನ್ನು ಪೊಲೀಸ್ ಇಲಾಖಾ ವತಿಯಿಂದ ಮಾಡಿರುತ್ತಾರೆ."

ಸಭೆಯಲ್ಲಿ ಹಾಜರಿದ್ದ ಶ್ರೀ ಇಡಾ ಮಾರ್ಟಿನ್, ಪೊಲೀಸ್ ಆಯುಕ್ತರು, ಬೆಳಗಾವಿ ಜಿಲ್ಲೆ ಇವರು ಈ ಮುಂದಿನಂತೆ ಹೇಳಿಕೆ ನೀಡಿರುತ್ತಾರೆ:–

"ಡಿಸೆಂಬರ್ ತಿಂಗಳಿನಲ್ಲಿ ನಡೆಯುವ ಚಳಿಗಾಲದ ಅಧಿವೇಶನಕ್ಕೆ ಹಿರಿಯ ಅಧಿಕಾರಿಗಳು ನೀಡುವ ಮಾರ್ಗದರ್ಶನವನ್ನು ತೆಗೆದುಕೊಂಡು ನಾವು ಕರ್ತವ್ಯ ನಿರ್ವಹಿಸುತ್ತೇವೆ. ಬಂದೋಬಸ್ತ್ ಕರ್ತವ್ಯ ಉಸ್ತುವಾರಿ ಕುರಿತು ಪೊಲೀಸ್ ಅಧಿಕಾರಿಗಳಲ್ಲದೆ ಎಸ್.ಪಿ–5, ಹೆಚ್ಚುವರಿ ಎಸ್.ಪಿ–6, ಡಿಎಸ್‌ಪಿ–22, ಪಿ.ಐ–31, ಪಿ.ಎಸ್.ಐ–79, ಎ.ಎಸ್.ಐ–105, ಎಚ್‌ಸಿ/ಪಿ.ಸಿ–823 ಹಾಗೂ 25 ಕೆಎಸ್ಆರ್‌ಪಿ ಪ್ರಹಾರ ದಳಗಳನ್ನು ಅಲ್ಲಿಗೆ ನಿಯೋಜನೆ ಮಾಡಿರುತ್ತೇವೆ.

ದಿನಾಂಕ:19.12.2024ರಂದು ಕೊಂಡಸ್‌ಕೊಪ್ಪ ಮತ್ತು ಸುವರ್ಣ ಗಾರ್ಡನ್ ಎರಡು ಸ್ಥಳಗಳಿಗೆ ಭೇಟಿ ನೀಡಿರಲಿಲ್ಲ. ಯಾರು ಪಾಸ್ ಪಡೆಯದೆ ಒಳಗಡೆ ಬಂದಿದ್ದಾರೆ ಅವರು ಮಾನ್ಯ ಶಾಸಕರುಗಳ ಮೇಲೆ ದಾಳಿ ಮಾಡಲು ಯತ್ನಿಸಿರುತ್ತಾರೆ. ಗೇಟ್ ಹತ್ತಿರ ಗಲಾಟೆ ಮಾಡಿರುತ್ತಾರೆ. ಆ ಸಂದರ್ಭದಲ್ಲಿ ನಮ್ಮ ಪೊಲೀಸ್ ಸಿಬ್ಬಂದಿ ಇದ್ದುದರಿಂದ ಗಲಾಟೆಯನ್ನು ತಡೆದು ಹಿರೇಬಾಗೆವಾಡಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ವಿಚಾರಣೆ ಮಾಡಿರುತ್ತೇವೆ. ಕರ್ನಾಟಕ ಪೊಲೀಸ್ ಅಧಿನಿಯಮದ ಮೇಲೆ ಪ್ರಕರಣವನ್ನು ದಾಖಲಿಸಿದ್ದೇವೆ. (ಸಂಖ್ಯೆ 187/2024)

ವಿಧಾನ ಪರಿಷತ್ತಿನಲ್ಲಿ ಕಿರಿಕಿರಿಯಾಗುತ್ತಿದೆಯೆಂದು ನನಗೆ ಕರೆ ಬಂತು ಆಗ ನಾನು ಕಿರಿಯ ಅಧಿಕಾರಿಗಳಾದ ಡಿಸಿಪಿ ಮತ್ತು ಎಸಿಪಿಯವರಿಗೆ ಹೋಗಿ ನೋಡಲು ಸೂಚನೆ ನೀಡಿರುತ್ತೇನೆ. ಮಾನ್ಯ ಶಾಸಕರು ಮತ್ತು ಮಾನ್ಯ ಸಚಿವರ ನಡುವೆ ನಡೆದ ವಾಗ್ವಾದ ಕುರಿತು ನಮಗೆ ಮಾಹಿತಿ ಬಂತು. ಸಾಮಾನ್ಯವಾಗಿ ಎಂ.ಎಲ್.ಎ ಮತ್ತು ಎಂ.ಎಲ್.ಸಿಗಳ ಕಡೆಯಿಂದ ಸದನದ ಕಲಾಪವನ್ನು ವೀಕ್ಷಿಸಲು ಪಾಸ್‌ಗಳನ್ನು ನೀಡಲಾಗುತ್ತದೆ. ಆ ಪಾಸ್‌ಗಳನ್ನು ಹಿಡಿದು ಕೆಲವರು ಹೊರಗಿನಿಂದ ಸುವರ್ಣಸೌಧದ ಒಳಗೆ ಬಂದಿದ್ದರು. ಮಾನ್ಯ ಶಾಸಕರಾದ ಶ್ರೀ ಸಿ.ಟಿ. ರವಿ ಅವರ ಕುರಿತು ಕೆಲವರು ವಾದ ಮಾಡುತ್ತಿದ್ದರು ಎಂದು ನನಗೆ ಮಾಹಿತಿ ಬಂದ ಕೂಡಲೆ ಅಧಿಕಾರಿಗಳಿಗೆ ಸೂಚನೆ ನೀಡಿದೆನು. ಅಲ್ಲಿ ನೆರೆದಿದ್ದ ಕೆಲವರನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ಆ ಘಟನೆ ಆದ ನಂತರ ಮಾನ್ಯ ಮಂತ್ರಿಗಳ ಕಡೆಯಿಂದ ಹಿರೇಬಾಗೆವಾಡಿ ಪೊಲೀಸ್ ಠಾಣೆಯಲ್ಲಿ ವಿಧಾನ ಪರಿಷತ್ತಿನಲ್ಲಿ ನಡೆದ ಘಟನೆಯ ಕುರಿತು ಸಂಜೆ 4.00ಗಂಟೆಗೆ ಅಪರಾಧ ಸಂಖ್ಯೆ 186/2024 ದೂರು ದಾಖಲಾಗಿರುತ್ತದೆ.

ಸಿಸಿಟಿವಿ ಫೂಟೇಜ್ ಮತ್ತು ವಿಡಿಯೋಗಳನ್ನು ನೋಡಿದ ಮೇಲೆ ಕೇಸ್‌ನ್ನು ದಾಖಲಿಸಲು ಕ್ರಮವಹಿಸುವಷ್ಟರಲ್ಲಿ ಪ್ರಕರಣವನ್ನು ಸಿಐಡಿಯವರಿಗೆ ವಹಿಸಲಾಯಿತು.

ಅಧಿವೇಶನ ಮುಕ್ತಾಯಗೊಂಡ ನಂತರ ಮಾನ್ಯ ಶಾಸಕರುಗಳು ಪ್ರತಿಭಟನೆ ಮಾಡುತ್ತೇವೆ ಎಂದು ಹೇಳಿದಾಗ, ಅಲ್ಲಿ ಬೇರೆ ರೀತಿಯ ಪರಿಸ್ಥಿತಿ ಉದ್ಭವವಾಗಬಹದು ಎನ್ನುವ ಕಾರಣದಿಂದ ಅಲ್ಲಿಂದ ತೆರಳುವಂತೆ ಮಾನ್ಯ ಶಾಸಕರಲ್ಲಿ ವಿನಂತಿ ಮಾಡಿದೆವು. ಆದರೆ ಅವರುಗಳು ಸ್ಪಂದಿಸದೆ ಇದ್ದ ಕಾರಣ ಅವರುಗಳನ್ನು ವಶಕ್ಕೆ ಪಡೆದುಕೊಂಡು ಭದ್ರತೆ ನೀಡಿ ಸಂರಕ್ಷಣೆ ನೀಡುವ ಸಲುವಾಗಿ ಹಿರೇಬಾಗೇವಾಡಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಲು ನಿರ್ಧರಿಸಿದೆವು. ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಹಾಗೂ ಮಾನ್ಯ ಸಚಿವರ ಬೆಂಬಲಿಗರು ಪೊಲೀಸ್ ಠಾಣೆಯ ಹತ್ತಿರ ಹಾಗೂ ಮಾರ್ಗದುದಕ್ಕೂ ಸೇರಿದ್ದರು. ವಿಧಾನ ಪರಿಷತ್ತಿನ ಕಾರ್ಯದರ್ಶಿಯವರು ಮಾನ್ಯ ಶಾಸಕರಾದ ಶ್ರೀ ಸಿ.ಟಿ. ರವಿ ಅವರಿಗೆ ರಕ್ಷಣೆ ನೀಡಿ ಮನೆಗೆ ತೆರಳುವರೆಗೆ ಸೂಕ್ತ ಭದ್ರತೆ ಒದಗಿಸುವಂತೆ ಕೋರಿ ಪತ್ರ ನೀಡಿದ್ದು, ಹಿರೇಬಾಗೆವಾಡಿಯು ಮಾನ್ಯ ಸಚಿವರ ವ್ಯಾಪ್ತಿಗೆ ಬರುತ್ತಿದ್ದ ಹಿನ್ನಲೆಯಲ್ಲಿ ಮುನ್ನೆಚ್ಚರಿಕೆಯ ಕ್ರಮವಾಗಿ ಅವರನ್ನು ಖಾನಾಪುರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಲಾಯಿತು.

ಈ ಘಟನೆಗೆ ಸಂಬಂಧಿಸಿದಂತೆ ಲಭ್ಯವಿರುವ ದೃಶ್ಯಾವಳಿಯನ್ನು ನಾವು ಪರಿಶೀಲಿಸಿದ್ದೇವೆ. ಮಾನ್ಯ ಶಾಸಕರುಗಳು ಸುವರ್ಣವಿಧಾನಸೌಧದ ಪಶ್ಚಿಮ ದ್ವಾರದಲ್ಲಿ ವಾಹನ ನಿಲ್ಲಿಸಿ ಇಳಿಯುವಷ್ಟರಲ್ಲಿ ಕೆಲವು ಜನರು ಘೋಷಣೆಗಳನ್ನು ಕೂಗುತ್ತಾ ಬಂದರು. ಕರ್ತವ್ಯದಲ್ಲಿದ್ದ ಪೊಲೀಸ್ ಅಧಿಕಾರಿಗಳು ಶಾಸಕರುಗಳಿಗೆ ಯಾವುದೇ ರೀತಿ ತೊಂದರೆಯಾಗದಂತೆ ಸೂಕ್ತ ರಕ್ಷಣೆ ಹಾಗೂ ಭದ್ರತೆಯನ್ನು ಒದಗಿಸಿರುತ್ತಾರೆ.

ಸಂಜೆ 4.15ಗಂಟೆಯಲ್ಲಿ ಮೊಗಸಾಲೆಯಲ್ಲಿ ಶ್ರೀ ಸಿ.ಟಿ. ರವಿ ಅವರ ವಿರುದ್ದ ಜನರು ಅವಾಚ್ಯ ಶಬ್ದಗಳಿಂದ ಏರು ಧ್ವನಿಯಲ್ಲಿ ಮಾತನಾಡುತ್ತಾ ಹತ್ತಿರ ಬರುವಷ್ಟರಲ್ಲಿ ಮಾರ್ಷಲ್ ಅವರು ತಡೆದಿದ್ದಾರೆ. ಮಾನ್ಯ ಶಾಸಕರ ಮೇಲೆ ಹಲ್ಲೆಯಾಗಿರುವುದಿಲ್ಲ. ಮಾನ್ಯ ಸಚಿವರ ಆಪ್ತ ಸಹಾಯಕರು ಸೇರಿದಂತೆ 4 ಜನರನ್ನು ವಶಕ್ಕೆ ಪಡೆದು ಮುಂಜಾಗೃತಾ ಕ್ರಮದಡಿ ಉದ್ಯಮಬಾಗ್ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ.

ಮಾನ್ಯ ಶಾಸಕರ ವಿರುದ್ದ ದಾಖಲಾದ ಪ್ರಕರಣದ ಬಗ್ಗೆ ತನಿಖಾಧಿಕಾರಿಗಳು ವಿವರಿಸಿದ್ದು, ನೋಟಿಸ್‌ನ್ನು ಜಾರಿ ಮಾಡುವ ಸಂದರ್ಭದಲ್ಲಿ ಅವರು ನಿರಾಕರಿಸಿರುತ್ತಾರೆ. ಆದುದರಿಂದ ಅವರ ವಿರುದ್ದ ದಸ್ತಗಿರಿ ನಿಯಮ ಅನುಸರಿಸಿ ಕಾನೂನಾತ್ಮಕವಾಗಿ ವಶಕ್ಕೆ ಪಡೆದಿರುತ್ತಾರೆ. ಈ ಬಗ್ಗೆ ಮಾನ್ಯ ಸಭಾಪತಿಗಳ ಗಮನಕ್ಕೆ ತಂದಿರುತ್ತಾರೆ. ಮಾನ್ಯ ಸಿ.ಟಿ. ರವಿ ಅವರು ಖಾನಾಪುರ ಪೊಲೀಸ್ ಠಾಣೆಯಲ್ಲಿ ಪ್ರತಿ ದೂರು

ನೀಡಿದಾಗ ದೂರು ಪ್ರತಿಯ ಮೇಲೆ ಠಾಣಾಧಿಕಾರಿ ರವರು ಹಿಂಬರಹ ಬರೆದು ಅದರ ಪ್ರತಿಯನ್ನು ಕೊಟ್ಟಿರುತ್ತಾರೆ."

ಸಭೆಯಲ್ಲಿ ಹಾಜರಿದ್ದ ಶ್ರೀ ರವಿ ಎಸ್. ಪ್ರಧಾನ ಕಾರ್ಯರ್ಶಿ, ಒಳಾಡಳಿತ ಇಲಾಖೆ ಇವರು ಈ ಮುಂದಿನಂತೆ ತಿಳಿಸಿರುತ್ತಾರೆ:–

"ದಿನಾಂಕ:19.12.2024ರಂದು ಘಟನೆ ಆಗಿದೆ. ಆದರೆ ದಿನಾಂಕ:22.12.2024ರಂದು ಮೂರು ದಿನಗಳ ನಂತರ ಎಫ್.ಐ.ಆರ್. ದಾಖಲಾಗಿದೆ. ನಮ್ಮ ಪೊಲೀಸ್ ಅಧಿಕಾರಿಗಳು 10ಜನರ ಮೇಲೆ ದೂರು ದಾಖಲಿಸಿದ್ದಾರೆ."

ಸಭೆಯಲ್ಲಿ ಹಾಜರಿದ್ದ ಶ್ರೀ ರೋಹನ್ ಜಗದೀಶ್, ಡೆಪ್ಯೂಟಿ ಕಮಿಷನರ್ ಆಫ್ ಪೊಲೀಸ್ (ಕಾನೂನು ಮತ್ತು ಸುವ್ಯವಸ್ಥೆ) ಬೆಳಗಾವಿ ನಗರ ಇವರು ಈ ಮುಂದಿನಂತೆ ತಿಳಿಸಿರುತ್ತಾರೆ:–

"ಆ ದಿನ ನನ್ನನ್ನು ಬೆಳಗಾವಿ ನಗರದ ಬಂದೋಬಸ್ತ್‌ಗೆ ನಿಯೋಜಿಸಲಾಗಿತ್ತು. ನಾನು ಆ ಸಮಯದಲ್ಲಿ ಸುವರ್ಣ ವಿಧಾನಸೌಧದಲ್ಲಿ ಇರಲಿಲ್ಲ. ನನಗೆ ಮಾನ್ಯ ಪೊಲೀಸ್ ಆಯುಕ್ತರು ಸುಮಾರು ಮಧ್ಯಾಹ್ನ 2.30ಕ್ಕೆ ಕರೆ ಮಾಡಿ ತಕ್ಷಣ ಸುವರ್ಣ ವಿಧಾನಸೌಧಕ್ಕೆ ಬಂದು ಬಿಡು ಎಂದರು. ಆಗ ನಾನು ಅಲ್ಲಿಗೆ ಬಂದು ನೋಡಿದಾಗ ಅಲ್ಲಿ ಈ ರೀತಿಯ ಘಟನೆ ನಡೆದಿರುತ್ತದೆ. ಮಾನ್ಯ ಸದಸ್ಯರ ಕಡೆಯಿಂದ ಮತ್ತು ಸರ್ಕಾರದ ಕಡೆಯಿಂದ ಸಾಕಷ್ಟು ಪಾಸ್‌ಗಳ ವಿತರಣೆಯಾಗಿರುತ್ತದೆ. ಇದರಿಂದ ಅಲ್ಲಿಗೆ ಜನರು ಬಂದಿರುತಾರೆ. ನಾವು ಅವರನ್ನು ಕೂಡಲೇ ಕ್ಲಿಯರ್ ಮಾಡುವುದಕ್ಕೆ ಎಲ್ಲಾ ರೀತಿಯ ವ್ಯವಸ್ಥೆ ಮಾಡಿರುತ್ತೇವೆ.

ಪೊಲೀಸ್ ವರಿಷ್ಠಾಧಿಕಾರಿಗಳು ಫೋನ್ ಮಾಡಿ ಮೊಗಸಾಲೆಯಲ್ಲಿ ಗಲಾಟೆಯಾಗುತ್ತಿದೆಯಂತೆ ಕೂಡಲೇ ಹೋಗಿ ಎಂದು ತಿಳಿಸಿರುತ್ತಾರೆ. ನಾವು ಅಲ್ಲಿಗೆ ಹೋದಾಗ ಮೊಗಸಾಲೆಯ ಗೇಟಿನ ಈ ಭಾಗದಲ್ಲಿ ಮಾರ್ಷಲ್‌ರವರು ಇರುತ್ತಾರೆ. ಅದರ ಹಿಂದುಗಡೆಯ ಭಾಗದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಿ.ಟಿ. ರವಿ ಅವರು ಕುಳಿತುಕೊಂಡಿರುತ್ತಾರೆ. ಬಿಜೆಪಿ ಪಕ್ಷದ ಶಾಸಕರು ಅವರ ಸುತ್ತ ನಿಂತುಕೊಂಡು ಅವರಿಗೆ ರಕ್ಷಣೆ ಕೊಡುತ್ತಿದ್ದಾರೆ. ಆ ಸಂದರ್ಭದಲ್ಲಿ ಅಲ್ಲಿ ನೆರೆದಿದ್ದ ಜನ ಯಾರು ಎಂಬುದು ತಿಳಿದಿರಲಿಲ್ಲ. ಅವರನ್ನು ವಶಕ್ಕೆ ಪಡೆದು ಘಟನೆಯನ್ನು ನಿಯಂತ್ರಣ ಮಾಡಿದೆವು. ಸಿಸಿಟಿವಿ ನೋಡಿದರೆ ಗೊತ್ತಾಗುತ್ತದೆ ಎಷ್ಟು ಜನರು ಸೇರಿದ್ದರೂ, ಅವರೆಲ್ಲರನ್ನು 4 ಗೇಟಿನಂದಲೂ ಹೊರಗಡೆ ಕಳುಹಿಸಿದ್ದೇವೆ. ಯಾವುದೇ ಅಹಿತ ಘಟನೆ ನಡೆಯದಂತೆ ಬಂದೋಬಸ್ತ್ ಮಾಡಿಕೊಳ್ಳಲಾಗಿದೆ.

ಅಲ್ಲಿನ ಬಿಲ್ಡಿಂಗ್‌ನಲ್ಲಿ ಸಿಸಿಟಿವಿ ಕ್ಯಾಮರಾ ಇದೆ ಮತ್ತು ಮೀಡಿಯಾದವರು ರೆಕಾರ್ಡಿಂಗ್ ಮಾಡಿರುವುದು ಇದೆ. ಆ ಸಮಯದಲ್ಲಿ ಯಾವ ಮೀಡಿಯಾ ರೆಕಾರ್ಡಿಂಗ್ ಮಾಡಿದ್ದು, ಎಂದು ಟಿವಿ ನೋಡುವಂತಹ ಸನ್ನಿವೇಶ ಇರಲಿಲ್ಲ. ಏಕೆಂದರೆ, we were on the ground ಮತ್ತೆ ಆ ಸಮಯದಲ್ಲಿ we were reacting to the incidents ನಾವು ಆ ಸಮಯದಲ್ಲಿ ಇನ್ನೂ investigation processಗೆ ಹೋಗಿರಲಿಲ್ಲ first thing was preventive measures ನಂತರ law and order ನಾವು ನಿಯಂತ್ರಣ ಮಾಡಿದ್ದೆವು.

ನಮ್ಮ ಪೊಲೀಸ್ ಕಡೆಯಿಂದ ಯಾವುದೇ ಕಾರಣಕ್ಕೂ ಸಹ ಯಾರಿಗೂ ಅಗೌರವ ತರುವಂಥದ್ದಾಗಲಿ ಅಥವಾ ಯಾರಿಗೂ ಸಹ ಹಕ್ಕುಚ್ಯುತಿ ಮಾಡುವಂತಹ ಉದ್ದೇಶ ಇರಲಿಲ್ಲ. ನಮ್ಮ ಉದ್ದೇಶ ಅವರಿಗೆ ಸುರಕ್ಷತೆ ಕೊಡಬೇಕು. ಅದಕ್ಕೆ ಎಲ್ಲಾ ರೀತಿಯ ಕ್ರಮವನ್ನು ಜರುಗಿಸಿದ್ದೇವೆ."

ಸಭೆಯಲ್ಲಿ ಹಾಜರಿದ್ದ ಶ್ರೀ ಗಂಗಾಧರ ಬಿ ಅಸಿಸ್ಟೆಂಟ್ ಕಮಿಷನರ್ ಆಫ್ ಪೊಲೀಸ್, ಬೆಳಗಾವಿ ಗ್ರಾಮೀಣ ಉಪ ವಿಭಾಗ, ಬೆಳಗಾವಿ ನಗರ ಇವರು ಈ ಮುಂದಿನಂತೆ ತಿಳಿಸಿರುತ್ತಾರೆ:–

"ಬೆಳಗಾವಿಯ ಸುವರ್ಣವಿಧಾನಸೌಧ ಮತ್ತು ಎರಡು ಪ್ರತಿಭಟನಾ ಸ್ಥಳಗಳು ನನ್ನ ವ್ಯಾಪ್ತಿಗೆ ಬರುತ್ತಿದ್ದವು. ಆ ದಿನ ಮಧ್ಯಾಹ್ನ ಸುವರ್ಣವಿಧಾನಸೌಧದ ಗೇಟ್ ಬಳಿ ಕೆಲವರು ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನೆ ಮಾಡುತ್ತಿದ್ದಾರೆಂಬುದನ್ನು ತಿಳಿದುಕೊಂಡು ತಕ್ಷಣವೇ ಘಟನಾ ಸ್ಥಳಕ್ಕೆ ತೆರಳಿ, ಪ್ರತಿಭಟನೆ ನಿರತರಾಗಿದ್ದವರನ್ನು ಚದುರಿಸಿ, ವಾತಾವರಣವನ್ನು ತಿಳಿಗೊಳಿಸುವುದಕ್ಕೆ ಪ್ರಯತ್ನಿಸಿರುತ್ತೇನೆ. ಅನುಚಿತವಾಗಿ ವರ್ತಿಸಿದಂತಹ ಇಬ್ಬರನ್ನು ಮುಂಜಾಗ್ರತಾ ಕ್ರಮವಾಗಿ ಬಂಧಿಸಿ ಪೊಲೀಸ್ ಠಾಣೆಗೆ ಕರೆದೊಯ್ಯಲಾಗಿದೆ ಎಂಬ ವಿಚಾರವನ್ನು ಸಹ ಪಡೆದುಕೊಂಡಿರುತ್ತೇನೆ. ಅದೇ ದಿನ ಸಾಯಂಕಾಲ ಮಾನ್ಯ ಬಿಜೆಪಿ ಸದಸ್ಯರು ಪ್ರತಿಭಟನೆ ನಿರತರಾಗಿದ್ದು, ಅವರನ್ನು ಪ್ರತಿಭಟನೆ ಕೈಬಿಡುವಂತೆ ವಿನಂತಿ ಮಾಡಿರುತ್ತೇನೆ. ಆದರೆ ಮಾನ್ಯ ಶಾಸಕರು ಸಹಕಾರ ನೀಡಿರಲಿಲ್ಲ. ಆದುದರಿಂದ ಅವರುಗಳನ್ನು ಸ್ಥಳದಿಂದ ಹತ್ತಿರದ ಪೊಲೀಸ್ ಠಾಣೆಗೆ ಕರೆದೊಯ್ಯಲಾಗಿರುತ್ತದೆ.

ನಾನು ಅಲ್ಲಿಗೆ ತೆರಳಿ ಎಲ್ಲಾ ಗೌರವಾನ್ವಿತ ಶಾಸಕರನ್ನು ಭೇಟಿ ಮಾಡಿ, ಅವರಿಗೆ ಟೀ ಕಾಫಿ ಮತ್ತು ಬಿಸ್ಕೆಟ್‌ಗಳನ್ನು ನೀಡಿ ಅವರ ಜೊತೆ ಅತ್ಯಂತ ಗೌರವಯುತವಾಗಿ ನಡೆದುಕೊಂಡಿರುತ್ತೇನೆ. ಆ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಘೋಷಣೆ ಕೂಗುತ್ತಾ, ಪ್ರತಿಭಟನೆ ಮಾಡುವುದಕ್ಕೆ ಹೆಚ್ಚಿನ

ಸಂಖ್ಯೆಯಲ್ಲಿ ಠಾಣೆಯ ಬಳಿ ಜಮಾವಣೆ ಆಗುತ್ತಿದ್ದರು. ಸುರಕ್ಷತಾ ದೃಷ್ಟಿಯಿಂದ ಮಾನ್ಯ ಶಾಸಕರನ್ನು ಪೊಲೀಸ್ ಠಾಣೆಯಿಂದ ಕಳುಹಿಸಿಕೊಟ್ಟಿರುತ್ತೇನೆ.

ಹಿರೇಬಾಗೇವಾಡಿಯಲ್ಲಿದ್ದಂತಹ ಶಾಸಕರು ನಮ್ಮನ್ನು ಯಾವ ಕಾರಣಕ್ಕಾಗಿ ಕರೆತಂದಿದ್ದೀರಿ ಎಂದು ಕೇಳಿದ್ದಕ್ಕೆ ಮುಂಜಾಗ್ರತಾ ಕ್ರಮವಾಗಿ ತಮ್ಮನ್ನು ಕರೆತರಲಾಗಿದೆ. ಈ ಬಗ್ಗೆ ತಾವು ಯಾವುದೇ ಆತಂಕ ಪಡುವ ಅವಶ್ಯಕತೆ ಇರುವುದಿಲ್ಲ. ಆದಷ್ಟು ಬೇಗ ಗೌರವಯುತವಾಗಿ ಕಳುಹಿಸಿಕೊಡುವಂತಹ ಕೆಲಸ ಮಾಡುತ್ತೇವೆ. ಮಾನ್ಯ ಪೊಲೀಸ್ ಆಯುಕ್ತರು ನನ್ನನ್ನು ಈ ಪ್ರಕರಣದ ಮೊದಲನೆ ವಿಚಾರಣಾಧಿಕಾರಿಯಾಗಿ ನೇಮಿಸಿ ಖಾನಾಪುರ ಪೊಲೀಸ್ ಠಾಣೆಗೆ ಬರುವಂತೆ ಸೂಚನೆ ನೀಡಿರುತ್ತಾರೆ. ನಾನು ರಾತ್ರಿ 10ಗಂಟೆ ಸುಮಾರಿಗೆ ಹೋಗಿರುತ್ತೇನೆ. ಬಿಎನ್ಎಸ್ಎಸ್, 2023ರ ಕಲಂ 35(3) ಪ್ರಕಾರ ಪ್ರಕರಣದಲ್ಲಿ ಸಹಕಾರ ನೀಡಬೇಕೆಂದು ಕೋರಿರುತ್ತೇನೆ."

ಸಭೆಯಲ್ಲಿ ಹಾಜರಿದ್ದ ಡಾ: ಭೀಮಶಂಕರ್ ಎಸ್. ಗುಳೇದ್, ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ಬೆಳಗಾವಿ ಇವರು ಈ ಮುಂದಿನಂತೆ ತಿಳಿಸಿರುತ್ತಾರೆ:–

"ಮಾನ್ಯ ಶಾಸಕರಾದ ಶ್ರೀ ಡಿ.ಎಸ್. ಅರುಣ್ ಹಾಗೂ ಶ್ರೀ ಎನ್. ರವಿಕುಮಾರ್ ಅವರು ಖಾನಾಪುರ ಪೊಲೀಸ್ ಠಾಣೆಯಲ್ಲಿ ಯಾವುದೇ ದೂರನ್ನು ನೀಡಿರುವುದಿಲ್ಲ. ನಮ್ಮ ಪೊಲೀಸ್ ಠಾಣೆಗೆ ಮಾನ್ಯ ಶಾಸಕರಾದ ಶ್ರೀ ಸಿ.ಟಿ. ರವಿ ಅವರು ದೂರು ನೀಡಿರುವುದು. ಬಿಎನ್ಎಸ್ಎಸ್ ಸೆಕ್ಷನ್ 173ಅಡಿ ವಿಚಾರಣೆ ಮಾಡಿ ಎಫ್ಐಆರ್ ದಾಖಲಿಸಿದ್ದು, ಒಂದು ಪ್ರಾಥಮಿಕ ವಿಚಾರಣೆ ಮಾಡಿ ಕಾನೂನಿನಲ್ಲಿ ಇರುವಂತಹ ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಹಿಂಬರಹವನ್ನು ನೀಡಲಾಗಿದೆ.

ಮಾನ್ಯ ಶ್ರೀ ಸಿ.ಟಿ. ರವಿ ಅವರನ್ನು ಬಂಧನದ ಪ್ರಕ್ರಿಯೆಗೆ ಒಳಪಡಿಸಿ ಬೆಂಗಳೂರಿನಲ್ಲಿರುವಂಥ ವಿಶೇಷ ಜನಪ್ರತಿನಿಧಿಗಳ ನ್ಯಾಯಾಲಯದ ಮುಂದೆ ಹಾಜರುಪಡಿಸಬೇಕಾಗಿದ್ದರಿಂದ, ಕರೆದುಕೊಂಡು ಹೋಗಬೇಕಾಗಿತ್ತು. ಪೊಲೀಸ್ ಠಾಣೆಯ ಸುತ್ತ ಸುಮಾರು ಜನ ಸಏರಿದ್ದು, ಬಂಧು ಬಸ್ತಿನ ಅವಶ್ಯಕತೆ ಇರುವುದರಿಂದ ನಮಗೆ ಸ್ವಲ್ಪ ಸಹಕರಿಸಬೇಕೆಂದು ಹೇಳಿದೆವು. ತನಿಖಾಧಿಕಾರಿಯಾದ ಗಂಗಾಧರ್ ಅವರು ಶ್ರೀ ಸಿ.ಟಿ. ರವಿ ಅವರನ್ನು ವಾಹನದಲ್ಲಿ ಕೂರಿಸಿಕೊಂಡು ಹೋಗಿರುತ್ತಾರೆ. ಮಾರ್ಗಮಧ್ಯದಲ್ಲಿ ಜನರನ್ನು ಚದುರಿಸಲು ವ್ಯವಸ್ಥೆ ಮಾಡಲಾಗಿತ್ತು. ಸ್ಥಳೀಯ ನ್ಯಾಯಾಧೀಶರ ಅನುಮತಿ ಪಡೆಯಲು ಹೋದಾಗ ನ್ಯಾಯಾಧೀಶರು ತಿರಸ್ಕರಿಸಿ ಅವರನ್ನು ತೆರೆದ ನ್ಯಾಯಾಲಯದಲ್ಲಿ ಹಾಜರು ಪಡಿಸಬೇಕೆಂದು ಹೇಳಿ, ಸುರಕ್ಷತೆ ದೃಷ್ಟಿಯಿಂದ ಅವರನ್ನು ತಮ್ಮ ಹತ್ತಿರವೇ ಇರಿಸಿಕೊಳ್ಳಿ ಎಂದು ತಿಳಿಸಿದರು. ಪೊಲೀಸ್ ಇನ್ಸ್ಪೆಕ್ಟರ್ ಅವರಿಗೆ ಹಿಂದೆ ಯಾವುದೇ ವಾಹನಗಳು ಬರದಂತೆ ನೋಡಿಕೊಳ್ಳುವ ಸಲುವಾಗಿ ಬ್ಯಾರಿಕೇಡ್ ವ್ಯವಸ್ಥೆ ಮಾಡಿಕೊಳ್ಳಲು ತಿಳಿಸಲಾಗಿತ್ತು. ಮುಂದೆ ಎರಡು ಪೊಲೀಸ್ ವಾಹನಗಳು ಇದ್ದು,

ಹಿಂದೆ ಎಂಎಲ್‌ಸಿ ಎಂದು ಬರೆದಿರುವಂತಹ ಇನ್ನೊಂದು ವಾಹನವು ಬ್ಯಾರಿಕೇಡ್‌ನ್ನು ಮೀರಿ ನಮ್ಮನ್ನು ಹಿಂಬಾಲಿಸುತ್ತಿರುತ್ತದೆ. ಆದುದರಿಂದ ಕಿತ್ತೂರು ಠಾಣೆಗೆ ಹೋಗುವುದು ಬೇಡವೆಂದು ರಾಮದುರ್ಗದ ಕಡೆ ಹೊರಟೆವು. ಅಲ್ಲಿಗೂ ಹಿಂಬಾಲಿಸುತ್ತಿದ್ದ ವಾಹನಗಳು ಬಂದು ಮತ್ತೆ ಸೇರಿಕೊಂಡವು. ಮಾನ್ಯ ಶಾಸಕರು ಮೊಬೈಲ್‌ನಲ್ಲಿ ಮಾತನಾಡುತ್ತಿದ್ದನ್ನು ಗಮನಿಸಿ ತನಿಖಾಧಿಕಾರಿಯವರು ಫೋನನ್ನು ಕೊಡುವಂತೆ ಮನವಿ ಮಾಡಿದರು. ಆದರೆ ಮಾನ್ಯ ಶಾಸಕರು ಗಲಾಟೆ ಮಾಡುತ್ತಿದ್ದರು. ಮಾನ್ಯ ಶಾಸಕರ ತಲೆಗೆ ಆಗಿರುವ ಗಾಯಕ್ಕೆ ರಾಮದುರ್ಗ ಕಚೇರಿಯಲ್ಲಿ ಶುಶ್ರೂಷಾಧಿಕಾರಿಗಳನ್ನು ಕರೆಸಿ ಬ್ಯಾಂಡೇಜ್ ಮಾಡಿಸಲಾಯಿತು. ಅಲ್ಲಿ ಮಾನ್ಯ ಶಾಸಕರು ಕಿರು ಪ್ರೆಸ್ ಮೀಟ್ ಮಾಡಿರುತ್ತಾರೆ. ಆ ಸಂದರ್ಭದಲ್ಲಿ ಈ ಗಾಯ ಹೇಗೆ ಆಯಿತು ಪೊಲೀಸರು ಹೊಡೆದರೆ ಎಂದು ಕೇಳಿದಕ್ಕೆ, ಇಲ್ಲ ಎಂದು ಹೇಳಿರುತ್ತಾರೆ. ನಮ್ಮನ್ನು ಬೇರೊಂದು ವಾಹನಗಳು ಹಿಂಬಾಲಿಸುತ್ತಿದ್ದರಿಂದ ಬೆಳಗ್ಗೆ 5.30ರವರೆವಿಗೂ ಪೊಲೀಸ್ ವಾಹನದಲ್ಲಿ ಸುತ್ತಾಡಿ ಯಾದವಾಡ, ಮೂಡಲಗಿರಿ ತಲುಪಿದೆವು. ಅವರಿಗೆ ಬೆಳಗಿನ ಉಪಾಹಾರ ನೀಡಿ, ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಸಿಟಿ ಪೊಲೀಸರಿಗೆ ಹಸ್ತಾಂತರ ಮಾಡಿದ್ದೇವೆ. ಮಾನ್ಯ ಶಾಸಕರ ಸುರಕ್ಷತೆ ಸಂಪೂರ್ಣವಾಗಿ ನಮ್ಮ ಜವಾಬ್ದಾರಿಯಾಗಿತ್ತು. ಅವರಿಗೆ ದಕ್ಕೆ ಆಗದಂತೆ ಜಿಲ್ಲಾ ವ್ಯಾಪ್ತಿಯಲ್ಲಿ ಪೊಲೀಸ್‌ನವರು ಕ್ರಮಕೈಗೊಂಡಿದ್ದಾರೆ. ಈ ಎಲ್ಲಾ ಘಟನೆಯಲ್ಲಿ ನಮ್ಮ ಕಡೆಯಿಂದ ಏನಾದರೂ ಅಚಾತುರ್ಯವಾಗಿದರೆ ನಮ್ಮನ್ನು ಮನ್ನಿಸಬೇಕು.”

ಸಭೆಯಲ್ಲಿ ಹಾಜರಿದ್ದ ಶ್ರೀ ಆರ್. ಹಿತೇಂದ್ರ ಎ.ಡಿ.ಜಿ.ಪಿ ಕಾನೂನು ಸುವ್ಯವಸ್ಥೆ ಗೃಹ ಇಲಾಖೆ ಇವರು ಈ ಮುಂದಿನಂತೆ ತಿಳಿಸಿರುತ್ತಾರೆ:–

“ಸುವರ್ಣವಿಧಾನಸೌಧದಲ್ಲಿ ಕಲಾಪ ವೀಕ್ಷಣೆಗೆ ಸಾರ್ವಜನಿಕರಿಗೆ ಬ್ಲಾಂಕ್ ಪಾಸ್‌ಗಳನ್ನು ವಿತರಿಸಲಾಗಿತ್ತು. ಅವುಗಳನ್ನು ಚೆಕ್ ಮಾಡಿ ಒಳಗೆ ಬಿಡುವುದಕ್ಕೆ ಕಷ್ಟವಾಗಿತ್ತು. ಈ ಘಟನೆ ಮಧ್ಯಾಹ್ನ 12.30ರಿಂದ 1ಗಂಟೆಯ ಸಮಯದಲ್ಲಿ ನಡೆಯಿತು. ಮಾನ್ಯ ಸಭಾಪತಿಯವರು ನನ್ನನ್ನು ಕರೆದು ಶ್ರೀ ಸಿ.ಟಿ.ರವಿ ಅವರಿಗೆ ರಕ್ಷಣೆ ಕೊಡಬೇಕೆಂದು ಹೇಳಿದರು. ಅದು ನಮ್ಮ ಜವಾಬ್ದಾರಿ ಎಂದು ಹೇಳಿದೆ. ಮಧ್ಯಾಹ್ನ 4.00ಗಂಟೆ ಸುಮಾರಿಗೆ ಎಫ್‌ಐಆರ್ ಆಯಿತು. ಈ ವಿಚಾರವನ್ನು ಮಾನ್ಯ ಸಭಾಪತಿಯವರು ಕೊಠಡಿಯಲ್ಲಿ ಒಬ್ಬರೆ ಇದ್ದಾಗ ಹೋಗಿ ತಿಳಿಸಿ ಮುಂದೆ ತಾವು ಎನು ಆದೇಶ ಕೊಡುತ್ತೀರೋ ಅದನ್ನು ಪಾಲನೆ ಮಾಡುತ್ತೇವೆಂದು ಹೇಳಿದೆ. ಅವರು ಕಾನೂನು ಪ್ರಕಾರ ಏನಿದೆಯೋ ಅದನ್ನು ಮಾಡಿ ಎಂದು ಹೇಳಿದರು.

ಮಾನ್ಯ ಶಾಸಕರು ಅಧಿವೇಶನ ಮುಗಿದ ನಂತರ ಧರಣಿ ಕುಳಿತಿದ್ದರು. ಮಾನ್ಯ ಸಚಿವರ ಕ್ಷೇತ್ರವಾಗಿರುವುದರಿಂದ ಇಲ್ಲಿ ತುಂಬಾ ಸೂಕ್ಷ್ಮವಾಗಿರಬೇಕಾಗುತ್ತದೆ ಎಂದು ನಾನು ತಿಳಿಸಿರುತ್ತೇನೆ.

ಮರುದಿನ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಇಲಾಖಾ ಮುಖ್ಯಸ್ಥರು ಮತ್ತು ನಾವು ಮಾಧ್ಯಮಗಳಲ್ಲಿ ಬಂದ ಸುದ್ದಿಯನ್ನು ನೋಡಿ ಘಟನಾವಳಿಗಳನ್ನು ವಿಮರ್ಶೆ ಮಾಡಿದೆವು. ಈ ಬಗ್ಗೆ ಬಹಳಷ್ಟು ಟೀಕೆ ಟಿಪ್ಪಣಿಗಳನ್ನು ಮಾಡುತ್ತಿದ್ದಾರೆ. ಆದುದರಿಂದ ಮಾನ್ಯ ಗೃಹ ಸಚಿವರ ಬಳಿ ಮತ್ತು ಡಿಜಿಯವರ ಜೊತೆ ಮಾತನಾಡಿ ಎರಡು ಪ್ರಕರಣಗಳನ್ನು ಸಿ.ಐ.ಡಿ ತನಿಖೆಗೆ ವಹಿಸಬೇಕು ಎಂದು ತೀರ್ಮಾನಿಸಲಾಯಿತು.

ಮುಂದೆ ಈ ರೀತಿ ಘಟನೆಗಳಾದಂತೆ ಎಲ್ಲಾ ರೀತಿಯ ಅತ್ಯವಶ್ಯಕ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಿದ್ದರಿದ್ದೇವೆ. ಏನಾದರೂ ತಪ್ಪು ಮಾಡಿದ್ದರೆ ತಿದ್ದಿ ಹೇಳುವ ಕೆಲಸ ಮಾಡಬೇಕೆಂದು ಕೋರುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ."

ದಿನಾಂಕ:13.10.2025ರಂದು ನಡೆದ ಸಭೆಯಲ್ಲಿ ಹಾಜರಿದ್ದ ಶ್ರೀ ತುಷಾರ್ ಗಿರಿನಾಥ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗೃಹ ಇಲಾಖೆ ಇವರು ಈ ಮುಂದಿನಂತೆ ತಿಳಿಸಿರುತ್ತಾರೆ:–
"ನಮ್ಮ ಕರ್ನಾಟಕ ರಾಜ್ಯದಲ್ಲಿ ಪೊಲೀಸ್ ಇಲಾಖೆಗೆ ತನ್ನದೇ ಆದಂತಹ ಗೌರವವಿದೆ. ಇದರಲ್ಲಿ ಅವರು ರಾಜಕೀಯಕ್ಕೆ ಬದ್ದವಾಗಿ ತಪ್ಪು ಮಾಡಿರುವುದಿಲ್ಲ. ನಮ್ಮ ಅಧಿಕಾರಿಗಳಿಂದ ನಿಯಮಗಳ ಪ್ರಕಾರ ಏನಾದರೂ ತಪ್ಪು ಆಗಿದ್ದರೆ, ಕ್ಷಮೆ ಕೇಳುತ್ತೇನೆ.

ಇಲಾಖೆಯ ವತಿಯಿಂದ ಸುತ್ತೋಲೆಯನ್ನು ಹೊರಡಿಸಿ, ಪ್ರತಿ ಅಧಿವೇಶನಕ್ಕಿಂತ ಮುಂಚೆ ಒಂದು ಸಭೆಯನ್ನು ಮಾಡಿ ಶಾಸಕರಿಗೆ ಯಾವುದೇ ರೀತಿ ತೊಂದರೆಯಾಗಬಾರದೆಂದು ಡಿಜಿಪಿ ಯವರಿಗೆ ಸಲಹೆ ಮತ್ತು ನಿರ್ದೇಶನಗಳನ್ನು ಕೊಡುತ್ತೇವೆ."

ಮಾನ್ಯ ಶಾಸಕರಿಗೆ ಸಂವಿಧಾನದತ್ತವಾಗಿ ಕೊಡತಕ್ಕಂತಹ ಗೌರವವನ್ನು ಕೊಡಬೇಕು. ಮಾನ್ಯ ಶಾಸಕರು ಮತ್ತು ಯಾರೇ ಜನಪ್ರತಿನಿಧಿಗಳು ಮುಂದಿನ ದಿನಗಳಲ್ಲಿ ಪೊಲೀಸ್ ಇಲಾಖೆಗೆ ಬಂದು ಮಾಹಿತಿಗಳನ್ನು ಕೋರಿದಾಗ, ಅವರಿಗೆ ಕೊಡತಕ್ಕಂತಹ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಮಿತಿಯು ಸೂಚಿಸುತ್ತದೆ. ಉನ್ನತ ಮಟ್ಟದ ಅಧಿಕಾರಿಯಾದ ತಾವು ಸಭೆಗಳನ್ನು ಮಾಡಿ ಕೆಳಹಂತದ ಅಧಿಕಾರಿಗಳಿಗೆ ನಿರ್ದೇಶನಗಳನ್ನು ಕೊಟ್ಟು, ಅದರಲ್ಲೂ ಅಧಿವೇಶನ ನಡೆಯುವಾಗ ಅವರುಗಳಿಗೆ ರಕ್ಷಣೆ ಕೊಡುವಂಥದ್ದು ತಮ್ಮ ಇಲಾಖೆಯ ಜವಾಬ್ದಾರಿಯಾಗಿರುತ್ತದೆ. ಇನ್ನು ಮುಂದೆ ಇಂತಹ ಘಟನೆ ಮರುಕಳಿಸದಂತೆ ಜಾಗ್ರತೆಯಿಂದ ಕಾರ್ಯನಿರ್ವಹಿಸುಂತೆ ಸೂಚಿಸಿ ಪ್ರಕರಣವನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು.

****

ಸಮಿತಿಯ ಶಿಫಾರಸ್ಸು

ಸರ್ಕಾರದ ಸಭೆ ಸಮಾರಂಭಗಳಿಗೆ ಜನ ಪ್ರತಿನಿಧಿಗಳನ್ನು ಆಹ್ವಾನಿಸುವಲ್ಲಿ ಅನುಸರಿಸಬೇಕಾದ ಕ್ರಮ, ಮಾಹಿತಿ ಕೋರಿ ಪತ್ರ ಬರೆದಾಗ ಅವುಗಳಿಗೆ ಸ್ಪಂದಿಸುವುದು, ರಾಜ್ಯದ ಜಿಲ್ಲೆಗಳಿಗೆ ಭೇಟಿ ನೀಡಿದಾಗ ಅವರಿಗೆ ಸೂಕ್ತ ಭದ್ರತೆ ಮತ್ತು ರಕ್ಷಣೆ ಒದಗಿಸುವುದು ಹಾಗೂ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿದಾಗ ಅನುಸರಿಸಬೇಕಾದ ಶಿಷ್ಟಾಚಾರ ಕುರಿತು ಸಮಗ್ರವಾದ ಸೂಚನೆಗಳನ್ನು ಒಳಗೊಂಡಂತೆ 2025ರಲ್ಲಿ ಪ್ರಕಟಿಸಲಾಗಿದೆ. ಶಿಷ್ಟಾಚಾರ ಉಲ್ಲಂಘನೆಯಂತಹ ಪ್ರಕರಣಗಳು ಮರುಕಳಿಸದ ರೀತಿಯಲ್ಲಿ ಕಾರ್ಯನಿರ್ವಹಿಸುವಂತೆ ಕಾರ್ಯಾಗಾರ ಮತ್ತು ರಿವ್ಯೂ ಮೀಟಿಂಗ್‌ಗಳನ್ನು ಮಾಡಿ ಕೆಳಗಿನ ಹಂತದ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದು ಮತ್ತೊಮ್ಮೆ ಸಮಿತಿಯು ಶಿಫಾರಸ್ಸು ಮಾಡುತ್ತದೆ. ಈ ಸಮಿತಿಯ ಶಿಫಾರಸ್ಸು ಕುರಿತು ಕೈಗೊಂಡ ಕ್ರಮದ ಬಗ್ಗೆ ಅನುಪಾಲನ ವರದಿಯನ್ನು 30 ದಿನಗಳೊಳಗಾಗಿ ಸಚಿವಾಲಯಕ್ಕೆ ತಲುಪಿಸಬೇಕೆಂದು ತಿಳಿಸಲಾಗಿದೆ.

ದಿನಾಂಕ:21.08.2026
ಬೆಂಗಳೂರು.

ಮಂಜುನಾಥ ಭಂಡಾರಿ
ಅಧ್ಯಕ್ಷರು
ಹಕ್ಕುಬಾಧ್ಯತಾ ಸಮಿತಿ

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಅನುಬಂಧ - 1

ಎಡಗೂರು ಎಚ್ ವಿಶ್ವನಾಥ್ ಬಿ.ಎಸ್.ಸಿ., ಎಲ್.ಎಲ್.ಬಿ.
ಕರ್ನಾಟಕ ವಿಧಾನ ಪರಿಷತ್ ಸದಸ್ಯರು
ಮಾಜಿ ಸಚಿವರು, ಕರ್ನಾಟಕ ಸರ್ಕಾರ
ಮಾಜಿ ಲೋಕಸಭಾ ಸದಸ್ಯರು, ಕರ್ನಾಟಕ

ಕಛೇರಿ ವಿಳಾಸ
ನಿವಾಸ
ಆವರಣ
574001
ಮೊಬೈಲ್ 96390

ಸಂಖ್ಯೆ: ಪ.ಎಚ್.ವಿ:ಕಾ.ವಿ.ಪ.ಸ:2024/25 ದಿನಾಂಕ 24.06.2024

ರವರಿಗೆ,

ಸನ್ಮಾನ್ಯ ಸಭಾಪತಿಗಳು,
ಕರ್ನಾಟಕ ವಿಧಾನ ಪರಿಷತ್ತು,
ವಿಧಾನಸೌಧ, ಬೆಂಗಳೂರು

ಮಾನ್ಯರೇ,

ವಿಷಯ: ಮಾನ್ಯ ಮುಖ್ಯ ಮಂತ್ರಿಗಳ ಪದಗ್ರಹಣ ವೇದಿಕೆಯ ಭದ್ರತಾ ಲೋಪದ ಕುರಿತು ಪ್ರಸ್ತಾಪಿಸಿದ ದೂರಿನ ವಿಷಯದಲ್ಲಿ ನನ್ನ ಹಕ್ಕುಚ್ಯುತಿ ಯಾಗಿರುವ ಬಗ್ಗೆ

ಬಸವರಾಜ ಹೊರಟ್ಟಿ
ಸಭಾಪತಿ
ಕರ್ನಾಟಕ ವಿಧಾನ ಪರಿಷತ್

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 20/05/2023 ರಂದು ಘನತೆವೆತ್ತ ರಾಜ್ಯಪಾಲರು ಈಗಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯರವರಿಗೆ ಪ್ರಮಾಣ ವಚನ ಬೋದಿಸುವ ಸಂದರ್ಭದಲ್ಲಿ ವೇದಿಕೆಯಲ್ಲಿ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳೂ ಸೇರಿದಂತೆ ಗಣ್ಯಾತಿಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದು ಶಿಷ್ಟಾಚಾರ ಪಾಲನೆಯ ಸರ್ಕಾರಿ ಕಾರ್ಯಕ್ರಮದ ವೇದಿಕೆಯ ಮೇಲೆ ಶ್ರೀ ಬಿಎಸ್ ಶಿವಣ್ಣನೆಂಬ ಕ್ರಿಮಿನಲ್ ಆಪಾದನೆ ಹೆನ್ನೆಲೆಯುಳ್ಳ ವ್ಯಕ್ತಿ ಕಾಣಿಸಿಕೊಂಡು ಮಾನ್ಯ ಸಿದ್ದರಾಮಯ್ಯರವರಂತ ಅತನೂ ಕೂಡ ಜನರತ್ತ ಕೈ ಬೀಸಿರುತ್ತಾನೆ ಇದನ್ನು ಮನಗಂಡ ಭದ್ರತಾ ಸಿಬ್ಬಂದಿ ಆತನನ್ನು ವೇದಿಕೆಯಲ್ಲಿ ಮಾತಿನ ಚಕಮಕಿ ನಡೆದು ಭುಜಕ್ಕೆ ಕೈ ಹಾಕಿ ಎಳೆದೊಯ್ದಿರುವುದು ದಾಖಲಾಗಿದೆ ಇಂತಹ ವೇದಿಕೆಯಲ್ಲಿ ಗಣ್ಯಾತಿಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದು ಈತ ಅಕ್ರಮವಾಗಿ ಬಂದಿರುವುದು ಭದ್ರತಾ ಲೋಪವಾಗಿರುತ್ತದೆ. ಆದಕಾರಣ ಶಿವಣ್ಣನ ವಿರುದ್ಧ ಸಹಾ ಕಾನೂನು ಕ್ರಮ ಜರುಗಿಸಲೇಬೇಕಾಗಿರುತ್ತದೆ. ಅದರಂತೆ ನಾನು ಘನತೆವೆತ್ತ ರಾಜ್ಯಪಾಲರಿಗೆ ದಿನಾಂಕ:23/5/2023 ರಂದು ಈ ಬಗ್ಗೆ ದೂರು ಸಲ್ಲಿಸಿರುತ್ತೇನೆ. ಸದರಿ ದೂರಿನ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳಲು ಘನತೆವೆತ್ತ ರಾಜ್ಯಪಾಲರ ಕಛೇರಿಯಿಂದ ದಿನಾಂಕ:30/5/2023 ರಂದು ಮುಖ್ಯಕಾರ್ಯದರ್ಶಿಗಳ ಕಛೇರಿಗೆ ಕಳುಹಿಸಲಾಗಿರುತ್ತದೆ.

ಈ ಬಗ್ಗೆ ಸರ್ಕಾರದಿಂದ ಯಾವ ರೀತಿಯ ಕ್ರಮಕೈಗೊಳ್ಳಲಾಗಿದೆ ಎಂಬ ಮಾಹಿತಿ ಲಭ್ಯವಾಗದೆ ಇದ್ದರಿಂದ ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ನಿಯಮ 72 ರಲ್ಲಿ ಗಮನ ಸೆಳೆಯುವ ಸೂಚನೆ ಮಂಡಿಸಿರುತ್ತೇನೆ. ಸದರಿ ಗಮನ ಸೆಳೆಯುವ ಸೂಚನೆಗೆ ಮಾನ್ಯ ಗೃಹ ಮಂತ್ರಿಗಳು ಉತ್ತರಿಸುತ್ತಾ "ಈ ದೂರನ್ನು ಉಪ ಪೊಲೀಸ್ ಆಯುಕ್ತರು ವಿವಿಐಪಿ ಭದ್ರತೆ ಬೆಂಗಳೂರು ನಗರ ವಹಿಸಿ ಕೂಲಂಕುಷವಾಗಿ ವಿಚಾರಣೆ ಕೈಗೊಂಡು ಮುಂದಿನ ಕ್ರಮದ ಬಗ್ಗೆ ವರದಿ ಸಲ್ಲಿಸಲೂ ಸೂಚಿಸಲಾಗಿದೆ" ಎಂದು ದಿನಾಂಕ 6-7-2023 ರಂದು ಉತ್ತರ ನೀಡಿರುತ್ತಾರೆ. ಆದರೇ ನನಗೆ ದಿನಾಂಕ:10/7/2023 ರಂದು ಸಹಾಯಕ ಪೊಲೀಸ್ ಕಮೀಷನರ್ ಹಲಸೂರು ಗೇಟ್ ಉಪ ವಿಭಾಗ ಬೆಂಗಳೂರು ನಗರ ಇವರಿಂದ ಒಂದು ಹಿಂಬರಹ ಸ್ವೀಕೃತವಾಗಿದ್ದು ಅದರಲ್ಲಿ ಈ ದೂರು ಅರ್ಜಿಯು ಮೇಲಧಿಕಾರಿಗಳ ಕಛೇರಿಯ ಮೂಲಕ ವಿಚಾರಣೆಗಾಗಿ ಹಲಸೂರು ಗೇಟ್ ಉಪ ವಿಭಾಗದ ಕಛೇರಿಗೆ ಬಂದಿದ್ದು ಶ್ರೀ ಬಿಎಸ್ ಶಿವಣ್ಣರವರನ್ನು ವಿಚಾರಣೆ ಮಾಡಲಾಗಿರುತ್ತದೆ. ಸದರಿಯವರು ನೀವು ಮಾಡಿರುವ ಆರೋಪಗಳನ್ನು ಅಲ್ಲಗಳೆದಿರುತ್ತಾರೆ ಹಾಗೂ ವಿಚಾರಣೆಯ ವರದಿಯನ್ನು ಮೇಲಧಿಕಾರಿಗಳ ಕಛೇರಿಗೆ ಸಲ್ಲಿಸಲಾಗಿರುತ್ತದೆ ಎಂದು ತಿಳಿಸಲಾಗಿರುತ್ತದೆ.

ಇಲ್ಲಿ ಗಮನಿಸಬೇಕಾದ ಅಂಶ ಎಂದರೇ ಸದನದಲ್ಲಿ ಈ ದೂರನ್ನು ಉಪ ಪೊಲೀಸ್ ಆಯುಕ್ತರು ವಿ.ವಿ.ಐ.ಪಿ ಭದ್ರತೆ ಬೆಂಗಳೂರು ನಗರ ರವರಿಗೆ ವಹಿಸಿ ಕೂಲಂಕುಷವಾಗಿ ವಿಚಾರಣೆ ಕೈಗೊಂಡು ಮುಂದಿನ ಕ್ರಮದ ಬಗ್ಗೆ ವರದಿ ಸಲ್ಲಿಸಲೂ ಸೂಚಿಸಲಾಗಿದೆ ಎಂದು ಉತ್ತರ ನೀಡಿದ್ದು ಅದರಂತೆ ವಿಚಾರಣೆ ನಡೆಸದೇ ಸಹಾಯಕ ಪೊಲೀಸ್ ಕಮೀಷನರ್ ಹಲಸೂರು ಗೇಟ್ ಉಪ ವಿಭಾಗದ ಬೆಂಗಳೂರು ನಗರ ಇವರು ಕೂಲಂಕಷವಾಗಿ ವಿಚಾರಣೆ ನಡೆಸದೇ ಆರೋಪಿತ ಬಿ ಎಸ್

ಶಿವಣ್ಣ ಅವರು ಆರೋಪ ಅಲ್ಲಗಳೆದಿರುತ್ತಾರೆಂದು ಎಸಿಪಿ ರವರು ಹಿಂಬರಹ ಕೊಟ್ಟಿದ್ದು, ಸದನದಲ್ಲಿ ನನಗೆ ಉತ್ತರಿಸಿದ್ದಕ್ಕಿಂತ ಬೇರೆಯಾಗಿ ಕ್ರಮವಹಿಸಿದ್ದು ಇಲ್ಲಿ ಹಕ್ಕುಚ್ಯುತಿಯಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ನಾನು ಪುನ: ಬೆಳಗಾವಿಯಲ್ಲಿ ಡಿಸೆಂಬರ್ 2023 ರಲ್ಲಿ ನಡೆದ ಅಧಿವೇಶನದಲ್ಲಿ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ: 1084 ಅನ್ನು ಮಂಡಿಸಿರುತ್ತೇನೆ. ಸದರಿ ಪ್ರಶ್ನೆಗೆ ಮಾನ್ಯ ಗೃಹ ಸಚಿವರು ಉತ್ತರ ನೀಡಿದ್ದು, ಅದರಲ್ಲಿ, ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ಸಮಾರಂಭಕ್ಕೆ ಡಿಪಿಎಆರ್ ನಿಂದ 250 ವಿವಿಐಪಿ ರೆಡ್ ಪಾಸ್ ಗಳನ್ನು ವಿತರಿಸಲಾಗಿದ್ದು, ಸದರಿ ರೆಡ್ ಪಾಸ್ ಮೂಲಕ ಶ್ರೀ ಶಿವಣ್ಣ ರವರು ಪ್ರಮಾಣ ವಚನ ಸಮಾರಂಭಕ್ಕೆ ಕಂಠೀರವ ಕ್ರೀಡಾಂಗಣಕ್ಕೆ ಪ್ರವೇಶ ಪಡೆದಿರುತ್ತಾರೆ, ಅದ್ದರಿಂದ ಶ್ರೀ ಶಿವಣ್ಣ ರವರು ಕಾನೂನು ಉಲ್ಲಂಘನೆ ಮಾಡಿ ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ವೇದಿಕೆಯಲ್ಲಿ ಕಾಣಿಸಿಕೊಂಡು ಭದ್ರತಾಲೋಪವೆಸಗಿರುವುದು ಕಂಡುಬಂದಿರುವುದಿಲ್ಲ. ಇಲ್ಲಿ ಯಾವುದೇ ಪೋಲೀಸ್ ವೈಫಲ್ಯ ಮತ್ತು ಲೋಪಗಳು ಕಂಡುಬಂದಿರುವುದಿಲ್ಲ ಅಲ್ಲದೇ ಶ್ರೀ ಶಿವಣ್ಣ ರವರು ವಿರುದ್ಧ ವಿಭಾಗೀಯ ಪೋಲೀಸ್ ಠಾಣೆಗಳಲ್ಲಿ ಯಾವುದೇ ಕ್ರಿಮಿನಲ್ ಪ್ರಕರಣಗಳು ದಾಖಲಾಗಿವುದು ಕಂಡುಬಂದಿರುವುದಿಲ್ಲ ವೆಂದು ಉತ್ತರಿಸಿರುತ್ತಾರೆ.

ಇಲ್ಲಿ ತಿಳಿಸಬಯಸುವುದೇನೆಂದರೆ, ಕರ್ನಾಟಕ ವಿಧಾನ ಸಭೆಯಲ್ಲಿ 224 ಶಾಸಕರು ಆಯ್ಕೆಯಾಗಿರುತ್ತಾರೆ. ಅಲ್ಲದೇ ಸುಮಾರು 75 ವಿಧಾನ ಪರಿಷತ್ತಿನ ಶಾಸಕರು ಇರುತ್ತಾರೆ. ಇವರಿಗೆಂದೇ 250 ವಿವಿಐಪಿ ರೆಡ್ ಪಾಸ್ ಗಳನ್ನು ಸಾಮಾನ್ಯವಾಗಿ ವಿತರಿಸಲಾಗುತ್ತದೆ. ಆದರೆ, ಈ ವಿವಿಐಪಿ ರೆಡ್ ಪಾಸ್ ಗಳನ್ನುಸಮಾರಂಭಕ್ಕೆ ಹಾಜರಾಗಲು ಮಾತ್ರ ವಿತರಿಸಲಾಗುತ್ತಿದ್ದು, ವೇದಿಕೆ ಮೇಲೆ ಉಪಸ್ಥಿತರಿರಲು ವಿತರಿಸಿರುವುದಿಲ್ಲ.., ಶ್ರೀ ಶಿವಣ್ಣ ರವರು ವಿಧಾನ ಸಭೆಯ ಶಾಸಕರೂ ಅಲ್ಲ, ವಿಧಾನ ಪರಿಷತ್ತಿನ ಶಾಸಕರು ಅಲ್ಲ. ಇವರೊಬ್ಬ ಸಾಮಾನ್ಯ ಕಾಂಗ್ರೇಸ್ ಪಕ್ಷದ ಕಾರ್ಯಕರ್ತ ಅಷ್ಟೇ. ಇದು ಒಂದು ಪಕ್ಷದ ಕಾರ್ಯಕ್ರಮ ಅಲ್ಲ. ಸರ್ಕಾರದ ಕಾರ್ಯಕ್ರಮ. ಈತ ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಗುರುತಿಸಿಕೊಂಡು ಆ ಮೂಲಕ ತಾನು ಪ್ರಭಾವಿ ವ್ಯಕ್ತಿಯೆಂದು ಚಿತ್ರಿಸಿ ಅವ್ಯವಹಾರ ಮಾಡುವ ದೃಷ್ಟಿಯಿಂದಲೇ ಅಕ್ರಮವಾಗಿ ವೇದಿಕೆ ಮೇಲೆ ಹೋಗಿ ಕೈಬೀಸಿರುತ್ತಾರೆ. ಈ ಬಗ್ಗೆ ಸ್ಪಷ್ಟವಾಗಿ ಹಾಗೂ ಕೂಲಂಕಷವಾಗಿ ವಿಚಾರಣೆ ನಡೆಸಿರುವುದಿಲ್ಲ. ಇತ್ತೀಚಿಗೆ ವಿಧಾನ ಸಭೆ ಸಭಾಂಗಣಕ್ಕೆ ಒಬ್ಬ ವ್ಯಕ್ತಿ ಭದ್ರತಾ ಲೋಪದಿಂದ ಒಳನುಸುಳಿದ್ದು, ಅವನ ವಿರುದ್ಧ ಎಫ್.ಐ.ಆರ್ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಆದರೆ ಈ ಪ್ರಕರಣದಲ್ಲಿ ಆ ರೀತಿ ಮಾಡದೇ ತಾರತಮ್ಯ ತೋರಲಾಗುತ್ತಿದೆ. ಶ್ರೀ ಶಿವಣ್ಣ ರವರು ಕ್ರಿಮಿನಲ್ ಆರೋಪಗಳನ್ನು ಎದುರಿಸುತ್ತಿರುವ ವ್ಯಕ್ತಿ ಎಂಬ ಬಗ್ಗೆ ಶ್ರೀ ಎಲ್ ಜಯಲಿಂಗೇಗೌಡ ರವರು ಮಾನ್ಯ ಪೋಲೀಸ್ ಆಯುಕ್ತರಿಗೆ ದಾಖಲೆಗಳನ್ನು ಒದಗಿಸಿದ್ದಾಗ್ಯೂ ಶ್ರೀ ಶಿವಣ್ಣ ರವರ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲವೆಂದು ಸದನದಲ್ಲಿ ತಪ್ಪು ಉತ್ತರ ನೀಡಲಾಗಿದೆ. ಇಲ್ಲಿ ಗಮನಿಸಬೇಕಾದ ಗಂಭೀರವಾದ ಅಂಶವೆಂದರೆ ರೆಡ್ ಪಾಸಿರುವುದು ಗಣ್ಯಾತಿಗಣ್ಯ ವ್ಯಕ್ತಿಗಳು ಹಾಗೂ ಜನಪ್ರತಿನಿಧಿಗಳಿಗೆ. ಹೀಗಿರುವಾಗ ಅಧಿಕಾರಿಗಳು ಶಿವಣ್ಣನನ್ನು ಸದರಿ ಪ್ರಕರಣದಿಂದ ರಕ್ಷಣೆ ಮಾಡುವ ಏಕೈಕ ಉದ್ದೇಶದಿಂದ ಈ ರೀತಿ ತಪ್ಪು ಹಿಂಬರಹ ಹಾಗೂ ತಪ್ಪು ಉತ್ತರ ಒದಗಿಸಿರುತ್ತಾರೆ.

ವಿಧಾನ ಪರಿಷತ್ತಿನ ಶಾಸಕನಾದ ನನಗೇ ಈ ರೀತಿ ತಪ್ಪು ಉತ್ತರ ಹಾಗೂ ಮಾಹಿತಿಯನ್ನು ಹಿಂಬರಹದ ಮೂಲಕ ನೀಡಿರುವ ಮೂಲಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆ, ರವರು ಹಕ್ಕುಚ್ಯುತಿ ಎಸಗಿದ್ದು, ಈ ಸಂಬಂಧ ಹಕ್ಕುಚ್ಯುತಿ ಸಮಿತಿಯ ಮುಂದೆ ಮಂಡಿಸಿ ಕೂಲಂಕಷವಾಗಿ ವಿಚಾರಣೆ ನಡೆಸಬೇಕಾಗಿ ತಮ್ಮನ್ನು ಕೋರಬಯಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಎಡಗೂರು ಹೆಚ್. ವಿಶ್ವನಾಥ

ಉಳಿದವುಗಳು:
ಕೆಲವು ಪತ್ರಕ್ಕೆ ಸಂಬಂಧಿಸಿದ ಎಫ್ಐ ದಾಖಲೆಗಳನ್ನು
ನಿಮಗೆ ಉಳಿದಿದೆ

ಅಡಿ ಇರು ಎಚ್.ವಿಶ್ವನಾಥ್ ಬಿ.ಎಸ್ಸಿ., ಎಲ್ಎಲ್.ಬಿ.,
ಕರ್ನಾ ವಿಧಾನ ಪರಿಷತ್ ಸದಸ್ಯರು
ಮಾಜಿ ಸಚಿವರು, ಕರ್ನಾಟಕ ಸರ್ಕಾರ
ಮಾಜಿ ಲೋಕಸಭಾ ಸದಸ್ಯರು, ಕರ್ನಾಟಕ

ಕಛೇರಿ ವಿಳಾಸ : ಸಾರ್ವಜನಿಕ ಕಛೇರಿ ಕಟ್ಟಡ
ಕಾಡಾ ಕಛೇರಿ ಆವರಣ
ಮೈಸೂರು– 570001
ಮೊ : +91 96639 96390

ಸಂಖ್ಯೆ :ವಿ ಪ/ಅಎಚ್ಎ/ಕವಿಪಸ/2022–23 ದಿನಾಂಕ : 04/04/2025

ಸನ್ಮಾನ್ಯ ಸಭಾಪತಿಗಳು,
ಕರ್ನಾಟಕ ವಿಧಾನ ಪರಿಷತ್ತು,
ವಿಧಾನ ಸೌಧ, ಬೆಂಗಳೂರು

ಕರ್ತವ್ಯನಿರ್ವಹಣೆಗೆ ಹಕ್ಕು ಚ್ಯುತಿ ಗೊಳಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ

4/4/25
ಬಸವರಾಜ ಹೊರಟ್ಟಿ
ಸಭಾಪತಿ
ಕರ್ನಾಟಕ ವಿಧಾನ ಪರಿಷತ್

5/4/25

ಮಾನ್ಯರೇ..

ವಿಷಯ: ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ವೇದಿಕೆಯ ಭದ್ರತಾ ಲೋಪಕ್ಕೆ ಸಂಬಂಧಿಸಿದ ದೂರಿನ ವಿಷಯದಲ್ಲಿ ನನ್ನ ಹಕ್ಕುಚ್ಯುತಿಯಾಗಿರುವ ಕುರಿತು ಗೃಹ ಇಲಾಖೆಯಿಂದ ತಪ್ಪು ವರದಿ ಕೊಟ್ಟಿದ್ದು, ಪ್ರಕರಣವನ್ನು ಸಮಿತಿ ಮುಂದೆ ಪ್ರಸ್ತಾಪಿಸಿ, ನನ್ನ ಹಕ್ಕುಚ್ಯುತಿಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ.

ಉಲ್ಲೇಖ:
1. ಆ.ಎಚ್.ವಿ.ಕಾ.ವಿ.ಪ.ಸ:2024/25,ದಿನಾಂಕ:24.06.2024 ಸಭಾಪತಿಗಳಿಗೆ ಪತ್ರ.
2. 503/ಅ.ಎಚ್.ವಿ/ಕವಿಪಸ/2025 ದಿನಾಂಕ:03.02.2025 ಸರ್ಕಾರ ಅಪರ ಮುಖ್ಯಕಾರ್ಯದರ್ಶಿಗಳು ಒಳಡಳಿತ ಇಲಾಖೆಗೆ ಪತ್ರ.
3. 504/ಅ.ಎಚ್.ವಿ/ಕವಿಪಸ/2024/25 ರಾಜ್ಯಪಾಲರಿಗೆ ಬರೆದ ಪತ್ರ ದಿನಾಂಕ:05.02.2025 ಹಾಗೂ ಜಿ.ಎಸ್ 01 ಎಡಿಎಂ 2023(P-1) ರಾಜ್ಯಪಾಲರ ಕಛೇರಿಯ ಪತ್ರ ದಿನಾಂಕ:21.02.2024.

******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಸದರಿ ಪ್ರಕರಣದಲ್ಲಿ ನನ್ನ ಹಕ್ಕುಚ್ಯುತಿಯಾಗಿವ ಬಗ್ಗೆ ದಿನಾಂಕ:24.06.2024ರಂದು ತಮ್ಮಲ್ಲಿ ಮನವಿ ಸಲ್ಲಿಸಿರುತ್ತೇನೆ. ಈ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:14.03.2025ರಂದು ಹಕ್ಕುಚ್ಯುತಿಯ ವಿಷಯದ ಬಗ್ಗೆ, ವಿಧಾನ ಪರಿಷತ್ತಿನ ಕಾರ್ಯದರ್ಶಿಯವರು, ಗೃಹ ಇಲಾಖೆಯಿಂದ ದಿನಾಂಕ:24.02.2025 ಸ್ವೀಕೃತವಾಗಿರುವ ವರದಿಗೆ ನನ್ನ ಅಭಿಪ್ರಾಯ ತಿಳಿಸಿರುವಂತೆ ಕೋರಿರುತ್ತಾರೆ.


ಗೃಹ ಇಲಾಖೆಯಿಂದ ಸಲ್ಲಿಕೆಯಾಗಿರುವ ವರದಿಯು ವಾಸ್ತವಾಂಶಕ್ಕೆ ದೂರವಾಗಿದ್ದು, ಈ ಹಿಂದೆ ಹಕ್ಕುಚ್ಯುತಿಗೆ ಕರಾಣವಾಗಲೂ ಏನು ತಪ್ಪುಮಾಹಿತಿ, ತಪ್ಪು ಉತ್ತರವನ್ನು ಒದಗಿಸಲಾಗಿತ್ತೊ ಆದೇ ಅಂಶವನ್ನು ಗೃಹ ಇಲಾಖೆಯು ಸಮಿತಿಗೆ ನೀಡಿರುವ ವರದಿಯಲ್ಲಿ ಪ್ರಸ್ತಾಪಿಸಲಾಗಿರುತ್ತದೆ. ಈ ವಿಷಯದಲ್ಲಿ ಆರೋಪಿಯಾಗಿರುವ ಶ್ರೀ ಬಿ ಎಸ್ ಶಿವಣ್ಣ ರವರು ನನ್ನ ವಿರುದ್ಧ ಎರಡು ಸತ್ಯಕ್ಕೆ ದೂರವಾದ ಮಾನಹಾನಿ ಪ್ರಕರಣಗಳನ್ನು ನ್ಯಾಯಲಯದಲ್ಲಿ ಹೂಡಿದ್ದು, ಒಂದೊಂದು ನ್ಯಾಯಲಯದಲ್ಲಿ ಒಂದೊಂದು ರೀತಿ ವಿಭಿನ್ನವಾಗಿ ಹೇಳಿಕೆ ಕೊಟ್ಟಿರುತ್ತಾರೆ. ನ್ಯಾಯಾಲಯದಲ್ಲಿ ನೀಡಿರುವ ಹೇಳಿಕೆಯಲ್ಲಿಯೂ ಸಹ ಹಾಲಿ ವಿಧಾನ ಪರಿಷತ್ತಿನ ಸದಸ್ಯನಾದ ನನ್ನನ್ನು ಉದ್ದೇಶ ಪೂರಕವಾಗಿ "ಅಪರಾಧಿ" ಎಂಬ ಪದ ಬಳಕೆ ಮಾಡಿರುವುದರಿಂದ ಇಲ್ಲಿಯೂ ಸಹ ನನ್ನ ಹಕ್ಕುಚ್ಯುತಿಯಾಗಿರುತ್ತದೆ.

ಇದಲ್ಲದೇ ನನ್ನ ಸಾರ್ವಜನಿಕ ಜೀವನಕ್ಕೂ ಹಲವಾರು ಅನಾನುಕೂಲವಾಗಿದೆ. ಈ ಬಗ್ಗೆ ನಾನು ದಿನಾಂಕ:03.02.2025ರಂದು ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಯವರು ಒಳಾಡಳಿತ ಇಲಾಖೆ ರವರಿಗೆ ಹಾಗೂ ದಿನಾಂಕ:05.02.2025ರಂದು ಮಾನ್ಯ ಘನತೆವೆತ್ತ ರಾಜ್ಯಪಾಲರವರಿಗೆ ಪ್ರಕರಣವನ್ನು ಸಂಪೂರ್ಣವಾಗಿ ವಿವರಿಸಿ, ಪ್ರಕರಣದ ಕುರಿತು ನನಗೆ ಆಗಿರುವ ಹಕ್ಕುಚ್ಯುತಿ ಹಾಗೂ ಇತರೆ ಅನಾನುಕೂಲಗಳ ಬಗ್ಗೆ, ಸಂಬಂಧಪಟ್ಟವರ ವಿರುದ್ಧ ಕ್ರಮಕ್ಕೆಗೊಳ್ಳಲು ದೂರು ಸಲ್ಲಿಸಿರುತ್ತಾನೆ.

ಶ್ರೀ ಬಿ ಎಸ್ ಶಿವಣ್ಣ, ರವರು ನ್ಯಾಯಧೀಶರ ಮುಂದೆ ಹೇಳಿಕೆ ಕೊಡುವಾಗ ವಿಭಿನ್ನವಾದ ತಪ್ಪು ಹೇಳಿಕೆಗಳನ್ನು ಕೊಟ್ಟಿರುವುದು ಗಮನಿಸಿದರೆ ಮತ್ತು ವಾಸ್ತವಾಂಶದ ಚಿತ್ರಣವನ್ನು ಪರಿಶೀಲಿಸಿದರೇ ಇವರು ಅಕ್ರಮವಾಗಿಯೇ ವೇದಿಕೆ ಮೇಲೆ ಬಂದಿರುವುದು ದೃಡಪಡುವುದಲ್ಲದೇ ಭದ್ರತಾಲೋಪವಾಗಿರುವುದು ಸ್ಪಷ್ಟವಾಗಿ ತಿಳಿಯುತ್ತದೆ. ಹೀಗಿರುವಾಗ ಭದ್ರತೆಗೆ ಸಂಬಂಧಪಟ್ಟ ಹಲಸೂರು ಗೇಟ್ ವಿಭಾಗದ ಸಹಾಯಕ ಪೋಲಿಸ್ ಆಯುಕ್ತರು ತನಿಖೆಯನ್ನು ನಡೆಸದೇ ಆರೋಪಿಯ ಹೇಳಿಕೆಯನ್ನೇ ಆಧರಿಸಿ ನನಗೆ ಹಿಂಬರಹ ಕೊಟ್ಟಿರುವುದು. ಸಂಬಂಧಪಟ್ಟ ಅಧಿಕಾರಿಗಳ ಬೇಜವಾಬ್ದಾರಿತನದ ಕರ್ತವ್ಯ ಲೋಪ ಎದ್ದು ಕಾಣುತ್ತದೆ. ಮುಂದುವರೆದು, ಸದರಿ ಆರೋಪಕ್ಕೆ ಸಂಬಂಧಪಟ್ಟಂತೆ ನಾನೊಬ್ಬನ್ನಲ್ಲದೆ. ಇನ್ನೂ ಇಬ್ಬರು ದೂರು ಸಲ್ಲಿಸಿದ್ದು, ಸಂಬಂಧ ಪಟ್ಟ ತನಿಖಾಧಿಕಾರಿಗಳು ಇಲ್ಲಿಯವರೆವಿಗೂ ನನ್ನನ್ನಾಗಲಿ ಇತರ ದೂರುದಾರನ್ನಾಗಲಿ ವಿಚಾರಣೆ ನಡೆಸಿ ಹೇಳಿಕೆಯನ್ನು ಪಡೆದಿರುವುದಿಲ್ಲ ಆದರೆ ದೂರುದಾರರ ವಿಚಾರಣೆ ಮಾಡಿರುವುದಾಗಿ ತಿಳಿಸಿ ಆರೋಪಿಯ ಹೇಳಿಕೆಯನ್ನೇ ಆಧರಿಸಿ ಹಿಂಬರಹ ಕೊಟ್ಟಿರುವುದು ಸದರಿ ಪ್ರಕರಣವನ್ನು ಏಕಪಕ್ಷೀಯವಾಗಿ ಪರಿಗಣಿಸಿರುವುದು ಕಂಡುಬಂದಿರುತ್ತದೆ. ಇದು ಸಹ ತನಿಖಾಧಿಕಾರಿಗಳ ಬೇಜವಾಬ್ದಾರಿತನವಾಗಿರುತ್ತದೆ ಇದರ ಉದ್ದೇಶವೇ ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯ ಲೋಪವನ್ನು ಮುಚ್ಚಿಹಾಕಿ ಆರೋಪಿಯನ್ನು ರಕ್ಷಣೆ ಮಾಡುವಂತೆ ಕಂಡುಬಂದಿರುತ್ತದೆ.

ಆದ್ದರಿಂದ ಮೇಲಿನ ಎಲ್ಲಾ ಅಂಶಗಳು ಹಾಗೂ ಉಲ್ಲೇಖಿತ ಪತ್ರದಲ್ಲಿನ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಸದರಿ ಪ್ರಕರಣದ ಕುರಿತು ಇಲ್ಲಿಯವರೆವಿಗೂ ರಾಜ್ಯಪಾಲರಿಗೆ ವರದಿ ಕೊಡದಿರುವುದು ಹಾಗೂ ಮೇಲಿನ ಎಲ್ಲಾ ಆರೋಪಗಳನ್ನು ಇಲಾಖೆಯ ಗಮನಕ್ಕೆ ತಂದಿದ್ದಾಗಿಯೂ ನನ್ನ ಮನವಿಯನ್ನು ಪರಿಗಣಿಸಿದೇ, ಒಳಾಡಳಿತ ಇಲಾಖೆಯಿಂದ ತಪ್ಪು ವರದಿಯನ್ನು ಕೊಟ್ಟು ಮತ್ತೊಮ್ಮೆ ನನ್ನ ಹಕ್ಕುಚ್ಯುತಿ ಮಾಡಲಾಗಿದೆ ಸದರಿ ಭದ್ರತಾಲೋಪದ ಪ್ರಕರಣದಲ್ಲಿ ಕಾನೂನು ರೀತಿ ಕ್ರಮ ವಹಿಸದೇ ತಪ್ಪು ಹಿಂಬರಹ ಹಾಗೂ ತಪ್ಪು ಉತ್ತರ ಒದಗಿಸಿ, ಪ್ರಕರಣದ ದಾರಿತಪ್ಪಿಸಲು ಕಾರಣರಾದವರಿಂದಲೇ ನನ್ನ ಹುಕ್ಕುಚ್ಯುತಿಯಾಗಿರುತ್ತದೆ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಕೂಡಲೇ ಸಮಿತಿಯ ಮುಂದೆ ತಂದು ಸಂಪೂರ್ಣವಾಗಿ ಪರಿಶೀಲನೆ ಮಾಡಿ, ನನಗೆ ಆಗಿರುವ ಲೋಪಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಆದೇಶ ಮಾಡಬೇಕೆಂದು ತಮ್ಮನ್ನು ಕೋರುತ್ತೇನೆ.

ವಂದನೆಗಳೊಂದಿಗೆ,



ತಮ್ಮ ವಿಶ್ವಾಸಿ

(ಅಡಗೂರು ಹೆಚ್ ವಿಶ್ವನಾಥ್)

ಸಂಬಂಧಪಟ್ಟ ಉಲ್ಲೇಖಿತ ಪತ್ರಿಗಳನ್ನು ಲಗತ್ತಿಸಲಾಗಿದೆ.

ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ತಿನ ಸಚಿವಾಲಯ,
ಅಂಚೆ ಪೆಟ್ಟಿಗೆ ಸಂ: 5079, ವಿಧಾನಸೌಧ,
ಸಂಖ್ಯೆ: ಕವಿಪ/ಶಾರಶಾ/09/ಹಚ್ಚುಪ್ರ/2024 ಬೆಂಗಳೂರು-560 001 ದಿನಾಂಕ: 14.03.2025.

ಕಾರ್ಯದರ್ಶಿಯವರಿಂದ,
ಕರ್ನಾಟಕ ವಿಧಾನ ಪರಿಷತ್ತು.

ಗೆ:
ಶ್ರೀ ಅಡಗೂರು ಹೆಚ್.ವಿಶ್ವನಾಥ್‌ರವರು,
ಶಾಸಕರು, ವಿಧಾನ ಪರಿಷತ್ತು,
ಕೋಟೆ ಭೈರವೇಶ್ವರ ನಿಲಯ,
ಬಾಲಾಜಿ ಲೇಔಟ್, ಕಾವೇರಿ ಟ್ಯಾಂಕ್ ಪಕ್ಕ,
ರತ್ನಪುರಿ ರಸ್ತೆ ಹುಣಸೂರು,
ಮೈಸೂರು ಜಿಲ್ಲೆ.

ಮಾನ್ಯರೆ,

ವಿಷಯ: ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ವೇದಿಕೆಯ ಭದ್ರತಾಲೋಪದ ಬಗ್ಗೆ ಪ್ರಸ್ತಾಪಿಸಿರುವ ದೂರಿನ ವಿಷಯದಲ್ಲಿ ಸರ್ಕಾರದ ಅಪರಮುಖ್ಯ ಕಾರ್ಯದರ್ಶಿ, ಒಳಾಡಳಿತ, ಇವರು ತಪ್ಪು ಮಾಹಿತಿಯನ್ನು ಹಿಂಬರಹದ ಮೂಲಕ ನೀಡಿ ಒದಗಿಸದಿರುವ ಕುರಿತು.

ಉಲ್ಲೇಖ-1: ತಮ್ಮ ಹಕ್ಕುಚ್ಯುತಿ ಸೂಚನಾ ಪತ್ರ ದಿನಾಂಕ:24.06.2024
ಉಲ್ಲೇಖ-2: ಒಳಾಡಳಿತ ಇಲಾಖೆಯ ಅಧೀನ ಕಾರ್ಯದರ್ಶಿಯವರ ಪತ್ರ ಸಂಖ್ಯೆ:ಹೆಚ್‌ಡಿ94/ಪಿಸಿಇ/2024, ದಿನಾಂಕ:24.02.2025

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾವು ನೀಡಿದ್ದ ಹಕ್ಕುಚ್ಯುತಿ ಸೂಚನೆಗೆ ಉಲ್ಲೇಖಿತ ಪತ್ರ-2ರಲ್ಲಿ ಒಳಾಡಳಿತ ಇಲಾಖೆಯಿಂದ ದಿನಾಂಕ:24.02.2025ರಂದು ಸ್ವೀಕೃತವಾಗಿರುವ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದ್ದು, ಸದರಿ ಮಾಹಿತಿಯ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತಳಾಗಿರುತ್ತೇನೆ.

ತಮ್ಮ ವಿಶ್ವಾಸಿ,

(ರೇಖಾ ಕೆ)
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

ಕರ್ನಾಟಕ ಸರ್ಕಾರ

ಸಂಖ್ಯೆ:ಹೆಚ್‌ಡಿ 94 ಪಿಸಿಇ 2024

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:24.02.2025.

ಇಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಒಳಾಡಳಿತ ಇಲಾಖೆ,
ವಿಧಾನ ಸೌಧ, ಬೆಂಗಳೂರು.

ಇವರಿಗೆ
ಅಧೀನ ಕಾರ್ಯದರ್ಶಿ,
ಶಾಸನ ರಚನಾ ಶಾಖೆ,
ಕರ್ನಾಟಕ ವಿಧಾನ ಪರಿಷತ್ತು,
ವಿಧಾನ ಸೌಧ, ಬೆಂಗಳೂರು.

ಮಾನ್ಯರೇ,

ವಿಷಯ:- ಮಾನ್ಯ ಶಾಸಕರ ಪ್ರಶ್ನೆಗಳಿಗೆ ತಪ್ಪು ಉತ್ತರ ನೀಡುವ ಮೂಲಕ ಹಕ್ಕುಚ್ಯುತಿ ಉಂಟು ಮಾಡಿರುವ ಕುರಿತು.
ಉಲ್ಲೇಖ:- ತಮ್ಮ ಪತ್ರ ಸಂಖ್ಯೆ: ಸಂಖ್ಯೆ: ಕವಿಪ/ಶಾರಶಾ/09/ಹಚ್ಕ್ಕುಸೂ/2024, ದಿನಾಂಕ: 18.02.2024.

***

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಲಮಾಣಿ ಪೂರು ಹೆಚ್ ವಿಶ್ವನಾಥ್ ರವರ ಪ್ರಸ್ತಾವನೆಯ ಕುರಿತ ಉಲ್ಲೇಖಿತ ಪತ್ರಕ್ಕೆ ಸಂಬಂಧಿಸಿದಂತೆ, ವರದಿಯ 30 ಪ್ರತಿಗಳನ್ನು ಅನುಬಂಧದೊಂದಿಗೆ ಈ ಪತ್ರದ ಜೊತೆ ಲಗತ್ತಿಸಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ನಾಗರಾಜು. ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಕಾನೂನು ಮತ್ತು ಸುವ್ಯವಸ್ಥೆ)
080-2203 3254, e-mail:uslo-home@karnataka.gov.in

ಪ್ರತಿ:-
1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಹಿರಿಯ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಉಪ ಕಾರ್ಯದರ್ಶಿ(ಕಾನೂನು ಮತ್ತು ಸುವ್ಯವಸ್ಥೆ) ರವರ ಆಪ್ತ ಸಹಾಯಕರು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು.

ಅನುಬಂಧ - 02

ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ವೇದಿಕೆಯಲ್ಲಿ ಶ್ರೀ ಬಿ.ಎಸ್. ಶಿವಣ್ಣ ಎಂಬ ವ್ಯಕ್ತಿಯು ಕಾನೂನು ಉಲ್ಲಂಘನೆ ಮಾಡಿ ಭದ್ರತಾ ಲೋಪವಸಗಿ ಕಾಣಿಸಿಕೊಂಡಿರುವ ಕುರಿತಾದ ಪ್ರಶ್ನೆಗಳಿಗೆ ತಪ್ಪು ಉತ್ತರ ನೀಡುವ ಮೂಲಕ ಹಕ್ಕುಚ್ಯುತಿ ಉಂಟು ಮಾಡಿರುವುದಾಗಿ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್ ರವರ ಪ್ರಸ್ತಾವನೆಗೆ ಉತ್ತರ:

ಶ್ರೀ ಶಿವಣ್ಣ ರವರು ಕ್ರಿಮಿನಲ್ ಆರೋಪಗಳನ್ನು ಎದುರಿಸುತ್ತಿರುವ ವ್ಯಕ್ತಿ ಎಂಬ ಬಗ್ಗೆ ಶ್ರೀ ಎಲ್. ಜಯಲಿಂಗೇಗೌಡ ರವರು ಮಾನ್ಯ ಪೊಲೀಸ್ ಆಯುಕ್ತರಿಗೆ ದಾಖಲೆಗಳನ್ನು ಒದಗಿಸಿದ್ದಾಗ್ಯೂ ಶ್ರೀ ಶಿವಣ್ಣ ರವರ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲವೆಂದು ಸದನದಲ್ಲಿ ತಪ್ಪು ಉತ್ತರ ನೀಡಲಾಗಿದೆ. ಇಲ್ಲಿ ಗಮನಿಸಬೇಕಾದ ಗಂಭೀರವಾದ ಅಂಶವೆಂದರೆ ರೆಡ್ ಪಾಸಿರುವುದು ಗಣ್ಯಾತಿಗಣ್ಯ ವ್ಯಕ್ತಿಗಳು ಹಾಗೂ ಜನಪ್ರತಿನಿಧಿಗಳಿಗೆ ಹೀಗಿರುವಾಗ ಅಧಿಕಾರಿಗಳು ಶಿವಣ್ಣನನ್ನು ಸದರಿ ಪ್ರಕರಣದಿಂದ ರಕ್ಷಣೆ ಮಾಡುವ ಏಕೈಕ ಉದ್ದೇಶದಿಂದೀ ರೀತಿ ತಪ್ಪು ಹೆಂಬರಹ ಹಾಗೂ ತಪ್ಪು ಉತ್ತರ ಒದಗಿಸುವ ಮೂಲಕ ಹಕ್ಕುಚ್ಯುತಿ ಉಂಟಾಗಿರುವುದಾಗಿ ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್ ರವರು ಪ್ರಸ್ತಾಪಿಸಿರುತ್ತಾರೆ.

ತತ್ಸಂಬಂಧ, ಉಪ ಪೊಲೀಸ್ ಆಯುಕ್ತರು, ಕೇಂದ್ರ ವಿಭಾಗ, ಬೆಂಗಳೂರು ನಗರ ಇವರು ದಿನಾಂಕ:18-01-2024ರಲ್ಲಿ ವಿವರವಾದ ವರದಿಯನ್ನು ಸಲ್ಲಿಸಿದ್ದು, <u>(ಅನುಬಂಧ-ಎ)</u> ವರದಿಯಲ್ಲಿನ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ:

"ಭದ್ರತಾ ವೈಫಲ್ಯದ ಆರೋಪದ ಸಂಬಂಧ ಸರಹದ್ದಿನ ಅಧಿಕಾರಿಯವರಾದ ಸಹಾಯಕ ಪೊಲೀಸ್ ಆಯುಕ್ತರು, ಹಲಸೂರುಗೇಟ್ ಉಪ ವಿಭಾಗರವರು ವಿಚಾರಣೆ ಮಾಡಿ ವರದಿಯನ್ನು ಮೇಲಾಧಿಕಾರಿಗಳ ಕಛೇರಿಗೆ ಸಲ್ಲಿಸಿರುತ್ತಾರೆ. ಇದರಲ್ಲಿ ಶ್ರೀ ಸಿದ್ಧರಾಮಯ್ಯರವರು ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸುವ ಸಮಾರಂಭಕ್ಕೆ ಶ್ರೀ.ಬಿ.ಎಸ್. ಶಿವಣ್ಣ ರವರಿಗೆ ಒದಗಿಸಲಾಗಿರುವ ರೆಡ್ ಪಾಸ್ ಮೂಲಕ ಪ್ರವೇಶ ಪಡೆದಿರುವುದರಿಂದ ಯಾವುದೇ ಭದ್ರತಾ ಲೋಪವಾಗಿರುವುದಿಲ್ಲ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ವೇದಿಕೆಯಲ್ಲಿ ಕಾನೂನು ಉಲ್ಲಂಘನೆಯಾಗಿರುವುದು ಕಂಡುಬಂದಿರುವುದಿಲ್ಲವೆಂದು ವರದಿ ನೀಡಿರುತ್ತಾರೆ

ಸದನದ ಉತ್ತರದಲ್ಲಿ ಸೂಚಿಸಿರುವಂತೆ ಉಪ ಪೊಲೀಸ್ ಆಯುಕ್ತರು ಎಸಿಐಪಿ ಭದ್ರತೆರವರು ಸಹ ತಮ್ಮ ವಿಚಾರಣೆ ವರದಿಯನ್ನು ಸಲ್ಲಿಸಿದ್ದು, ಸದರಿಯವರು ವರದಿಯನ್ನು ಸಲ್ಲಿಸಿರುವ ಸಂದರ್ಭದಲ್ಲಿ ಸಹಾಯಕ ಪೊಲೀಸ್ ಆಯುಕ್ತರು, ಹಲಸೂರುಗೇಟ್ ಉಪ ವಿಭಾಗ ಹಾಗೂ ಸಿ.ಸಿ.ಆರ್.ಬಿ. ವಿಭಾಗದಿಂದ ಪಡೆದಿರುವ ವರದಿ ಹಾಗೂ ಇನ್ನಿತರೆ ದಾಖಲಾತಿಗಳನ್ನು ಪರಿಗಣಿಸಿರುವುದು ಕಂಡುಬಂದಿರುತ್ತದೆ. ಸಹಾಯಕ ಪೊಲೀಸ್ ಆಯುಕ್ತರು, ಹಲಸೂರುಗೇಟ್ ಉಪ ವಿಭಾಗರವರು ಹಾಗೂ ಉಪ ಪೊಲೀಸ್ ಆಯುಕ್ತರು, ವಿ.ವಿ.ಐ.ಪಿ.ರವರು ಸಲ್ಲಿಸಿರುವ ವರದಿಗಳಲ್ಲಿ ಭದ್ರತಾ ಲೋಪವಾಗಿರುವ ಬಗ್ಗೆ, ಕಂಡುಬಂದಿರುವುದಿಲ್ಲವೆಂದು ಸೂಚಿಸುತ್ತದೆ.

ಶ್ರೀ.ಬಿ.ಎಸ್. ಶಿವಣ್ಣರವರು ಅಪರಾಧಿಕ ಚಟುವಟಿಕೆ ಉಳ್ಳವರಾಗಿರುತ್ತಾರೆಂಬುದಕ್ಕೆ ಪೊಲೀಸ್ ಐಟಿ ತಂತ್ರಾಂಶದಿಂದ ಪಡೆದಿರುವ ವರದಿ ಪುಷ್ಟಿ ನೀಡುವುದಿಲ್ಲ".

ಸದರಿ ವರದಿಯನ್ನು ಅನುಮೋದಿಸಿ, ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಹಾಗೂ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು, ಬೆಂಗಳೂರು ಇವರು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮಾನ್ಯ ವಿಧಾನ ಮಂಡಲವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅತ್ಯುಚ್ಚ ಮಟ್ಟದ ಗೌರವ ಹೊಂದಿರುವುದನ್ನು ಹಾಗೂ ಉಭಯ ಸದನಗಳ ಮಾನ್ಯ ಸದಸ್ಯರುಗಳ ಘನತೆಗೆ ಹಾಗೂ ಹಕ್ಕಿಗೆ ಯಾವುದೇ ಧಕ್ಕೆ ಉಂಟಾಗಬಾರದೆಂಬ ಸರ್ಕಾರದ ನಿಲುವಿಗೆ ಪೊಲೀಸ್ ಇಲಾಖೆಯು ಬದ್ಧವಾಗಿದೆ. ಹಿಂಗಾಗಿ, ಈ ಪ್ರಕರಣದಲ್ಲಿ ಮಾನ್ಯ ಸದಸ್ಯರ ಹಕ್ಕಿಗೆ ಚ್ಯುತಿ ಉಂಟಾಗುವಂತೆ ತಪ್ಪು ಉತ್ತರವನ್ನು ನೀಡಲಾಗಿಲ್ಲವೆಂದು ಮೇಲಿನ ವರದಿಯ ಆಧಾರದಲ್ಲಿ ಸ್ಪಷ್ಟ ಪಡಿಸುತ್ತಾ ಹಕ್ಕುಚ್ಯುತಿ ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿದೆ.

ಹೆಚ್‌ಡಿ 94 ಪಿಸಿಇ 2024

(ಸುಮಿತಾ ಪ್ರಕಾಶ್)
ಸರ್ಕಾರದ ಉಪ ಕಾರ್ಯದರ್ಶಿ
ಆಡಳಿತ ಒಳಾಡಳಿತ ಇಲಾಖೆ (ಕಾನೂನು ಮತ್ತು ಸುವ್ಯವಸ್ಥೆ)
080-2203 3707, e-mail:aslo-home@karnataka.gov.in

110

ಅನುಬಂಧ - ಎ

ಸಂ:150/ಅಪರಾಧ-1/ಡಿಸಿಪಿ(ಕೇ)/2024

ಉಪ ಪೊಲೀಸ್ ಆಯುಕ್ತರ ಕಛೇರಿ
ಕೇಂದ್ರ ವಿಭಾಗ, ಬೆಂಗಳೂರು ನಗರ
ದಿನಾಂಕ:18.10.2024

ರವರಿಗೆ,

ಪೊಲೀಸ್ ಆಯುಕ್ತರು,
ಬೆಂಗಳೂರು ನಗರ

ಮಾನ್ಯರೇ,

ವಿಷಯ: ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ವೇದಿಕೆಯಲ್ಲಿ ಭದ್ರತಾ ಲೋಪವಸಗಿರುವ ಕುರಿತು ಶ್ರೀ.ಅಡಗೂರು ಹೆಚ್ ವಿಶ್ವನಾಥ್, ಕರ್ನಾಟಕ ವಿಧಾನ ಪರಿಷತ್ ಸದಸ್ಯರವರು ಸಲ್ಲಿಸಿರುವ ದೂರು ಅರ್ಜಿ ಕುರಿತು ವಿಚಾರಣಾ ವರದಿ ಸಲ್ಲಿಸುತ್ತಿರುವ ಬಗ್ಗೆ.

ಉಲ್ಲೇಖ: 1. ಕರ್ನಾಟಕ ಸರ್ಕಾರ ಸಚಿವಾಲಯ, ವಿಧಾನ ಸೌಧ ಬೆಂಗಳೂರುರವರ ಪತ್ರ ಸಂ:ಹೆಚ್ ಡಿ.02 ಪಿ ಸಿಇ 2023 ದಿ:25.04.2024.

2. ಡಿಜಿ & ಐಜಿಪಿ ರವರ ಕಛೇರಿ ಪತ್ರ ಸಂ:ಕಾಮತ್ರುಸು/ಟಿಎಸ್‌ಸಿ-3/12/2022-23 ದಿ:05.08.2024

3. ಪೊಲೀಸ್ ಆಯುಕ್ತರ ಕಛೇರಿ ಪತ್ರ ಸಂ:112/ಅಪರಾಧ-3/ಸಿಓಪಿ/2024 ದಿ:17.08.2024

4. ಸಹಾಯಕ ಪೊಲೀಸ್ ಆಯುಕ್ತರು, ಹಲಸೂರುಗೇಟ್ ಉಪ ವಿಭಾಗರವರ ವರದಿ ಸಂ: ಸಾಮಾನ್ಯ/308/ ಎಸಿಪಿ-3/2024 ದಿನಾಂಕ:28.09.2024

5. ಸಿ.ಸಿ.ಆರ್.ಬಿ, ಪೊಲೀಸ್ ಆಯುಕ್ತರವರ ಕಛೇರಿ, ಬೆಂಗಳೂರು ರವರ ಪತ್ರ 148/ಸಿಸಿಆರ್‌ಬಿ/ರಿವ್ಯೂ/2023 ದಿ:14.7.2023

6. ಉಪ ಪೊಲೀಸ್ ಆಯುಕ್ತರು ವಿವಿಐಪಿ ಭದ್ರತೆ ರವರ ವರದಿ ಸಂ:38/ ವಿವಿಐಪಿ/ ಭದ್ರತೆ/2023 ದಿ:19.08.2023

.. ..

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ದಿನಾಂಕ:-20-05-2023ರಂದು ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ವೇದಿಕೆಯಲ್ಲಿ ಕಾನೂನು ಉಲ್ಲಂಘನೆ ಮಾಡಿ, ಭದ್ರತಾ ಲೋಪವಸಗಿರುವ ಕುರಿತು ಅರ್ಜಿದಾರರಾದ ಶ್ರೀ ಅಡಗೂರು ಹೆಚ್ ವಿಶ್ವನಾಥ್, ಕರ್ನಾಟಕ ವಿಧಾನ ಪರಿಷತ್ ಸದಸ್ಯರು ರವರು ದಿ:24.06.2024ರಂದು ಸನ್ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು, ವಿಧಾನಸೌಧ, ಬೆಂಗಳೂರು ರವರಿಗೆ ದೂರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ದೂರು ಅರ್ಜಿಯನ್ನು ಉಲ್ಲೇಖ-2 ಹಾಗೂ 3ರ ಮೂಲಕ ಸಮುಚಿತ ಮಾರ್ಗದಲ್ಲಿ ವಿಚಾರಣಾ ವರದಿಯನ್ನು ಸಲ್ಲಿಸುವ ಸಲುವಾಗಿ ಈ ಕಛೇರಿಯಲ್ಲಿ ಸ್ವೀಕೃತವಾಗಿರುತ್ತದೆ.

ಸದರಿ ದೂರು ಅರ್ಜಿಯಲ್ಲಿ ಕ್ರಿಮಿನಲ್ ಹಿನ್ನೆಲೆಯ ಆರೋಪಗಳನ್ನು ಎದುರಿಸುತ್ತಿರುವ ಕಳಂಕಿತ ವ್ಯಕ್ತಿ ಶ್ರೀ. ಬಿ.ಎಸ್ ಶಿವಣ್ಣ ಅಲಿಯಾಸ್ ಮಳವಳ್ಳಿ ಶಿವಣ್ಣ ರವರು ಭದ್ರತಾಧಿಕಾರಿಗಳನ್ನು ದಿಕ್ಕರಿಸಿ ಕಾನೂನು ಬಾಹಿರವಾಗಿ ಮತ್ತು ಶಿಷ್ಟಾಚಾರ ಉಲ್ಲಂಘನೆ ಮಾಡಿ ವೇದಿಕೆಯ ಮೇಲೆ ಕಾಣಿಸಿಕೊಂಡಿರುತ್ತಾರೆ ಇವರ ವಿರುದ್ಧ ಕಾನೂನು ಕ್ರಮ

ಒರುಗಿಸಬೇಕಾಗಿರುತ್ತದೆ ಹಾಗೂ ತಾವು ನಿಯಮ 72 ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಗೃಹ ಮಂತ್ರಿಗಳು ಉತ್ತರಿಸುತ್ತ ಮೇಲ್ಕಂಡ ವಿಷಯದ ಬಗ್ಗೆ, ಉಪ ಪೊಲೀಸ್ ಆಯುಕ್ತರು, ವಿ.ವಿ.ಐ.ಪಿ ಭದ್ರತೆ, ಬೆಂಗಳೂರು ನಗರರವರು ವಿಚಾರಣೆ ಕೈಗೊಳ್ಳಲಿರುತ್ತಾರೆಂದು ಉತ್ತರಿಸಲಾಗಿದ್ದು, ಆದರೆ ಮೇಲ್ಕಂಡ ದೂರಿನ ಮೇರೆಗೆ ತಮಗೆ ವಿಚಾರಣೆ ನಡೆಸಿರುವ ಸಂಬಂಧ ಸಹಾಯಕ ಪೊಲೀಸ್ ಆಯುಕ್ತರು, ಹಲಸೂರುಗೇಟ್ ಉಪ ವಿಭಾಗರವರು ಹಿಂಬರಹ ನೀಡಿದ್ದು, ಉತ್ತರಕ್ಕೆ, ಸಂಬಂಧಿಸದ ಬೇರೆ ಕ್ರಮ ವಹಿಸಿರುವುದರಿಂದ ಹಕ್ಕುಚ್ಯುತಿಯಾಗಿರುತ್ತದೆ. ಅತಿಗಣ್ಯ ವ್ಯಕ್ತಿಗಳಿಗೆ ನೀಡಲಾಗುವ ರೆಡ್ ಪಾಸ್‌ಗಳನ್ನು ಶ್ರೀ. ಶಿವಣ್ಣರವರು ಹೊಂದಿದ್ದರಿಂದ ಸದರಿಯವರಿಗೆ ನೀಡಲಾಗಿದೆ ಎಂದು ಅವರನ್ನು ರಕ್ಷಣೆ ಮಾಡುವ ಸಲುವಾಗಿ ಪೊಲೀಸರು ತಪ್ಪು ಹಿಂಬರಹ ಹಾಗೂ ಉತ್ತರ ಒದಗಿಸಿರುತ್ತಾರೆ ಎಂದು ಆರೋಪಿಸಿರುತ್ತಾರೆ.

ಸದರಿ ಅರ್ಜಿಯ ಸಂಬಂಧ ಕೂಲಂಕುಶ ವಿಚಾರಣೆ ಕೈಗೊಂಡು ವರದಿಯನ್ನು ಸಲ್ಲಿಸುವಂತೆ ಘಟನೆ ನಡೆದ ಸ್ಥಳದ ಸರಹದ್ದಿನ ಅಧಿಕಾರಿಯವರಾದ ಸಹಾಯಕ ಪೊಲೀಸ್ ಆಯುಕ್ತರು, ಹಲಸೂರುಗೇಟ್ ಉಪ ವಿಭಾಗರವರಿಗೆ ಸೂಚಿಸಲಾಗಿರುತ್ತದೆ.

ಸದರಿ ದೂರು ಅರ್ಜಿಯನ್ನು ಸಹಾಯಕ ಪೊಲೀಸ್ ಆಯುಕ್ತರು, ಹಲಸೂರುಗೇಟ್ ಉಪ ವಿಭಾಗರವರು ಪರಿಶೀಲಿಸಿ ವರದಿಯನ್ನು ಸಲ್ಲಿಸಿದ್ದು, ಈಗಾಗಲೇ ಈ ಹಿಂದೆ ಸದರಿ ವಿಷಯದ ಸಂಬಂಧ ವಿಚಾರಣೆ ನಡೆಸಿದ್ದು, ವಿಚಾರಣೆಯ ಸಂದರ್ಭದಲ್ಲಿ ಶ್ರೀ.ಬಿ.ಎಸ್.ಶಿವಣ್ಣ, ಬಿನ್ ಸುಬ್ಬೇಗೌಡ, ವಾಸ ನಂ. 480, 5ನೇ ಮೈನ್, ಡಾಲರ್ಸ್ ಕಾಲೋನಿ, ಆರ್.ಎಂ.ವಿ 2ನೇ ಹಂತ, ಬೆಂಗಳೂರು ನಗರ-560094ರವರ ಹೇಳಿಕೆಯನ್ನು ಪಡೆದಿದ್ದು, ಸದರಿರವರ ಹೇಳಿಕೆಯಲ್ಲಿ "ತಾನು ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಯಾಗಿ ಕೆಲಸ ಮಾಡಿಕೊಂಡಿರುತ್ತೇನೆ. ನನ್ನ ವಿರುದ್ಧ ಶ್ರೀ.ಅಡಗೂರು ಹೆಚ್. ವಿಶ್ವನಾಥ್ ರವರು ಕರ್ನಾಟಕ ರಾಜ್ಯದ ಸನ್ಮಾನ್ಯ ರಾಜ್ಯಪಾಲರಿಗೆ ದೂರು ಅರ್ಜಿ ಸಲ್ಲಿಸಿರುವುದನ್ನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ದೂರು ಅರ್ಜಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ಸಮಾರಂಭದ ವೇದಿಕೆಯಲ್ಲಿ ನಾನು ಕಾನೂನು ಬಾಹಿರವಾಗಿ ಮತ್ತು ಪೊಲೀಸ್ ಅಧಿಕಾರಿಗಳ ಭದ್ರತೆ ಪಡೆಯನ್ನು ಮರೆಮಾಚಿ ಹಾಗೂ ಕಾನೂನು ಶಿಷ್ಟಾಚಾರ ಉಲ್ಲಂಘನೆ ಮಾಡಿರುತ್ತೇನೆ ಎಂಬ ಬಗ್ಗೆ ದೂರು ಅರ್ಜಿಯಾಗಿದ್ದು, ನಾನು ಪ್ರಾದೇಶಿಕ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಯಾಗಿ ಕೆಲಸ ಮಾಡಿಕೊಂಡಿದ್ದು, ಹಾಗೂ ಮಾನ್ಯ ಶ್ರೀ.ಸಿದ್ದರಾಮಯ್ಯರವರೊಂದಿಗೆ ಉತ್ತಮ ಒಡನಾಟವನ್ನು ಹೊಂದಿರುತ್ತೇನೆ. ಅದರಂತೆ ದಿನಾಂಕ:20.05.2023ರಂದು ಮಾನ್ಯ ಶ್ರೀ.ಸಿದ್ದರಾಮಯ್ಯರವರು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸುವ ಸಮಾರಂಭವನ್ನು ಆಯೋಜಿಸಿದ್ದು, ಈ ಸಮಾರಂಭಕ್ಕೆ ಹಾಜರಿರುವಂತೆ ಮಾನ್ಯ ಶ್ರೀ. ಸಿದ್ದರಾಮಯ್ಯರವರು ಸೂಚಿಸಿ ನನಗೆ ಈ ಸಭೆಗೆ ಬೇಕಾದ ಐ.ಡಿ. ಕಾರ್ಡ್ ಮತ್ತು ಪಾಸ್‌ಗಳನ್ನು ಒದಗಿಸಿರುತ್ತಾರೆ. ಪ್ರಮಾಣ ವಚನ ಸ್ವೀಕರಿಸುವ ಸಮಾರಂಭಕ್ಕೆ ಮಾನ್ಯ ಶ್ರೀ.ಸಿದ್ದರಾಮಯ್ಯರವರು ಅವರ ಕಾರಿನಲ್ಲಿಯೇ ನನ್ನನ್ನು ಜೊತೆಯಲ್ಲಿಯೇ ಸಮಾರಂಭದ ವೇದಿಕೆಗೆ ಕರೆದುಕೊಂಡು ಹೋಗಿರುತ್ತಾರೆ. ದೂರಿನಲ್ಲಿ ತಿಳಿಸಿರುವಂತೆ ನಾನು ಕಾನೂನು ಬಾಹಿರವಾಗಿ ಮತ್ತು ಪೊಲೀಸ್ ಅಧಿಕಾರಿಗಳ ಭದ್ರತೆಗಳ ಪಡೆಯನ್ನು ಮರೆಮಾಚಿ ಹಾಗೂ ಕಾನೂನು ಶಿಷ್ಟಾಚಾರವನ್ನು ಉಲ್ಲಂಘನೆ ಮಾಡಿರುತ್ತೇನೆ ಎಂಬುದು ಸತ್ಯಕ್ಕೆ ದೂರವಾದ ಸಂಗತಿಯಾಗಿರುತ್ತದೆ. ದಿನಾಂಕ:20.05.2023 ರಂದು ಮಾನ್ಯ ಶ್ರೀ. ಸಿದ್ದರಾಮಯ್ಯರವರು ತಮ್ಮ ಜೊತೆಯಲ್ಲಿಯೇ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ ವಿನಃ ನಾನು ಯಾವುದೇ ಕಾನೂನು ಬಾಹಿರವಾಗಿ ಅಥವಾ ಭದ್ರತೆ ಪಡೆಯನ್ನು ಮರೆಮಾಚಿ ಹಾಗೂ ಕಾನೂನು ಶಿಷ್ಟಾಚಾರವನ್ನು ಉಲ್ಲಂಘನೆ ಮಾಡಿರುವುದಿಲ್ಲ. ಆದುದರಿಂದ ಈ ದೂರು ಅರ್ಜಿಯನ್ನು ಮುಕ್ತಾಯ ಮಾಡಬೇಕೆಂದು ತಿಳಿಸಿರುತ್ತಾರೆ".

ಸದರಿಯವರ ಹೇಳಿಕೆಯ ಮೇರೆಗೆ ತಿಳಿದುಬಂದ ವಿಷಯವೇನೆಂದರೆ, ಶ್ರೀ.ಬಿ.ಎಸ್. ಶಿವಣ್ಣರವರು ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಯಾಗಿ ಕೆಲಸ ಮಾಡಿಕೊಂಡಿದ್ದು, ದಿನಾಂಕ:-20-05-2023ರಂದು ಮಾನ್ಯ ಶ್ರೀ.ಸಿದ್ದರಾಮಯ್ಯರವರು ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸುವ ಸಮಾರಂಭಕ್ಕೆ ಖುದ್ದು ಮಾನ್ಯ ಶ್ರೀ.ಸಿದ್ದರಾಮಯ್ಯರವರೇ ಅವರ ಕಾರಿನಲ್ಲಿ

ಕರೆದುಕೊಂಡು ಹೋಗಿರುವುದು ಹಾಗೂ ಸಮಾರಂಭಕ್ಕೆ ಹಾಜರಾಗಲು ಬೇಕಾದ ಪಾಸ್‌ಗಳನ್ನು ಒದಗಿಸಿರುವುದು ಇರುತ್ತದೆ. ಸದರಿಯವರು ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಶ್ಯಕವಿರುವ ಪಾಸ್‌ಗಳನ್ನು ಹೊಂದಿದ್ದರಿಂದ ಪೊಲೀಸರು ನಿಯಮಾನುಸಾರ ಪರಿಶೀಲನೆ ಮಾಡಿ ಪ್ರವೇಶಕ್ಕೆ ಅವಕಾಶ ಕಲ್ಪಿಸಿರುತ್ತಾರೆ. ಇದರಲ್ಲಿ ಪೊಲೀಸರನ್ನು ವಂಚಿಸಿ ಒಳ ಹೋಗಿರವುದು ಕಂಡು ಬಂದಿರುವುದಿಲ್ಲ.

ಶ್ರೀ.ಬಿ.ಎಸ್.ಶಿವಣ್ಣರವರ ವಿರುದ್ಧ ಯಾವುದಾದರೂ ಅಪರಾಧಿಕ ಕೃತ್ಯ ದಾಖಲಾಗಿರುವ ಸಂಬಂಧ ಪೊಲೀಸ್ ಐ.ಟಿ. ತಂತ್ರಾಂಶದಲ್ಲಿ ಪರಿಶೀಲಿಸಿ ವರದಿ ಪಡೆಯಲಾಗಿದ್ದು, ವರದಿ ಶೂನ್ಯವಾಗಿರುತ್ತದೆ (ಪ್ರತಿ ಲಗತ್ತಿಸಿದೆ) ಸದರಿಯವರ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣಗಳು ದಾಖಲಾಗಿರುವುದಿಲ್ಲವೆಂಬ ವರದಿ ಇರುತ್ತದೆ.

ದೂರು ಅರ್ಜಿಯನ್ನು ಕೂಲಂಕುಷವಾಗಿ ವಿಚಾರಣೆ ನಡೆಸಿ, ಶ್ರೀ. ಬಿ.ಎಸ್ ಶೀವಣ್ಣರವರ ಹೇಳಿಕೆ ಪಡೆದುಕೊಂಡು, ನಂತರ ಸದರಿಯವರ ವಿರುದ್ಧ ಪ್ರಕರಣಗಳು ದಾಖಲಾಗಿರುವ ಬಗ್ಗೆ ಪರಿಶೀಲನೆ ನಡೆಸಿ, ಈ ವಿಷಯಕ್ಕೆ ಸಂಬಂಧಿಸಿದಂತೆ ಅರ್ಜಿದಾರರಿಗೆ ಹಿಂಬರಹವನ್ನು ಅಂಚೆ ಮೂಲಕ ರವಾನಿಸಲಾಗಿರುತ್ತದೆಂದು ಉಲ್ಲೇಖ-4 ರಂತೆ ಎಸಿಪಿ ಹಲಸೂರುಗೇಟ್ ಉಪ ವಿಭಾಗ ರವರು ವರದಿಯನ್ನು ಸಲ್ಲಿಸಿರುತ್ತಾರೆ.

ಇದರಿಂದ ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣದ ಕಾರ್ಯಕ್ರಮದ ಭದ್ರತೆಯಲ್ಲಿ ಯಾವುದೇ ವ್ಯತ್ಯಯ ಕಂಡುಬಂದಿರುವುದಿಲ್ಲ.

ಶ್ರೀ.ಅಡಗೂರು ಹೆಚ್ ವಿಶ್ವನಾಥ್‌ರವರು ತಮ್ಮ ಅರ್ಜಿಯ ಸಂಬಂಧ ಯಾವ ರೀತಿಯ ಕ್ರಮಕೈಗೊಳ್ಳಲಾಗಿದೆ ಎಂಬ ಮಾಹಿತಿ ಲಭ್ಯವಾಗದೆ ಇದರಿಂದ ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ನಿಯಮ 72 ರಲ್ಲಿ ಗಮನ ಸೆಳೆಯುವ ಸೂಚನೆ ಮಂಡಿಸಿದ್ದು, ಸದರಿ ಗಮನ ಸೆಳೆಯುವ ಸೂಚನೆಗೆ ಮಾನ್ಯ ಗೃಹ ಮಂತ್ರಿಗಳು ಉತ್ತರಿಸುತ್ತಾ ಈ ದೂರನ್ನು ಉಪ ಪೊಲೀಸ್ ಆಯುಕ್ತರು ವಿವಿಐಪಿ ಭದ್ರತೆ ಬೆಂಗಳೂರು ನಗರ ರವರಿಗೆ ವಹಿಸಿ ಕೂಲಂಕುಶವಾಗಿ ವಿಚಾರಣೆ ಕೈಗೊಂಡು ಮುಂದಿನ ಕ್ರಮದ ಬಗ್ಗೆ ವರದಿ ಸಲ್ಲಿಸಲು ಸೂಚಿಸಲಾಗಿದೆ ಎಂದು ದಿ:06.07.2023ರಂದು ಉತ್ತರ ನೀಡಿರುತ್ತಾರೆ. ಆದರೆ ನನಗೆ ದಿ:10.07.2023ರಂದು ಸಹಾಯಕ ಪೊಲೀಸ್ ಕಮಿಷನರ್ ಹಲಸೂರುಗೇಟ್ ಉಪ ವಿಭಾಗ ಬೆಂಗಳೂರು ನಗರ ಇವರಿಂದ ಒಂದು ಹಿಂಬರಹ ಸ್ವೀಕೃತವಾಗಿದ್ದು, ಅದರಲ್ಲಿ ಈ ದೂರು ಅರ್ಜಿಗೆ ಸಂಬಂಧಿಸಿದಂತೆ ಶ್ರೀ.ಶಿವಣ್ಣರವರನ್ನು ವಿಚಾರಣೆ ಮಾಡಲಾಗಿರುತ್ತದೆ. ಸದರಿ ರವರು ನೀವು ಮಾಡಿರುವ ಆರೋಪಗಳನ್ನು ಅಲ್ಲಗಳೆದಿರುತ್ತಾರೆ ಹಾಗೂ ವಿಚಾರಣೆಯ ವರದಿಯನ್ನು ಮೇಲಾಧಿಕಾರಿಗಳ ಕಛೇರಿಗೆ ಸಲ್ಲಿಸಲಾಗಿರುತ್ತದೆ ಎಂದು ತಿಳಿಸಲಾಗಿರುತ್ತದೆ.

ಇಲ್ಲಿ ಗಮನಿಸಬಾಕಾದ ಅಂಶವೇನೆಂದರೇ, ಸದನದಲ್ಲಿ ಈ ದೂರನ್ನು ಉಪ ಪೊಲೀಸ್ ಆಯುಕ್ತರು, ವಿವಿಐಪಿ ಭದ್ರತೆ, ಬೆಂಗಳೂರು ನಗರ ರವರಿಗೆ ವಹಿಸಿ ಕೂಲಂಕುಶವಾಗಿ ವಿಚಾರಣೆ ಕೈಗೊಂಡು ಮುಂದಿನ ಕ್ರಮದ ಬಗ್ಗೆ ವರದಿ ಸಲ್ಲಿಸಲು ಸೂಚಿಸಲಾಗಿದೆ ಎಂದು ಉತ್ತರ ನೀಡಿದ್ದು, ಅದರಂತೆ, ಸಹಾಯಕ ಪೊಲೀಸ್‌ಆಯುಕ್ತರು, ಹಲಸೂರುಗೇಟ್ ಉಪ ವಿಭಾಗ, ಬೆಂಗಳೂರು ನಗರ ಇವರು ಕೂಲಂಕುಶವಾಗಿ ವಿಚಾರಣೆ ನಡೆಸದೇ ಆರೋಪಿತ ಬಿ. ಎಸ್. ಶಿವಣ್ಣ ಅವರು ಆರೋಪ ಅಲ್ಲಗಳೆದಿರುತ್ತಾರೆಂದು ಎಸಿಪಿ ರವರು ಹಿಂಬರಹ ಕೊಟ್ಟಿದ್ದು, ಸದನದಲ್ಲಿ ನನಗೆ ಉತ್ತರಿಸಿದ್ದಕ್ಕಿಂತ ಬೇರೆಯಾಗಿ ಕ್ರಮವಹಿಸಿದ್ದು, ಇಲ್ಲಿ ಹುಳುಕು ಇರುತ್ತದೆ.

ಈ ಹಿನ್ನೆಲೆಯಲ್ಲಿ ನಾನು ಪುನಃ ಬೆಳಗಾವಿ ಡಿಸೆಂಬರ್ 2023 ರಲ್ಲಿ ನಡೆದ ಅಧಿವೇಶನದಲ್ಲಿ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ:1084 ಅನ್ನು ಮಂಡಿಸಿರುತ್ತೇನೆ, ಸದರಿ ಪ್ರಶ್ನೆಗೆ ಮಾನ್ಯ ಗೃಹ ಸಚಿವರು ಉತ್ತರ ನೀಡಿದ್ದು, ಅದರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ಸಮಾರಂಭಕ್ಕೆ ಡಿಪಿಆರ್ ನಿಂದ 250 ವಿವಿಐಪಿ ರೆಡ್ ಪಾಸ್‌ಗಳನ್ನು ವಿತರಿಸಲಾಗಿದ್ದು, ಸದರಿ ರೆಡ್ ಪಾಸ್ ಮೂಲಕ ಶ್ರೀ ಶಿವಣ್ಣ ರವರು ಪ್ರಮಾಣ ವಚನ ಸಮಾರಂಭಕ್ಕೆ, ಕಂಠೀರವ ಕ್ರೀಡಾಂಗಣಕ್ಕೆ, ಪ್ರವೇಶ ಪಡೆದಿರುತ್ತಾರೆ. ಆದ್ದರಿಂದ ಶ್ರೀ.ಶಿವಣ್ಣರವರು ಕಾನೂನು ಉಲ್ಲಂಘನೆ ಮಾಡಿ ಮಾನ್ಯ

ಮುಖ್ಯಮಂತ್ರಿಗಳ ಪದಗ್ರಹಣ ವೇದಿಕೆಯಲ್ಲಿ ಕಾಣಿಸಿಕೊಂಡು ಭದ್ರತಾಲೋಪವೆಸಗಿರುವುದು ಕಂಡುಬಂದಿರುವುದಿಲ್ಲ. ಇಲ್ಲಿ ಯಾವುದೇ ಪೊಲೀಸ್ ಮೈಪಲ್ಯ ಮತ್ತು ಲೋಪಗಳು ಕಂಡುಬಂದಿರುವುದಿಲ್ಲ. ಅಲ್ಲದೇ ಶ್ರೀ ಶಿವಣ್ಣ ರವರ ವಿರುದ್ಧ ವಿಭಾಗೀಯ ಪೊಲೀಸ್ ಠಾಣೆಗಳಲ್ಲಿ ಯಾವುದೇ ಕ್ರಿಮಿನಲ್ ಪ್ರಕರಣಗಳು ದಾಖಲಾಗಿರುವುದು ಕಂಡುಬಂದಿರುವುದಿಲ್ಲವೆಂದು ಉತ್ತರಿಸಿರುತ್ತಾರೆ. ಇಲ್ಲಿ ಗಮನಿಸಬೇಕಾದ ಗಂಭೀರವಾದ ಅಂಶವೇನೆಂದರೆ ಶ್ರೀ ಶಿವಣ್ಣ ರವರು ಕ್ರಿಮಿನಲ್ ಆರೋಪಗಳನ್ನು ಎದುರಿಸುತ್ತಿರುವ ವ್ಯಕ್ತಿ ಎಂಬ ಬಗ್ಗೆ ಶ್ರೀ ಜಯಲಿಂಗೇಗೌಡ ರವರು ಮಾನ್ಯ ಪೊಲೀಸ್ ಆಯುಕ್ತರಿಗೆ ದಾಖಲೆಗಳನ್ನು ಒದಗಿಸಿದ್ದಾಗ್ಯೂ ಶ್ರೀ ಶಿವಣ್ಣ ರವರ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲವೆಂದು ಸದನದಲ್ಲಿ ತಪ್ಪು ಉತ್ತರ ನೀಡಿರುತ್ತಾರೆ. ಹಾಗೂ ರೆಡ್ ಪಾಸ್ ಇರುವುದು ಗಣ್ಯಾತಿಗಣ್ಯ ವ್ಯಕ್ತಿಗಳು ಹಾಗೂ ಜನಪ್ರತಿನಿಧಿಗಳಿಗೆ. ಹೀಗಿರುವಾಗ ಅಧಿಕಾರಿಗಳು ಶಿವಣ್ಣನನ್ನು ಸದರಿ ಪ್ರಕರಣದಿಂದ ರಕ್ಷಣೆ ಮಾಡುವ ಉದ್ದೇಶದಿಂದ ಈ ರೀತಿ ತಪ್ಪು ಹಿಂಬರಹ ಹಾಗೂ ತಪ್ಪು ಉತ್ತರ ಒದಗಿಸಿರುತ್ತಾರೆ. ವಿಧಾನ ಪರಿಷತ್ತಿನ ಕಾಸಕನಾದ ನನಗೇ ಈ ರೀತಿ ತಪ್ಪು ಉತ್ತರ ಹಾಗೂ ಮಾಹಿತಿಯನ್ನು ಹಿಂಬರಹ ನೀಡಿರುವ ಮೂಲಕ ಸರ್ಕಾರದ ಅಪರ ಕಾರ್ಯದರ್ಶಿ, ಗೃಹ ಇಲಾಖೆ ರವರು ಹಕ್ಕುಚ್ಯುತಿ ಎಸಗಿದ್ದು, ಈ ಬಗ್ಗೆ ಕೂಲಂಕುಶವಾಗಿ ವಿಚಾರಣೆ ನಡೆಸಬೇಕೆಂದು ಕೋರಿರುವುದು ಇರುತ್ತದೆ.

ಸದರಿ ದೂರು ಅರ್ಜಿಯ ಸಂಬಂಧ ಉಪ ಪೊಲೀಸ್ ಆಯುಕ್ತರು ವಿವಿಐಪಿ ಭದ್ರತೆ, ಬೆಂಗಳೂರು ನಗರರವರು ವಿಚಾರಣೆ ಮಾಡಿ ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಶ್ರೀ ಬಿ.ಎಸ್ ಶಿವಣ್ಣರವರು ಕರ್ನಾಟಕ ಕಾಂಗ್ರೆಸ್ ಸಮಿತಿಯ ಜನರಲ್ ಸೆಕ್ರೆಟರಿಯಾಗಿದ್ದು, ದಿ:20.05.2023ರಂದು ನಡೆದ ಮಾನ್ಯ ಮುಖ್ಯಂತ್ರಿಗಳ ಪದಗ್ರಹಣ ಸಮಾರಂಭಕ್ಕೆ, ನೀಡಲಾಗಿರುವ ಪಾಸ್ ಮೂಲಕ ಪ್ರಮಾಣ ವಚನ ಸಮಾರಂಭಕ್ಕೆ, ಶ್ರೀ.ಕಂಠೀರವ ಕ್ರೀಡಾಂಗಣಕ್ಕೆ ಪ್ರವೇಶ ಪಡೆದಿರುತ್ತಾರೆ. ಈ ಸಮಯದಲ್ಲಿ ಭದ್ರತೆಗಾಗಿ ನಿಯೋಜಿಸಿದ್ದ ಪೊಲೀಸ್ ಅಧಿಕಾರಿಯವರು ಶ್ರೀ.ಬಿ.ಎಸ್ ಶಿವಣ್ಣರವರಿಗೆ ನೀಡಿದ್ದ ರೆಡ್ ಪಾಸ್ ಅನ್ನು ತಪಾಸಣೆ ಮಾಡಿ ಒಳಗೆ ಬಿಟ್ಟಿರುವುದು ಕಂಡುಬಂದಿರುತ್ತದೆ. ಇದರಲ್ಲಿ ಯಾವುದೇ ಭದ್ರತಾ ಲೋಪ ಕಂಡುಬಂದಿರುವುದಿಲ್ಲವೆಂದು ಹಾಗೂ ಸದರಿಯವರು ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಯಾಗಿರುವುದು ವಿಚಾರಣೆಯಿಂದ ತಿಳಿದುಬಂದಿರುತ್ತದೆ ಮತ್ತು ಶ್ರೀ. ಬಿ.ಎಸ್.ಶಿವಣ್ಣರವರ ವಿರುದ್ಧ ದಾಖಲಾಗಿರುವ ಪ್ರಕರಣಗಳ ಕುರಿತು ಮಾಹಿತಿಯನ್ನು ಪಡೆಯುವ ಸಲುವಾಗಿ ಪೊಲೀಸ್ ಆಯುಕ್ತರು, ಬೆಂಗಳೂರು ನಗರರವರ ಕಛೇರಿಯಲ್ಲಿರುವ ಸಿ.ಸಿ.ಆರ್.ಬಿ ವಿಭಾಗದ ಸಹಾಯಕ ಪೊಲೀಸ್ ಆಯುಕ್ತರಿಂದ ವರದಿ ಸಹ ಪರಿಶೀಲನೆ ನಡೆಸಿ, ವರದಿಯನ್ನು ಪಡೆದಿದ್ದು, ವರದಿಯಲ್ಲಿ ತಮ್ಮ ಕಛೇರಿಯ ಕಡತಗಳ ಪರಿಶೀಲನೆಯಿಂದ ಶ್ರೀ.ಬಿ.ಎಸ್.ಶಿವಣ್ಣರವರ ವಿರುದ್ಧ ಯಾವುದೇ ಪ್ರಕರಣ ದಾಖಲಾದ ಬಗ್ಗೆ ಮಾಹಿತಿ ಕಂಡುಬಂದಿಲ್ಲವೆಂದು ಈ ಸಂಬಂಧ ಪೊಲೀಸ್ ಐಟಿ ತಂತ್ರಾಂಶದಲ್ಲಿಯೂ ಸಹ ಪರಿಶೀಲನೆ ನಡೆಸಿರುವ ಪ್ರತಿಯನ್ನು ಸಹ ಲಗತ್ತಿಸಿರುತ್ತಾರೆ

ವಿಧಾನಪರಿಷತ್ತಿನ ಅಧಿವೇಶನದ ನಿಯಮ 72 ರಲ್ಲಿ ಉತ್ತರಿಸಿರುವಂತೆ ಉಪ ಪೊಲೀಸ್ ಆಯುಕ್ತರು, ವಿವಿಐಪಿ ಭದ್ರತೆ ರವರು ಸರಹದ್ದಿನ ಸಹಾಯಕ ಪೊಲೀಸ್ ಆಯುಕ್ತರು, ಹಲಸೂರುಗೇಟ್ ಉಪ ವಿಭಾಗರವರು ವಿಚಾರಣೆ ನಡೆಸಿರುವ ವರದಿಯನ್ನು ಪರಿಶೀಲಿಸಿ ಹಾಗೂ ನಗರ ಅಪರಾಧ ಘಟಕದಿಂದ ಅಪರಾಧಿಕ ಕೃತ್ಯ ವೆಸಗಿರುವವರ ಬಗ್ಗೆ ವರದಿಯನ್ನು ಪಡದು ಮೇಲಾಧಿಕಾರಿಗಳಿಗೆ ತಮ್ಮ ವಿಚಾರಣಾ ವರದಿಯನ್ನು ಸಲ್ಲಿಸಿರುವುದು ಇರುತ್ತದೆ. ಇದು ಅವರು ಉಲ್ಲೇಖ-6ರಲ್ಲಿ ಸಲ್ಲಿಸಿರುವ ವಿಚಾರಣೆ ವರದಿಯಾಗಿರುತ್ತದೆ.

ಅರ್ಜಿದಾರರಾದ ಶ್ರೀ. ಅಡಗೂರು ಹೆಚ್ ವಿಶ್ವನಾಥ್ ರವರು ಕರ್ನಾಟಕ ವಿಧಾನ ಪರಿಷತ್ ಸದಸ್ಯರು ನೀಡಿರುವ ದೂರು ಅರ್ಜಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ವಿವರಣೆಯನ್ನು ಸಲ್ಲಿಸಲಾಗುತ್ತಿದೆ[ಭದ್ರತಾ ಮೈಪಲ್ಯದ ಆರೋಪದ ಸಂಬಂಧ ಸರಹದ್ದಿನ ಅಧಿಕಾರಿಯವರಾದ ಸಹಾಯಕ ಪೊಲೀಸ್ ಆಯುಕ್ತರು, ಹಲಸೂರುಗೇಟ್ ಉಪ ವಿಭಾಗರವರು ವಿಚಾರಣೆ ಮಾಡಿ

ವರದಿಯನ್ನು ಮೇಲಾಧಿಕಾರಿಗಳ ಕಛೇರಿಗೆ ಸಲ್ಲಿಸಿರುತ್ತಾರೆ. ಇದರಲ್ಲಿ ಶ್ರೀ.ಸಿದ್ಧರಾಮಯ್ಯರವರು ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸುವ ಸಮಾರಂಭಕ್ಕೆ, ಶ್ರೀ.ಬಿ.ಎಸ್.ಶಿವಣ್ಣರವರಿಗೆ ಒದಗಿಸಲಾಗಿರುವ ರೆಡ್ ಪಾಸ್ ಮೂಲಕ ಪ್ರವೇಶ ಪಡೆದಿರುವುದರಿಂದ ಯಾವುದೇ ಭದ್ರತಾ ಲೋಪವಾಗಿರುವುದಿಲ್ಲ, ಹಾಗೂ ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ವೇದಿಕೆಯಲ್ಲಿ ಕಾಸೂರು ಅಲ್ಪಾಹುನೆಯಾಗಿರುವುದು ಕಂಡುಬಂದಿರುವುದಿಲ್ಲವೆಂದು ವರದಿ ನೀಡಿರುತ್ತಾರೆ.

ಸದರಿಯವರು ವರದಿಯನ್ನು ಸಲ್ಲಿಸಿದ್ದು (ಪ್ರತಿಲಾಗಕ್ಕೆ ಸಿದೆ), ಸದರಿಯವರು ವರದಿಯನ್ನು ಸಲ್ಲಿಸಿರುವ ಸಂದರ್ಭದಲ್ಲಿ ಸಹಾಯಕ ಪೊಲೀಸ್ ಆಯುಕ್ತರು, ಹಲಸೂರುಗೇಟ್ ಉಪ ವಿಭಾಗ ಹಾಗೂ ಸಿ.ಸಿ.ಆರ್.ಬಿ. ವಿಭಾಗದಿಂದ ಪಡೆದಿರುವ ವರದಿ ಹಾಗೂ ಇನ್ನಿತರೆ ದಾಖಲಾತಿಗಳನ್ನು ಪರಿಗಣಿಸಿರುವುದು ಕಂಡುಬಂದಿರುತ್ತದೆ. ಸಹಾಯಕ ಪೊಲೀಸ್ ಆಯುಕ್ತರು, ಹಲಸೂರುಗೇಟ್ ಉಪ ವಿಭಾಗರವರು ಹಾಗೂ ಉಪ ಪೊಲೀಸ್ ಆಯುಕ್ತರು, ವಿ.ವಿ.ಐ.ಪಿ.ಕವರು ಸಲ್ಲಿಸಿರುವ ವರದಿಗಳಲ್ಲಿ ಭದ್ರತಾ ಲೋಪವಾಗಿರುವ ಬಗ್ಗೆ ಕಂಡುಬಂದಿರುವುದಿಲ್ಲವೆಂದು ಸೂಚಿಸುತ್ತದೆ.

ಶ್ರೀ.ಬಿ.ಎಸ್.ಶಿವಣ್ಣರವರು ಅಪರಾಧಿಕ ಚಟುವಟಿಕೆ ಉಳ್ಳವರಾಗಿರುತ್ತಾರೆಂಬುದಕ್ಕೆ, ಪೊಲೀಸ್ ಐಟಿ ತಂತ್ರಾಂಶದಿಂದ ಪಡೆದಿರುವ ವರದಿ ಪುಷ್ಟಿ ನೀಡುವುದಿಲ್ಲವೆಂದು ವರದಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ

18/10

ಉಪ ಪೊಲೀಸ್ ಆಯುಕ್ತರು
ಕೇಂದ್ರ ವಿಭಾಗ, ಬೆಂಗಳೂರು ನಗರ

<u>ಲಗತ್ತುಗಳು :-</u>

1. ಸಹಾಯಕ ಪೊಲೀಸ್ ಆಯುಕ್ತರು, ಹಲಸೂರುಗೇಟ್ ಉಪ ವಿಭಾಗರವರು ದಿನಾಂಕ:-28-09-2024ರಂದು ಸಲ್ಲಿಸಿರುವ ವಿಚಾರಣೆಯ ಅಸಲು ವರದಿ.
2. ಉಪ ಪೊಲೀಸ್ ಆಯುಕ್ತರು, ವಿ.ವಿ.ಐ.ಪಿ. ಭದ್ರತೆರವರು ಸಲ್ಲಿಸಿರುವ ವಿಚಾರಣಾ ವರದಿ-19-08-2023ರ ಪ್ರತಿ.
3. ಸಿ.ಸಿ.ಆರ್.ಬಿ. ವಿಭಾಗದಿಂದ ಪಡೆದಿರುವ ವರದಿಯ ಪ್ರತಿ.
4. 2023ನೇ ಸಾಲಿನಲ್ಲಿ ಸಹಾಯಕ ಪೊಲೀಸ್ ಆಯುಕ್ತರು, ಹಲಸೂರುಗೇಟ್ ಉಪ ವಿಭಾಗರವರು ಸಲ್ಲಿಸಿರುವ ದೂರು ಅರ್ಜಿಯ ವಿಚಾರಣಾ ವರದಿಯ ಪ್ರತಿಗಳು.

180832-7(109)

ಸಂ:ಸಾಮಾನ್ಯ/308/ಎ.ಸಿ.ಪಿ–3/2024.

ಸಹಾಯಕ ಪೋಲೀಸ್ ಕಮೀಷನರ್ ರವರ ಕಛೇರಿ,
ಹಲಸೂರುಗೇಟ್ ಉಪ ವಿಭಾಗ,
ಬೆಂಗಳೂರು ನಗರ. ದಿನಾಂಕ:28/09/2024

ರವರಿಗೆ,

ಮಾನ್ಯ ಉಪ ಪೋಲೀಸ್ ಆಯುಕ್ತರು,
ಕೇಂದ್ರ ವಿಭಾಗ,
ಬೆಂಗಳೂರು ನಗರ.

ಮಾನ್ಯರೇ,

ವಿಷಯ: ಅರ್ಜಿದಾರರಾದ ಶ್ರೀ. ಅಡಗೂರು ಹೆಚ್. ವಿಶ್ವನಾಥ್ ರವರು ಸಲ್ಲಿಸಿರುವ ದೂರು ಅರ್ಜಿಗೆ ವರದಿ ಸಲ್ಲಿಸುತ್ತಿರುವ ಬಗ್ಗೆ.

ಉಲ್ಲೇಖ: 1. ಮಾನ್ಯ ಉಪ ಪೋಲೀಸ್ ಆಯುಕ್ತರು, ಕೇಂದ್ರ ವಿಭಾಗ ರವರ ಕಛೇರಿ ಸಂಖ್ಯೆ: 150/ಅಪರಾಧ–01/ಡಿಸಿಪಿ(ಕೇ)/2024,ದಿ:31/08/2024.

2. ಮಾನ್ಯ ಉಪ ಪೋಲೀಸ್ ಆಯುಕ್ತರು, ಕೇಂದ್ರ ವಿಭಾಗ ರವರ ಕಛೇರಿ ಸಂಖ್ಯೆ: 148/ಸಾಮಾನ್ಯ/ಡಿಸಿಪಿ(ಕೇ)/2023, ದಿನಾಂಕ:03.07.2023.

ಉಪ ಪೊಲೀಸ್ ಆಯುಕ್ತರವರ ಕಛೇರಿ
ಕೇಂದ್ರ ವಿಭಾಗ
04 OCT 2024
ಬೆಂಗಳೂರು ನಗರ

* * * * *

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ ಮಾನ್ಯರಲ್ಲಿ ನಿವೇದಿಸಿಕೊಳ್ಳುವುದೇನೆಂದರೆ, ಅರ್ಜಿದಾರರಾದ ಶ್ರೀ. ಅಡಗೂರು ಹೆಚ್. ವಿಶ್ವನಾಥ್, ಕರ್ನಾಟಕ ವಿಧಾನ ಪರಿಷತ್ ಸದಸ್ಯರು, ಮಾಜಿ ಸಚಿವರು, ಕರ್ನಾಟಕ ಸರ್ಕಾರ, ಮಾಜಿ ಲೋಕಸಭಾ ಸದಸ್ಯರು, ಕರ್ನಾಟಕ ರವರು ದೂರು ಅರ್ಜಿಯನ್ನು ಸನ್ಮಾನ್ಯ ಸ್ಪೀಕರವರಿಗೆ ಕರ್ನಾಟಕ ಸರ್ಕಾರರವರಿಗೆ ಸಲ್ಲಿಸಿದ್ದು, ಸದರಿ ದೂರು ಅರ್ಜಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪದ್ಮನಾಭ ಪೀಠಿಕೆಯ ಸಮಾರಂಭದಲ್ಲಿ ಬಿ.ಎಸ್. ಶಿವಣ್ಣ ಎಂಬ ಕ್ರಿಮಿನಲ್ ಹಿನ್ನೆಲೆಯುಳ್ಳ ವ್ಯಕ್ತಿ ಹಾನೂಮ ಬಾಹಿರವಾಗಿ ಮತ್ತು ಪೋಲೀಸರ ಅಧಿಕಾರಿಗಳ ಭದ್ರತೆಗಳ ಪಡೆಯನ್ನು ಮರೆಮಾಚಿ ಹಾಗೂ ಹಾನೂಮ ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಬಗ್ಗೆ ದೂರು ಅರ್ಜಿಯನ್ನು ಸಲ್ಲಿಸಿರುತ್ತೇನೆ. ಆದರೆ ಸದರಿ ದೂರು ಅರ್ಜಿಯನ್ನು ಸರಿಯಾಗಿ ವಿಚಾರಣೆ ನಡೆಸದೇ ಸದನದಲ್ಲಿ ಮಾಹಿತಿಯನ್ನು ತಪ್ಪಾಗಿ ನೀಡಿದ್ದು, ಸದರಿ ದೂರಿನ ವಿಷಯದಲ್ಲಿ ನನ್ನ ಹಕ್ಕುಚ್ಯುತಿಯಾಗಿರುತ್ತದೆ ಈ ಸಂಬಂಧ ಹಕ್ಕುಚ್ಯುತಿ ಸಮಿತಿಯ ಮುಂದೆ ಮಂಡಿಸಿ ಕೂಲಂಕಷವಾಗಿ ವಿಚಾರಣೆ ನಡೆಸುವಂತೆ ಅರ್ಜಿಯನ್ನು ಸಲ್ಲಿಸಿರುತ್ತಾರೆ ಸದರಿ ದೂರು ಅರ್ಜಿಯು ಮೇಲಾಧಿಕಾರಿಗಳ ಕಛೇರಿಯ ಮೂಲಕ ಸಮುಚಿತ ಮಾರ್ಗದಲ್ಲಿ ವಿಚಾರಣೆಗಾಗಿ ಹಲಸೂರುಗೇಟ್ ಉಪ ವಿಭಾಗದ ಕಛೇರಿಗೆ ಬಂದಿರುತ್ತದೆ.

ಈ ಹಿಂದೆ ಬಿ.ಎಸ್ ಶಿವಣ್ಣರವರ ವಿರುದ್ಧ ಸಲ್ಲಿಸಿರುವ ದೂರು ಅರ್ಜಿಯನ್ನು ಉಲ್ಲೇಖ–2ರಂತೆ ವಿಚಾರಣೆಯನ್ನು ನಡೆಸಿ ಹೇಳಿಕೆ ಪಡೆದಿದ್ದು, ಶ್ರೀ. ಬಿ.ಎಸ್. ಶಿವಣ್ಣ ಬಿನ್ ಸುಬ್ಬೇಗೌಡ, ವಾಸ ನಂ. 480, 5ನೇ ಮೈನ್, ಡಾಲರ್ಸ್ ಕಾಲೋನಿ, ಆರ್.ಎಂ.ವಿ 2ನೇ ಹಂತ, ಬೆಂಗಳೂರು ನಗರ–560094 ರವರು ತಮ್ಮ ಹೇಳಿಕೆಯಲ್ಲಿ ತಾನು ಕರ್ನಾಟಕ ವಿಧಾನಪರಿಷತ್

ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಯಾಗಿ ಕೆಲಸ ಮಾಡಿಕೊಂಡಿರುತ್ತೇನೆ. ಈ ದಿನ ಸಹಾಯಕ ಪೊಲೀಸ್ ಕಮೀಷನರ್, ಹಲಸೂರುಗೇಟ್ ಉಪ ವಿಭಾಗ ರವರ ಕಛೇರಿಗೆ ಬರಮಾಡಿಕೊಂಡು ನನ್ನ ವಿರುದ್ಧ ಅಡಗೂರು ಹೆಚ್. ವಿಶ್ವನಾಥ್ ರವರು ದೂರು ಅರ್ಜಿ ಸಲ್ಲಿಸಿರುವುದನ್ನು ಓದಿ ತಿಳಿದುಕೊಂಡಿರುತ್ತೇನೆ.

ನನ್ನ ವಿರುದ್ಧ ಶ್ರೀ. ಅಡಗೂರು ಹೆಚ್. ವಿಶ್ವನಾಥ್, ಕರ್ನಾಟಕ ವಿಧಾನ ಪರಿಷತ್ ಸದಸ್ಯರು, ಮಾಜಿ ಸಚಿವರು, ಕರ್ನಾಟಕ ಸರ್ಕಾರ, ಮಾಜಿ ಲೋಕಸಭಾ ಸದಸ್ಯರು, ಕರ್ನಾಟಕ ರವರು ಕರ್ನಾಟಕ ರಾಜ್ಯದ ರಾಜ್ಯಪಾಲರಿಗೆ ದೂರು ಅರ್ಜಿಯನ್ನು ಸಲ್ಲಿಸಿದ್ದು, ಸದರಿ ದೂರು ಅರ್ಜಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ವೇದಿಕೆಯ ಸಮಾರಂಭದಲ್ಲಿ ಬಿ.ಎಸ್. ಶಿವಣ್ಣ ಎಂಬ ಕ್ರಿಮಿನಲ್ ಹಿನ್ನೆಲೆಯುಳ್ಳ ವ್ಯಕ್ತಿ ಕಾನೂನು ಬಾಹಿರವಾಗಿ ಮತ್ತು ಪೊಲೀಸರ ಅಧಿಕಾರಿಗಳ ಭದ್ರತೆಗಳ ಪಡೆಯನ್ನು ಮರೆಮಾಚಿ ಹಾಗೂ ಕಾನೂನು ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಬಗ್ಗೆ ದೂರು ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ದೂರು ಅರ್ಜಿಗೆ ಸಂಬಂಧಿಸಿದಂತೆ ನನ್ನ ವಿವರಣೆ ಏನೆಂದರೆ, ನಾನು ಪ್ರದೇಶಿಕ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಯಾಗಿ ಕೆಲಸ ಮಾಡಿಕೊಂಡಿದ್ದು ಹಾಗೂ ಮಾನ್ಯ ಶ್ರೀ. ಸಿದ್ದರಾಮಯ್ಯ ರವರೊಂದಿಗೆ ಉತ್ತಮ ಒಡನಾಟವನ್ನು ಹೊಂದಿರುತ್ತೇನೆ. ಅದರಂತೆ ದಿನಾಂಕ:20.05.2023 ರಂದು ಮಾನ್ಯ ಶ್ರೀ. ಸಿದ್ದರಾಮಯ್ಯ ರವರು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸುವ ಸಮಾರಂಭವನ್ನು ಆಯೋಜಿಸಿದ್ದು. ಈ ಸಮಾರಂಭಕ್ಕೆ ಹಾಜರಿರುವಂತೆ ಮಾನ್ಯ ಶ್ರೀ. ಸಿದ್ದರಾಮಯ್ಯ ರವರು ಸೂಚಿಸಿ ನನಗೆ ಈ ಸಭೆಗೆ ಬೇಕಾದ ಐ.ಡಿ. ಕಾರ್ಡ್ ಮತ್ತು ಪಾಸ್‌ಗಳನ್ನು ಒದಗಿಸಿರುತ್ತಾರೆ. ಪ್ರಮಾಣ ವಚನ ಸ್ವೀಕರಿಸುವ ಸಮಾರಂಭಕ್ಕೆ ಮಾನ್ಯ ಶ್ರೀ. ಸಿದ್ದರಾಮಯ್ಯ ರವರು ಅವರ ಕಾರಿನಲ್ಲಿಯೇ ನನ್ನನ್ನು ಜೊತೆಯಲ್ಲಿಯೇ ಸಮಾರಂಭದ ವೇದಿಕೆಗೆ ಕರೆದುಕೊಂಡು ಹೋಗಿರುತ್ತಾರೆ. ದೂರಿನಲ್ಲಿ ತಿಳಿಸಿರುವಂತೆ ನಾನು ಕಾನೂನು ಬಾಹಿರವಾಗಿ ಮತ್ತು ಪೊಲೀಸ್ ಅಧಿಕಾರಿಗಳ ಭದ್ರತೆಗಳ ಪಡೆಯನ್ನು ಮರೆಮಾಚಿ ಹಾಗೂ ಕಾನೂನು ಶಿಷ್ಟಾಚಾರವನ್ನು ಉಲ್ಲಂಘನೆ ಮಾಡಿರುತ್ತೇನೆ ಎಂಬುದು ಸತ್ಯಕ್ಕೆ ದೂರವಾದ ಸಂಗತಿಯಾಗಿರುತ್ತದೆ. ದಿನಾಂಕ:20.05.2023 ರಂದು ಮಾನ್ಯ ಶ್ರೀ. ಸಿದ್ದರಾಮಯ್ಯ ರವರು ತಮ್ಮ ಜೊತೆಯಲ್ಲಿಯೇ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ ವಿನಃ ನಾನು ಯಾವುದೇ ಕಾನೂನು ಬಾಹಿರವಾಗಿ ಅಥವಾ ಭದ್ರತ ಪಡೆಯನ್ನು ಮರೆಮಾಚಿ ಹಾಗೂ ಕಾನೂನು ಶಿಷ್ಟಾಚಾರವನ್ನು ಉಲ್ಲಂಘನೆ ಮಾಡಿರುವುದಿಲ್ಲ. ಆದುದರಿಂದ ಈ ದೂರು ಅರ್ಜಿಯನ್ನು ಮುಕ್ತಾಯ ಮಾಡಬೇಕೆಂದು ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ.

ಈ ದೂರು ಅರ್ಜಿಯ ವಿಚಾರಣೆಯಿಂದ ತಿಳಿದು ಬಂದ ಅಂಶಗಳೇನೆಂದರೆ, ಶ್ರೀ. ಬಿ.ಎಸ್. ಶಿವಣ್ಣ ರವರು ಕರ್ನಾಟಕ ಪ್ರದೇಶಿಕ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಯಾಗಿ ಕೆಲಸ ಮಾಡಿಕೊಂಡಿದ್ದು ದಿನಾಂಕ:20.05.2023 ರಂದು ಮಾನ್ಯ ಶ್ರೀ. ಸಿದ್ದರಾಮಯ್ಯ ರವರು ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸುವ ಸಮಾರಂಭಕ್ಕೆ ಖುದ್ದು ಮಾನ್ಯ ಶ್ರೀ ಸಿದ್ದರಾಮಯ್ಯ ರವರೇ ಅವರ ಕಾರಿನಲ್ಲಿ ಕರೆದುಕೊಂಡು ಹೋಗಿರುವುದು ಹಾಗೂ ಸಮಾರಂಭಕ್ಕೆ ಹಾಜರಾಗಲೂ ಬೇಕಾದ ಪಾಸ್‌ಗಳನ್ನು ಇಲಾಖಾವತಿಯಿಂದ ಒದಗಿಸಿರುವುದು ಅವರ ಹೇಳಿಕೆಯಿಂದ

102

ತಿಳಿದುಬಂದಿರುತ್ತದೆ. ಮುಂದುವರೆದು ದೂರು ಅರ್ಜಿಯಲ್ಲಿ ತಿಳಿಸಿರುವಂತೆ ಮಾನ್ಯ ಮುಖ್ಯಮಂತ್ರಿಗಳ ಪ್ರಮಾಣ ವಚನದ ಸ್ವೀಕರಿಸುವ ಸಮಾರಂಭದ ವೇದಿಕೆಗೆ ಪೊಲೀಸ್ ಇಲಾಖೆಯ ಭದ್ರತೆಯನ್ನು ಪಾಟಿಸಿ ಒಳ ಹೋಗಿರುದಿಲ್ಲ. ಸದರಿ ಸಮಾರಂಭಕ್ಕೆ ನಿಗದಿ ಪಡಿಸಿದ್ದ ಪಾಸ್‌ಗಳನ್ನು ಹೊಂದಿದ್ದ ವ್ಯಕ್ತಿಗಳನ್ನು ಮಾತ್ರ ನಿಯಮಾನುಸಾರ ಪರಿಶೀಲನೆ ಮಾಡಿ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿರುತ್ತದೆ

ಆದುದರಿಂದ ಶ್ರೀ. ಅಡಗೂರು ಹೆಚ್. ವಿಶ್ವನಾಥ್, ಕರ್ನಾಟಕ ವಿಧಾನ ಪರಿಷತ್ ಸದಸ್ಯರು, ಮಾಜಿ ಸಚಿವರು, ಕರ್ನಾಟಕ ಸರ್ಕಾರ, ಮಾಜಿ ಲೋಕಸಭಾ ಸದಸ್ಯರು, ಈ ಹಿಂದೆ ಶ್ರೀ. ಬಿ.ಎಸ್.ಶಿವಣ್ಣ ರವರ ವಿರುದ್ಧ ಆರೋಪಿಸಿ ಸಲ್ಲಿಸಿದ್ದ ದೂರು ಅರ್ಜಿಯನ್ನು ಕೂಲಂಕಷವಾಗಿ ವಿಚಾರಣೆ ನಡೆಸಿ, ಶ್ರೀ. ಬಿ.ಎಸ್ ಶಿವಣ್ಣರವರ ಹೇಳಿಕೆ ಪಡೆದುಕೊಂಡು, ಸದರಿ ಸದರಿಯವರ ವಿರುದ್ಧ ಪ್ರಕರಣಗಳು ದಾಖಲಾಗಿರುವ ಬಗ್ಗೆ ಪೊಲೀಸ್ ಐ.ಟಿ. ಕಾರ್ಯಾಲಯದಲ್ಲಿ ಪರಿಶೀಲಿಸಲಾಗಿ, ಸದರಿಯವರ ವಿರುದ್ಧ ಕ್ರಿಮಿನಲ್ ಪ್ರಕರಣಗಳು ದಾಖಲಾಗಿರುವುದಿಲ್ಲ, ಈ ವಿಷಯಕ್ಕೆ ಸಂಬಂಧಿಸಿದಂತೆ ಅರ್ಜಿದಾರರಿಗೆ ಹಿಂಬರಹವನ್ನು ಅಂಚೆ ಮೂಲಕ ರವಾನಿಸಲಾಗಿರುತ್ತದೆ. ಆದ್ದರಿಂದ ಸದರಿ ದೂರು ಅರ್ಜಿಯನ್ನು ಮುಕ್ತಾಯ ಮಾಡಲು ಮಾನ್ಯರಲ್ಲಿ ಕೋರಿದೆ.

ಇದರೊಂದಿಗೆ ಮೂಲ ದೂರು ಅರ್ಜಿ, ಶ್ರೀ.ಬಿ.ಎಸ್. ಶಿವಣ್ಣ ರವರ ಹೇಳಿಕೆ ಪತ್ರ ಪ್ರತಿ, ಉಲ್ಲೇಖ–2ರ ದೂರು ಅರ್ಜಿಯ ವಿಚಾರಣಾ ವರದಿಯ ಪ್ರತಿ, ಹಿಂಬರಹದ ಪ್ರತಿಯನ್ನು ಲಗತ್ತಿಸಿ ಮಾನ್ಯರಲ್ಲಿಗೆ ನಿವೇದಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಶಿವಾನಂದ ಚಲವಾದಿ)
ಪೂರ್ವ ವಿಭಾಗ ಪೊಲೀಸ್ ಆಯುಕ್ತರು,
[redacted]

ಸಹಾಯಕ ಪೊಲೀಸ್ ಕಮೀಷನರ್ ರವರ ಕಛೇರಿ
ಹಲಸೂರುಗೇಟ್ ಉಪ ವಿಭಾಗ,
ಬೆಂಗಳೂರು ನಗರ. ದಿನಾಂಕ:14.07.2023.

ಮಾನ್ಯ ಉಪ ಪೊಲೀಸ್ ಆಯುಕ್ತರು,
ಕೇಂದ್ರ ವಿಭಾಗ,
ಬೆಂಗಳೂರು ನಗರ

ಮಾನ್ಯರೇ,

ವಿಷಯ: ಅರ್ಜಿದಾರರಾದ ಶ್ರೀ. ಅಡಗೂರು ಹೆಚ್ ವಿಶ್ವನಾಥ್ ರವರು ಸಲ್ಲಿಸಿರುವ ದೂರು ಅರ್ಜಿಗೆ ವರದಿ ಸಲ್ಲಿಸುತ್ತಿರುವ ಬಗ್ಗೆ.

ಉಲ್ಲೇಖ: 1. ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರ ಕಛೇರಿ ಪತ್ರ ಸಂಖ್ಯೆ: ಜಿ.ಎಸ್./10/ಎಡಿಎಸ್/2023(ಪಿ-1). ದಿನಾಂಕ:30.05.2023.
2. ಸರ್ಕಾರದ ಅವರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ ರವರ ಪತ್ರ ಸಂಖ್ಯೆ : ಹೆಚ್.ಡಿ./02/ಪಿಸಿಇ/2023, ದಿನಾಂಕ:07.06.2023.
3. ಮಾನ್ಯ ಪ್ರಧಾನ ಕಛೇರಿ ಪತ್ರ ಸಂಖ್ಯೆ: ಕಾಮತ್ತುಸು/ಡಿಎಸ್‌ಸಿ-3/12/2022-2023. ದಿನಾಂಕ:22.06.2023.
4. ಮಾನ್ಯ ಪೊಲೀಸ್ ಆಯುಕ್ತರ ಕಛೇರಿ ಪತ್ರ ಸಂಖ್ಯೆ: 162/ಅಪರಾಧ-(5)/ಸಿಓಪಿ/2023. ದಿನಾಂಕ:01.07.2023.
5. ಮಾನ್ಯ ಉಪ ಪೊಲೀಸ್ ಆಯುಕ್ತರು, ಕೇಂದ್ರ ವಿಭಾಗ ರವರ ಕಛೇರಿ ಸಂಖ್ಯೆ: 148/ಸಾಮಾನ್ಯ/ಡಿಸಿಪಿ(ಕೇ)/2023, ದಿನಾಂಕ:03.07.2023.

ಉಪ ಪೊಲೀಸ್ ಆಯುಕ್ತರವರ ಕಛೇರಿ
ಕೇಂದ್ರ ವಿಭಾಗ
11 JUL 2023
ಬೆಂಗಳೂರು ನಗರ

* * * * *

ಈ ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ ಮಾನ್ಯರಲ್ಲಿ ನಿವೇದಿಸಿಕೊಳ್ಳುವುದೇನೆಂದರೆ, ಅರ್ಜಿದಾರರಾದ ಶ್ರೀ. ಅಡಗೂರು ಹೆಚ್. ವಿಶ್ವನಾಥ್, ಕರ್ನಾಟಕ ವಿಧಾನ ಪರಿಷತ್ ಸದಸ್ಯರು, ಮಾಜಿ ಸಚಿವರು, ಕರ್ನಾಟಕ ಸರ್ಕಾರ, ಮಾಜಿ ಲೋಕಸಭಾ ಸದಸ್ಯರು, ಕರ್ನಾಟಕ ರವರು ಕರ್ನಾಟಕ ರಾಜ್ಯದ ರಾಜ್ಯಪಾಲರಿಗೆ ದೂರು ಅರ್ಜಿಯನ್ನು ಸಲ್ಲಿಸಿದ್ದು, ಸದರಿ ದೂರು ಅರ್ಜಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ವೇದಿಕೆಯ ಸಮಾರಂಭದಲ್ಲಿ ಬಿ.ಎಸ್ ಶಿವಣ್ಣ ಎಂಬ ಕ್ರಿಮಿನಲ್ ಹಿನ್ನೆಲೆಯುಳ್ಳ ವ್ಯಕ್ತಿ ಕಾನೂನು ಬಾಹಿರವಾಗಿ ಮತ್ತು ಪೊಲೀಸರ ಅಧಿಕಾರಿಗಳ ಭದ್ರತೆಗಳ ಪಡೆಯನ್ನು ಮರೆಮಾಚಿ ಹಾಗೂ ಕಾನೂನು ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಬಗ್ಗೆ ದೂರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ದೂರು ಅರ್ಜಿಯು ಮೇಲಾಧಿಕಾರಿಗಳ ಕಛೇರಿಯ ಮೂಲಕ ವಿಚಾರಣೆಗಾಗಿ ಹಲಸೂರುಗೇಟ್ ಉಪ ವಿಭಾಗದ ಕಛೇರಿಗೆ ಬಂದಿರುತ್ತದೆ

ಪುಟ-2ಕ್ಕೆ

ಈ ದೂರು ಅರ್ಜಿಯ ವಿಚಾರಣೆಗೆ ಸಂಬಂಧಿಸಿದಂತೆ ಶ್ರೀ. ಬಿ.ಎಸ್. ಶಿವಣ್ಣ ಬಿನ್ ಸುಬ್ಬೇಗೌಡ ವಾಸ ನಂ. 480, 5ನೇ ಮೈನ್, ಡಾಲರ್ಸ್ ಕಾಲೋನಿ, ಆರ್.ಎಂ.ವಿ 2ನೇ ಹಂತ, ಬೆಂಗಳೂರು ನಗರ–560094 ರವರನ್ನು ಈ ದೂರು ಅರ್ಜಿಗೆ ಸಂಬಂಧಿಸಿದಂತೆ ವಿಚಾರಣೆ ಮಾಡಿದ್ದು, ತಮ್ಮ ಹೇಳಿಕೆಯಲ್ಲಿ ತಾನು ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಯಾಗಿ ಕೆಲಸ ಮಾಡಿಕೊಂಡಿರುತ್ತೇನೆ. ಈ ದಿನ ಸಹಾಯಕ ಪೊಲೀಸ್ ಕಮೀಷನರ್, ಹಲಸೂರುಗೇಟ್ ಉಪ ವಿಭಾಗ ರವರ ಕಛೇರಿಗೆ ಬರಮಾಡಿಕೊಂಡು ನನ್ನ ವಿರುದ್ಧ ಅಡಗೂರು ಹೆಚ್. ವಿಶ್ವನಾಥ್ ರವರು ದೂರು ಅರ್ಜಿ ಸಲ್ಲಿಸಿರುವುದನ್ನು ಓದಿ ತಿಳಿದುಕೊಂಡಿರುತ್ತೇನೆ.

ನನ್ನ ವಿರುದ್ಧ ಶ್ರೀ. ಅಡಗೂರು ಹೆಚ್. ವಿಶ್ವನಾಥ್, ಕರ್ನಾಟಕ ವಿಧಾನ ಪರಿಷತ್ ಸದಸ್ಯರು, ಮಾಜಿ ಸಚಿವರು, ಕರ್ನಾಟಕ ಸರ್ಕಾರ, ಮಾಜಿ ಲೋಕಸಭಾ ಸದಸ್ಯರು, ಕರ್ನಾಟಕ ರವರು ಕರ್ನಾಟಕ ರಾಜ್ಯದ ರಾಜ್ಯಪಾಲರಿಗೆ ದೂರು ಅರ್ಜಿಯನ್ನು ಸಲ್ಲಿಸಿದ್ದು, ಸದರಿ ದೂರು ಅರ್ಜಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ವೇದಿಕೆಯ ಸಮಾರಂಭದಲ್ಲಿ ಬಿ.ಎಸ್. ಶಿವಣ್ಣ ಎಂಬ ಕ್ರಿಮಿನಲ್ ಹಿನ್ನೆಲೆಯುಳ್ಳ ವ್ಯಕ್ತಿ ಕಾನೂನು ಬಾಹಿರವಾಗಿ ಮತ್ತು ಪೊಲೀಸರ ಅಧಿಕಾರಿಗಳ ಭದ್ರತೆಗಳ ಪಡೆಯನ್ನು ಮುರಿಮಾಡಿ ಹಾಗೂ ಕಾನೂನು ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಬಗ್ಗೆ ದೂರು ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ದೂರು ಅರ್ಜಿಗೆ ಸಂಬಂಧಿಸಿದಂತೆ ನನ್ನ ವಿವರಣೆ ಏನೆಂದರೆ, ನಾನು ಪ್ರಾದೇಶಿಕ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಯಾಗಿ ಕೆಲಸ ಮಾಡಿಕೊಂಡಿದ್ದು ಹಾಗೂ ಮಾನ್ಯ ಶ್ರೀ. ಸಿದ್ದರಾಮಯ್ಯ ರವರೊಂದಿಗೆ ಉತ್ತಮ ಒಡನಾಟವನ್ನು ಹೊಂದಿರುತ್ತೇನೆ. ಅದರಂತೆ ದಿನಾಂಕ:20.05.2023 ರಂದು ಮಾನ್ಯ ಶ್ರೀ. ಸಿದ್ದರಾಮಯ್ಯ ರವರು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸುವ ಸಮಾರಂಭವನ್ನು ಆಯೋಜಿಸಿದ್ದು, ಈ ಸಮಾರಂಭಕ್ಕೆ ಹಾಜರಿರುವಂತೆ ಮಾನ್ಯ ಶ್ರೀ. ಸಿದ್ದರಾಮಯ್ಯ ರವರು ನೋಟಿಸ್ ನನಗೆ ಈ ಸಭೆಗೆ ಭೇಕಾದ ಐ.ಡಿ. ಕಾರ್ಡ್ ಮತ್ತು ಪಾಸ್‌ಗಳನ್ನು ಒದಗಿಸಿರುತ್ತಾರೆ. ಪ್ರಮಾಣ ವಚನ ಸ್ವೀಕರಿಸುವ ಸಮಾರಂಭಕ್ಕೆ ಮಾನ್ಯ ಶ್ರೀ. ಸಿದ್ದರಾಮಯ್ಯ ರವರು ಅವರ ಕಾರಿನಲ್ಲಿಯೇ ನನ್ನನ್ನು ಜೊತೆಯಲ್ಲಿಯೇ ಸಮಾರಂಭದ ವೇದಿಕೆಗೆ ಕರೆದುಕೊಂಡು ಹೋಗಿರುತ್ತಾರೆ.

ದೂರಿನಲ್ಲಿ ತಿಳಿಸಿರುವಂತೆ ನಾನು ಕಾನೂನು ಬಾಹಿರವಾಗಿ ಮತ್ತು ಪೊಲೀಸ್ ಅಧಿಕಾರಿಗಳ ಭದ್ರತೆಗಳ ಪಡೆಯನ್ನು ಮುರಿಮಾಡಿ ಹಾಗೂ ಕಾನೂನು ಶಿಷ್ಟಾಚಾರವನ್ನು ಉಲ್ಲಂಘನೆ ಮಾಡಿರುತ್ತೇನೆ ಎಂಬುದು ಸತ್ಯಕ್ಕೆ ದೂರವಾದ ಸಂಗತಿಯಾಗಿರುತ್ತದೆ. ದಿನಾಂಕ:20.05.2023 ರಂದು ಮಾನ್ಯ ಶ್ರೀ. ಸಿದ್ದರಾಮಯ್ಯ ರವರು ತಮ್ಮ ಜೊತೆಯಲ್ಲಿಯೇ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ ವಿನಃ ನಾನು ಯಾವುದೇ ಕಾನೂನು ಬಾಹಿರವಾಗಿ ಅಥವಾ ಭದ್ರತ ಪಡೆಯನ್ನು ಮುರಿಮಾಡಿ ಹಾಗೂ ಕಾನೂನು ಶಿಷ್ಟಾಚಾರವನ್ನು ಉಲ್ಲಂಘನೆ ಮಾಡಿರುವುದಿಲ್ಲ. ಆದುದರಿಂದ ಈ ದೂರು ಅರ್ಜಿಯನ್ನು ಮುಕ್ತಾಯ ಮಾಡಬೇಕೆಂದು ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ.

ಪುಟ–3ಕ್ಕೆ

ಈ ದೂರು ಅರ್ಜಿಯ ವಿಚಾರಣೆಯಿಂದ ತಿಳಿದು ಬಂದ ಅಂಶಗಳೇನೆಂದರೆ, ಶ್ರೀ. ಬಿ.ಎಸ್. ಶಿವಣ್ಣ ರವರು ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಯಾಗಿ ಕೆಲಸ ಮಾಡಿಕೊಂಡಿರುವುದು ದಿನಾಂಕ 20.05.2023 ರಂದು ಮಾನ್ಯ ಶ್ರೀ ಸಿದ್ದರಾಮಯ್ಯ ರವರು ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸುವ ಸಮಾರಂಭಕ್ಕೆ ಮುಂದ್ದು ಮಾನ್ಯ ಶ್ರೀ ಸಿದ್ದರಾಮಯ್ಯ ರವರೇ ಅವರ ಕಾರಿನಲ್ಲಿ ಕರೆದುಕೊಂಡು ಹೋಗಿರುವುದು ಹಾಗೂ ಸಮಾರಂಭಕ್ಕೆ ಹಾಜರಾಗಲೂ ಬೇಕಾದ ಪಾಸ್‌ಗಳನ್ನು ಇಲಾಖಾವತಿಯಿಂದ ಒದಗಿಸಿರುವುದು ಅವರ ಹೇಳಿಕೆಯಿಂದ ತಿಳಿದುಬಂದಿರುತ್ತದೆ.

ಮುಂದುವರೆದು ದೂರು ಅರ್ಜಿಯಲ್ಲಿ ತಿಳಿಸಿರುವಂತೆ ಮಾನ್ಯ ಮುಖ್ಯಮಂತ್ರಿಗಳ ಪ್ರಮಾಣ ವಚನದ ಸ್ವೀಕರಿಸುವ ಸಮಾರಂಭದ ವೇದಿಕೆಗೆ ಪೋಲೀಸ್ ಇಲಾಖೆಯ ಭದ್ರತೆಯನ್ನು ಪಂಚಿಸಿ ಒಳ ಹೋಗಿರುವಿಲ್ಲ ಸದರಿ ಸಮಾರಂಭಕ್ಕೆ ನಿಗಧಿ ಪಡಿಸಿದ್ದ ಪಾಸ್‌ಗಳನ್ನು ಹೊಂದಿದ್ದ ವ್ಯಕ್ತಿಗಳನ್ನು ಮಾತ್ರ ನಿಯಮಾನುಸಾರ ಪರಿಶೀಲನೆ ಮಾಡಿ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿರುತ್ತದೆ.

ಆದುದರಿಂದ ಶ್ರೀ. ಅಡಗೂರು ಹೆಚ್ ವಿಶ್ವನಾಥ್, ಕರ್ನಾಟಕ ವಿಧಾನ ಪರಿಷತ್ ಸದಸ್ಯರು, ಮಾಜಿ ಸಚಿವರು, ಕರ್ನಾಟಕ ಸರ್ಕಾರ, ಮಾಜಿ ಲೋಕಸಭಾ ಸದಸ್ಯರು, ಕರ್ನಾಟಕ ರವರು ಕರ್ನಾಟಕ ರವರು ಶ್ರೀ. ಬಿ.ಎಸ್.ಶಿವಣ್ಣ ರವರ ವಿರುದ್ಧ ಆರೋಪಿಸಿ ನಲ್ಲಿಸಿರುವ ದೂರು ಅರ್ಜಿಯನ್ನು ಮುಕ್ತಾಯ ಮಾಡಲು ಕೋರಿದೆ ಹಾಗೂ ಈಗಾಗಲೇ ಈ ವಿಷಯಕ್ಕೆ ಸಂಬಂಧಿಸಿದಂತೆ ಅರ್ಜಿದಾರರಿಗೆ ಹಿಂಬರಹವನ್ನು ಅಂಚೆ ಮೂಲಕ ರವಾನಿಸಲಾಗಿರುತ್ತದೆ.

ಇದರೊಂದಿಗೆ ಮೂಲ ದೂರು ಅರ್ಜಿ, ಶ್ರೀ.ಬಿ.ಎಸ್. ಶಿವಣ್ಣ ರವರ ಹೇಳಿಕೆ ನಕಲು ಪ್ರತಿ, ಅನ್ಲೇಣು-4, 5, 6ರ ದೂರು ಅರ್ಜಿಯ ವಿಚಾರಣಾ ವರದಿಯ ಪ್ರತಿಯನ್ನು ಲಗತ್ತಿಸಿರುತ್ತದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ನಾರಾಯಣ ಸ್ವಾಮಿ.ಬಿ)
ಸಹಾಯಕ ಪೋಲೀಸ್ ಆಯುಕ್ತರು,
ಹಲಸೂರು ಗೇಟ್ ಉಪ ವಿಭಾಗ,
ಬೆಂಗಳೂರು ನಗರ.

98

ಸಂ:ಜಿ.ಎಸ್.ಎಲ್/193/ಎ.ಸಿ.ಪಿ–3/2023.

ಸಹಾಯಕ ಪೊಲೀಸ್ ಕಮೀಷನರ್ ರವರ ಕಛೇರಿ,
ಹಲಸೂರುಗೇಟ್ ಉಪ ವಿಭಾಗ,
ಬೆಂಗಳೂರು ನಗರ. ದಿನಾಂಕ:10.07.2023.

– : ಹೇಳಿಕೆಯ : –

ಈ ಮೂಲಕ ತಮಗೆ ತಿಳಿಯಪಡಿಸುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ವೇದಿಕೆಯ ಸಮಾರಂಭದಲ್ಲಿ ಬಿ.ಎಸ್. ಶಿವಣ್ಣ ಎಂಬ ಕ್ರಿಮಿನಲ್ ಹಿನ್ನೆಲೆಯುಳ್ಳ ವ್ಯಕ್ತಿ ಕಾನೂನು ಬಾಹಿರವಾಗಿ ಮತ್ತು ಪೊಲೀಸರ ಅಧಿಕಾರಿಗಳ ಭದ್ರತೆಗಳ ಪಡೆಯನ್ನು ಮರೆಮಾಚಿ ಹಾಗೂ ಕಾನೂನು ಶಿಷ್ಟಾಚಾರ ಉಲ್ಲಂಘನೆ ಮಾಡಿರುತ್ತಾರೆಯು ಕರ್ನಾಟಕ ರಾಜ್ಯದ ರಾಜ್ಯಪಾಲರಿಗೆ ದೂರು ಅರ್ಜಿಯನ್ನು ಸಲ್ಲಿಸಿದ್ದು. ಸದರಿ ದೂರು ಅರ್ಜಿಯು ಮೇಲಾಧಿಕಾರಿಗಳ ಕಛೇರಿಯ ಮೂಲಕ ವಿಚಾರಣೆಗಾಗಿ ಹಲಸೂರುಗೇಟ್ ಉಪ ವಿಭಾಗದ ಕಛೇರಿಗೆ ಬಂದಿರುತ್ತದೆ.

ಈ ದೂರು ಅರ್ಜಿಯ ವಿಚಾರಣೆಗೆ ಸಂಬಂಧಿಸಿದಂತೆ ಶ್ರೀ. ಬಿ.ಎಸ್. ಶಿವಣ್ಣ ರವರನ್ನು ವಿಚಾರಣೆ ಮಾಡಲಾಗಿರುತ್ತದೆ. ಸದರಿಯವರು ನೀವು ಆರೋಪಿಸಿರುವ ಆರೋಪಗಳನ್ನು ಅಲ್ಲಗಳೆದಿರುತ್ತಾರೆ ಹಾಗೂ ವಿಚಾರಣಾ ವರದಿಯನ್ನು ಮೇಲಾಧಿಕಾರಿಗಳ ಕಛೇರಿಗೆ ಸಲ್ಲಿಸಲಾಗಿರುತ್ತದೆ.

(ನಾರಾಯಣಸ್ವಾಮಿ.ಎಂ.)
ಸಹಾಯಕ ಪೊಲೀಸ್ ಕಮಿಷನರ್
ಹಲಸೂರುಗೇಟ್ ಉಪ ವಿಭಾಗ
ಬೆಂಗಳೂರು ನಗರ.

ರವರಿಗೆ:

ಶ್ರೀ ಅಡಗೂರು ಹೆಚ್ ವಿಶ್ವನಾಥ್,
ಕರ್ನಾಟಕ ವಿಧಾನ ಪರಿಷತ್ ಸದಸ್ಯರು,
ಮಾಜಿ ಸಚಿವರು, ಕರ್ನಾಟಕ ಸರ್ಕಾರ,
ಮಾಜಿ ಲೋಕಸಭಾ ಸದಸ್ಯರು, ಕರ್ನಾಟಕ.

ಕಛೇರಿ ವಿಳಾಸ: ಸಾರ್ವಜನಿಕ ಕಛೇರಿ ಕಟ್ಟಡ,
ಕಾಡಾ ಕಛೇರಿ ಆವರಣ,
ಮೈಸೂರು–570001.

ಸಂ:ನಾಮ್ಕಾಂ/ಗ್ರಾ.ಕ.ಸ.ಪ್ರ/2023

ಸಹಾಯಕ ಪೊಲೀಸ್ ಕಮೀಷನರ್ ರವರ ಕಛೇರಿ,
ಹಲಸೂರುಗೇಟ್ ಉಪ ವಿಭಾಗ,
ಬೆಂಗಳೂರು ನಗರ. ದಿನಾಂಕ:10.07.2023.

ಹೇಳಿಕೆ:-

ಶ್ರೀ. ಬಿ.ಎಸ್. ಶಿವಣ್ಣ ಬಿನ್ ಶಿರ್ಡಿಗೌಡ. ವಾಸವಂ. 480, 5ನೇ ಮೈನ್, ಡಾಲರ್ಸ್ ಕಾಲೋನಿ, ಆರ್.ಟಿ.ಐ 2ನೇ ಹಂತ, ಬೆಂಗಳೂರು ನಗರ-94. ಫೋನ್ ನಂ. 9448417379.

ದಿನಾಂಕ:10.07.2023.

ನಾನು ಮೇಲ್ಕಂಡ ವಿಳಾಸದಲ್ಲಿ ನನ್ನ ಸಂಸಾರದೊಂದಿಗೆ ವಾಸವಾಗಿದ್ದುಕೊಂಡು, ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಯಾಗಿ ಕೆಲಸ ಮಾಡಿಕೊಂಡಿರುತ್ತೇನೆ. ಈ ದಿನ ಸಹಾಯಕ ಪೊಲೀಸ್ ಕಮೀಷನರ್, ಹಲಸೂರುಗೇಟ್ ಉಪ ವಿಭಾಗ ರವರ ಕಛೇರಿಗೆ ಬರಮಾಡಿಕೊಂಡು ನನ್ನ ವಿರುದ್ಧ ಅಡಗೂರು ಹೆಚ್. ವಿಶ್ವನಾಥ್ ರವರು ದೂರು ಅರ್ಜಿ ಸಲ್ಲಿಸಿರುವುದನ್ನು ಓದಿ ತಿಳಿದುಕೊಂಡಿರುತ್ತೇನೆ.

ನನ್ನ ವಿರುದ್ಧ ಶ್ರೀ. ಅಡಗೂರು ಹೆಚ್. ವಿಶ್ವನಾಥ್, ಕರ್ನಾಟಕ ವಿಧಾನ ಪರಿಷತ್ ಸದಸ್ಯರು, ಮಾಜಿ ಸಚಿವರು, ಕರ್ನಾಟಕ ಸರ್ಕಾರ, ಮಾಜಿ ಲೋಕಸಭಾ ಸದಸ್ಯರು, ಕರ್ನಾಟಕ ರವರು ಕರ್ನಾಟಕ ರಾಜ್ಯದ ರಾಜ್ಯಪಾಲರಿಗೆ ದೂರು ಅರ್ಜಿಯನ್ನು ಸಲ್ಲಿಸಿದ್ದು. ಸದರಿ ದೂರು ಅರ್ಜಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ವೇದಿಕೆಯ ಸಮಾರಂಭದಲ್ಲಿ ಬಿ.ಎಸ್. ಶಿವಣ್ಣ ಎಂಬ ಕ್ರಿಮಿನಲ್ ಹಿನ್ನೆಲೆಯುಳ್ಳ ವ್ಯಕ್ತಿ ಕಾನೂನು ಬಾಹಿರವಾಗಿ ಮತ್ತು ಪೊಲೀಸ್ ಅಧಿಕಾರಿಗಳ ಭದ್ರತೆಗಳ ಪಡೆಯನ್ನು ಮರೆಮಾಚಿ ಹಾಗೂ ಕಾನೂನು ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಬಗ್ಗೆ ದೂರು ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ದೂರು ಅರ್ಜಿಗೆ ಸಂಬಂಧಿಸಿದಂತೆ ನನ್ನ ವಿವರಣೆ ಏನೆಂದರೆ, ನಾನು ಪ್ರಾದೇಶಿಕ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಯಾಗಿ ಕೆಲಸ ಮಾಡಿಕೊಂಡಿದ್ದು ಹಾಗೂ ಮಾನ್ಯ ಶ್ರೀ. ಸಿದ್ದರಾಮಯ್ಯ ರವರೊಂದಿಗೆ ಉತ್ತಮ ಒಡನಾಟವನ್ನು ಹೊಂದಿರುತ್ತೇನೆ. ಅದರಂತೆ ದಿನಾಂಕ:20.05.2023 ರಂದು ಮಾನ್ಯ ಶ್ರೀ. ಸಿದ್ದರಾಮಯ್ಯ ರವರು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸುವ ಸಮಾರಂಭವನ್ನು ಆಯೋಜಿಸಿದ್ದು. ಈ ಸಮಾರಂಭಕ್ಕೆ ಹಾಜರಿರುವಂತೆ ಮಾನ್ಯ ಶ್ರೀ. ಸಿದ್ದರಾಮಯ್ಯ ರವರು ಸೂಚಿಸಿ ನನಗೆ ಈ ಸಭೆಗೆ ಬೇಕಾದ ಐ.ಡಿ. ಕಾರ್ಡ್ ಮತ್ತು ಪಾಸ್‌ಗಳನ್ನು ಒದಗಿಸಿರುತ್ತಾರೆ. ಪ್ರಮಾಣ ವಚನ ಸ್ವೀಕರಿಸುವ ಸಮಾರಂಭಕ್ಕೆ ಮಾನ್ಯ ಶ್ರೀ. ಸಿದ್ದರಾಮಯ್ಯ ರವರು ಅವರ ಕಾರಿನಲ್ಲಿಯೇ, ಅವರ ಜೊತೆಯಲ್ಲಿಯೇ ನನ್ನನ್ನು ಸಮಾರಂಭದ ವೇದಿಕೆಗೆ ಕರೆದುಕೊಂಡು ಹೋಗಿರುತ್ತಾರೆ.

ದೂರಿನಲ್ಲಿ ತಿಳಿಸಿರುವಂತೆ ನಾನು ಕಾನೂನು ಬಾಹಿರವಾಗಿ ಮತ್ತು ಪೊಲೀಸ್ ಅಧಿಕಾರಿಗಳ ಭದ್ರತೆಗಳ ಪಡೆಯನ್ನು ಮರೆಮಾಚಿ ಹಾಗೂ ಕಾನೂನು ಶಿಷ್ಟಾಚಾರವನ್ನು ಉಲ್ಲಂಘನೆ ಮಾಡಿರುತ್ತೇನೆ ಎಂಬುದು ಸತ್ಯಕ್ಕೆ ದೂರವಾದ ಸಂಗತಿಯಾಗಿರುತ್ತದೆ. ದಿನಾಂಕ:20.05.2023 ರಂದು ಮಾನ್ಯ ಶ್ರೀ. ಸಿದ್ದರಾಮಯ್ಯ ರವರು ತಮ್ಮಜೊತೆಯಲ್ಲಿಯೇ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ ವಿನಃ ನಾನು ಯಾವುದೇ ಕಾನೂನು ಬಾಹಿರವಾಗಿ

(ಪು.ತಿ.ನೋ)

96

ಅಥವಾ ಭದ್ರತಾ ಪಡೆಯನ್ನು ಮರೆಮಾಚಿ ಹಾಗೂ ತಾವೂಸು ಶಿಷ್ಟಾಚಾರವನ್ನು ಉಲ್ಲಂಘಿಸಿ ವರ್ತಿಸಿರುವುದಿಲ್ಲ. ಆದುದರಿಂದ ಈ ದೂರು ಅರ್ಜಿಯನ್ನು ಮುಕ್ತಾಯ ಮಾಡಬೇಕೆಂದು ತಮ್ಮಲ್ಲಿ ಕೋರಿದೆ.

ಓದಿ ನೋಡಿದ ಸರಿಯಾಗಿದೆ,

ನನ್ನ ಸಮಕ್ಷಮ,

10/07/23

ಕರ್ನಾಟಕ ವಿಧಾನ ಪರಿಷತ್ ಸದಸ್ಯರು
ಮಾಜಿ ಪೊಲೀಸ್ ಕಮಿಷನರ್, ಬೆಂಗಳೂರು ನಗರ
ಮಾಜಿ ಲೋಕಸಭಾ ಸದಸ್ಯರು, ಬೆಂಗಳೂರು

ಕರ್ನಾಟಕ ವಿಧಾನ ಪರಿಷತ್ ಸದಸ್ಯರು
ಮಾಜಿ ಪೊಲೀಸ್ ಕಮಿಷನರ್
ಬೆಂಗಳೂರು ನಗರ
ಮೊ : +91 96639 96399

ಸಂಖ್ಯೆ: ಕಾ3/ಕೆವಿಎಂಎಲ್/ತನಿಖೆಗೆ/2025

ರವರಿಗೆ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರದ ಸಚಿವಾಲಯ,
ಒಳಾಡಳಿತ ಇಲಾಖೆ, ವಿಧಾನ ಸೌಧ.
ಬೆಂಗಳೂರು.

ದಿನಾಂಕ:03.02.2025

ವಿಷಯ: ಮಾನ್ಯ ಮುಖ್ಯ ಮಂತ್ರಿಗಳ ಪದಗ್ರಹಣ ವೇದಿಕೆಯ ಭದ್ರತಾಲೋಪದ ಬಗ್ಗೆ ಪ್ರಸ್ತಾವಿಸಿದ ದೂರಿನ ವಿಷಯದಲ್ಲಿ ತಪ್ಪು ಮಾಹಿತಿ ನೀಡಿರುವ ಹಾಗೂ ಮತ್ತೊಮ್ಮೆ ನನ್ನ ಹಕ್ಕುಚ್ಯುತಿಯಾಗಲು ಕಾರಣರಾಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವ ಬಗ್ಗೆ.

04/2/25

*****

ಮೇಲ್ಕಂಡ ಆರೋಪಕ್ಕೆ ಸಂಬಂಧಿಸಿದಂತೆ, ಹಾಲಿ ನನ್ನ ಹಕ್ಕುಚ್ಯುತಿಯಾಗಿದ್ದು, ಸಮಿತಿಯಿಂದ ವರದಿ ಕೋರಿರುವುದು ನನ್ನ ಗಮನಕ್ಕೆ ಬಂದಿದ್ದು, ತಾವುಗಳು ಸಹ ಇತ್ತೀಚೆಗೆ ತಮ್ಮ ಇಲಾಖೆಗೆ ವರದಿ ಕೋರಿ ಕೊತ್ತಾಯ ಪಡಿಸಿರುವ ವಿಷಯ ತಿಳಿದುಬಂದಿರುತ್ತದೆ. ಈ ಆರೋಪಕ್ಕೆ ಸಂಬಂಧಪಟ್ಟು ವಾಸ್ತು ವಿಷಯ ಇದಾಗಿರುತ್ತದೆ.

ಆದರೆ, ಈ ಆರೋಪದ ಸಂಬಂಧ, ರಾಜ್ಯಪಾಲರ ಕಛೇರಿಯಿಂದಲೂ ಸದರಿ ಪ್ರಕರಣದ ಬಗ್ಗೆ ತನಿಖೆ ನಡೆಸಿ ಕಾನೂನು ಕ್ರಮಕ್ಕೆಗೊಂಡು ತಮ್ಮ ಸಚಿವಾಲಯಕ್ಕೆ ಹಾಗೂ ನನಗೆ ವರದಿ ಕೊಡುವಂತೆ ಮುಖ್ಯ ಕಾರ್ಯದರ್ಶಿಗಳಿಗೆ ಮತ್ತು ಪೊಲೀಸ್ ಮಹಾ ನಿರ್ದೇಶಕರಿಗೆ ಮತ್ತೊಮ್ಮೆ ತಿಳಿಸಿರುತ್ತಾರೆ. ವಿಷಯ ಈಗಿರುವಾಗ ಸದರಿ ಆರೋಪದ ಬಗ್ಗೆ ತನಿಖೆ ನಡೆಸಿ ಕೈಗೊಂಡ ಕ್ರಮದ ವರದಿ ತಮ್ಮಿಂದಾಗಲಿ ಅಥವಾ ಮುಖ್ಯ ಕಾರ್ಯದರ್ಶಿಗಳಿಂದಾಗಲಿ, ಪೊಲೀಸ್ ಮಹಾ ನಿರ್ದೇಶಕರಿಂದಾಗಲಿ ನನಗೆ ವರದಿ ಬರಬೇಕಿತ್ತು. ಆದಗ್ಯೂ ಇಲ್ಲಿಯವರೆಗೆ ಈ ವಿಷಯದ ಬಗ್ಗೆ ಯಾವುದೇ ವರದಿ ಸ್ವೀಕೃತವಾಗಿರುವುದಿಲ್ಲ.

ನಿಯಮ, ಈಗಿರುವಾಗ ಸದರಿ ಪ್ರಕರಣದ ತನಿಖೆಯನ್ನೇ ನಡೆಸದೇ ಮುಖ್ಯಮಂತ್ರಿಗಳ ಪದಗ್ರಹಣ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ವಿಭಾಗದ ಹಲಸೂರು ಗೇಟ್ ವಿಭಾಗದ ಸಹಾಯಕ ಪೊಲೀಸ್ ಆಯುಕ್ತರು, ದಿನಾಂಕ:10.07.2023 ರಂದು ಈ ಪ್ರಕರಣದ ಬಗ್ಗೆ ಶಿವಣ್ಣನನ್ನು ಕರೆಸಿ ವಿಚಾರಣೆ ನಡೆಸಲಾಗಿ, ತಾವು ಮಾಡಿರುವ ಆರೋಪವನ್ನು ಅಲ್ಲಗಳೆದಿರುವುದಾಗಿ ಶಿವಣ್ಣರವರು ತಿಳಿಸಿರುತ್ತಾರೆಂದು ಆರೋಪದ ತನಿಖೆಯನ್ನೇ ನಡೆಸದೇ ಆರೋಪಿಯ ಹೇಳಿಕೆಯನ್ನೇ ಆಧಾರಿಸಿ ನನಗೆ ಹಿಂಬರಹವನ್ನು ಕೊಟ್ಟಿರುತ್ತಾರೆ. ಇದು ನಾನು ಸಹ ಹಾಲಿ ವಿಧಾನ ಪರಿಷತ್ತಿನ ಸದಸ್ಯನಾಗಿ ಈ ರೀತಿ ತಾತ್ಸಾರವಾಗಿ ಹಿಂಬರಹ ಕೊಟ್ಟಿರುವುದು ಏಷ್ಟು ಸಮಂಜಸ?

ತದನಂತರ, ನಾನು ಈ ಪ್ರಕರಣದಲ್ಲಿ ಕ್ರಮಕ್ಕೆಗೊಳ್ಳದೇ ವಿಳಂಬ ಮಾಡುತ್ತಿರುವ ಬಗ್ಗೆ, ತಮಗೆ ಹಾಗೂ ನಗರ ಪೊಲೀಸ್ ಆಯುಕ್ತರಿಗೆ ಈ ವಿಷಯದ ಬಗ್ಗೆ ಕಾನೂನಾತ್ಮಕವಾಗಿ ಗಮನ ಸೆಳೆಯಲು ವಕೀಲರಿಂದ ನೋಟೀಸ್ ಜಾರಿ ಮಾಡಿಸಿರುತ್ತೇನೆ. ಸದರಿ ನೋಟೀಸ್‌ಗೆ ಮತ್ತೊಮ್ಮೆ ಸಂಬಂಧಪಟ್ಟ ವಿಭಾಗದ ಮತ್ತೊಬ್ಬ ಸಹಾಯಕ ಪೊಲೀಸ್ ಆಯುಕ್ತರಿಂದ ದಿನಾಂಕ:06.10.2023 ರಂದು ಈ ದೂರು ಅರ್ಜಿಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಶಿವಣ್ಣರವರನ್ನು ವಿಚಾರಣೆ ನಡೆಸಿದ್ದು, ದಿನಾಂಕ:20.05.2023 ರಂದು ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಖುದ್ದು ಮುಖ್ಯಮಂತ್ರಿ

....2

ಸಿದ್ಧರಾಮಯ್ಯನವರೆ ವೇದಿಕೆಗೆ ಕರೆದುಕೊಂಡು ಪ್ರವೇಶಿಸಿರುವುದು ತಿಳಿದು ಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ ಇಲ್ಲಿಯೂ ಸಹ ಈ ಆರೋಪದ ಬಗ್ಗೆ ತನಿಖೆ ನಡೆಸಿರುವುದಾಗಿ ಉಲ್ಲೇಖಿಸಿರುವುದಿಲ್ಲ. ಆದರೆ ನಾನು ಈ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಿದಾಗ ತಾವು ಕೊಟ್ಟಿರುವಉತ್ತರ ವಿಭಿನ್ನವಾಗಿದ್ದು, ಈ ಬಗ್ಗೆ ನನ್ನ ಹಕ್ಕುಚ್ಯುತ್ತಿಯಾಗಿರುವ ಬಗ್ಗೆ ಮಾನ್ಯ ಸಭಾಪತಿಯವರಲ್ಲಿ ಪ್ರಸ್ತಾಪಿಸಿರುತ್ತೇನೆ.

ಆದರೆ, ಈ ಪ್ರಕರಣದಲ್ಲಿ ಆರೋಪಿಯಾಗಿರುವ ಬಿ.ಎಸ್. ಶಿವಣ್ಣ, ನ್ಯಾಯಾಲಯಕ್ಕೆ ನಮ್ಮ ವಿರುದ್ಧ ಎರಡು ಮೊಕದ್ದಮೆ ದಾಖಲಿಸಿರುತ್ತಾನೆ. ಮೊದಲನೇ ಆರೋಪದಲ್ಲಿ ಪಬ್ಲಿಕ್ ಟಿ.ವಿ ಹಾಗೂ ನನ್ನನ್ನು ಪಾರ್ಟಿ ಮಾಡಿರುತ್ತಾನೆ ಮತ್ತೊಂದು ಪ್ರಕರಣದಲ್ಲಿ ನನ್ನ, ದಿಗ್ವಿಜಯ ನ್ಯೂಸ್ ಚಾನಲ್ ಮತ್ತು ಮಾಗಡಿಯ ಮಾಜಿ ಶಾಸಕರಾದ ಎ. ಮಂಜುರವರನ್ನು ಪಾರ್ಟಿದಾರರನ್ನಾಗಿ ಮಾಡಿ ಎ.ಸಿ.ಎಂಎಂ. ನ್ಯಾಯಾಲಯದ ಎಂಟನೇ ವಿಭಾಗದಲ್ಲಿ ಪ್ರಕರಣ ದಾಖಲಿಸಿರುತ್ತಾನೆ.

ಆದರೆ, ಶಿವಣ್ಣ ನ್ಯಾಯಾಲಯದಲ್ಲಿ ತನ್ನ ಏಳಿಕೆ ಮಂಡಿಸುವಾಗ ಒಂದೊಂದು ಕಡೆ ಒಂದೊಂದು ರೀತಿ ವಿಭಿನ್ನ ರೀತಿ ಹೇಳಿಕೆ ಕೊಟ್ಟಿರುವುದು ಹಾಗೂ ಸದನದಲ್ಲಿ ತಾವು ಉತ್ತರ ಒದಗಿಸಿರುವುದು ಈವರೆಡಕ್ಕೂ ಮೊದಲು ಸಹಾಯಕ ಪೊಲೀಸ್ ಆಯುಕ್ತರು, ಹಲಸೂರು ಗೇಟ್, ನನಗೆ ಹಿಂಬರಹ ಕೊಟ್ಟಿರುವುದು ಎಲ್ಲವುಸಹ ಒಂದೊಂದು ವಿಭಿನ್ನವಾಗಿರುತ್ತದೆ. ಇದನ್ನು ಗಮನಿಸಿದರೆ ವಾಸ್ತವಾಂಶದಲ್ಲಿ ಭದ್ರತಾಲೋಪವಾಗಿರುವುದು ಕಂಡುಬಂದಿದ್ದು, ಪ್ರಾಥಮಿಕ ಹಂತದಲ್ಲಿಯೇ ತಮ್ಮ ಲೋಪವನ್ನು ಮುಚ್ಚಿಹಾಕಲು ಸಂಬಂಧಪಟ್ಟ ವಿಭಾಗದ ಸಹಾಯಕ ಆಯುಕ್ತರು, ಈ ರೀತಿ ತಪ್ಪು ಹಿಂಬರಹ ಕೊಟ್ಟಿದ್ದು, ಈ ಹಿಂಬರಹವನ್ನೇ ಮುಂದಿಟ್ಟುಕೊಂಡು ತಾನು ಅಕ್ರಮವಾಗಿ ವೇದಿಕೆ ಮೇಲೆ ಬಂದು ಕಾನೂನು ಉಲ್ಲಂಘಿಸಿರುವ ಬಗ್ಗೆ ತನ್ನ ಮೇಲಿನ ಆರೋಪವನ್ನು ಮುಚ್ಚಿಹಾಕಲು ಶಿವಣ್ಣನು ಸಹ ಈ ತಪ್ಪು ಹಿಂಬರಹವನ್ನು ಮುಂದಿಟ್ಟು ನ್ಯಾಯಾಲಯದ ಮೆಟ್ಟಿಲೇರಿರುವುದು ಸ್ಪಷ್ಟವಾಗುತ್ತದೆ. ಆದರೆ, ಪ್ರಕರಣದ ತನಿಖೆಯನ್ನೇ ನಡೆಸದೇ ನಾನೊಬ್ಬ ಹಾಲಿ ವಿಧಾನ ಪರಿಷತ್ತಿನ ಸದಸ್ಯನಿಗೆ ಈ ರೀತಿ ತಪ್ಪು ಹಿಂಬರಹ ಕೊಟ್ಟಿರುವುದು ಈ ಇಬ್ಬರು ಅಧಿಕಾರಿಗಳ ಕರ್ತವ್ಯ ಲೋಪವಾಗಿರುತ್ತದೆ.

ಆದರೆ, ಸದರಿ ಪ್ರಕರಣ ಬೆಳಕಿಗೆ ಬಂದ ನಂತರ ಮೊತ್ತೊಂದು ಭದ್ರತಾ ಲೋಪದ ಪ್ರಕರಣದಲ್ಲಿ ವಿಧಾನ ಸಭೆಯ ಆಯವ್ಯಯ ಮಂಡನೆಯ ಕಲಾಪದ ವೇಳೆ ಸುಮಾರು 72 ವಯಸ್ಸಿನ ವಕೀಲ ನೊಬ್ಬ ಸಭೆಯ ಕಲಾಪದ ವೀಕ್ಷಣೆಯ ಪಾಸ್ ಹೊಂದಿದ್ದು, ಈತ ವೀಕ್ಷಣೆಯ ಗ್ಯಾಲರಿಗೆ ಬದಲಾಗಿ ಸದನದ ಸಭಾಂಗಣದ ಒಳಗಡೆ ಪ್ರವೇಶ ಮಾಡಿದ್ದು, ಇಂತಹ ಭದ್ರತಾ ಲೋಪದ ಅಪರಾದದಲ್ಲಿ ತಕ್ಷಣ ಆತನ ಮೇಲೆ ದಿನಾಂಕ:07.07.2023 ರಲ್ಲಿ ಕಾನೂನು ಕ್ರಮ ಕೈಗೊಂಡು FIR ದಾಖಲಿಸಿ, ನ್ಯಾಯಧೀಶರ ಮುಂದೆ ಹಾಜರು ಪಡಿಸಿ, ಹೆಚ್ಚಿನ ತನಿಖೆಗೆ ವಶಕ್ಕೆ ಪಡೆಯಲಾಗಿರುತ್ತದೆ.

ಆದರೆ, ಈತ ಅಕ್ರಮವಾಗಿ ವೇದಿಕೆ ಮೇಲೆ ಬಂದಿರುವುದು ದೃಡಪಟ್ಟು ಶಿವಣ್ಣನು ವೇದಿಕೆ ಮೇಲೆ ಮುಖ್ಯಮಂತ್ರಿಗಳ ಜೊತೆ ಕೈಬೀಸಿಕೊಂಡು ಕಾನೂನು ಉಲ್ಲಂಘಿಸುತ್ತಿರುವುದನ್ನು ಅಕ್ರಮವಾಗಿ ಬಂದಿರುವುದನ್ನು ಪರಿಗಣಿಸಿಯೇ ವೇದಿಕೆಯಲ್ಲಿ ಭದ್ರತಾ ಸಿಬ್ಬಂದಿ ಈತನನ್ನು ವಶಕ್ಕೆ ಪಡೆದಿರುವ ಚಿತ್ರಣವೆ ಸಾಕ್ಷಿಯಾಗಿದೆ. ಆದರೆ, ಈ ಸಂಧರ್ಭದಲ್ಲಿ ಈತನ ವಿರುದ್ಧವು ವಿಧಾನ ಸಭೆಯ ಭದ್ರತಾ ಲೋಪದ ಪ್ರಕರಣದಂತೆ ಕ್ರಮ ಕೈಗೊಂಡಂತೆ, ಕ್ರಮ ಕೈಗೊಳ್ಳಬೇಕಿತ್ತು. ಆದರೆ, ಈತನ ವಿರುದ್ಧ ಯಾವುದೇ ಕ್ರಮ ಜರುಗಿಸದೇ ಇದ್ದ ಕಾರಣ ಶಿವಣ್ಣನ ವಿರುದ್ಧ ಈ ಹಿಂದೆ ಹಲವಾರು ಆರೋಪಗಳು ಕೇಳಿ ಬಂದಿದ್ದು, ಎಲ್ಲವನ್ನು ಸಾಕ್ಷಿ ಸಮೇತ ವಿವರಿಸಿ ಲಗತ್ತಿಸಿ ಮಾನ್ಯ ಘನತೆವೆತ್ತ ರಾಜ್ಯಪಾಲರಿಗೆ ದೂರು ಕೊಟ್ಟಿದಾಗ್ಯೂ ಈ ಆರೋಪದ ಬಗ್ಗೆ ತನಿಖೆಯನ್ನೇ ನಡೆಸದೆ ವಿಳಂಬ ಮಾಡಲಾಗಿ ಮೇಲಿನ ಆರೋಪ ಸುದ್ದಿ ಮಾಧ್ಯಮದಲ್ಲಿ ಪ್ರಚಾರವಾಗಿದ್ದು, ಈ ಬಗ್ಗೆ ಮಾಧ್ಯಮದವರು ನನ್ನ ಸಂಪರ್ಕಕ್ಕೆ ಬಂದಾಗ ಸದರಿ ಆರೋಪದ ಬಗ್ಗೆ ನಾನು ಸಹ ಹೇಳಿಕೆ ಕೊಟ್ಟಿರುತ್ತೇನೆ ಸುದ್ದಿ ಮಾಧ್ಯಮದಲ್ಲಿ ವಿಷಯ ಬೆಳಕಿಗೆ ಬಂದ ನಂತರ ಸಂಬಂಧಪಟ್ಟ ಎ.ಸಿ.ಪಿ ರವರು ನನಗೆ ಹಿಂಬರಹ ಕೊಟ್ಟಿರುತ್ತಾರೆ. ಇದು ಎಷ್ಟು ಸಮಂಜಸ?

.....3

ತದನಂತರ ಸದರಿ ಆರೋಪದ ಬಗ್ಗೆ ನಾನು ಪರಿಷತ್ತಿನಲ್ಲಿ ಎರಡು ಬಾರಿ ಪ್ರಸ್ತಾಪಿಸಲಾಗಿದ್ದು, ಎರಡೂ ಬಾರಿಯೂ ವಿಭಿನ್ನವಾಗಿ ಉತ್ತರ ಒದಗಿಸಲಾಗಿದೆ. ಈ ಬಗ್ಗೆ ನಾನು ಮಾನ್ಯ ಸಭಾಧ್ಯಕ್ಷರಿಗೆ ಹಕ್ಕುಚ್ಯುತಿಯಾಗಿರುವ ಬಗ್ಗೆ ಪತ್ರ ಬರೆಯಲಾಗಿ ಈ ವಿಷಯದ ಬಗ್ಗೆ ತಮ್ಮ ಇಲಾಖೆಯಿಂದ ಹಲವಾರು ಪತ್ರ ವ್ಯವಹಾರ ನಡೆಸಿರುವುದು ಹಾಗೂ ಖುದ್ದು ತಾವುಗಳೇ ದಿನಾಂಕ:13.05.2025 ರಂದು ತಕ್ಷಣ ವರದಿ ಕೊಡುವಂತೆ ಪತ್ರ ಬರೆದಿರುವುದು ನನ್ನ ಗಮನಕ್ಕೆ ಬಂದಿದ್ದು, ಇಲ್ಲಿಯವರೆಗೂ ತಮ್ಮ ಇಲಾಖೆಯಿಂದ ಯಾವುದೇ ವರದಿ ಬಂದಿಲ್ಲವೆಂಬುದು ತಿಳಿದು ಬಂದಿರುತ್ತದೆ.

ಸದರಿ ಪ್ರಕರಣದ ಬಗ್ಗೆ ಇಷ್ಟೇಲ್ಲ ವ್ಯವಹಾರ ಒಂದು ಕಡೆಯಾದರೆ ಮತ್ತೊಂದು ಕಡೆ ಆರೋಪಿಯಾಗಿರುವ ಶಿವಣ್ಣ ನ್ಯಾಯಾಲಯಕ್ಕೆ ಪ್ರವೇಶಿಸಿದ್ದು, ಎರಡು ವಿಮುಖದ್ದಮೆಯನ್ನು ಎ.ಸಿ.ಎಂ.ಎಂ. ನ್ಯಾಯಾಲಯದ ಎಂಟನೇ ಕೋರ್ಟ್‌ನಲ್ಲಿ ದಾಖಲಿಸಿದ್ದು, ಮೊದಲ ಪ್ರಕರಣ ಪಿ.ಸಿ.ಆರ್ 11232/24 ರಲ್ಲಿ ಮಾಡಿರುವ ಆರೋಪದ ಬಗ್ಗೆ ಹಲವು ದಿನಗಳು ನ್ಯಾಯಾಲಯಕ್ಕೆ ಈತ ಮತ್ತು ಈತನ ವಕೀಲರು ಹಾಜರಾಗದೇ ಸದರಿ ನ್ಯಾಯಾಲಯದಲ್ಲಿ ಪ್ರಕರಣವನ್ನು ಮುಂದಿನ ಕ್ರಮಕ್ಕಾಗಿ ಮತ್ತೊಂದು 42ನೇ ನ್ಯಾಯಾಲಕ್ಕೆ ವರ್ಗಾವಣೆ ಮಾಡಿರುತ್ತಾರೆ. ಇದರಲ್ಲಿ ಶಿವಣ್ಣನನ್ನು ನ್ಯಾಯಾಧೀಶರು ಕರೆಸಿ ವಿಚಾರಣೆ ಮಾಡಲಾಗಿ ದಿನಾಂಕ:25.09.2024 ರಂದು ದಿನಾಂಕ:20.05.2023 ರಂದು ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಸಿದ್ದರಾಮಯ್ಯರವರೇ ನೀಡಿದ್ದ ವಿವಿಐಪಿ ಪಾಸ್ ನೊಂದಿಗೆ ಸ್ವತಃ ಸಿದ್ದರಾಮಯ್ಯನವರ ವಾಹನದಲ್ಲಿಯೇ ಹೋಗಿದ್ದು, ಸದರಿ ಕಾರ್ಯಕ್ರಮದಲ್ಲಿ ಮಾನ್ಯ ಸಿದ್ದರಾಮಯ್ಯನವರು ಮಾನ್ಯ ರಾಹುಲ್ ಗಾಂಧಿ, ನಿತೀಶ್ ಕುಮಾರ್, ತೇಜಸ್ವಿ ಯಾದವ್, ಸ್ಟಾಲೀನ್ ಮತ್ತ ಇತರ ಗಣ್ಯರಿಗೆ ನನ್ನನ್ನು ಪರಿಚಯ ಮಾಡಿಸಿ ಸಮಾಜ ಸೇವೆ ಕೆಸಲ ಮಾಡುತ್ತಿರುವ ಬಗ್ಗೆ ತಿಳಿಸಿರುತ್ತಾರೆ. ಸದರಿ ಕಾರ್ಯಕ್ರಮದ ವೇದಿಕೆಯಲ್ಲಿ ಇದ್ದು, ಮಾನ್ಯ ರಾಜ್ಯಪಾಲರು ಕಾರ್ಯಕ್ರಮಕ್ಕೆ ಬಂದ ನಂತರ ನಾನು ವೇದಿಕೆಯಿಂದ ಕೆಳಗೆ ಬಂದ ನಂತರ ನಾನು ವೇದಿಕೆಯಿಂದ ಕೆಳಗೆ ಬಂದು ಕುಳಿತಿರುತ್ತೇನೆಂದು ಹೇಳಿಕೆಕೊಟ್ಟಿರುತ್ತಾನೆ.

ಮತ್ತೊಂದು ಪ್ರಕರಣ ಪಿಸಿಆರ್ 11231/24 ರಲ್ಲಿ 8ನೇ ನ್ಯಾಯಾಲಯದಲ್ಲಿ ಈ ಕಾರ್ಯಕ್ರಮದ ಹಿಂದಿನ ದಿನಾಂಕ:19.05.2023 ರಂದು ಕಾಂಗ್ರೇಸ್ ಪಕ್ಷದ ನಾಯಕರು ಕಾರ್ಯಕರ್ತರುಗಳಿಗೆ ಪಾಸ್‌ಗಳನ್ನು ಕೊಟ್ಟಿರುತ್ತಾರೆ. ನನಗೆ ನಿಯೋಜಿತ ಮುಖ್ಯಮಂತ್ರಿಗಳ ಕಾರ್ಯಾಲಯದಿಂದ ವಿವಿಐಪಿ ಪಾಸ್‌ನ್ನು ಕೊಟ್ಟಿರುತ್ತಾರೆ ಎಂದು ಹೇಳಿಕೆ ಕೊಟ್ಟಿರುತ್ತಾನೆ. ಈ ಹೇಳಿಕೆ ಕೊಡುವ ಸಂದರ್ಭದಲ್ಲಿ ನನ್ನನ್ನು ಉದ್ದೇಶ ಪೂರ್ವಕವಾಗಿ ಗುರಿಯಾಗಿಸಿಕೊಂಡು ಅಪರಾಧಿ ನಂ.1 ಹೆಚ್ಚ ವಿಶ್ವನಾಥ್ ಎಂದು ಹಾಲಿ ವಿಧಾನ ಪರಿಷತ್ತ ಸದಸ್ಯನಾದ ನನ್ನನ್ನು ಈ ರೀತಿ ಕರೆದಿರುತ್ತಾನೆ.

ಆದರೆ, ಈತ ಒಂದೊಂದು ನ್ಯಾಯಾಲಯದಲ್ಲಿ ಕೊಟ್ಟಿರುವ ಹೇಳಿಕೆ ಒಂದೊಂದು ರೀತಿಯಲ್ಲಿ ವಿಭಿನ್ನ ರೀತಿಯಾಗಿದ್ದು, ಎಲ್ಲಾ ಅಂಶಗಳನ್ನು ಗಮನಿಸಿದರೆ ಈತ ಅಕ್ರಮವಾಗಿಯೇ ವೇದಿಕೆ ಮೇಲೆ ಬಂದಿದ್ದು, ನ್ಯಾಯಾಲಯದ ಮುಖಾಂತರ ಸತ್ಯ ಮರೆಮಾಚಲು ಪ್ರಯತ್ನಿಸಿರುತ್ತಾನೆ. ಜೊತೆಗೆ ಮುಖ್ಯಮಂತ್ರಿಗಳ ಹೆಸರು ಬಳಸಿಕೊಂಡು ಪ್ರಕರಣದ ದಾರಿ ತಪ್ಪಿಸುವ ಪ್ರಯತ್ನ ಮಾಡಿರುತ್ತಾನೆ. ಶಿವಣ್ಣನೇ ನ್ಯಾಯಾಲಯದಲ್ಲಿ ಈ ರೀತಿ ವಿಭಿನ್ನ ಹೇಳಿಕೆ ಕೊಟ್ಟಿರುವಾಗ ನನಗೆ ಸಹಾಯಕ ಪೊಲೀಸ್ ಆಯುಕ್ತರು, ತನಿಖೆಯನ್ನೇ ನಡೆಸದೇ ಖುದ್ದು, ಮುಖ್ಯಮಂತ್ರಿಗಳೇ ಕರೆದುಕೊಂಡು ಬಂದಿರುವುದಾಗಿ ತಿಳಿದು ಬಂದಿರುತ್ತದೆ ಎಂದು ಹೇಗೆ ಹಿಂಬರಹ ಕೊಟ್ಟಿರುತ್ತಾರೆ? ಈ ರೀತಿ ಹಿಂಬರಹ ಕೊಡಲು ಮುಖ್ಯಮಂತ್ರಿಗಳಿಂದ ಹೇಳಿಕೆ ಪಡೆದಿರಬೇಕು ಆ ಹೇಳಿಕೆಯನ್ನು

.....4

ಲಗತ್ತಿಸಿರಬೇಕು ಅಥವಾ ಶಿವಣ್ಣನನ್ನು ಮುಖ್ಯಮಂತ್ರಿಗಳು ಕೈಹಿಡಿದು ವೇದಿಕೆ ಮೇಲೆ ಕರೆದುಕೊಂಡು ಹೋಗಿರುವ ಚಿತ್ರಣವಿರಬೇಕು ಈ ಎರಡು ಇಲ್ಲದೇ ನಾನೊಬ್ಬ ಹಾಲಿ ವಿಧಾನ

ಪರಿಷತ್ತಿನ ಸದಸ್ಯವೆಂಬುದನ್ನು ಮರೆತು ಬೇಜವಾಬ್ದಾರಿತನದಿಂದ ತಮ್ಮ ಭದ್ರತಾ ಲೋಪವನ್ನು ಮುಚ್ಚಿಕೊಂಡು ಆರೋಪಿಯನ್ನು ರಕ್ಷಣೆ ಮಾಡುವ ಉದ್ದೇಶದಿಂದಲೇ ಈ ರೀತಿ ತಪ್ಪು ಹಿಂಬರಹ ಕೊಟ್ಟಿರುತ್ತಾರೆಯೇ ಹೊರತು ಇದು ವಾಸ್ತವಾಂಶದ ಹಿಂಬರಹವಾಗಿರುವುದಿಲ್ಲ. ಒಂದು ವೇಳೆ ಇವರ ಹಿಂಬರಹವೇ ನಿಜವಾಗಿದ್ದು, ಅಂತಿಮ ವರದಿಯಾಗಿದ್ದರೆ ಸರ್ಕಾರಕ್ಕಾಗಲಿ, ರಾಜ್ಯಪಾಲರಿಗಾಗಲಿ, ನನಗಾಗಲಿ ಇಲ್ಲಿಯವರೆಗೆ ತಮ್ಮಿಂದಾಗಲಿ ಪೊಲೀಸ್ ಮಹಾ ನಿರ್ದೇಶಕರಿಂದಾಗಲಿ ಮುಖ್ಯ ಕಾರ್ಯದರ್ಶಿಗಳಿಂದಾಗಲಿ ಯಾಕೆ ಇಲ್ಲಿಯವರೆಗೂ ರಾಜ್ಯಪಾಲರಿಗೆ ವರದಿಕೊಟ್ಟಿರುವುದಿಲ್ಲ?

ಸದರಿ ಪ್ರಕರಣ ಬೆಳಕಿಗೆ ಬರುವ ಮೊದಲು ಶಿವಣ್ಣ 2017 ರಲ್ಲಿ ವಿಧಾನ ಪರಿಷತ್ತಿನ ಸದಸ್ಯನಾಗಬೇಕೆಂಬ ಉದ್ದೇಶದಿಂದಲೇ ಅಂದು ಈತನ ಮೇಲೆ ವಂಚನೆ ಪ್ರಕರಣವನ್ನು ನ್ಯಾಯಾಲಯದಲ್ಲಿ ಬಾಕಿ ಇದ್ದು, ಇದನ್ನು ಮುಚ್ಚಿಟ್ಟು ಗೌರವ ಡಾಕ್ಟರೇಟ್‌ಗೆ ಅರ್ಹತೆ ಇಲ್ಲದಿದ್ದರು ತಪ್ಪು ಮಾಹಿತಿ ನೀಡಿ ನಿಯಮ ಬಾಹಿರವಾಗಿ ಅಲಯನ್ಸ್ ವಿಶ್ವವಿದ್ಯಾಲಯದ ಮೂಲಕ ಆಯ್ಕೆ ಮಾಡಿಸಿ ರಾಜ್ಯಪಾಲರಿಂದ ಗೌರವ ಡಾಕ್ಟರೇಟ್ ಸ್ವೀಕೃತವಾಗಿರುವ ಪ್ರಕರಣವನ್ನು ಪ್ರಶ್ನಿಸಿ, ಶ್ರೀ ಜಯಲಿಂಗೇಗೌಡವೆಂಬುವರು 2019 ರಲ್ಲಿ ರಾಜ್ಯಪಾಲರಿಗೆ ಹಾಗೂ ಸರ್ಕಾರಕ್ಕೆ ದೂರು ದಾಖಲಿಸಿದ್ದು, ಸದರಿ ದೂರನ್ನು ಸರ್ಕಾರದ ಆದೇಶ ಸಂಖ್ಯೆ:ಇಡಿ/43/ಯುಆರ್‌ಸಿ/2020, ದಿನಾಂಕ:26.03.2024 ರಂದು ತಜ್ಞರ ಸಮಿತಿಯನ್ನು ರಚನೆ ಮಾಡಿ ಕ್ರಮಕ್ಕೆಗೊಂಡು ವರದಿಕೊಡುವಂತೆ ಉನ್ನತ ಶಿಕ್ಷಣ ಇಲಾಖೆಯಲ್ಲಿ ಆದೇಶ ಹೊರಡಿಸಲಾಗಿದೆ. ಸದರಿ ಪ್ರಕರಣವನ್ನು ಸಹ ಈಗ ಸಹಾಯಕ ಪೊಲೀಸ್ ಆಯುಕ್ತರು ನೀಡಿರುವ ಹಿಂಬರಹವನ್ನು ಬಳಸಿಕೊಂಡು ಈ ಪ್ರಕಣವನ್ನು ಮುಚ್ಚಿ ಹಾಕಲು ಶಿವಣ್ಣ ಪ್ರಯತ್ನಿಸಿರುತ್ತಾನೆ. ಇದು ಸಹ ಒಂದು ಗಂಭೀರವಾದ ಆರೋಪವಾಗಿರುತ್ತದೆ.

ವಿಷಯ ಈಗಿರುವಾಗ ತಮ್ಮ ಇಲಾಖೆಯ ಸಹಾಯಕ ಪೊಲೀಸ್ ಆಯುಕ್ತರು ಕೊಟ್ಟಿರುವ ತಪ್ಪು ಹಿಂಬರಹಗಳಿಂದ ನಾನು ಈ ದಿನ ನ್ಯಾಯಾಲಯ ಪ್ರವೇಶ ಮಾಡಲು ಕಾರಣವಾಗಿ ನಮ್ಮ ಗೌರವಕ್ಕೆ ಮತ್ತು ನಮ್ಮ ಸಾರ್ವಜನಿಕ ಜೀವನಕ್ಕೆ ಅಲ್ಲದೇ ನ್ಯಾಯಾಲಯದ ಎಲ್ಲಾ ಹಾಗೂ ಹೋಗುಗಳಿಗೆ ಏನೆಲ್ಲ ಅನಹೂತಕ್ಕೆ ಕಾರಣವಾಗಿದೆ. ಎಲ್ಲವ್ರೂಗಳಿಗೂ ಇವರೇ ಕಾರಣರಾಗಿದ್ದು, ಅಲ್ಲದೇ, ಶಿವಣ್ಣನು ನಮ್ಮ ವಿರುದ್ಧ ನ್ಯಾಯಾಲಯದಲ್ಲಿ ಒಂದು ಮೊಕದ್ದಮೆ ದಾಖಲಿಸಿ ಪ್ರಕರಣದ ವಿಚಾರಣೆ ನಡೆಸುವ ಮೊದಲೇ ತಾನು ಹೇಳಿಕೆ ಕೊಡುವಾಗ ನಮ್ಮನ್ನು ಅಪರಾಧಿಗಳೆಂದು ನಿರ್ಧಾರ ಮಾಡಿದ ಹಾಗೆ ಹೇಳಿಕೆ ಕೊಟ್ಟಿರುವುದು ನಮ್ಮ ಗೌರವಕ್ಕೆ ಧಕ್ಕೆ ಉಂಟಾಗಿದ್ದು, ಇಷ್ಟಕ್ಕೆಲ್ಲ ಸಹಾಯಕ ಪೊಲೀಸ್ ಆಯುಕ್ತರೇ ಜವಾಬ್ದಾರಿಯುತರಾಗಿರುತ್ತಾರೆ.

ಆದ್ದರಿಂದ, ಮೇಲಿನ ಎಲ್ಲಾ ಅಂಶಗಳನ್ನು ತಾವುಗಳು ಕೂಲಂಕಷವಾಗಿ ಪರಿಶೀಲಿಸಿ, ಈ ಪ್ರಕರಣವನ್ನು ವಯಕ್ತಿಕವಾಗಿ ತಾವುಗಳೇ ಗಂಭೀರವಾಗಿ ಪರಿಗಣಿಸಿ, ನನಗೆ ತಪ್ಪು ಹಿಂಬರಹ ಕೊಟ್ಟಿರುವ ಇಬ್ಬರು ಸಹಾಯಕ ಪೊಲೀಸ್ ಆಯುಕ್ತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದು ಹಾಗೂ ಏನು ತಾನು ಭದ್ರತಾ ಲೋಪ ಆರೋಪದಲ್ಲಿ ಕಾನೂನು ಉಲ್ಲಂಘಿಸಿರುವ ಆರೋಪಿಯಾಗಿದ್ದರು ಶಿವಣ್ಣ ತನ್ನ ಅಪಾರದ ಪ್ರಕರಣ ಮುಚ್ಚಿ ಹಾಕಲು ಇಷ್ಟೆಲ್ಲ ಅನಾಹುತ ನಡೆಸಿ ಈ ದಿನ ನನ್ನನ್ನು ಅಪರಾದಿ ಎಂದು ಹೇಳಿಕೆ ಕೊಟ್ಟಿದ್ದು, ನನ್ನ ಗೌರವಕ್ಕೆ ಚ್ಯುತಿಯಾಗಿದ್ದು,

.....5

ಈತ ನಮ್ಮ ವಿರುದ್ಧ 10 ಕೋಟಿ ಮಾನ ಹಾನಿ ಪ್ರಕರಣ ದಾಖಲಿಸಿದ್ದಾನೆ ಇಂತಹ ಮಾನ ಹಾನಿ ಪ್ರಕರಣವನ್ನು ನಮ್ಮ ವಿರುದ್ಧ ಅಪರಾದಿಯೆಂದು ಹೇಳಿಕೆ ಕೊಟ್ಟು ನಮ್ಮ ಗೌರವಕ್ಕೆ ಚ್ಯುತಿಯಾಗಿರುವುದಕ್ಕೆ ಶಿವಣ್ಣನ ವಿರುದ್ಧವೇ ತಮ್ಮ ಇಲಾಖೆಯಿಂದಲೇ 10 ಕೋಟಿ ಹಣದ ಮಾನ ಹಾನಿ ಪ್ರಕರಣವನ್ನು ತಕ್ಷಣ ದಾಖಲಿಸುವಂತೆ ತಾವುಗಳು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ತಮ್ಮನ್ನು ಕೋರುತ್ತೇನೆ.

<u>ಲಗತ್ತು ದಾಖಲೆಗಳು:</u>

1. ನ್ಯಾಯಾಲಯದ ಪ್ರತಿಗಳ.
2. ಎಸಿಪಿಗಳ ಹಿಂಬರಹಗಳು.
3. ನಕಲಿ ಡಾಕ್ಯರೇಟ್ ಆರೋಪದ ಪ್ರತಿ.

ಇಂತಿ,

(ಅಡಗೂರು ಎಚ್. ವಿಶ್ವನಾಥ್)

ಅಡಗೂರು ಎಚ್.ವಿಶ್ವನಾಥ್ ಬಿ.ಎಸ್ಸಿ., ಎಲ್.ಎಲ್.ಬಿ.,
ಕರ್ನಾಟಕ ವಿಧಾನ ಪರಿಷತ್ ಸದಸ್ಯರು
ಮಾಜಿ ಸಚಿವರು, ಕರ್ನಾಟಕ ಸರ್ಕಾರ
ಮಾಜಿ ಲೋಕಸಭಾ ಸದಸ್ಯರು, ಕರ್ನಾಟಕ

ಕಛೇರಿ ವಿಳಾಸ : ಸಾರ್ವಜನಿಕ ಕಛೇರಿ ಕಟ್ಟಡ
ಕಾಡಾ ಕಛೇರಿ ಆವರಣ
ಮೈಸೂರು- 570001
ಮೊ : +91 96639 96390

KARNATAKA GUVERNOR'S SECRETARIAT
No: 1337
06/02/25
RECEIVED
RAJBHAVAN, BENGALURU

ಸಂಖ್ಯೆ :504/ಅಎಚ್ವಿ/ಕವಿಪ/2024-25

ದಿನಾಂಕ : 5.2.2025

08022254102

ರವರಿಗೆ,
ಘನತೆವೆತ್ತ ರಾಜ್ಯಪಾಲರು
ಕರ್ನಾಟಕ ಸರ್ಕಾರ,
ರಾಜಭವನ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ವೇದಿಕೆಯ ಭದ್ರತಲೋಪದ ಬಗ್ಗೆ ಪ್ರಸ್ತಾಪಿಸಿದ ದೂರಿನ ವಿಷಯದಲ್ಲಿ ತಪ್ಪು ಮಾಹಿತಿ ಕೊಟ್ಟಿರುವ ಹಾಗೂ ನನ್ನ ಹಕ್ಕು ಚ್ಯುತಿಯಾಗಲು ಕಾರಣಾರಾಗಿರುವ ಅಧಿಕಾರಿಗಳ ವಿರುದ್ಧ ಹಾಗೂ ಸದರಿ ದೂರಿನ ಬಗ್ಗೆ ಆರೋಪಿ ಬಿ.ಎಸ್ ಶಿವಣ್ಣನ ವಿರುದ್ಧ ಕಾನೂನಿನ ಕ್ರಮ ಕೈಗೊಳ್ಳಲು ಆದೇಶ ಮಾಡುವ ಕುರಿತು.

****

ಮೇಲ್ಕಂಡ ಆರೋಪಕ್ಕೆ ಸಂಬಂಧಿಸಿದಂತೆ ನಾನು ತಮಗೆ ಹಲವು ದೂರುಗಳನ್ನು ಸಲ್ಲಿಸಿದ್ದು, ತಮ್ಮ ಕಛೇರಿಯಿಂದಲು ತನಿಖೆ ನಡೆಸಿ ಕಾನೂನು ಕ್ರಮ ಕೈಗೊಂಡು ತಮ್ಮ ಸಚಿವಾಲಯಕ್ಕೆ ವರದಿ ಕೊಡುವಂತೆ ಮುಖ್ಯ ಕಾರ್ಯದರ್ಶಿಗಳಿಗೆ ಹಾಗೂ ಪೊಲೀಸ್ ಮಹಾ ನಿರ್ದೇಶಕರಿಗೆ ತಿಳಿಸಲಾಗಿರುತ್ತದೆ.ವಿಷಯ ಹೀಗಿರುವಾಗ ಸದರಿ ಆರೋಪದ ಬಗ್ಗೆ ತನಿಖೆ ನಡೆಸಿ ಕೈಗೊಂಡ ಕ್ರಮದ ಬಗ್ಗೆ ಇಲ್ಲಿಯವರೆವಿಗೂ ತಮಗಾಗಲಿ ಅಥವಾ ನನಗಾಗಲಿ ಯಾವುದೆ ವರದಿ ಸ್ವೀಕೃತವಾಗಿರುವುದಿಲ್ಲ.

ನಿಯಮ ಹೀಗಿರುವಾಗ ಸದರಿ ಪ್ರಕರಣದಲ್ಲಿ ತನಿಖೆಯನ್ನೆ ನಡೆಸದೆ ಮುಖ್ಯಮಂತ್ರಿಗಳ ಪದಗ್ರಹಣ ಕಾರ್ಯಕ್ರಮಕ್ಕೆ ಸಂಬಂಧ ಪಟ್ಟ ಹಲಸೂರು ಗೇಟ್ ವಿಭಾಗದ ಸಹಾಯಕ ಪೊಲೀಸ್ ಆಯುಕ್ತರು ದಿನಾಂಕ: 10-07-2023 ರಂದು ಈ ಪ್ರಕರಣದ ಬಗ್ಗೆ ಶಿವಣ್ಣನನ್ನು ಕರೆಸಿ ವಿಚಾರಣೆ ನಡೆಸಲಾಗಿ ತಾವು ಮಾಡಿರುವ ಆರೋಪವನ್ನು ಅಲ್ಲಗಳಿದಿರುವುದಾಗಿ ಶಿವಣ್ಣರವರು ತಿಳಿಸಿರುತ್ತಾರೆಂದು ಸದರಿ ಆರೋಪದ ತನಿಖೆಯನ್ನು ನಡೆಸದೆ ಆರೋಪಿಯ ಹೇಳಿಕೆಯನ್ನೆ ಆಧರಿಸಿ ನನಗೆ ಹಿಂಬರಹವನ್ನು ಕೊಟ್ಟಿರುತ್ತಾರೆ. ಇದು ಎಷ್ಟು ಸಮಂಜಸ?

ತದನಂತರ ನಾನು ಪ್ರಕರಣದ ತನಿಖೆ ನಡೆಸಿ ಕ್ರಮ ಕೈಗೊಳ್ಳದೆ ವಿಳಂಬ ಮಾಡುತ್ತಿದ್ದು ಬಗ್ಗೆ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಹಾಗೂ ನಗರ ಪೊಲೀಸ್ ಆಯುಕ್ತರಿಗೆ ಈ ವಿಷಯದ ಬಗ್ಗೆ ಕಾನೂನಾತ್ಮಕವಾಗಿ ಗಮನ ಸೆಳೆಯಲು ವಕೀಲರಿಂದ ನೋಟೀಸ್ ಕೂಡ ಜಾರಿ ಮಾಡಿಸಿರುತ್ತೆನೆ. ಸದರಿ ನೋಟೀಸ್‌ಗೂ ಕೂಡ ಸಂಬಂಧ ಪಟ್ಟ ವಿಭಾಗದ ಮತ್ತೊಬ್ಬ ಸಹಾಯಕ ಪೊಲೀಸ್ ಆಯುಕ್ತರಿಂದ ದಿನಾಂಕ:06-10-2023 ರಂದು ಈ ದೂರು ಅರ್ಜಿಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಶಿವಣ್ಣ ರವರನ್ನು ವಿಚಾರಣೆ ನಡೆಸಿದ್ದು, ದಿನಾಂಕ:20-05-2023 ರಂದು ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಶ್ರೀ ಸಿದ್ಧರಾಮಯ್ಯರವರೆ ಖುದ್ದು ವೇದಿಕೆಗೆ ಕರೆದುಕೊಂಡು ಪ್ರವೇಶಿಸಿರುವುದು ತಿಳಿದುಬಂದಿರುತ್ತದೆ ಎಂದು ಹಿಂಭರಹದ ಮೂಲಕ ತಿಳಿಸಿರುತ್ತಾರೆ. ಆದರೆ ಇಲ್ಲಿಯೂ ಸಹ ತನಿಖೆ ನಡೆಸಿರುವುದಾಗಿ ತಿಳಿಸಿರುವುದಿಲ್ಲ. ಆದರೆ, ನಾನೂ ಈ ಬಗ್ಗೆ ವಿಧಾನಪರಿಷತ್ತಿನ ಸದನದಲ್ಲಿ ಎರಡು ಭಾರಿ ಪ್ರಸ್ತಾಪಿಸಿದಾಗ ಸರ್ಕಾರ ಕೊಟ್ಟಿರುವ ಉತ್ತರವು ಸಹ ಒಂದೊಂದು ರೀತಿ ವಿಭಿನ್ನವಾಗಿದ್ದು, ಈ ಬಗ್ಗೆ ನನ್ನ ಹಕ್ಕು ಚ್ಯುತಿಯಾಗಿರುವ ಕಾರಣ ಮಾನ್ಯ ಸಭಾಪತಿಯವರಲ್ಲಿ ಮನವಿ ಮಾಡಿರುತ್ತೆನೆ. ಈ ಬಗ್ಗೆ, ಹಕ್ಕು ಚ್ಯುತಿ ಸಮಿತಿಯಿಂದಲು ವರದಿ ಕೋರಿ ಗೃಹ ಸಚಿವಾಲಯಕ್ಕೆ ಪತ್ರ ಬರೆಯಲಾಗಿದೆ.

ಈ ಪ್ರಕರಣದಲ್ಲಿ ಆರೋಪಿಯಾಗಿರುವ ಬಿ.ಎಸ್. ಶಿವಣ್ಣನೇ ನನ್ನ ವಿರುದ್ಧ ಎರಡು ಮೊಕದ್ದಮೆ ದಾಖಲಿಸಿರುತ್ತಾರೆ. ಮೊದಲನೇಪ್ರಕರಣದಲ್ಲಿ ನನ್ನನ್ನು ಹಾಗೂ ಪಬ್ಲಿಕ್ ಟಿ.ವಿ ಯನ್ನು ಪರ್ಟೀದಾರರನ್ನಾಗಿ ಮಾಡಿರುತ್ತಾರೆ. ಮತ್ತೊಂದು ಪ್ರಕರಣದಲ್ಲಿ ನನ್ನನ್ನು, ದಿಗ್ವಿಜಯ ನ್ಯೂಸ್ ಚಾನೆಲ್ ಮತ್ತೊಬ್ಬ ದೂರುದಾರ ಮಾಗಡಿಯ ಮಾಜಿ ಶಾಸಕರಾದ ಎ.ಮಂಜುರವರನ್ನು ಪಾರ್ಟಿದಾರರನ್ನಾಗಿ ಮಾಡಿ ನಗರದ ಎಂಟನೇ ಎ.ಸಿ.ಎಮ್.ಎಮ್ ನ್ಯಾಯಲಯದಲ್ಲಿ ಪ್ರಕರಣ ದಾಖಲಿಸಿರುತ್ತಾರೆ.

ಆದರೆ, ಶಿವಣ್ಣ ನ್ಯಾಯಲಯದಲ್ಲಿ ಪ್ರಕರಣದ ಕುರಿತಾಗಿ ನ್ಯಾಯಧೀಶರ ಮುಂದೆ ಖುದ್ದು ಹೇಳಿಕೆ ಕೊಡುವಾಗ ಒಂದೊಂದು ಪ್ರಕರಣದಲ್ಲಿ ಒಂದೊಂದು ರೀತಿ ವಿಭಿನ್ನ ಹೇಳಿಕೆ ಕೊಟ್ಟಿರುವುದು, ಹಾಗೂ ಸದನದಲ್ಲಿ ಎರಡು ಭಾರಿ ಸರ್ಕಾರ ಉತ್ತರ ಒದಗಿಸಲು ಇವೆಲ್ಲವಕ್ಕೂ, ಮೊದಲು ಸಹಾಯಕ ಪೊಲೀಸ್ ಆಯುಕ್ತರು ತನಿಖೆಯನ್ನೆ ನಡೆಸದೆ ಆರೋಪಿಯ ಹೇಳಿಕೆಯನ್ನೆ ಆಧರಿಸಿ ಕೊಟ್ಟಿರುವ ಹಿಂಬರಹ ಎಲ್ಲಾವೂ ಸಹ ಒಂದೊಂದು ರೀತಿ ವಿಭಿನ್ನವಾಗಿರುತ್ತದೆ. ಇದನ್ನು ಗಮನಿಸಿದರೆ ವಾಸ್ತವಾಂಶದಲ್ಲಿನ ಚಿತ್ರಣದಲ್ಲಿ ಭದ್ರತಲೋಪವಾಗಿರುವುದು ಕಂಡುಬಂದಿದ್ದು, ಈ ಸಂದರ್ಭದಲ್ಲಿ ಭದ್ರತಾ ಸಿಬ್ಬಂದಿಯು ಸಹ ಶಿವಣ್ಣನ ಎಲ್ಲಾ ಜಲಾನವಲನಗಳನ್ನು ಕಂಡು ಬಿ.ಎಸ್ ಶಿವಣ್ಣನ್ನು ವಶಕ್ಕೆ ಪಡೆದಿರುತ್ತಾರೆ. ಆದರೆ ಈ ಪ್ರಕರಣವನ್ನು ಪ್ರಾಥಮಿಕ ಹಂತದಲ್ಲಿಯೇ ಮುಚ್ಚಿ ಹಾಕಲು ಸಂಬಂಧ ಪಟ್ಟ ವಿಭಾಗದ ಸಹಾಯಕ ಪೊಲೀಸ್ ಆಯುಕ್ತರು ಈ ರೀತಿ ತಪ್ಪು ಹಿಂಬರಹ ಕೊಟ್ಟಿರುವುದು ಕಂಡು ಬರುತ್ತದೆ. ಆರೋಪಿಯಾದ ಶಿವಣ್ಣನು ಸಹ ಈ ಹಿಂಬರಹವನ್ನು ಮುಂದಿಟ್ಟು ಕೊಂಡು ತಾನು ಅಕ್ರಮವಾಗಿ ವೇದಿಕೆ ಮೇಲೆ ಬಂದು ಕಾನೂನು ಉಲ್ಲಂಘಿಸಿರುವ ಬಗ್ಗೆ, ತನ್ನ ಮೇಲಿನ ಆರೋಪವನ್ನು ಮುಚ್ಚಿ ಹಾಕಲು ನ್ಯಾಯಲಯದ ಮೆಟ್ಟಿಲೇರಿರುವುದು ಸ್ಪಷ್ಟವಾಗುತ್ತದೆ.

ಆದರೆ, ಪ್ರಕರಣದ ತನಿಖೆಯನ್ನು ನಡೆಸದೆ ನಾನೊಬ್ಬ ಹಾಲಿ ವಿಧಾನ ಪರಿಷತ್ತು ಸದಸ್ಯ ಈ ರೀತಿ ತಪ್ಪು ಹಿಂಭರಹ ಕೊಟ್ಟಿರುವುದು ಈ ಇಬ್ಬರು ಅಧಿಕಾರಿಗಳ ಬೇಜವಬ್ದಾರಿಯಾಗಿರುವುದಲ್ಲದೆ ಗಂಭೀರವಾದ ಕರ್ತವ್ಯ ಲೋಪವಾಗಿರುತ್ತದೆ. ಆದರೆ ಸದರಿ ಪ್ರಕರಣ ಬೆಳಕಿಗೆ ಬಂದ ನಂತರ ಮತ್ತೊಂದು ಭದ್ರತಲೋಪದ ಪ್ರಕರಣದಲ್ಲಿ ವಿಧಾನಸಭೆಯ ಆವರಣ ದ ಮಂಡನೆಯ ಕಲಾಪದ ಮೊಳೆ ಸುಮಾರು 72 ವರ್ಷ ವಯಸ್ಸಿನ ವಕೀಲನೊಬ್ಬರು ಸಭೆಯ ಕಲಾಪದ ವೀಕ್ಷಣೆ ಪಾಸ್ ಬಂದಿದ್ದು, ಈತ ವೀಕ್ಷಣೆಯ ಗ್ಯಾಲರಿಗೆ ಬದಲಾಗಿ ಸದನದ ಸಭಾಂಗಣದ ಒಳಗಡೆ ಪ್ರವೇಶ ಮಾಡಿದ್ದು, ಇಂತಹ ಭದ್ರತ ಲೋಪದ ಅಪರಾಧದಲ್ಲಿ ಆತನನ್ನು ವಶಕ್ಕೆ ಪಡೆದು ತಕ್ಷಣ ಆತನ ಮೇಲೆ ದಿನಾಂಕ:07-07-2023 ರಂದು FIR ದಾಖಲಿಸಿ ನ್ಯಾಯಧೀಶರ ಮೇಲೆ ಆಚಾರು ಪಡಿಸಿ ಹೆಚ್ಚಿನ ತನಿಖೆಗೆ ಪೊಲೀಸರ ವಶಕ್ಕೆ ಪಡೆಯಲಾಗಿರುತ್ತದೆ. ಈ ವಿಷಯ ಎಲ್ಲಾ ಮಾಧ್ಯಮದಲ್ಲು ಪ್ರಚಾರವಾಗಿರುತ್ತದೆ.

ಆದರೆ, ಶ್ರೀ ಬಿ.ಎಸ್. ಶಿವಣ್ಣ ನೆಂಬ ವ್ಯಕ್ತಿ ಅಕ್ರಮವಾಗಿ ವೇದಿಕೆ ಮೇಲೆ ಬಂದಿರುವುದು ಧೃಡ ಪಟ್ಟು, ಶಿವಣ್ಣನು ವೇದಿಕೆ ಮೇಲೆ ನಿಯೋಜಿತ ಮುಖ್ಯಮಂತ್ರಿಗಳ ಜೊತೆ ಕೈಬಿಸಿಕೊಂಡು ಒಡಾಡುತ್ತ ಕಾನೂನು ಉಲ್ಲಂಘಿಸಿರುವುದನ್ನು ಪರಿಗಿಸಿಯೇ ವೇದಿಕೆಯಲ್ಲಿ ಭದ್ರತಾ ಸಿಬ್ಬಂದಿ ಈತನ್ನು ವಶಕ್ಕೆ ಪಡೆದಿರುವುದು ಸಾಕ್ಷಿಯಾಗಿದೆ. ಆದರೆ ಈ ಸಂದರ್ಭದಲ್ಲಿ ಶಿವಣ್ಣನ ವಿರುದ್ಧವು ವಿಧಾನಸಭೆಯ ಭದ್ರತಾಲೋಪದ ಪ್ರಕರಣದಂತೆ ಕ್ರಮ ಕೈಗೊಳ್ಳ ಬೇಕಿತ್ತು ಆದರೆ, ಶಿವಣ್ಣ ವಿರುದ್ಧ ಯಾವುದೇ ಕ್ರಮ ಜರುಗಿಸದೆ ಇದ್ದ ಕಾರಣದಿಂದಲೆ ಶಿವಣ್ಣ ನ ವಿರುದ್ಧ ಈ ಹಿಂದೆ ಕೇಳಿ ಬಂದಿದ್ದ ಹಲವಾರು ಆರೋಪಗಳನ್ನುಸಾಕ್ಷಿ ಸಮೇತ ವಿವರಿಸಿ ಲಗತ್ತಿಸಿ ರಾಜ್ಯಪಾಲರಾದ ತಮಗೆ ದೂರು ಕೊಟ್ಟಿದ್ದಾಗಿ ಈ ಆರೋಪದ ಬಗ್ಗೆ, ಹಲವು ಸುದ್ದಿ ಮಾಧ್ಯಮಗಳು ಪ್ರಚಾರಮಾಡಿದ್ದು

ನನ್ನನ್ನು ಸಹ ಕೆಲವು ಟಿ.ವಿ ಯವರು ಸಂಪರ್ಕಿಸಿದಾಗ ನಾನು ಸಹ ಹೇಳಿಕೆ ಕೊಟ್ಟಿರುತ್ತೆನೆ. ಈ ವಿಷಯ ಸುದ್ದಿ ಮಾಧ್ಯಮದಲ್ಲಿ ಪ್ರಚಾರವಾದ ನಂತರ ಸಂಬಂಧ ಪಟ್ಟ ಎ.ಸಿ.ಪಿ ರವರು ನನಗೆ ತಾತ್ಕಾರವಾಗಿ ಹಿಂಬರಹ ಕೊಟ್ಟಿರುತ್ತಾರೆ.

ತದನಂತರ, ಸದರಿ ಆರೋಪದ ಬಗ್ಗೆ ನಾನು ಪರಿಷತ್ತಿನಲ್ಲಿ ಎರಡೂ ಬಾರಿ ಪ್ರಸ್ತಾಪಿಸಲಾಗಿದ್ದು, ಎರಡೂ ಬಾರಿಯೂ ವಿಭಿನ್ನವಾಗಿ ಉತ್ತರ ಒದಗಿಸಲಾಗಿರುತ್ತದೆ. ಈ ಬಗ್ಗೆ ನಾನು ನನ್ನ ಹಕ್ಕುಚ್ಯುತಿಯಾಗಿದ್ದು, ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಯವರಿಗೆ ಪತ್ರ ಬರೆಯಲಾಗಿ ಈ ವಿಷಯದ ಬಗ್ಗೆ ಗೃಹ ಇಲಾಖೆಯ ಸಚಿವಾಲಯದಿಂದ ಹಲವು ಪತ್ರ ವ್ಯವಹಾರ ನಡೆಸಿದ್ದು, ಹಾಗೂ ದಿನಾಂಕ 13/01/2025 ರಂದು ಪೂರ್ಣ ವರದಿಕೊಡುವಂತೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಿಂದಲೇ ಪತ್ರ ಬರೆದಿರುವುದು ನನ್ನ ಗಮನಕ್ಕೆ ಬಂದಿದ್ದು, ಇಲ್ಲಿಯವರೆವಿಗೂ ಯಾವುದೇ ವರದಿ ಸ್ವೀಕೃತವಾಗಿರುವುದಿಲ್ಲವೆಂದು ನನಗೆ ತಿಳಿದು ಬಂದಿರುತ್ತದೆ.

ಸದರಿ ಪ್ರಕರಣದ ಬಗ್ಗೆ ಇಷ್ಟೆಲ್ಲಾ ವ್ಯವಹಾರ ಒಂದು ಕಡೆಯಾದರೇ ಮತ್ತೊಂದು ಕಡೆ ಆರೋಪಿಯಾಗಿರುವ ಶ್ರೀ ಬಿ.ಎಸ್ ಶಿವಣ್ಣ ನ್ಯಾಯಾಲಯಕ್ಕೆ ದಾಖಲಿಸಿರುವ ಎರಡು ಮೊಕ್ಕದಮ್ಮೆಯನ್ನು ಎಸಿಎಂಎಂ 8ನೇ ನ್ಯಾಯಾಲಯದಲ್ಲಿ ದಾಖಲಿಸಿದ್ದು, ಮೊದಲ ಪ್ರಕರಣ ಪಿಸಿಆರ್ 11232/24 ರಲ್ಲಿ ಮಾಡಿರುವ ಆರೋಪದ ಬಗ್ಗೆ ಹಲವು ದಿನಗಳು ನ್ಯಾಯಾಲಯಕ್ಕೆ ಶಿವಣ್ಣ ಹಾಗೂ ಅತನ ವಕೀಲರು ಸಹ ಹಾಜರಾಗದೆ ಸದರಿ ನ್ಯಾಯಾಲಯದಲ್ಲಿ ಪ್ರಕರಣವನ್ನು ಮತ್ತೊಂದು 42ನೇ ಕೋರ್ಟ್‌ಗೆ ವರ್ಗಾವಣೆ ಮಾಡಿರುತ್ತಾರೆ. ಈ ನ್ಯಾಯಾಲಯದಲ್ಲಿ ನ್ಯಾಯಾಧೀಶರು ಶಿವಣ್ಣನನ್ನು ಕರೆಸಿ ದಿನಾಂಕ 25/09/2024ರಂದು ಖುದ್ದು ಹೇಳಿಕೆ ಪಡೆಯಲಾಗಿದ್ದು, ದಿನಾಂಕ 25/05/2023ರಂದು ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ, ಸಿದ್ದರಾಮಯ್ಯ ರವರೇ ನೀಡಿದ್ದ ವಿವಿಐಪಿ ಪಾಸ್‌ನೊಂದಿಗೆ ಅವರ ಕಾರಿನಲ್ಲಿಯೇ ಹೋಗಿದ್ದು, ಸದರಿ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ರವರು, ರಾಹುಲ್ ಗಾಂಧಿ, ನಿತೀಶ್ ಕುಮಾರ್, ತೇಜಸ್ವಿ ಯಾದವ್, ಸ್ಟಾಲಿನ್ ಮತ್ತು ಇತರೆ ಗಣ್ಯರಿಗೆ ನನ್ನನ್ನು ಪರಿಚಯ ಮಾಡಿಸಿ ಸಮಾಜ ಸೇವೆ ಮಾಡುತ್ತಿರುವ ಬಗ್ಗೆ ತಿಳಿಸಿರುತ್ತಾರೆ.ಸದರಿ ಕಾರ್ಯಕ್ರಮದ ವೇಳೆಯಲ್ಲಿ ರಾಜ್ಯಪಾಲರು ಕಾರ್ಯಕ್ರಮಕ್ಕೆ ಬಂದ ನಂತರ ವೇದಿಕೆಯಿಂದ ಕೆಳಗೆ ಬಂದು ಕುಳಿತುರುವದಾಗಿ ಹೇಳಿಕೆ ಕೊಟ್ಟಿರುತ್ತಾನೆ.

ಮತ್ತೊಂದು ಪ್ರಕರಣ ಪಿಸಿಆರ್ 11231/24ರಲ್ಲಿ 8ನೇ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ ಈ ಕಾರ್ಯಕ್ರಮದ ಹಿಂದಿನ ದಿನ ದಿನಾಂಕ 19/05/2023ರಂದು ಕಾಂಗ್ರೆಸ್ ಪಕ್ಷದ ನ್ಯಾಯಕರು, ಕಾರ್ಯಕರ್ತರುಗಳಿಗೆ ಪಾಸ್‌ಗಳನ್ನು ಕೊಟ್ಟಿರುತ್ತಾರೆ. ನಿಯೋಜಿತ ಮುಖ್ಯಮಂತ್ರಿಗಳ ಕಾರ್ಯಾಲಯದಿಂದ ವಿವಿಐಪಿ ಪಾಸ್ ಅನ್ನು ಕೊಟ್ಟಿರುತಾರೆ ಎಂದು ಹೇಳಿಕೆ ಕೊಟ್ಟಿರುತ್ತಾನೆ. ಈ ಹೇಳಿಕೆ ಕೊಡುವ ಸಂದರ್ಭದಲ್ಲಿ ನನ್ನನ್ನು ಉದ್ದೇಶಪೂರ್ವಕವಾಗಿ ಗುರಿಯಾಗಿಸಿಕೊಂಡು ಅಪರಾಧಿ ನಂ.1 ಹೆಚ್. ವಿಶ್ವನಾಥ್ ಎಂದು ಹಾಲಿ ವಿಧಾನ ಪರಿಷತ್ತಿನ ಸದಸ್ಯನಾದ ನನ್ನನ್ನು ಈ ರೀತಿ ಕರೆದಿರುತ್ತಾನೆ. ಆದರೆ, ಈತ ಒಂದೊಂದು ನ್ಯಾಯಾಲಯದಲ್ಲಿ ಕೊಟ್ಟಿರುವ ಹೇಳಿಕೆ ಒಂದೊಂದು ರೀತಿ ವಿಭಿನ್ನವಾಗಿದ್ದು, ಈತನ ಹೇಳಿಕೆಯ ಎಲ್ಲಾ ಅಂಶಗಳೂ ಸಹ ತಪ್ಪು ಗ್ರಹಿಕೆಯಿಂದ ಕೂಡಿರುತ್ತದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ಈತ ಅಕ್ರಮವಾಗಿಯೇ ವೇದಿಕೆ ಮೇಲೆ ಬಂದಿದ್ದು, ನ್ಯಾಯಾಲಯದ ಮುಖಾಂತರ ಸತ್ಯ ಮರೆಮಾಚಲು ಪ್ರಯತ್ನಿಸಿರುತ್ತಾನೆ. ಜೊತೆಗೆ ಮುಖ್ಯಮಂತ್ರಿಗಳ ಹೆಸರು ಬಳಸಿಕೊಂಡು ಪ್ರಕರಣ ದಾರಿ ತಪ್ಪಿಸುವ ಪ್ರಯತ್ನ ಮಾಡಿರುತ್ತಾನೆ. ಆದರೆ, ಶಿವಣ್ಣನೇ ಎರಡೂ ನ್ಯಾಯಾಲಯದಲ್ಲಿ ಇಬ್ಬರೂ ನ್ಯಾಯಾಧೀಶರ ಮುಂದೆ ಒಂದೊಂದು ರೀತಿ ವಿಭಿನ್ನ ಹೇಳಿಕೆ ಕೊಟ್ಟಿರುವಾಗ ನನಗೆ ಸಹಾಯಕ ಪೊಲೀಸ್ ಆಯುಕ್ತರು ತನಿಖೆಯನ್ನೇ ನಡೆಸದೆ, ಖುದ್ದು ಮುಖ್ಯಮಂತ್ರಿಗಳೇ ವೇದಿಕೆ ಕರೆದುಕೊಂಡು ಬಂದಿರುವುದಾಗಿ ತಿಳಿದು ಬಂದಿರುತ್ತದೆ ಎಂದು ಹೇಗೆ ಹಿಂಬರಹ ಕೊಟ್ಟಿರುತ್ತಾರೆ.

ಈ ರೀತಿ ಹಿಂಬರಹ ಕೊಡಲು ಮುಖ್ಯಮಂತ್ರಿಗಳಿಂದ ಹೇಳಿಕೆ ಪಡೆದಿರಬೇಕು. ಆ ಹೇಳಿಕೆಯನ್ನು ಲಗತ್ತಿಸಿರಬೇಕು ಅಥವಾ ಶಿವಣ್ಣನನ್ನು ಸ್ವತಃ ಮುಖ್ಯಮಂತ್ರಿಗಳೇ ಕೈ ಹಿಡಿದು ವೇದಿಕೆ ಮೇಲೆ ಕರೆದುಕೊಂಡು ಹೋಗಿರುವ ಚಿತ್ರಣವಿರಬೇಕು. ಇಷ್ಟಿದ್ದರೂ, ಶಿವಣ್ಣನನ್ನು ವೇದಿಕೆ ಮೇಲೆ ಕರೆದುಕೊಂಡು ಬರಲು ರಾಜ್ಯಪಾಲರಾದ ತಮ್ಮಿಂದ ಅನುಮತಿ ಪಡೆದಿರಬೇಕು.

ಇಷ್ಟೆಲ್ಲಾ ಇಲ್ಲದೇ ನಾನೊಬ್ಬ ಹಾಲಿ ವಿಧಾನ ಪರಿಷತ್ತಿನ ಸದಸ್ಯನೆಂಬುದನ್ನು ಮರೆತು ಬೇಜವಾಬ್ದಾರಿ ತನದಿಂದ ತಮ್ಮ ಭದ್ರತಾ ಲೋಪವನ್ನು ಮುಚ್ಚಿಕೊಂಡು ಆರೋಪಿಯನ್ನು ರಕ್ಷಣೆ ಮಾಡುವ ಉದ್ದೇಶದಿಂದಲೇ ಈ ರೀತಿ ತಪ್ಪು ಹಿಂಬರಹ ಕೊಟ್ಟಿರುತ್ತಾರೆಯೇ ಹೊರತು ಇದು ವಾಸ್ತವಾಂಶದ ಹಿಂಬರಹವಾಗಿರುವುದಿಲ್ಲ. ಒಂದು ವೇಳೆ ಇವರ ಹಿಂಬರಹವೇ ವಾಸ್ತವಾಂಶವಾಗಿದ್ದು, ಅಂತಿಮ ವರದಿಯಾಗಿದ್ದರೆ, ರಾಜ್ಯಪಾಲರಾದ ತಮಗಾಗಲೀ, ನನಗಾಗಲೀ ಸರ್ಕಾರದಿಂದ ಅಥವಾ ಪೊಲೀಸ್ ಮಹಾ ನಿರ್ದೇಶಕರಿಂದ ಯಾಕೆ ಇಲ್ಲಿಯವರೆಗೆ ವರದಿ ಕೊಟ್ಟಿರುವುದಿಲ್ಲ.

ಸದರಿ ಪ್ರಕರಣ ಬೆಳಕಿಗೆ ಬರುವ ಮೊದಲು ಬಿ.ಎಸ್ ಶಿವಣ್ಣ 2017ರಲ್ಲಿ ವಿಧಾನ ಪರಿಷತ್ತಿನ ಸದಸ್ಯನಾಗಬೇಕೆಂಬ ಉದ್ದೇಶದಿಂದಲೇ ಅಂದು ಈತನ ಮೇಲೆ ವಂಚನೆ ಪ್ರಕರಣ ನ್ಯಾಯಾಲಯದಲ್ಲಿ ಬಾಕಿ ಇದ್ದು, ಇದನ್ನು ಮುಚ್ಚಿಟ್ಟು, ಗೌರವ ಡಾಕ್ಟರೇಟ್‌ಗೆ ಅರ್ಹತೆ ಇಲ್ಲದಿದ್ದರೂ ಈತನ ಮೇಲೆ ಹಲವು ಆರೋಪಗಳು ಕೇಳಿ ಬಂದಿದ್ದರೂ ತಪ್ಪು ಮಾಹಿತಿ ನೀಡಿ ನಿಯಮಬಾಹೀರವಾಗಿ ಅಲಯನ್ಸ್ ವಿಶ್ವವಿದ್ಯಾಲಯ ಮೂಲಕ ಅಯ್ಕೆ ಮಾಡಿಸಿ ಹಿಂದಿನ ರಾಜ್ಯಪಾಲರಿಂದ ಗೌರವ ಡಾಕ್ಟರೇಟ್ ಸ್ವೀಕರಿಸಿರುವ ಆರೋಪವನ್ನು ಪ್ರಶ್ನಿಸಿ ಶ್ರೀ ಎಲ್. ಜಯಲಿಂಗೇಗೌಡ ಎಂಬುವರು 2019ರಲ್ಲಿ ಗೌರವಾನ್ವಿತ ರಾಜ್ಯಪಾಲರಿಗೆ ಹಾಗೂ ಸರ್ಕಾರಕ್ಕೆ ದೂರು ದಾಖಲಿಸಿದ್ದು, ಸದರಿ ದೂರನ್ನು ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಆದೇಶ ಸಂಖ್ಯೆ ಇಡಿ/43/ಯುಆರ್ ಸಿ/2020 ರ ಆದೇಶದಂತೆ ದಿನಾಂಕ 26/03/2024ರಂದು ತಜ್ಞರ ಸಮಿತಿಯನ್ನು ರಚನೆ ಮಾಡಿ ತನಿಖೆ ನಡೆಸಿ ವರದಿ ಕೊಡುವಂತೆ ಆದೇಶ ಹೊರಡಿಸಲಾಗಿದೆ. ಸದರಿ ಪ್ರಕರಣವನ್ನು ಸಹ ಈಗ ಸಹಾಯಕ ಪೊಲೀಸ್ ಆಯುಕ್ತರು ನನಗೆ ಕೊಟ್ಟಿರುವ ತಪ್ಪು ಹಿಂಬರಹವನ್ನು ಬಳಸಿಕೊಂಡು ಈ ಪ್ರಕರಣವನ್ನು ಮುಚ್ಚಿ ಹಾಕಲು ಸ್ವತಃ ಬಿ.ಎಸ್ ಶಿವಣ್ಣನೇ ಪ್ರಯತ್ನಿಸಿರುತ್ತಾನೆ. ಇದು ಸಹ ಒಂದು ಗಂಭೀರವಾದ ಆರೋಪವಾಗಿರುತ್ತದೆ. ಇಂತಹ ಹಲವು ಆರೋಪಗಳು ಬಿ.ಎಸ್ ಶಿವಣ್ಣನ ವಿರುದ್ಧ ಕೇಳಿ ಬಂದಿದ್ದು, ಹೇಗೆ ತಾನೆ ವಿಧಿಪಿ ಪಾಸ್ ಪಡೆಯಲು ಅರ್ಹನಾಗಿರುತ್ತಾನೆ.

ವಿಷಯ ಈಗಿರುವಾಗ ಗೃಹ ಇಲಾಖೆಯ ಸಹಾಯಕ ಪೊಲೀಸ್ ಆಯುಕ್ತರು ಕೊಟ್ಟಿರುವ ಹಿಂಬರಹದಿಂದ ಪ್ರಕರಣ ದಾರಿ ತಪ್ಪುತ್ತಿರುವುದಲ್ಲದೆ, ನಾನು ಈ ದಿನ ನ್ಯಾಯಾಲಯ ಪ್ರವೇಶ ಮಾಡಲು ಕಾರಣವಾಗಿ ನಮ್ಮ ಗೌರವಕ್ಕೆ ಮತ್ತು ನಮ್ಮ ಸಾರ್ವಜನಿಕ ಜೀವನಕ್ಕೆ ಅಲ್ಲದೇ, ನ್ಯಾಯಾಲಯದ ಎಲ್ಲಾ ಆಗು ಹೋಗುಗಳಿಗೆ ಕಾರಣವಾಗಿದೆ. ಈ ಎಲ್ಲಾದಕ್ಕೂ ಸಹಾಯಕ ಪೊಲೀಸ್ ಆಯುಕ್ತರೇ ನೇರ ಕಾರಣಕರ್ತರಾಗಿರುತ್ತಾರೆ. ಅಷ್ಟೆ ಅಲ್ಲದೇ ಬಿ.ಎಸ್ ಶಿವಣ್ಣ ನಮ್ಮ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಿ ಪ್ರಕರಣದ ವಿಚಾರಣೆಯ ಮೊದಲೇ ತಾನು ಹೇಳಿಕೆ ಕೊಡುವಾಗ ನನ್ನನ್ನು ಅಪರಾಧಿಗಳೆಂದು ನಿರ್ಧಾರ ಮಾಡಿದಾಗೆ ಅಪರಾಧಿ ವಿಶ್ವನಾಥ್ ಎಂದು ಹೇಳಿಕೆ ಕೊಟ್ಟಿರುವುದು ಸಹ ನನ್ನ ಗೌರವಕ್ಕೆ ದಕ್ಕೆ, ಉಂಟಾಗಿರುತ್ತದೆ. ಇಲ್ಲಿಯೂ ಸಹ ನನ್ನ ಹಕ್ಕು ಚ್ಯುತಿಯಾಗಿರುತ್ತದೆ.

ಆದ್ದರಿಂದ, ಈ ಪ್ರಕರಣದ ಮೇಲಿನ ಎಲ್ಲಾ ಅಂಶಗಳನ್ನುಗಂಭೀರವಾಗಿ ಪರಿಗಣಿಸಿ ಗೌರವಾನ್ವಿತರಾದ ತಾವುಗಳು ನನಗೆ ತಪ್ಪು ಹಿಂಬರಹ ಕೊಟ್ಟು ಇಷ್ಟಕ್ಕೆಲ್ಲ ಕಾರಣರಾದ ಇಬ್ಬರು ಸಹಾಯಕ ಪೊಲೀಸ್ ಆಯುಕ್ತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಆದೇಶಿಸುವುದು ಹಾಗೂ ಬಿ.ಎಸ್ ಶಿವಣ್ಣ ಭದ್ರತಾ ಲೋಪ ಆರೋಪದಲ್ಲಿ ಕಾನೂನು ಉಲ್ಲಂಘಿಸಿರುವ ಆರೋಪಿಯಾಗಿದ್ದರೂ ತನ್ನ ಅಪರಾಧ ಪ್ರಕರಣ ಮುಚ್ಚಿ ಹಾಕಲು ಅಧಿಕಾರಿಗಳ ಮೇಲೆ ಒತ್ತಡ ಹಾಕಿ ತಪ್ಪು ಹಿಂಬರಹ ಕೊಡಿಸಿ, ಈ ಹಿಂಬರಹವನ್ನು ಮುಂದಿಟ್ಟು ಈ ದಿನ ನ್ಯಾಯಲಯಕ್ಕೆ ಪ್ರವೇಶ ಮಾಡಿ ನನ್ನನ್ನು ಅಪರಾಧಿ ಎಂದು ನ್ಯಾಯಾಲಯದಲ್ಲಿ ಹೇಳಿಕೆ ಕೊಟ್ಟಿದ್ದು ನನ್ನ ಗೌರವಕ್ಕೆ ಚ್ಯುತಿಯಾಗಿದ್ದು, ಈತ ನಮ್ಮ ಮೇಲೆ ಏನೆಲ್ಲಾ ಸೆಕ್ಷನ್‌ಗಳನ್ನು ಬಳಸಿ ರೂ. 10.00 ಕೋಟಿ ಮಾನ ಹಾನಿ ಪ್ರಕರಣ ದಾಖಲಿಸಿದ್ದಾನೆ. ಇಂತಹ ಸೆಕ್ಷನ್‌ಗಳಿಗಿಂತಲೂ ಹೆಚ್ಚಿನ ಶಿಕ್ಷೆಗೆ ಒಳಪಡಿಸುವ ಸೆಕ್ಷನ್‌ಗಳನ್ನು ಬಳಸಿ ರೂ. 10.00 ಕೋಟಿ ಮಾನ ಹಾನಿ ಪ್ರಕರಣವನ್ನು ಬಿ.ಎಸ್ ಶಿವಣ್ಣನ ಮೇಲೆಯೇ ದಾಖಲಿಸುವಂತೆ ಸರ್ಕಾರಕ್ಕೆ ಸಂಬಂಧಪಟ್ಟವರಿಗೆ ಆದೇಶಿಸಬೇಕೆಂದು ಈ ಮೂಲಕ ವಿನಯ ಪೂರ್ವಕವಾಗಿ ತಮ್ಮನ್ನು ಕೋರುತ್ತೇನೆ.

ವಂದನೆಗಳೊಂದಿಗೆ,

<u>ಲಗತ್ತು ದಾಖಲೆಗಳು</u> :

1. ನ್ಯಾಯಾಲಯದ ಪ್ರತಿಗಳು.
2. ಎಸಿಪಿಗಳ ಹಿಂಬರಹಗಳು.
3. ನಕಲಿ ಡಾಕ್ಟರೇಟ್ ಆರೋಪದ ಪ್ರತಿ.

ಇಂತಿ ತಮ್ಮ ವಿಶ್ವಾಸಿ,

(ಅಡಗೂರು ಹೆಚ್. ವಿಶ್ವನಾಥ್)

ಕರ್ನಾಟಕ ರಾಜ್ಯಪಾಲರ ಸಚಿವಾಲಯ

KARNATAKA GOVERNOR'S SECRETARIAT

ಅಂಚೆ ಪೆಟ್ಟಿಗೆ ಸಂಖ್ಯೆ:5033

ಸಂ: ಪಿಎಸ್ 01 ಎಸಿಎಂ 2023(p-1)

Post Box No.5033
ರಾಜ ಭವನ ಬೆಂಗಳೂರು
Raj Bhavan, Bengaluru
Pin 560 001

ರವರಿಂದ:
ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ,
ರಾಜಭವನ, ಬೆಂಗಳೂರು.

ರವರಿಗೆ:
ಸರ್ಕಾರದ ಮುಖ್ಯ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ,
ವಿಧಾನ ಸೌಧ, ಬೆಂಗಳೂರು.

ದಿನಾಂಕ:21-02-2024

ಮಾನ್ಯರೇ,

ವಿಷಯ : ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ವೇದಿಕೆಲ್ಲಿ ಅಪೂರ್ಣ ಬಾಧ್ಯಂತಿಸಿ ಭದ್ರತಾಲೋಪವೆಸಗಿರುವ ಶ್ರೀ ಬಿ.ಎಸ್.ತಿಮ್ಮಣ್ಣ ಹಾಗೂ ಈ ಪ್ರಕರಣದ ತನಿಖೆಯ ಸಂಬಂಧ ಸೂಕ್ತವಲ್ಲದ ಹಿಂಬರಹ ನೀಡಿರುವ ಸಹಾಯಕ ಪೊಲೀಸ್ ಆಯುಕ್ತರ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು.

ಉಲ್ಲೇಖ: 1. ಪತ್ರ ಸಂಖ್ಯೆ.005/ಅಎಜ್‌ವಿ/ಕವಿಪಸ/2022-23, ದಿ:23-05-2023.
2. ಪತ್ರ ಸಂಖ್ಯೆ.11/ಅಎಜ್‌ವಿ/ಕವಿಪಸ/2022-23, ದಿ:23-05-2023.
3. ಈ ಸಚಿವಾಲಯದ ಪತ್ರ ಸಮ ಸಂಖ್ಯೆ, ದಿನಾಂಕ:30-05-2023 ಪಾಪ್ತಿ 06-07-2024.
4. ಪತ್ರ ಸಂ.504/ಅಹೆಚ್‌ವಿ/ಕವಿಪಸ/2024-25, ದಿನಾಂಕ:05-02-2025

***

ಶ್ರೀ ಅಡಗೂರು ಹೆಚ್ ವಿಶ್ವನಾಥ್, ಕರ್ನಾಟಕ ವಿಧಾನ ಪರಿಷತ್ ಸದಸ್ಯರು, ಮೈಸೂರು ಇವರು ಮಾನ್ಯ ರಾಜ್ಯಪಾಲರವರಿಗೆ ಸಲ್ಲಿಸಲಾಗಿರುವ ಉಲ್ಲೇಖ (4) ರ ಪತ್ರ ಮತ್ತು ಅಡಕಗಳಲ್ಲಿನ ಅರೋಪಗಳ ಕುರಿತ ನಿಮಾನುಸಾರ ಕ್ರಮಕ್ಕಾಗಿ ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲಾಗಿದ್ದು, ಕೂಡ್ಲ ಕ್ರಮವಹಿಸುವಂತೆ ಕೋರಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ
ಸಹಿ/-
(ಜ. ಪ್ರದೀಪ್)

ಪ್ರತಿಯನ್ನು:
ಶ್ರೀ ಅಡಗೂರು ಹೆಚ್ ವಿಶ್ವನಾಥ್, ಕರ್ನಾಟಕ ವಿಧಾನ ಪರಿಷತ್ ಸದಸ್ಯರು, ಸಾರ್ವಜನಿಕ ಕಛೇರಿ ಕಟ್ಟಡ, ಕಾಡಾ ಕಛೇರಿ ಆವರಣ, ಮೈಸೂರು-570001 ಮಾಹಿತಿಗಾಗಿ.

ರಾಜ್ಯಪಾಲರ ಅಧೀನ ಕಾರ್ಯದರ್ಶಿ(ಅವಕಾಶ)

Seen 24/2/25 10.45 AM

ಅಡಗೂರು ಎಚ್.ವಿಶ್ವನಾಥ್ ಬಿ.ಎಸ್.ಸಿ., ಎಲ್.ಎಲ್.ಬಿ.
ಕರ್ನಾಟಕ ವಿಧಾನ ಪರಿಷತ್ ಸದಸ್ಯರು
ಮಾಜಿ ಸಚಿವರು, ಕರ್ನಾಟಕ ಸರ್ಕಾರ
ಮಾಜಿ ಲೋಕಸಭಾ ಸದಸ್ಯರು, ಕರ್ನಾಟಕ

ಕಛೇರಿ ವಿಳಾಸ : ಸಾರ್ವಜನಿಕ ಕಛೇರಿ ಕಟ್ಟಡ
ಕಾಡಾ ಕಛೇರಿ ಆವರಣ
ಮೈಸೂರು- 570001
ಮೊ : +91 96639 96390

ಸಂಖ್ಯೆ : 40 /ಅಎಚ್ವಿ/ಕವಿಪ/2022-23

ದಿನಾಂಕ : 28/2/25

ರವರಿಗೆ,

ಗೌರವಾನ್ವಿತ ರಾಜ್ಯಪಾಲರು,
ಕರ್ನಾಟಕ ರಾಜ್ಯ ,
ರಾಜಭವನ ಬೆಂಗಳೂರು,

ಮಾನ್ಯರೆ

ವಿಷಯ: ಮಾನ್ಯ ಮುಖ್ಯ ಮಂತ್ರಿಗಳ ಪದಗ್ರಹಣ ವೇದಿಕೆಯಲ್ಲಿ ಉಂಟಾಗಿದ್ದ ಭದ್ರತಾ ಲೋಪದ ಆರೋಪದ ಬಗ್ಗೆ ಹಲವು ದೂರು ಕೊಟ್ಟಿದ್ದಾಗ್ಯೂ ಇಲ್ಲಿಯ ತನಕ ಯಾವುದೇ ಕ್ರಮವನ್ನು ಜರುಗಿಸದೆ ವರದಿಯನ್ನು ಕೊಡದೇ ಅನಗತ್ಯ ವಿಳಂಬ ಮಾಡುತ್ತಿದ್ದು ಸದರಿ ಆರೋಪದ ಬಗ್ಗೆ ಸಂಬಂಧಪಟ್ಟ ಕಾಯ್ದೆಯಡಿ ಎಫ್ ಐ ಆರ್ ದಾಖಲಿಸಿ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲು ಆದೇಶ ಮಾಡುವಂತೆ ದೂರು.

ಉಲ್ಲೇಖ:
1. ಪತ್ರ ಸಂಖ್ಯೆ:005/ಅ ಎಚ್ ವಿ/ಕವಿಪಸ/2022-23, ದಿನಾಂಕ:23.05.2023.
2. ಪತ್ರ ಸಂಖ್ಯೆ 11 ಅ ಎಚ್ ವಿ/ಕವಿಪಸ/2024-25 ದಿನಾಂಕ:19-06-2024
3. ತಮ್ಮ ಸಚಿವಾಲಯದ ಪತ್ರ ಸಮ ಸಂಖ್ಯೆ, ದಿನಾಂಕ:30.05.2023 ಮತ್ತು 06.07.2024.
4. ಪತ್ರ ಸಂಖ್ಯೆ:504/ಅ ಎಚ್ ವಿ/ಕವಿಪಸ/2024-25, ದಿನಾಂಕ:05.02.2025.
5. ತಮ್ಮ ಕಛೇರಿ ಪತ್ರ ಸಂಖ್ಯೆ: ಜಿಎಸ್ 01 ಎಡಿಎಂ 2023(p-1) ದಿನಾಂಕ:21-02-2025

******

ಮೇಲ್ಕಂಡ ಆರೋಪಕ್ಕೆ ಸಂಬಂಧಿಸಿದಂತೆ ನಾನೂ ಹಲವು ದೂರುಗಳನ್ನು ಕೊಟ್ಟು ಸಾಕ್ಷಿ ಸಮೇತ ತಮ್ಮ ಗಮನಕ್ಕೆ ತಂದಿದ್ದೇನೆ ಈ ದೂರಿನ ಪ್ರತಿಗಳನ್ನು ಲಗತ್ತಿಸಿ ಇವುಗಳಲ್ಲಿನ ಆರೋಪಗಳನ್ನು ಮತ್ತೊಮ್ಮೆ ತಮ್ಮ ಗಮನಕ್ಕೆ ತರುತ್ತಾ ದಿನಾಂಕ:5/2/2025ರಂದು ನಾನು ಕೊಟ್ಟಿರುವ ದೂರಿನಲ್ಲಿ ಭದ್ರತಾಲೋಪವಾಗಿರುವುದು ಹಾಗೂ ಭದ್ರತೆಯನ್ನು ಉಲ್ಲಂಘಿಸಿಯೇ ಆರೋಪಿ ಬಿ ಎಸ್ ಶಿವಣ್ಣ ವೇದಿಕೆಯ ಮೇಲೆ ಬಂದಿದ್ದು, ಈ ಎರಡು ಆರೋಪವು ಗುರುತರವಾಗಿರುವುದನ್ನು ವಿವರಿಸಿ ಹೇಳಿದ್ದೇನೆ ಹೀಗಿರುವಾಗ ಸದರಿ

ಆರೋಪದ ಬಗ್ಗೆ ಪ್ರಾರಂಭದಲ್ಲಿಯೇ ಈ ಭಾಗದ ಭದ್ರತೆಗೆ ಸಂಬಂಧಪಟ್ಟ ಅಧಿಕಾರಿ ಉಪ ಪೋಲೀಸ್ ಆಯುಕ್ತರು ತನಿಖೆಯನ್ನೇ ನಡೆಸದೆ ಆರೋಪಿ ಹೇಳಿಕೆಯನ್ನೇ ಆಧರಿಸಿ ನನಗೆ ಹಿಂಬರಹ ಕೊಟ್ಟಿರುವಂತ ಉದ್ದೇಶವೇ ಈ ದೂರನ್ನು ಮುಚ್ಚಿಹಾಕುವ ಉದ್ದೇಶವೆಂದು ನೇರವಾಗಿ ಹೇಳಬಹುದು.

ಮುಂದುವರಿದು, ಇದೇ ವಿಭಾಗದ ಮತ್ತೊಬ್ಬ ಸಹಾಯಕ ಪೋಲೀಸ್ ಆಯುಕ್ತರು ದಿನಾಂಕ: 06-10-2023 ರಂದು ಹಿಂದಿನ ಅಂಶವನ್ನು ಮುಂದುವರಿಸಿ, ನಿಖರವಾದ ಸಾಕ್ಷ್ಯಧಾರವಿಲ್ಲದೇ ಖುದ್ದು ಮುಖ್ಯ ಮಂತ್ರಿಗಳೇ ಪದಗ್ರಹಣ ವೇದಿಕೆ ಮೇಲೆ ಕರೆದುಕೊಂಡು ಬಂದಿರುವುದಾಗಿ ತಿಳಿದು ಬಂದಿರುತ್ತದೆ ಎಂದು ನನಗೆ ಹಿಂಬರಹ ಕೊಟ್ಟಿರುವುದರ ಉದ್ದೇಶವು ಮುಖ್ಯ ಮಂತ್ರಿಗಳ ಹೆಸರು ಬಳಸಿದರೆ ನನ್ನನ್ನು ಈ ದೂರಿನಿಂದ ಹಿಂದೆ ಸರಿಸಬಹುದೆಂಬ ಉದ್ದೇಶವಿರಬಹುದು. ಸದರಿ ದೂರಿನ ಆರೋಪಿಯಾಗಿರುವ ಬಿ.ಎಸ್. ಶಿವಣ್ಣ ಸದರಿ ಹಿಂಬರಹವನ್ನು ಮುಂದಿಟ್ಟು ನ್ಯಾಯಾಲಯ ಪ್ರವೇಶ ಮಾಡಿ ಸಾರ್ವಜನಿಕ ಜೀವನದಲ್ಲಿರುವ ಹಾಲಿ ವಿಧಾನ ಪರಿಷತ್ತಿನ ಶಾಸಕನಾದ ನನಗೆ ಮಾಡಿರುವ ಅನಾಹುತದ ಬಗ್ಗೆ ಈ ಹಿಂದಿನ ದೂರಿನಲ್ಲಿ ಸವಿವರವಾಗಿ ಹೇಳಿದ್ದೇನೆ. ಆದರೆ ನಾನೂ ಈ ಹಿಂದೆಯೂ ಶಿವಣ್ಣ 2017 ರಲ್ಲಿ ವಿಧಾನ ಪರಿಷತ್ತಿನ ಸದಸ್ಯ ನಾಗಬೇಕೆಂಬ ಕಾರಣದಿಂದಲೇ ತಪ್ಪು ಮಾಹಿತಿ ಕೊಟ್ಟು ತನ್ನ ಮೇಲಿನ ಆರೋಪವನ್ನು ಮುಚ್ಚಿಟ್ಟು ಅಲಯನ್ಸ್ ವಿಶ್ವವಿದ್ಯಾಲಯದಿಂದ ನಿಯಮ ಉಲ್ಲಂಘಿಸಿ ಅಕ್ರಮವಾಗಿ ಗೌರವ/ಡಾಕ್ಟೊರೇಟ್ ಗೆ ಆಯ್ಕೆ ಮಾಡಿಸಿ ಹಿಂದಿನ ರಾಜ್ಯಪಾಲರಿಂದ ಸ್ವೀಕರಿಸಿದ್ದ ಆರೋಪದ ಬಗ್ಗೆ ಶ್ರೀ ಜಯಲಿಂಗೇಗೌಡರವರೂ ತಮಗೆ ಹಾಗೂ ಸರ್ಕಾರಕ್ಕೆ ದೂರು ಸಲ್ಲಿಸಿದ್ದು ಸದರಿ ದೂರಿನ ಬಗ್ಗೆ ಸರ್ಕಾರಕ್ಕೆ ತನಿಖೆ ನಡೆಸಿ ಕ್ರಮ ಕೈಗೊಳ್ಳುವ ಅವಕಾಶವಿದ್ದರೂ ಹಿಂದಿನ ಉನ್ನತ ಶಿಕ್ಷಣ ಸಚಿವರು ತನಿಖೆಗೆ ವಹಿಸದಿದ್ದ ಕಾರಣದಿಂದ ಸಾರ್ವಜನಿಕ ಹಿತದೃಷ್ಟಿಯಿಂದ ತನಿಖೆ ನಡೆಸುವಂತೆ ಒತ್ತಾಯ ಮಾಡಿ ವಿಧಾನ ಪರಿಷತ್ತಿನ ಸದನದಲ್ಲಿ ಪ್ರಶ್ನೆ ಕೇಳುವ ಮೂಲಕ ಚರ್ಚೆಯನ್ನು ಮಾಡಲಾಗಿತ್ತು.

ಈ ವಿಷಯದಲ್ಲಿ ಸರ್ಕಾರ ಆರೋಪವು ಗುರುತರವಾಗಿದ್ದು ಮೇಲ್ನೋಟಕ್ಕೆ ನಕಲಿ ಎಂಬುದು ಕಂಡುಬಂದಿರುವ ಕಾರಣ ಸರ್ಕಾರದ ಹಂತದಲ್ಲಿ ತನಿಖೆ ನಡೆಸಬೇಕು ಎಂಬ ನಿಲುವಾಗಿದ್ದರೇ ಇಲಾಖೆ ಮಂತ್ರಿಗಳು ಆರೋಪಿಯನ್ನು ರಕ್ಷಣೆ ಮಾಡುವ ಉದ್ದೇಶದಿಂದಲೇ ವೈಯಕ್ತಿಕವಾಗಿ ಪರಿಗಣಿಸಿ ತನಿಖೆಗೆ ಒಪ್ಪದೇ ತಪ್ಪುನಿರ್ಧಾರ ಕೈಗೊಂಡಿದ್ದು ಈ ಬಗ್ಗೆ ತಾವುಗಳೇ ತನಿಖೆಗೆ ಆದೇಶ ಮಾಡುವಂತೆ ನಾನು ತಮಗೆ ಹಲವು ದೂರು ಸಹ ಕೊಟ್ಟಿರುತ್ತೇನೆ. ನಾನೂ ತಮಗೆ ಕೊಟ್ಟ ದೂರಿನನ್ವಯವೇ ತಮ್ಮ ಸಚಿವಾಲಯದ ಪರಿಶೀಲನೆಯ ಪತ್ರವನ್ನು ಪರಿಗಣಿಸಿಯೇ ಸರ್ಕಾರ ದಿನಾಂಕ 26/03/2024 ಅಂದರೇ ಭದ್ರತಾ ಲೋಪದ ಪ್ರಕರಣ ಬಂದನಂತರ ಒಂದು ವಿಸ್ತೃತವಾದ ತನಿಖೆ ನಡೆಸಿ ವರದಿ ಕೊಡುವಂತೆ ತಜ್ಞರ ಸಮಿತಿಯನ್ನು ರಚನ ಮಾಡಿ ಆದೇಶ ಹೊರಡಿಸಿದೆ. .ಶಿವಣ್ಣನ ವಿರುದ್ಧ ಇಂಥಹ ಹಲವು ಆರೋಪಗಳು ಕೇಳಿ ಬಂದಿರುವ ಬಗ್ಗೆ ನನ್ನ ಗಮನಕ್ಕೆ ಬರದಿದ್ದಲ್ಲಿ ಈತನ ವಿರುದ್ಧ ಹಲವು ದೂರುಗಳನ್ನು ಸಹ ಸಂಬಂಧಪಟ್ಟವರು ಧಾಖಲಿಸಿದ್ದು ಸದರಿ ದೂರುಗಳನ್ನು ಸಹಾ ಶಿವಣ್ಣನೇ ತನ್ನ ಪ್ರಭಾವ ಬಳಸಿ ಮುಚ್ಚಿಹಾಕಿರುವ ಉದಾಹರಣೆಗಳಿವೆ.

ಶಿವಣ್ಣನ ಹಿನ್ನೆಲೆ ಮೇಲಿನ ರೀತಿ ನನಗೆ ಗೊತ್ತಿದ್ದ ಕಾರಣದಿಂದಲೇ ಮುಖ್ಯ ಮಂತ್ರಿಗಳ ಪದಗ್ರಹಣ ಕಾರ್ಯಕ್ರಮದ ವೇದಿಕೆಯು ಶಿಷ್ಟಾಚಾರದಿಂದ ನಡೆಯುತ್ತಿದ್ದು ಈ ವೇದಿಕೆಯ ಮೇಲೆ ರಾಷ್ಟ್ರದ ವಿವಿಧ ರಾಜ್ಯಗಳ ಗಣ್ಯಾತಿ ಗಣ್ಯ ವ್ಯಕ್ತಿಗಳು ಆಸೀನರಾಗಿದ್ದು, ಸುತ್ತಲೂ ರಾಷ್ಟ್ರನಾಯಕರು ಭಾಗವಹಿಸಿದ್ದ ಕಾರಣ ರಾಷ್ಟ್ರೀಯ ಭದ್ರತೆಯ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು ಇಂತಹ ಸರ್ಕಾರದ ವೇದಿಕೆಯ ಮೇಲೆ ಶಿವಣ್ಣನೆಂಬ ವ್ಯಕ್ತಿಯು ಬರುವಂತಹ ಯಾವುದೇ ರೀತಿಯ ಅರ್ಹತೆಯೂ ಇರುವದಿಲ್ಲ.

ಹೀಗಿರುವಾಗ ಶಿವಣ್ಣ ಅಕ್ರಮವಾಗಿಯೇ ವೇದಿಕೆಯ ಮೇಲೆ ಬಂದಿದ್ದು ಅಲ್ಲದೇ ಮುಖ್ಯಮಂತ್ರಿಗಳ ಜೊತೆ ಕೈಬೀಸುತ್ತಾ ನಡೆದುಕೊಳ್ಳುತ್ತಿದ್ದ ರೀತಿಯನ್ನು ನೋಡಿಯೇ ಈತನನ್ನು ಭದ್ರತಾ ಸಿಬ್ಬಂದಿಯೇ ಎಳೆದೊಯ್ದಿರುವುದೂ ಸಾಕ್ಷಿಯಾಗಿದೆ. ಇದನ್ನೆಲ್ಲ ನೋಡಿದ

ನಾನೂ ಶಿವಣ್ಣ ಮುಖ್ಯ ಮಂತ್ರಿಗಳ ಜೊತೆಗೆ ಕೈ ಬೀಸುತ್ತಾ ಕಾಣಿಸಿಕೊಂಡಿರುವ ಉದ್ದೇಶವೇ ಮುಂದಿನ ದಿನಗಳಲ್ಲಿ ಈ ಸನ್ನಿವೇಶವನ್ನು ದುರುಪಯೋಗ ಮಾಡಿಕೊಂಡು ಮೋಸಮಾಡುವ ಉದ್ದೇಶವೇ ಹೊರತೂ ಈತ ವೇದಿಕೆಯ ಮೇಲೆ ಬರಲೂ ಬೇರೆ ಕಾರಣಗಳಿಲ್ಲವೆಂದು ಈ ಆರೋಪದ ಬಗ್ಗೆ ತನಿಖೆ ನಡೆಸಿ ಶಿವಣ್ಣನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲೂ ಆದೇಶ ಮಾಡುವಂತೆ ಈತನ ವಿರುದ್ಧ ಈ ಹಿಂದೆ ಕೇಳಿಬಂದಿದ್ದ ಆರೋಪಗಳ ಸಾಕ್ಷ್ಯ ಲಗತ್ತಿಸಿದ ದೂರು ಕೊಟ್ಟಿರುತ್ತೇನೆ. ಸದರಿ ದೂರಿನ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ತಮಗೆ ವರದಿ ಸಲ್ಲಿಸಲೇಬೇಕಿತ್ತು.

ಆದರೇ ತಮ್ಮ ಸಚಿವಾಲಯದಿಂದಲೂ ಕೈಗೊಂಡ ಕ್ರಮದ ವರದಿಕೊಡುವಂತೆ ಸೂಚಿಸಿದಾಗ್ಯೂ ಇಲ್ಲಿಯವರೆಗೂ ತಮಗಾಗಲೀ ತಮ್ಮ ಸಚಿವಾಲಯಕ್ಕಾಗಲೀ ನನಗಾಗಲೀ ವರದಿಕೊಟ್ಟಿರುವುದಿಲ್ಲ. ಕಾರಣ ಈ ದೂರಿನ ಬಗ್ಗೆ ಪ್ರಾರಂಭದಲ್ಲಿಯೇ ಏನೂ ಪದಗ್ರಹಣ ಕಾರ್ಯಕ್ರಮ ನಡೆದಿದ್ದ ವಿಭಾಗದ ಅಧಿಕಾರಿಗಳನ್ನೇ ವರದಿ ಕೇಳಲಾಗಿದ್ದು ಶಿವಣ್ಣ ನಂಬ ವ್ಯಕ್ತಿಯು ವೇದಿಕೆ ಮೇಲೆ ಬಂದಿರುವುದು ಸದರಿ ಅಧಿಕಾರಿಗಳ ಭದ್ರತಾ ಲೋಪವು ಕಾರಣವಾಗಿರುವುದು ಕಂಡುಬರುತ್ತದೆ. ಈ ಕಾರಣದಿಂದಲೇ ಸಂಬಂಧಪಟ್ಟ ಉಪವಿಭಾಗದ ಸಹಾಯಕ ಪೋಲೀಸ್ ಆಯುಕ್ತರು ತಮ್ಮ ಲೋಪದ ಆರೋಪವನ್ನು ಮುಚ್ಚುವ ಹಾಗೂ ಆರೋಪಿ ಬಿ ಎಸ್ ಶಿವಣ್ಣನನ್ನು ಈ ಪ್ರಕರಣದಿಂದ ರಕ್ಷಣೆ ಮಾಡುವ ಉದ್ದೇಶದಿಂದಲೇ ನನಗೇ ತಪ್ಪು ಹಿಂಬರಹ ಕೊಟ್ಟಿರುತ್ತಾರೆ.

ಈ ರೀತಿ ತಪ್ಪು ಹಿಂಬರಹ ಕೊಟ್ಟಿರುವ ಉದ್ದೇಶವೇ ಸಂಬಂಧಪಟ್ಟ ಅಧಿಕಾರಿಗಳ ಮೇಲೂ ಭದ್ರತಾ ಲೋಪದ ಆರೋಪ ಹೊರಬರುವ ಕಾರಣದಿಂದಲೇ ಈ ಆರೋಪದ ಬಗ್ಗೆ ಇಷ್ಟೆಲ್ಲ ಸಾಕ್ಷ್ಯಚಿತ್ರ, ಹಾಗೂ ಹಲವು ಗುರುತರವಾದ ಆರೋಪಗಳು ಇದ್ದಗ್ಯೂ ಕಾನೂನಿನ ಕ್ರಮಕೈಗೊಳ್ಳುವಲ್ಲಿ ವಿಳಂಬವಾಗುತ್ತಿದೆ. ಮತ್ತೊಂದಡೆ ಶಿವಣ್ಣ ಅಲಯನ್ಸ್ ವಿಶ್ವವಿದ್ಯಾಲಯದ ಮುಖಾಂತರ ನಕಲಿ ಗೌರವ /ಡಾಕ್ಟರೇಟ್ ಪದವಿಯನ್ನ ರಾಜ್ಯ

ಪಾಲರಿಂದ ಸ್ವೀಕರಿಸಿರುವ ಕುರಿತು ಒಂದು ವಿಸ್ಕೃತವಾದ ತನಿಖೆ ನಡಸಿ ವರದಿ ಕೊಡಲು ಸರ್ಕಾರ ನೇಮಕ ಮಾಡಿರುವ ತಜ್ಞರ ಸಮಿತಿಗೆ ಖುದ್ದು ಶಿವಣ್ಣನೇ ಸಹಾಯಕ ಪೋಲೀಸ್ ಆಯುಕ್ತರು ನನಗೆ ಕೊಟ್ಟಿರುವ ತಪ್ಪಾದ ಹಿಂಬರಹವನ್ನೆ ಮುಂದಿಟ್ಟು ತಜ್ಞರ ಸಮಿತಿಯವರು ಈ ಹಿಂಬರಹವನ್ನೇ ಪರಿಗಣಿಸುವ ಮೂಲಕ ಸರ್ಕಾರಕ್ಕೆ ತಪ್ಪು ವರದಿ ಕೊಟ್ಟು ಈ ಪ್ರಕರಣವನ್ನು ಮುಚ್ಚಿಹಾಕುವ ಪ್ರಯತ್ನ ನಡಸಿರುವುದು ಬೆಳಕಿಗೆ ಬಂದಿದೆ. ಶಿವಣ್ಣನ ವಿರುದ್ಧ ಇಂತಹ ಹಲವಾರು ಆರೋಪಗಳು ಕೇಳಿ ಬಂದಿದ್ದು ಮೊಕದ್ದಮೆಯೂ ದಾಖಲಾಗಿರುವ ಉದಾಹರಣೆಗಳಿವೆ ಹೀಗಿರುವಾಗ ಶಿವಣ್ಣ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿರುವಾಗ ನನ್ನ ವಿರುದ್ಧ ಯಾವುದೇ ರೀತಿಯ ಆರೋಪಗಳಿರುವುದಿಲ್ಲ ನಾನೊಬ್ಬ ಶುದ್ಧ ವ್ಯಕ್ತಿಯೆಂದು ಹೇಳಿಕೆ ಕೊಟ್ಟಿರುವುದು ಶುದ್ಧ ಸುಳ್ಳು ಹೇಳಿಕೆಯಾಗಿದೆ. ಈತ ಪದಗ್ರಹಣ ವೇದಿಕೆಯ ಮೇಲೆ ಬಂದಿರುವ ಬಗ್ಗೆಯೂ ಒಂದೊಂದು ನ್ಯಾಯಾಲಯದಲ್ಲಿಯೂ ಒಂದೊಂದು ರೀತಿಯ ವಿಭಿನ್ನವಾದ ಹೇಳಿಕೆ ಕೊಟ್ಟಿರುವುದೂ ಸಹ ಪರಿಗಣಿಸಿದರೆ ಶಿವಣ್ಣ ಅಕ್ರಮವಾಗಿಯೇ ಪದಗ್ರಹಣ ಕಾರ್ಯಕ್ರಮದ ವೇದಿಕೆ ಮೇಲೆ ಬಂದಿದ್ದು ನ್ಯಾಯಾಲಯದಲ್ಲಿ ಸುಳ್ಳು ಮೊಕದಮ್ಮೆ ದಾಖಲಿಸಿ ನ್ಯಾಯಾಲಯದ ಮುಖಾಂತರ ನಮ್ಮನ್ನೆಲ್ಲ ಹೆದರಿಸಿ ಈ ಆರೋಪದಿಂದ ತಪ್ಪಿಸಿಕೊಳ್ಳಲು ಉದ್ದೇಶವಾಗಿರಬಹುದು.

ಸನ್ಮಾನ್ಯರೆ ಮೇಲಿನ ಎಲ್ಲಾ ಆರೊಪದ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಸದರೀ ತಪ್ಪು ಹಿಂಬರಹಗಳನ್ನು ಆದಾರವಾಗಿಟ್ಟುಕೊಂಡು ಈ ಪ್ರಕರಣದ ಆರೊಪಿಯಾಗಿರುವ ಬಿ ಎಸ್ ಶಿವಣ್ಣ ರವರು ಸುಳ್ಳು ಮಾನ ನಷ್ಟ ಪ್ರಕರಣವನ್ನು ನನ್ನ ವಿರುದ್ಧ ಧಾಖಲಿಸಿರುತ್ತಾರೆ ಇದಕ್ಕೆಲ್ಲ ಕಾರಣ ನಾನು ಕೊಟ್ಟ ದೂರನ್ನು ಕಾನೂನಿನ ಪ್ರಕಾರ ತನಿಖೆ ನಡಸಿ ಶಿವಣ್ಣನ ವಿರುದ್ಧ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬೇಕಾದ ಹಲಸೂರು ಗೇಟ್ ವಿಬಾಗದ ಸಹಾಯಕ ಪೋಲೀಸ್ ಆಯುಕ್ತರು ತನಿಖೆಯನ್ನೆ ನಡೆಸದೆ ಕೊಟ್ಟಿರುವ ತಪ್ಪು ಹಿಂಬರಹಗಳು ಇದರಿಂದ ತಾವು ಆದೇಶಿಸಿದ ತನಿಖೆಯನ್ನು ಅಕ್ರಮವಾಗಿ ತೊಡದು ಹಾಕುವುದಲ್ಲದೇ ನಾನು ಮಾಡಿರುವಂತ ಆರೊಪ ಹಾಗೂ ನನ್ನ ಮಾತುಗಳ ನೈಜತೆಯ

ಮೇಲೆ ಸಂಶಯಿಸುವಂತೆ ಮಾಡಿರುತ್ತದೆ ಆದ್ದರಿಂದ ಈ ಮೇಲೆ ಹೇಳಿರುವ ತಪ್ಪು ಹಿಂಬರಹಗಳು ಇನ್ನು ಹಲವಾರು ಅನಾಹುತಗಳಿಗೆ ಎಡಮಾಡಿಕೊಟ್ಟಿದ್ದು ಅವುಗಳನ್ನು ತಕ್ಷಣ ರದ್ದುಗೊಳಿಸಿ ಅಥವ ಹಿಂಪಡೆದು ಕಾನೂನಿನ ರೀತಿ ತನಿಖೆನಡೆಸಿ ಬದ್ರತಾಲೋಪ, ಬದ್ರತೆಯನ್ನು ಬೇದಿಸಿ, ಅಥವ ಸುಳ್ಳು ಮಾಹಿತಿ ಕೊಟ್ಟೂ ಅಕ್ರಮವಾಗಿಯೇ ಪದಗ್ರಹಣ ವೇದಿಕೆಯ ಮೇಲೆ ಬಂದಿರುವ ಆರೋಪಗಳಿಗೆ ಸಂಬಂಧಪಟ್ಟ ಅಪರಾಧ ಕಾಯ್ದೆಯ ನಿಯಮದ ಪ್ರಕಾರ ಎಫ್ ಐ ಆರ್ ದಾಖಲಿಸಿ ಸೂಕ್ತ ಕಾನೂನಿನ ಕ್ರಮ ಕೈಗೊಂಡು ತಮಗೆ ಸಮಯ ಬದ್ಧವಾಗಿ ವರದಿಕೊಡುವಂತೆ ಸಂಬಂಧಪಟ್ಟವರಿಗೆ ತಮ್ಮ ಕಛೇರಿಯಿಂದಲೇ ನೇರವಾಗಿ ಆದೇಶಿಸಬೇಕೆಂದು ಕೊರಿಕೊಳ್ಳುತ್ತೇನೆ

ವಂದನೆಗಳೊಂದಿಗೆ

ಇಂತಿ ತಮ್ಮ ವಿಶ್ವಾಸಿ

(ಅಡಗೂರು ಹೆಚ್. ವಿಶ್ವನಾಥ)

ಅಡಗೂರು ಎಚ್.ವಿಶ್ವನಾಥ್ ಬಿ.ಎಸ್.ಸಿ, ಎಲ್.ಎಲ್.ಬಿ.
ಕರ್ನಾಟಕ ವಿಧಾನ ಪರಿಷತ್ ಸದಸ್ಯರು
ಮಾಜಿ ಸಚಿವರು, ಕರ್ನಾಟಕ ಸರ್ಕಾರ
ಮಾಜಿ ಲೋಕಸಭಾ ಸದಸ್ಯರು, ಕರ್ನಾಟಕ

ಕಛೇರಿ ವಿಳಾಸ : ಸಾರ್ವಜನಿಕ ಕಛೇರಿ ಕ್ಯುಡ
ಕಾಡಾ ಕಛೇರಿ ಆವರಣ
ಮೈಸೂರು- 570001
ಮೊ : +91 96639 96398

ಸಂಖ್ಯೆ : 405 /ಅಎಚ್‌ವಿ/ಕವಿಪಸ/2022-23

ದಿನಾಂಕ : 28/2/25

ರವರಿಗೆ,

ಗೌರವಾನ್ವಿತ ರಾಜ್ಯಪಾಲರು,
ಕರ್ನಾಟಕ ರಾಜ್ಯ ,
ರಾಜಭವನ ಬೆಂಗಳೂರು,

ಮಾನ್ಯರೆ

ವಿಷಯ: **ಮಾನ್ಯ ಮುಖ್ಯ ಮಂತ್ರಿಗಳ ಪದಗ್ರಹಣ ವೇದಿಕೆಯಲ್ಲಿ ಉಂಟಾಗಿದ್ದ ಭದ್ರತಾ ಲೋಪದ ಆರೋಪದ ಬಗ್ಗೆ ಹಲವು ದೂರು ಕೊಟ್ಟಿದ್ದಾಗ್ಯೂ ಇಲ್ಲಿಯ ತನಕ ಯಾವುದೇ ಕ್ರಮವನ್ನು ಜರುಗಿಸದೆ ವರದಿಯನ್ನು ಕೊಡದೇ ಅನಗತ್ಯ ವಿಳಂಬ ಮಾಡುತ್ತಿದ್ದು ಸದರಿ ಆರೋಪದ ಬಗ್ಗೆ ಸಂಬಂಧಪಟ್ಟ ಕಾಯ್ದೆಯಡಿ ಎಫ್ ಐ ಆರ್ ದಾಖಲಿಸಿ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲು ಆದೇಶ ಮಾಡುವಂತೆ ದೂರು.**

ಉಲ್ಲೇಖ:
1. ಪತ್ರ ಸಂಖ್ಯೆ:005/ಅ ಎಚ್ ವಿ/ಕವಿಪಸ/2022-23, ದಿನಾಂಕ:23.05.2023.
2. ಪತ್ರ ಸಂಖ್ಯೆ 11 ಅ ಎಚ್ ವಿ/ಕವಿಪಸ/2024-25 ದಿನಾಂಕ:19-06-2024
3. ತಮ್ಮ ಸಚಿವಾಲಯದ ಪತ್ರ ಸಮ ಸಂಖ್ಯೆ, ದಿನಾಂಕ:30.05.2023 ಮತ್ತು 06.07.2024.
4. ಪತ್ರ ಸಂಖ್ಯೆ:504/ಅ ಎಚ್ ವಿ/ಕವಿಪಸ/2024-25, ದಿನಾಂಕ:05.02.2025.
5. ತಮ್ಮ ಕಛೇರಿ ಪತ್ರ ಸಂಖ್ಯೆ: ಜಿಎಸ್ 01 ಎಡಿಎಂ 2023(p-1) ದಿನಾಂಕ:21-02-2025

******

ಮೇಲ್ಕಂಡ ಆರೋಪಕ್ಕೆ ಸಂಬಂಧಿಸಿದಂತೆ ನಾನೂ ಹಲವು ದೂರುಗಳನ್ನು ಕೊಟ್ಟು ಸಾಕ್ಷಿ ಸಮೇತ ತಮ್ಮ ಗಮನಕ್ಕೆ ತಂದಿದ್ದೇನೆ ಈ ದೂರಿನ ಪ್ರತಿಗಳನ್ನು ಲಗತ್ತಿಸಿ ಇವುಗಳಲ್ಲಿನ ಆರೋಪಗಳನ್ನು ಮತ್ತೊಮ್ಮೆ ತಮ್ಮ ಗಮನಕ್ಕೆ ತರುತ್ತಾ ದಿನಾಂಕ:5/2/2025ರಂದು ನಾನು ಕೊಟ್ಟಿರುವ ದೂರಿನಲ್ಲಿ ಭದ್ರತಾಲೋಪವಾಗಿರುವುದು ಹಾಗೂ ಭದ್ರತೆಯನ್ನು ಉಲ್ಲಂಘಿಸಿಯೇ ಆರೋಪಿ ಬಿ ಎಸ್ ಶಿವಣ್ಣ ವೇದಿಕೆಯ ಮೇಲೆ ಬಂದಿದ್ದು, ಈ ಎರಡು ಆರೋಪವು ಗುರುತರವಾಗಿರುವುದನ್ನು ವಿವರಿಸಿ ಹೇಳಿದ್ದೇನೆ ಹೀಗಿರುವಾಗ ಸದರಿ

ಆರೋಪದ ಬಗ್ಗೆ ಪ್ರಾರಂಭದಲ್ಲಿಯೇ ಈ ಭಾಗದ ಭದ್ರತೆಗೆ ಸಂಬಂಧಪಟ್ಟ ಅಧಿಕಾರಿ ಉಪ ಪೋಲೀಸ್ ಆಯುಕ್ತರು ತನಿಖೆಯನ್ನೇ ನಡೆಸದೆ ಆರೋಪಿ ಹೇಳಿಕೆಯನ್ನೇ ಆಧರಿಸಿ ನನಗೆ ಹಿಂಬರಹ ಕೊಟ್ಟಿರುವಂತ ಉದ್ದೇಶವೇ ಈ ದೂರನ್ನು ಮುಚ್ಚಿಹಾಕುವ ಉದ್ದೇಶವೆಂದು ನೇರವಾಗಿ ಹೇಳಬಹುದು.

ಮುಂದುವರಿದು, ಇದೇ ವಿಭಾಗದ ಮತ್ತೊಬ್ಬ ಸಹಾಯಕ ಪೋಲೀಸ್ ಆಯುಕ್ತರು ದಿನಾಂಕ: 06-10-2023 ರಂದು ಹಿಂದಿನ ಅಂಶವನ್ನು ಮುಂದುವರಿಸಿ, ನಿಖರವಾದ ಸಾಕ್ಷ್ಯಧಾರವಿಲ್ಲದೇ ಖುದ್ದು ಮುಖ್ಯ ಮಂತ್ರಿಗಳೇ ಪದಗ್ರಹಣ ವೇದಿಕೆ ಮೇಲೆ ಕರೆದುಕೊಂಡು ಬಂದಿರುವುದಾಗಿ ತಿಳಿದು ಬಂದಿರುತ್ತದೆ ಎಂದು ನನಗೆ ಹಿಂಬರಹ ಕೊಟ್ಟಿರುವುದರ ಉದ್ದೇಶವು ಮುಖ್ಯ ಮಂತ್ರಿಗಳ ಹೆಸರು ಬಳಸಿದರೆ ನನ್ನನ್ನು ಈ ದೂರಿನಿಂದ ಹಿಂದೆ ಸರಿಸಬಹುದೆಂಬ ಉದ್ದೇಶವಿರಬಹುದು. ಸದರಿ ದೂರಿನ ಆರೋಪಿಯಾಗಿರುವ ಬಿ.ಎಸ್. ಶಿವಣ್ಣ ಸದರಿ ಹಿಂಬರಹವನ್ನು ಮುಂದಿಟ್ಟು ನ್ಯಾಯಾಲಯ ಪ್ರವೇಶ ಮಾಡಿ ಸಾರ್ವಜನಿಕ ಜೀವನದಲ್ಲಿರುವ ಹಾಲಿ ವಿಧಾನ ಪರಿಷತ್ತಿನ ಶಾಸಕನಾದ ನನಗೆ ಮಾಡಿರುವ ಅನಾಹುತದ ಬಗ್ಗೆ ಈ ಹಿಂದಿನ ದೂರಿನಲ್ಲಿ ಸವಿವರವಾಗಿ ಹೇಳಿದ್ದೇನೆ. ಆದರೆ ನಾನೂ ಈ ಹಿಂದೆಯೂ ಶಿವಣ್ಣ 2017 ರಲ್ಲಿ ವಿಧಾನ ಪರಿಷತ್ತಿನ ಸದಸ್ಯ ನಾಗಬೇಕೆಂಬ ಕಾರಣದಿಂದಲೇ ತಪ್ಪು ಮಾಹಿತಿ ಕೊಟ್ಟು ತನ್ನ ಮೇಲಿನ ಆರೋಪವನ್ನು ಮುಚ್ಚಿಟ್ಟು ಅಲಯನ್ಸ್ ವಿಶ್ವವಿದ್ಯಾಲಯದಿಂದ ನಿಯಮ ಉಲ್ಲಂಘಿಸಿ ಅಕ್ರಮವಾಗಿ ಗೌರವ/ಡಾಕ್ಟೊರೇಟ್ ಗೆ ಅಯ್ಕೆ ಮಾಡಿಸಿ ಹಿಂದಿನ ರಾಜ್ಯಪಾಲರಿಂದ ಸ್ವೀಕರಿಸಿದ್ದ ಆರೋಪದ ಬಗ್ಗೆ ಶ್ರೀ ಜಯಲಿಂಗೇಗೌಡರವರೂ ತಮಗೆ ಹಾಗೂ ಸರ್ಕಾರಕ್ಕೆ ದೂರು ಸಲ್ಲಿಸಿದ್ದು ಸದರಿ ದೂರಿನ ಬಗ್ಗೆ ಸರ್ಕಾರಕ್ಕೆ ತನಿಖೆ ನಡೆಸಿ ಕ್ರಮ ಕೈಗೊಳ್ಳುವ ಅವಕಾಶವಿದ್ದರೂ ಹಿಂದಿನ ಉನ್ನತ ಶಿಕ್ಷಣ ಸಚಿವರು ತನಿಖೆಗೆ ವಹಿಸದಿದ್ದ ಕಾರಣದಿಂದ ಸಾರ್ವಜನಿಕ ಹಿತದೃಷ್ಟಿಯಿಂದ ತನಿಖೆ ನಡೆಸುವಂತೆ ಒತ್ತಾಯ ಮಾಡಿ ವಿಧಾನ ಪರಿಷತ್ತಿನ ಸದನದಲ್ಲಿ ಪ್ರಶ್ನೆ ಕೇಳುವ ಮೂಲಕ ಚರ್ಚೆಯನ್ನು ಮಾಡಲಾಗಿತ್ತು.

ಈ ವಿಷಯದಲ್ಲಿ ಸರ್ಕಾರ ಆರೋಪವು ಗುರುತರವಾಗಿದ್ದು ಮೇಲ್ನೋಟಕ್ಕೆ ನಕಲಿ ಎಂಬುದು ಕಂಡುಬಂದಿರುವ ಕಾರಣ ಸರ್ಕಾರದ ಹಂತದಲ್ಲಿ ತನಿಖೆ ನಡೆಸಬೇಕು ಎಂಬ ನಿಲುವಾಗಿದ್ದರೇ ಇಲಾಖೆ ಮಂತ್ರಿಗಳು ಆರೋಪಿಯನ್ನು ರಕ್ಷಣೆ ಮಾಡುವ ಉದ್ದೇಶದಿಂದಲೇ ವೈಯಕ್ತಿಕವಾಗಿ ಪರಿಗಣಿಸಿ ತನಿಖೆಗೆ ಒಪ್ಪದೇ ತಪ್ಪುನಿರ್ಧಾರ ಕೈಗೊಂಡಿದ್ದು ಈ ಬಗ್ಗೆ ತಾವುಗಳೇ ತನಿಖೆಗೆ ಆದೇಶ ಮಾಡುವಂತೆ ನಾನು ತಮಗೆ ಹಲವು ದೂರು ಸಹ ಕೊಟ್ಟಿರುತ್ತೇನೆ. ನಾನೂ ತಮಗೆ ಕೊಟ್ಟ ದೂರಿನನ್ವಯವೇ ತಮ್ಮ ಸಚಿವಾಲಯದ ಪರಿಶೀಲನೆಯ ಪತ್ರವನ್ನು ಪರಿಗಣಿಸಿಯೇ ಸರ್ಕಾರ ದಿನಾಂಕ 26/03/2024 ಅಂದರೇ ಭದ್ರತಾ ಲೋಪದ ಪ್ರಕರಣ ಬಂದನಂತರ ಒಂದು ವಿಸ್ತೃತವಾದ ತನಿಖೆ ನಡೆಸಿ ವರದಿ ಕೊಡುವಂತೆ ತಜ್ಞರ ಸಮಿತಿಯನ್ನು ರಚನೆ ಮಾಡಿ ಆದೇಶ ಹೊರಡಿಸಿದೆ. .ಶಿವಣ್ಣನ ವಿರುದ್ಧ ಇಂಥಹ ಹಲವು ಆರೋಪಗಳು ಕೇಳಿ ಬಂದಿರುವ ಬಗ್ಗೆ ನನ್ನ ಗಮನಕ್ಕೆ ಬರದಿದ್ದಲ್ಲಿ ಈತನ ವಿರುದ್ಧ ಹಲವು ದೂರುಗಳನ್ನು ಸಹ ಸಂಬಂಧಪಟ್ಟವರು ಧಾಖಲಿಸಿದ್ದು ಸದರಿ ದೂರುಗಳನ್ನು ಸಹಾ ಶಿವಣ್ಣನೇ ತನ್ನ ಪ್ರಭಾವ ಬಳಸಿ ಮುಚ್ಚಿಹಾಕಿರುವ ಉದಾಹರಣೆಗಳಿವೆ.

ಶಿವಣ್ಣನ ಹಿನ್ನೆಲೆ ಮೇಲಿನ ರೀತಿ ನನಗೆ ಗೊತ್ತಿದ್ದ ಕಾರಣದಿಂದಲೇ ಮುಖ್ಯ ಮಂತ್ರಿಗಳ ಪದಗ್ರಹಣ ಕಾರ್ಯಕ್ರಮದ ವೇದಿಕೆಯು ಶಿಷ್ಟಾಚಾರದಿಂದ ನಡೆಯುತ್ತಿದ್ದು ಈ ವೇದಿಕೆಯ ಮೇಲೆ ರಾಷ್ಟ್ರದ ವಿವಿಧ ರಾಜ್ಯಗಳ ಗಣ್ಯಾತಿ ಗಣ್ಯ ವ್ಯಕ್ತಿಗಳು ಆಸೀನರಾಗಿದ್ದು, ಸುತ್ತಲೂ ರಾಷ್ಟ್ರನಾಯಕರು ಭಾಗವಹಿಸಿದ್ದ ಕಾರಣ ರಾಷ್ಟ್ರೀಯ ಭದ್ರತೆಯ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು ಇಂತಹ ಸರ್ಕಾರದ ವೇದಿಕೆಯ ಮೇಲೆ ಶಿವಣ್ಣನೆಂಬ ವ್ಯಕ್ತಿಯು ಬರುವಂತಹ ಯಾವುದೇ ರೀತಿಯ ಅರ್ಹತೆಯೂ ಇರುವದಿಲ್ಲ.

ಹೀಗಿರುವಾಗ ಶಿವಣ್ಣ ಅಕ್ರಮವಾಗಿಯೇ ವೇದಿಕೆಯ ಮೇಲೆ ಬಂದಿದ್ದು ಅಲ್ಲದೇ ಮುಖ್ಯಮಂತ್ರಿಗಳ ಜೊತೆ ಕೈಬೀಸುತ್ತಾ ನಡೆದುಕೊಳ್ಳುತ್ತಿದ್ದ ರೀತಿಯನ್ನು ನೋಡಿಯೇ ಈತನನ್ನು ಭದ್ರತಾ ಸಿಬ್ಬಂದಿಯೇ ಎಳೆದೊಯ್ದಿರುವುದೂ ಸಾಕ್ಷಿಯಾಗಿದೆ. ಇದನ್ನೆಲ್ಲ ನೋಡಿದ

ನಾನೂ ಶಿವಣ್ಣ ಮುಖ್ಯ ಮಂತ್ರಿಗಳ ಜೊತೆಗೆ ಕೈ ಬೀಸುತ್ತಾ ಕಾಣಿಸಿಕೊಂಡಿರುವ ಉದ್ದೇಶವೇ ಮುಂದಿನ ದಿನಗಳಲ್ಲಿ ಈ ಸನ್ನಿವೇಶವನ್ನು ದುರುಪಯೋಗ ಮಾಡಿಕೊಂಡು ಮೋಸಮಾಡುವ ಉದ್ದೇಶವೇ ಹೊರತೂ ಈತ ವೇದಿಕೆಯ ಮೇಲೆ ಬರಲೂ ಬೇರೆ ಕಾರಣಗಳಿಲ್ಲವೆಂದು ಈ ಆರೋಪದ ಬಗ್ಗೆ ತನಿಖೆ ನಡೆಸಿ ಶಿವಣ್ಣನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲೂ ಆದೇಶ ಮಾಡುವಂತೆ ಈತನ ವಿರುದ್ಧ ಈ ಹಿಂದೆ ಕೇಳಿಬಂದಿದ್ದ ಆರೋಪಗಳ ಸಾಕ್ಷ್ಯ ಲಗತ್ತಿಸಿದ ದೂರು ಕೊಟ್ಟಿರುತ್ತೇನೆ. ಸದರಿ ದೂರಿನ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ತಮಗೆ ವರದಿ ಸಲ್ಲಿಸಲೇಬೇಕಿತ್ತು.

ಆದರೇ ತಮ್ಮ ಸಚಿವಾಲಯದಿಂದಲೂ ಕೈಗೊಂಡ ಕ್ರಮದ ವರದಿಕೊಡುವಂತೆ ಸೂಚಿಸಿದಾಗ್ಯೂ ಇಲ್ಲಿಯವರೆಗೂ ತಮಗಾಗಲೀ ತಮ್ಮ ಸಚಿವಾಲಯಕ್ಕಾಗಲೀ ನನಗಾಗಲೀ ವರದಿಕೊಟ್ಟಿರುವುದಿಲ್ಲ. ಕಾರಣ ಈ ದೂರಿನ ಬಗ್ಗೆ ಪ್ರಾರಂಭದಲ್ಲಿಯೇ ಏನೂ ಪದಗ್ರಹಣ ಕಾರ್ಯಕ್ರಮ ನಡೆದಿದ್ದ ವಿಬಾಗದ ಆಧಿಕಾರಿಗಳನ್ನೇ ವರದಿ ಕೇಳಲಾಗಿದ್ದು ಶಿವಣ್ಣ ನಂಬ ವ್ಯಕ್ತಿಯು ವೇದಿಕೆ ಮೇಲೆ ಬಂದಿರುವುದು ಸದರಿ ಅಧಿಕಾರಿಗಳ ಭದ್ರತಾ ಲೋಪವು ಕಾರಣವಾಗಿರುವುದು ಕಂಡುಬರುತ್ತದೆ. ಈ ಕಾರಣದಿಂದಲೇ ಸಂಬಂಧಪಟ್ಟ ಉಪವಿಭಾಗದ ಸಹಾಯಕ ಪೋಲೀಸ್ ಆಯುಕ್ತರು ತಮ್ಮ ಲೋಪದ ಆರೋಪವನ್ನು ಮುಚ್ಚುವ ಹಾಗೂ ಆರೋಪಿ ಬಿ ಎಸ್ ಶಿವಣ್ಣನನ್ನು ಈ ಪ್ರಕರಣದಿಂದ ರಕ್ಷಣೆ ಮಾಡುವ ಉದ್ದೇಶದಿಂದಲೇ ನನಗೇ ತಪ್ಪು ಹಿಂಬರಹ ಕೊಟ್ಟಿರುತ್ತಾರೆ.

ಈ ರೀತಿ ತಪ್ಪು ಹಿಂಬರಹ ಕೊಟ್ಟಿರುವ ಉದ್ದೇಶವೇ ಸಂಬಂಧಪಟ್ಟ ಅದಿಕಾರಿಗಳ ಮೇಲೂ ಭದ್ರತಾ ಲೋಪದ ಆರೋಪ ಹೊರಬರುವ ಕಾರಣದಿಂದಲೇ ಈ ಆರೋಪದ ಬಗ್ಗೆ ಇಷ್ಟೆಲ್ಲ ಸಾಕ್ಷ್ಯಚಿತ್ರ, ಹಾಗೂ ಹಲವು ಗುರುತರವಾದ ಆರೋಪಗಳು ಇದ್ದಗ್ಯೂ ಕಾನೂನಿನ ಕ್ರಮಕೈಗೊಳ್ಳುವಲ್ಲಿ ವಿಳಂಬವಾಗುತ್ತಿದೆ. ಮತ್ತೊಂದೆಡೆ ಶಿವಣ್ಣ ಅಲಯನ್ಸ ವಿಶ್ವವಿದ್ಯಾಲಯದ ಮುಖಾಂತರ ನಕಲಿ ಗೌರವ /ಡಾಕ್ಟರೇಟ್ ಪದವಿಯನ್ನ ರಾಜ್ಯ

ಪಾಲರಿಂದ ಸ್ವೀಕರಿಸಿರುವ ಕುರಿತು ಒಂದು ವಿಸ್ಕೃತವಾದ ತನಿಖೆ ನಡೆಸಿ ವರದಿ ಕೊಡಲು ಸರ್ಕಾರ ನೇಮಕ ಮಾಡಿರುವ ತಜ್ಞರ ಸಮಿತಿಗೆ ಖುದ್ದು ಶಿವಣ್ಣನೇ ಸಹಾಯಕ ಪೋಲೀಸ್ ಆಯುಕ್ತರು ನನಗೆ ಕೊಟ್ಟಿರುವ ತಪ್ಪಾದ ಹಿಂಬರಹವನ್ನ ಮುಂದಿಟ್ಟು ತಜ್ಞರ ಸಮಿತಿಯವರು ಈ ಹಿಂಬರಹವನ್ನೇ ಪರಿಗಣಿಸುವ ಮೂಲಕ ಸರ್ಕಾರಕ್ಕೆ ತಪ್ಪು ವರದಿ ಕೊಟ್ಟು ಈ ಪ್ರಕರಣವನ್ನು ಮುಚ್ಚಿಹಾಕುವ ಪ್ರಯತ್ನ ನಡೆಸಿರುವುದು ಬೆಳಕಿಗೆ ಬಂದಿದೆ. ಶಿವಣ್ಣನ ವಿರುದ್ಧ ಇಂತಹ ಹಲವಾರು ಆರೋಪಗಳು ಕೇಳಿ ಬಂದಿದ್ದು ಮೊದ್ದಮೆಯೂ ದಾಖಲಾಗಿರುವ ಉದಾಹರಣೆಗಳಿವೆ ಹೀಗಿರುವಾಗ ಶಿವಣ್ಣ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿರುವಾಗ ನನ್ನ ವಿರುದ್ಧ ಯಾವುದೇ ರೀತಿಯ ಆರೋಪಗಳಿರುವುದಿಲ್ಲ ನಾನೊಬ್ಬ ಶುದ್ಧ ವ್ಯಕ್ತಿಯೆಂದು ಹೇಳಿಕೆ ಕೊಟ್ಟಿರುವುದು ಶುದ್ಧ ಸುಳ್ಳು ಹೇಳಿಕೆಯಾಗಿದೆ. ಈತ ಪದಗ್ರಹಣ ವೇದಿಕೆಯ ಮೇಲೆ ಬಂದಿರುವ ಬಗ್ಗೆಯೂ ಒಂದೊಂದು ನ್ಯಾಯಾಲಯದಲ್ಲಿಯೂ ಒಂದೊಂದು ರೀತಿಯ ವಿಭಿನ್ನವಾದ ಹೇಳಿಕೆ ಕೊಟ್ಟಿರುವುದೂ ಸಹ ಪರಿಗಣಿಸಿದರೆ ಶಿವಣ್ಣ ಅಕ್ರಮವಾಗಿಯೇ ಪದಗ್ರಹಣ ಕಾರ್ಯಕ್ರಮದ ವೇದಿಕೆ ಮೇಲೆ ಬಂದಿದ್ದು ನ್ಯಾಯಾಲಯದಲ್ಲಿ ಸುಳ್ಳು ಮೊಕದಮ್ಮೆ ದಾಖಲಿಸಿ ನ್ಯಾಯಾಲಯದ ಮುಖಾಂತರ ನಮ್ಮನ್ನೆಲ್ಲ ಹೆದರಿಸಿ ಈ ಆರೋಪದಿಂದ ತಪ್ಪಿಸಿಕೊಳ್ಳಲು ಉದ್ದೇಶವಾಗಿರಬಹುದು.

ಸನ್ಮಾನ್ಯರೆ ಮೇಲಿನ ಎಲ್ಲಾ ಆರೊಪದ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಸದರೀ ತಪ್ಪು ಹಿಂಬರಹಗಳನ್ನು ಆದಾರವಾಗಿಟ್ಟುಕೊಂಡು ಈ ಪ್ರಕರಣದ ಆರೊಪಿಯಾಗಿರುವ ಬಿ ಎಸ್ ಶಿವಣ್ಣ ರವರು ಸುಳ್ಳು ಮಾನ ನಷ್ಟ ಪ್ರಕರಣವನ್ನು ನನ್ನ ವಿರುದ್ಧ ಧಾಖಲಿಸಿರುತ್ತಾರೆ ಇದಕ್ಕೆಲ್ಲ ಕಾರಣ ನಾನು ಕೊಟ್ಟ ದೂರನ್ನು ಕಾನೂನಿನ ಪ್ರಕಾರ ತನಿಖೆ ನಡೆಸಿ ಶಿವಣ್ಣನ ವಿರುದ್ಧ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬೇಕಾದ ಹಲಸೂರು ಗೇಟ್ ವಿಬಾಗದ ಸಹಾಯಕ ಪೋಲೀಸ್ ಆಯುಕ್ತರು ತನಿಖೆಯನ್ನ ನಡೆಸದೆ ಕೊಟ್ಟಿರುವ ತಪ್ಪು ಹಿಂಬರಹಗಳು ಇದರಿಂದ ತಾವು ಆದೇಶಿಸಿದ ತನಿಖೆಯನ್ನು ಅಕ್ರಮವಾಗಿ ತೊಡದು ಹಾಕುವುದಲ್ಲದೇ ನಾನು ಮಾಡಿರುವಂತ ಆರೊಪ ಹಾಗೂ ನನ್ನ ಮಾತುಗಳ ನೈಜತೆಯ

ಮೇಲೆ ಸಂಶಯಿಸುವಂತೆ ಮಾಡಿರುತ್ತದೆ ಆದ್ದರಿಂದ ಈ ಮೇಲೆ ಹೇಳಿರುವ ತಪ್ಪು ಹಿಂಬರಹಗಳು ಇನ್ನು ಹಲವಾರು ಅನಾಹುತಗಳಿಗೆ ಎಡಮಾಡಿಕೊಟ್ಟಿದ್ದು ಅವುಗಳನ್ನು ತಕ್ಷಣ ರದ್ದುಗೊಳಿಸಿ ಅಥವ ಹಿಂಪಡೆದು ಕಾನೂನಿನ ರೀತಿ ತನಿಖೆನಡೆಸಿ ಬದ್ರತಾಲೋಪ, ಬದ್ರತೆಯನ್ನು ಬೇದಿಸಿ, ಅಥವ ಸುಳ್ಳು ಮಾಹಿತಿ ಕೊಟ್ಟೂ ಅಕ್ರಮವಾಗಿಯೇ ಪದಗ್ರಹಣ ವೇದಿಕೆಯ ಮೇಲೆ ಬಂದಿರುವ ಆರೋಪಗಳಿಗೆ ಸಂಬಂಧಪಟ್ಟ ಅಪರಾಧ ಕಾಯ್ದೆಯ ನಿಯಮದ ಪ್ರಕಾರ ಎಫ್ ಐ ಆರ್ ದಾಖಲಿಸಿ ಸೂಕ್ತ ಕಾನೂನಿನ ಕ್ರಮ ಕೈಗೊಂಡು ತಮಗೆ ಸಮಯ ಬದ್ಧವಾಗಿ ವರದಿಕೊಡುವಂತೆ ಸಂಬಂಧಪಟ್ಟವರಿಗೆ ತಮ್ಮ ಕಛೇರಿಯಿಂದಲೇ ನೇರವಾಗಿ ಆದೇಶಿಸಬೇಕೆಂದು ಕೊರಿಕೊಳ್ಳುತ್ತೇನೆ

ವಂದನೆಗಳೊಂದಿಗೆ

ಇಂತಿ ತಮ್ಮ ವಿಶ್ವಾಸಿ

(ಅಡಗೂರು ಹೆಚ್. ವಿಶ್ವನಾಥ)

ಕರ್ನಾಟಕ ರಾಜ್ಯಪಾಲರ ಸಚಿವಾಲಯ

KARNATAKA GOVERNOR'S SECRETARIAT

ಅಂಚೆ ಪೆಟ್ಟಿಗೆ ಸಂಖ್ಯೆ:5033
Post Box No.5033
ರಾಜ ಭವನ ಬೆಂಗಳೂರು
Raj Bhavan, Bengaluru
Pin: 560 001

ಸಂ: ಜಿಎಸ್ 01 ಎಡಿಎಂ 2023(p-1)

ದಿನಾಂಕ:17-03-2025

ರವರಿಂದ:
ಮಾನ್ಯ ರಾಜ್ಯಪಾಲರ ವಿಶೇಷಕಾರ್ಯದರ್ಶಿ,
ರಾಜಭವನ, ಬೆಂಗಳೂರು.

ರವರಿಗೆ:
ಮಹಾ ನಿರ್ದೇಶಕರು ಮತ್ತು
ಆರಕ್ಷಕ ಮಹಾ ನಿರೀಕ್ಷಕರು,
ಕರ್ನಾಟಕ ರಾಜ್ಯ ಪೊಲೀಸ್,
ಪೊಲೀಸ್ ಪ್ರಧಾನ ಕಛೇರಿ, ನಂ.02, ನೃಪತುಂಗ ರಸ್ತೆ, ಬೆಂಗಳೂರು.

ಮಾನ್ಯರೇ;

ವಿಷಯ : ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ವೇದಿಕೆಯ ಭದ್ರತಾ ನಿಯಮವನ್ನು ಉಲ್ಲಂಘಿಸಿರುವ ಶ್ರೀ ಬಿ.ಎಸ್. ಶಿವಣ್ಣ ಎಂಬುವವರು ವಿರುದ್ಧ ಕ್ರಮ ಕೈಗೊಳ್ಳದಿರುವ ಕುರಿತು.

ಉಲ್ಲೇಖ: 1. ಪತ್ರ ಸಂಖ್ಯೆ 11/ಅಎಚ್‌ವಿ/ಕವಿಪಸ/2022-23, ದಿ:19-06-2024.
2. ಈ ಸಚಿವಾಲಯದ ಪತ್ರ ಸಮ ಸಂಖ್ಯೆ, ದಿನಾಂಕ:06-07-2024.
3. ಪತ್ರ ಸಂಖ್ಯೆ 405/ಅಎಚ್‌ವಿ/ಕವಿಪಸ/2022-23, ದಿ:28-02-2025.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರನ್ವಯ ತಮಗೆ ಹೊರಡಿಸಲಾಗಿದ್ದ ಉಲ್ಲೇಖ (2) ರ ಪತ್ರದ ಕಡೆ ತಮ್ಮ ಗಮನ ಸೆಳೆಯಲಾಗಿದೆ. ಮುಖ್ಯಮಂತ್ರಿಗಳ ಪದಗ್ರಹಣ ವೇದಿಕೆಯ ಭದ್ರತಾ ಲೋಪದ ಬಗ್ಗೆ, ಆ ಭಾಗದ ಉಪ ಪೊಲೀಸ್ ಆಯುಕ್ತರು ಮತ್ತು ಸಹಾಯಕ ಪೊಲೀಸ್ ಆಯುಕ್ತರು ಯಾವುದೇ ತನಿಖೆಯನ್ನೇ ನಡೆಸದೇ, ತನಿಖೆಯನ್ನು ಮುಚ್ಚಿಹಾಕುವ ಉದ್ದೇಶದಿಂದ, ಆರೋಪಿಯ ಹೇಳಿಕೆಯನ್ನೇ ಆಧರಿಸಿ ಹಿಂಬರಹ ನೀಡಿದ್ದಾರೆ ಎಂದು ಆರೋಪಿಸಿ, ಮಾನ್ಯ ರಾಜ್ಯಪಾಲರಿಗೆ ಸಲ್ಲಿಸಿರುವ ಶ್ರೀ ಅಡಗೂರು ಹೆಚ್ ವಿಶ್ವನಾಥ್, ಕರ್ನಾಟಕ ವಿಧಾನ ಪರಿಷತ್ ಸದಸ್ಯರು, ಮೈಸೂರು ಇವರ ಉಲ್ಲೇಖ (3) ರ ಪತ್ರ ಮತ್ತು ಅಡಕಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ. ಸದರಿ ಪತ್ರದಲ್ಲಿ ಆರೋಪಿಸಿರುವಂತೆ ಭದ್ರತಾ ನಿಯಮ ಉಲ್ಲಂಘನೆ ಕುರಿತು ತೆಗೆದುಕೊಂಡ ಕ್ರಮದ ವರದಿಯನ್ನು ಈ ಸಚಿವಾಲಯಕ್ಕೆ ಸಲ್ಲಿಸುವಂತೆ ತಮ್ಮನ್ನು ಕೋರಲು ನಾನು ನಿರ್ದೇಶಿತನಾಗಿದ್ದೇನೆ.

ರಾ.ವಿ.ಕಾ ರವರಿಂದ ಅನುಮೋದಿಸಲ್ಪಟ್ಟಿದೆ.

ತಮ್ಮ ವಿಶ್ವಾಸಿ
ಸಹಿ/-
(ಜಿ. ಪ್ರದೀಪ್)
ರಾಜ್ಯಪಾಲರ ಅಧೀನ ಕಾರ್ಯದರ್ಶಿ(ಆ)

ಪ್ರತಿಯನ್ನು: ಶ್ರೀ ಅಡಗೂರು ಹೆಚ್ ವಿಶ್ವನಾಥ್, ಕರ್ನಾಟಕ ವಿಧಾನ ಪರಿಷತ್ ಸದಸ್ಯರು, ಸಾರ್ವಜನಿಕ ಕಛೇರಿ ಕಟ್ಟಡ, ಕಾಡಾ ಕಛೇರಿ ಆವರಣ, ಮೈಸೂರು-570001 ಮಾಹಿತಿಗಾಗಿ.

ಅನುಬಂಧ - 03

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 39 ಹೆಚ್‌ಪಿಎ 2025 **ಕರ್ನಾಟಕ ಸರ್ಕಾರದ ಸಚಿವಾಲಯ**
ವಿಧಾನ ಸೌಧ,
ಡಾ. ಬಿ. ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 15.09.2025

ಅಧಿಸೂಚನೆ

ಸರ್ಕಾರದ ಸಭೆ ಮತ್ತು ಸಮಾರಂಭಗಳಿಗೆ ಜನಪ್ರತಿನಿಧಿಗಳನ್ನು ಆಹ್ವಾನಿಸುವ ಬಗ್ಗೆ, ಅನುಸರಿಸಬೇಕಾದ ಶಿಷ್ಟಾಚಾರದ ಕುರಿತು ಸಮಗ್ರವಾಗಿ ಸೂಚನೆಗಳನ್ನು ಈಗಾಗಲೇ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 34 ಹೆಚ್ ಪಿಎ 2018, ದಿನಾಂಕ:16.04.2019ರಲ್ಲಿ ಹೊರಡಿಸಲಾಗಿರುತ್ತದೆ.

ಸಾರ್ವಜನಿಕ ಸರ್ಕಾರಿ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಗಳಲ್ಲಿ, ಆಹ್ವಾನಿತರ ಹಾಜರಾಗುವಿಕೆಯನ್ನು ಖಚಿತಪಡಿಸಿಕೊಳ್ಳದೇ ಮುದ್ರಿಸಲಾಗುತ್ತಿರುವ ಹಿನ್ನೆಲೆಯಲ್ಲಿ, ಆಹ್ವಾನಿತರ ಸಂಖ್ಯೆಯು ಹೆಚ್ಚಾಗುತ್ತಿರುವುದನ್ನು ಶಿಷ್ಟಾಚಾರದನ್ವಯ ಬಿಸಿನ ವ್ಯವಸ್ಥೆಯನ್ನು ಪೂರೈಸುವಲ್ಲಿ ಗೊಂದಲವಾಗುತ್ತಿರುವುದರಿಂದ ಸರ್ಕಾರಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಹಾಗೂ ಸರ್ಕಾರಿ ಸಾರ್ವಜನಿಕ ಕಾರ್ಯಕ್ರಮಗಳನ್ನು ಸುಗಮವಾಗಿ ಮತ್ತು ಘನತೆಯಿಂದ ನಡೆಸಲು ಅನುವಾಗುವಂತೆ ದಿನಾಂಕ:16.04.2019ರ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ನು ಮಾರ್ಪಡಿಸಿ ಈ ಕೆಳಕಂಡಂತೆ ಹೊಸ ಮಾರ್ಗಸೂಚಿಗಳನ್ನು ಅಧಿಸೂಚಿಸಲಾಗಿದೆ.

1. ಸರ್ಕಾರಿ ಕಾರ್ಯಕ್ರಮಗಳನ್ನು ಈ ಕೆಳಕಂಡಂತೆ ವರ್ಗೀಕರಿಸಿದೆ. -

(a) ರಾಜ್ಯ ಮಟ್ಟದ ಕಾರ್ಯಕ್ರಮಗಳು: -ರಾ ಕಾರ್ಯಕ್ರಮಗಳು ರಾಜ್ಯ ಸರ್ಕಾರದ ಒಂದು ಇಲಾಖೆಯು ಪ್ರತ್ಯೇಕವಾಗಿ ಅಥವಾ ಇನ್ನೊಂದು ಇಲಾಖೆಯ ಅಂಗಸಂಸ್ಥೆಗಳು / ಸ್ವಯಂ ಸೇವಾ / ಇತರೆ ಸಂಸ್ಥೆಗಳ ಸಹಯೋಗದೊಂದಿಗೆ ಒಂದು ಜಿಲ್ಲೆಗಿಂತ ಹೆಚ್ಚಿನ ಜಿಲ್ಲೆಗಳಿಗೆ ಸಂಬಂಧಿಸಿದ ಯೋಜನೆಗಳು ಅಥವಾ ಕಾರ್ಯಕ್ರಮಗಳ ಕುರಿತು ಆಯೋಜಿಸಲಾಗುತ್ತದೆ.

(b) ಇಲಾಖೆಗಳು ಆಯೋಜಿಸುವ ಜಿಲ್ಲಾ ಮಟ್ಟದ ಕಾರ್ಯಕ್ರಮಗಳು: - ಈ ಕಾರ್ಯಕ್ರಮಗಳು ರಾಜ್ಯ ಸರಕಾರದ ಒಂದು ಇಲಾಖೆಯು ಪ್ರತ್ಯೇಕವಾಗಿ ಅಥವಾ ಇನ್ನೊಂದು ಇಲಾಖೆ/ ಅಂಗಸಂಸ್ಥೆಗಳು / ಸ್ವಯಂ ಸೇವಾ / ಇತರೆ ಸಂಸ್ಥೆಗಳ ಸಹಯೋಗದೊಂದಿಗೆ ಒಂದು ಜಿಲ್ಲೆಗೆ ಸಂಬಂಧಿಸಿದ ಯೋಜನೆಗಳು ಅಥವಾ ಕಾರ್ಯಕ್ರಮಗಳ ಕುರಿತು ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಅಥವಾ ಜಿಲ್ಲೆಯ ಇತರ ಭಾಗದಲ್ಲಿ ಆಯೋಜಿಸಲಾಗುತ್ತದೆ.

(c) ಜಿಲ್ಲಾಡಳಿತವು ಆಯೋಜಿಸುವ ಜಿಲ್ಲಾ ಮಟ್ಟದ ಕಾರ್ಯಕ್ರಮಗಳು: - ಈ ಕಾರ್ಯಕ್ರಮಗಳು ಜಿಲ್ಲಾಡಳಿತವು ಆಯಾ ಜಿಲ್ಲೆಗಳ ಯೋಜನೆಗಳಿಗೆ/ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಅಥವಾ ಜಿಲ್ಲೆಯ ಇತರೆ ಭಾಗದಲ್ಲಿ ಆಯೋಜಿಸಲಾಗುತ್ತದೆ

(d) ತಾಲ್ಲೂಕು ಮಟ್ಟದ ಕಾರ್ಯಕ್ರಮಗಳು: -ಈ ಕಾರ್ಯಕ್ರಮಗಳು ಜಿಲ್ಲಾಡಳಿತ ಅಥವಾ ತಾಲ್ಲೂಕು ಆಡಳಿತವು ಒಂದು ತಾಲ್ಲೂಕಿಗೆ ಸಂಬಂಧಿಸಿದ ಯೋಜನೆಗಳು ಅಥವಾ ಕಾರ್ಯಕ್ರಮಗಳ ಕುರಿತು ತಾಲ್ಲೂಕಿನ ಕೇಂದ್ರ ಸ್ಥಾನದಲ್ಲಿ ಅಥವಾ ತಾಲ್ಲೂಕಿನ ಇತರೆ ಭಾಗದಲ್ಲಿ ಆಯೋಜಿಸಲಾಗುತ್ತದೆ.

(e) ರಾಜ್ಯದಲ್ಲಿ ಆಯೋಜಿಸುವ ಕೇಂದ್ರ ಪುರಸ್ಕೃತ/ ಪ್ರಾಯೋಜಿತ/ಬೆಂಬಲಿತ ಕಾರ್ಯಕ್ರಮಗಳು: - ಈ ಕಾರ್ಯಕ್ರಮಗಳು ರಾಜ್ಯಕ್ಕೆ ಸಂಬಂಧಿಸಿದ ಕೇಂದ್ರ ಪುರಸ್ಕೃತ/ ಪ್ರಾಯೋಜಿತ/ಬೆಂಬಲಿತ ಯೋಜನೆಗಳು ಅಥವಾ ಕಾರ್ಯಕ್ರಮಗಳ ಕುರಿತು ರಾಜ್ಯದ ಸಹಯೋಗದೊಂದಿಗೆ ರಾಜ್ಯದ ಕೇಂದ್ರ ಸ್ಥಾನ ಅಥವಾ ರಾಜ್ಯದ ಇತರ ಭಾಗದಲ್ಲಿ ಆಯೋಜಿಸಲಾಗುತ್ತದೆ.

2. ರಾಜ್ಯ ಮಟ್ಟದಲ್ಲಿ ಆಯೋಜಿಸುವ ಕಾರ್ಯಕ್ರಮಗಳ ಮಾರ್ಗಸೂಚಿಗಳು: -

(a) ಉದ್ಘಾಟನೆ: -ರಾಜ್ಯ ಮಟ್ಟದ ಕಾರ್ಯಕ್ರಮಗಳನ್ನು ಈ ಕೆಳಕಂಡ ಗಣ್ಯರು ಉದ್ಘಾಟಿಸುತ್ತಾರೆ:

ಮಾನ್ಯ ಮುಖ್ಯ ಮಂತ್ರಿಗಳು / ಮಾನ್ಯ ಉಪ ಮುಖ್ಯ ಮಂತ್ರಿಗಳು / ಸಂಬಂಧಪಟ್ಟ ಇಲಾಖಾ ಸಚಿವರು /ಇಲಾಖಾ ಸಚಿವರು ಸೂಚಿಸುವ ಯಾವುದೇ ಗಣ್ಯರು.

(b) ಅಧ್ಯಕ್ಷತೆ:-

(i) ಮಾನ್ಯ ಮುಖ್ಯ ಮಂತ್ರಿಗಳು / ಉಪ ಮುಖ್ಯ ಮಂತ್ರಿಗಳು ಕಾರ್ಯಕ್ರಮವನ್ನು ಉದ್ಘಾಟಿಸಿದರೆ, ಇಲಾಖಾ ಸಚಿವರು ಅಧ್ಯಕ್ಷತೆ ವಹಿಸುತ್ತಾರೆ.

(ii) ಇಲಾಖಾ ಸಚಿವರು ಕಾರ್ಯಕ್ರಮವನ್ನು ಉದ್ಘಾಟಿಸಿದಾಗ ಕಾರ್ಯಕ್ರಮವು ನಡೆಯುವ ಸ್ಥಳದ ಸ್ಥಳೀಯ ಶಾಸಕರು ಅಧ್ಯಕ್ಷತೆ ವಹಿಸುತ್ತಾರೆ.

(iii) ಇತರೆ ಗಣ್ಯರು ಕಾರ್ಯಕ್ರಮವನ್ನು ಉದ್ಘಾಟಿಸಿದಾಗ, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಯಾರು ವಹಿಸಬೇಕೆಂಬುದರ ಕುರಿತು ಇಲಾಖಾ ಸಚಿವರು ನಿರ್ಧರಿಸುತ್ತಾರೆ.

(c) ಮುಖ್ಯ ಅತಿಥಿಗಳು/ಗೌರವಾನ್ವಿತ ಅತಿಥಿಗಳು: -

(i) ಇಲಾಖಾ ಸಚಿವರು ವೀಕ್ಷಿಸುವ ಪತ್ರಿಕೆ ಹಾಗೂ ವೇದಿಕೆಯ ಮೇಲೆ ಆಸೀನರಾಗುವ ಗಣ್ಯರ ಹೆಸರುಗಳನ್ನು ಅನುಬಂಧದಲ್ಲಿರುವ ಪಟ್ಟಿಯಿಂದ ಒಂಬತ್ತು ಸಂಖ್ಯೆಗಳಿಗೆ ಮೀರದಂತೆ ಹಾಗೂ ಅನಿವಾರ್ಯ ಸಂದರ್ಭದಲ್ಲಿ ಗಣ್ಯರ ಸಂಖ್ಯೆಯನ್ನು 13 ಕ್ಕೆ ಮೀರದಂತೆ ಆಯ್ಕೆ ಮಾಡುವುದು. ವೇದಿಕೆಯ ಮೇಲೆ ಆಸೀನರಾಗುವ ಗಣ್ಯರ ಹೆಸರುಗಳಲ್ಲಿ ಸ್ಥಳೀಯ ಶಾಸಕರನ್ನು ಕಡ್ಡಾಯವಾಗಿ ಸೇರಿಸತಕ್ಕದ್ದು.

(ii) ಸರ್ಕಾರಿ ಕಾರ್ಯಕ್ರಮವನ್ನು ವಿಧಾನ ಸೌಧ, ವಿಕಾಸ ಸೌಧದ ಆವರಣದಲ್ಲಿ ಆಯೋಜಿಸಿದಾಗ ಸಂಬಂಧಿತ ಇಲಾಖೆ ಸಚಿವರು ಮಾನ್ಯ ವಿಧಾನ ಪರಿಷತ್ತಿನ ಸಭಾಪತಿ ಹಾಗೂ ವಿಧಾನ ಸಭೆಯ ಸಭಾಧ್ಯಕ್ಷರು ಸಹಮತಿಯನ್ನು ಪಡೆದು ಅವರುಗಳನ್ನು ವೇದಿಕೆಯ ಮೇಲೆ ಆಸೀನರಾಗುವ ಗೌರವಾನ್ವಿತ ಅತಿಥಿಗಳನ್ನಾಗಿ ಆಹ್ವಾನಿಸತಕ್ಕದ್ದು.

(d) ಆಯೋಜನೆ: -

(i) ಇಲಾಖೆಯು ಆಯೋಜಿಸುವ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಆಹ್ವಾನ ಪತ್ರಿಕೆ ಮತ್ತು ವೇದಿಕೆಯ ಮೇಲೆ ಆಸೀನರಾಗುವ ಗೌರವಾನ್ವಿತ ಅತಿಥಿಗಳ ವಿವರಗಳನ್ನು ಮತ್ತು ಅವರಿಗೆ ಕಲ್ಪಿಸಿರುವ ಆಸನದ ವಿವರಗಳನ್ನುಳ್ಳ ವೇದಿಕೆ ಯೋಜನೆಯನ್ನು ತಯಾರಿಸಿ ಇಲಾಖಾ ಸಚಿವರಿಂದ ಅನುಮೋದಿಸಿಕೊಳ್ಳುವುದು.

(ii) ಸಂಬಂಧಪಟ್ಟ ಇಲಾಖಾ ಸಚಿವರ ಅನುಮೋದನೆಯಂತೆ ಕಾರ್ಯಕ್ರಮದ / ಸಮಾರಂಭದ ಶಿಷ್ಟಾಚಾರದ ಮೇಲ್ವಿಚಾರಣೆಯನ್ನು ಒಬ್ಬರೇ ಉಸ್ತುವಾರಿಗಾಗಿ ಇಲಾಖೆಯ ಒಬ್ಬ ಹಿರಿಯ ಅಧಿಕಾರಿಯನ್ನು ನೇಮಿಸುವುದು. ಇದರಲ್ಲಿ ಕಾರ್ಯಜಾರಾತಿ ದೃಢೀಕರಣ, ಸಮಾರಂಭದ ಹಿನ್ನೆಲೆ ಟಿಪ್ಪಣಿ ಸಿದ್ಧಪಡಿಸಿ ಕಳುಹಿಸುವುದು, ಮುಖ್ಯ ಅತಿಥಿ ಮತ್ತು ಗೌರವಾನ್ವಿತ ಅತಿಥಿಗಳ ಸ್ವಾಗತ ಮತ್ತು ಬೀಳ್ಕೊಡುವುದು ಇರುತ್ತದೆ.

3. ಇಲಾಖೆಗಳು ಆಯೋಜಿಸುವ ಜಿಲ್ಲಾಮಟ್ಟದ ಕಾರ್ಯಕ್ರಮಗಳ ಮಾರ್ಗಸೂಚಿಗಳು: -

(a) ಉದ್ಘಾಟನೆ: ಜಿಲ್ಲಾ ಮಟ್ಟದ ಕಾರ್ಯಕ್ರಮಗಳನ್ನು ಈ ಕೆಳಕಂಡ ಗಣ್ಯರು ಉದ್ಘಾಟಿಸುತ್ತಾರೆ: -

ಮಾನ್ಯ ಮುಖ್ಯ ಮಂತ್ರಿಗಳು / ಉಪ ಮುಖ್ಯ ಮಂತ್ರಿಗಳು / ಇಲಾಖಾ ಸಚಿವರು / ಜಿಲ್ಲಾ ಉಸ್ತುವಾರಿ ಸಚಿವರು / ಇಲಾಖಾ ಸಚಿವರು ಅನುಮೋದಿಸಿರುವ ಇತರೆ ಗಣ್ಯರು.

(b) ಅಧ್ಯಕ್ಷತೆ: -

(i) ಮಾನ್ಯ ಮುಖ್ಯ ಮಂತ್ರಿಗಳು / ಉಪ ಮುಖ್ಯ ಮಂತ್ರಿಗಳು ಕಾರ್ಯಕ್ರಮವನ್ನು ಉದ್ಘಾಟಿಸಿದಾಗ, ಇಲಾಖಾ ಸಚಿವರು ಅಧ್ಯಕ್ಷತೆ ವಹಿಸುತ್ತಾರೆ.

(ii) ಇಲಾಖಾ ಸಚಿವರು ಕಾರ್ಯಕ್ರಮವನ್ನು ಉದ್ಘಾಟಿಸಿದಾಗ, ಜಿಲ್ಲಾ ಉಸ್ತುವಾರಿ ಸಚಿವರು ಅಧ್ಯಕ್ಷತೆ ವಹಿಸುತ್ತಾರೆ.

(iii) ಜಿಲ್ಲಾ ಸಚಿವರು ಕಾರ್ಯಕ್ರಮ ಉದ್ಘಾಟಿಸಿದಾಗ, ಸ್ಥಳೀಯ ಶಾಸಕರು ಅಧ್ಯಕ್ಷತೆ ವಹಿಸುತ್ತಾರೆ.

(iv) ಇತರೆ ಗಣ್ಯರು ಕಾರ್ಯಕ್ರಮವನ್ನು ಉದ್ಘಾಟಿಸಿದಾಗ, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಯಾರು ವಹಿಸಬೇಕೆಂಬುದರ ಕುರಿತು ಇಲಾಖಾ ಸಚಿವರು ನಿರ್ಧರಿಸುತ್ತಾರೆ.

(c) ಮುಖ್ಯ ಅತಿಥಿಗಳು/ಗೌರವಾನ್ವಿತ ಅತಿಥಿಗಳು: -

ಇಲಾಖಾ ಸಚಿವರು ಆಹ್ವಾನ ಪತ್ರಿಕೆ ಹಾಗೂ ವೇದಿಕೆಯ ಮೇಲೆ ಆಸೀನರಾಗುವ ಗಣ್ಯರ ಹೆಸರುಗಳನ್ನು ಅನುಬಂಧದಲ್ಲಿರುವ ಪಟ್ಟಿಯಿಂದ ಒಂಬತ್ತು ಸಂಖ್ಯೆಗಳಿಗೆ ಮೀರದಂತೆ ಹಾಗೂ ಅನಿವಾರ್ಯ ಸಂದರ್ಭದಲ್ಲಿ ಗಣ್ಯರ ಸಂಖ್ಯೆಯನ್ನು 13 ಕ್ಕೆ ಮೀರದಂತೆ ಆಯ್ಕೆ ಮಾಡತಕ್ಕದ್ದು. ವೇದಿಕೆಯ ಮೇಲೆ ಆಸೀನರಾಗುವ ಗಣ್ಯರ ಹೆಸರುಗಳಲ್ಲಿ ಸ್ಥಳೀಯ ಶಾಸಕರನ್ನು ಕಡ್ಡಾಯವಾಗಿ ಸೇರಿಸತಕ್ಕದ್ದು.

(d) ಕಾರ್ಯಕ್ರಮದ ಆಯೋಜನೆ: -

(i) ಇಲಾಖೆಯು ಆಯೋಜಿಸುವ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಆಹ್ವಾನ ಪತ್ರಿಕೆ ಮತ್ತು ವೇದಿಕೆಯ ಮೇಲೆ ಆಸೀನರಾಗುವ ಗೌರವಾನ್ವಿತ ಅತಿಥಿಗಳ ವಿವರಗಳನ್ನು ಮತ್ತು ಅವರಿಗೆ ಕಾಯ್ದಿರಿಸುವ ಆಸನದ ವಿವರಗಳನ್ನುಳ್ಳ ವೇದಿಕೆ ಯೋಜನೆಯನ್ನು ತಯಾರಿಸಿ ಇಲಾಖಾ ಸಚಿವರಿಂದ ಅನುಮೋದಿಸಿಕೊಳ್ಳುವುದು.

(ii) ಸಂಬಂಧಪಟ್ಟ ಇಲಾಖಾ ಸಚಿವರ ಅನುಮೋದನೆಯೊಂದಿಗೆ ಕಾರ್ಯಕ್ರಮದ / ಸಮಾರಂಭದ ಶಿಷ್ಟಾಚಾರದ ಮೇಲ್ವಿಚಾರಣೆಯ ಒಟ್ಟಾರೆ ಉಸ್ತುವಾರಿಗಾಗಿ ಇಲಾಖೆಯ ಒಬ್ಬ ಹಿರಿಯ ಅಧಿಕಾರಿಯನ್ನು ನೇಮಿಸುವುದು. ಇದರಲ್ಲಿ ಹಾಜರಾತಿ ವ್ಯವಸ್ಥೀಕರಣ, ಸಮಾರಂಭದ ಹಿನ್ನೆಲೆ ಟಿಪ್ಪಣಿ ಸಿದ್ಧಪಡಿಸಿ ಕಳುಹಿಸುವುದು, ಮುಖ್ಯ ಅತಿಥಿ ಮತ್ತು ಗೌರವಾನ್ವಿತ ಅತಿಥಿಗಳ ಸ್ವಾಗತ ಮತ್ತು ಬೀಳ್ಕೊಡುವುದು ಸೇರಿರುತ್ತದೆ.

4. ಜಿಲ್ಲಾಡಳಿತವು ಆಯೋಜಿಸುವ ಜಿಲ್ಲಾಮಟ್ಟದ ಕಾರ್ಯಕ್ರಮಗಳ ಮಾರ್ಗಸೂಚಿಗಳು. –

(a) ಉದ್ಘಾಟನೆ: -ಜಿಲ್ಲಾ ಮಟ್ಟದ ಕಾರ್ಯಕ್ರಮಗಳನ್ನು ಈ ಕೆಳಕಂಡ ಗಣ್ಯರುಗಳು ಉದ್ಘಾಟಿಸುತ್ತಾರೆ.

ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು / ಜಿಲ್ಲೆಯ ಇತರೆ ಸಚಿವರು / ಜಿಲ್ಲಾ ಉಸ್ತುವಾರಿ ಸಚಿವರಿಂದ ಅನುಮೋದಿಸಿದಂತ ಇತರೆ ಗಣ್ಯರು

(b) ಅಧ್ಯಕ್ಷತೆ:

(i) ಜಿಲ್ಲಾ ಉಸ್ತುವಾರಿ ಸಚಿವರು ಕಾರ್ಯಕ್ರಮವನ್ನು ಉದ್ಘಾಟಿಸಿದಾಗ, ಕಾರ್ಯಕ್ರಮ ನಡೆಯುವ ಸ್ಥಳದ ಸ್ಥಳೀಯ ಶಾಸಕರು ಅಧ್ಯಕ್ಷತೆ ವಹಿಸುತ್ತಾರೆ.

(ii) ಜಿಲ್ಲೆಯ ಇತರೆ ಸಚಿವರು ಕಾರ್ಯಕ್ರಮವನ್ನು ಉದ್ಘಾಟಿಸಿದಾಗ, ಕಾರ್ಯಕ್ರಮ ನಡೆಯುವ ಸ್ಥಳದ ಸ್ಥಳೀಯ ಶಾಸಕರು ಅಧ್ಯಕ್ಷತೆ ವಹಿಸುತ್ತಾರೆ.

(iii) ಇತರೆ ಗಣ್ಯರು ಕಾರ್ಯಕ್ರಮವನ್ನು ಉದ್ಘಾಟಿಸಿದಾಗ, ಯಾರು ಅಧ್ಯಕ್ಷತೆ ವಹಿಸಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವರು ನಿರ್ಧರಿಸುತ್ತಾರೆ.

(c) ಮುಖ್ಯ ಅತಿಥಿಗಳು / ಗೌರವಾನ್ವಿತ ಅತಿಥಿಗಳು: -

ಜಿಲ್ಲಾ ಸಚಿವರು ಆಹ್ವಾನ ಪತ್ರಿಕೆ ಹಾಗೂ ವೇದಿಕೆಯ ಮೇಲೆ ಆಸೀನರಾಗುವ ಗಣ್ಯರ ಹೆಸರುಗಳನ್ನು ಅನುಬಂಧದಲ್ಲಿರುವ ಪಟ್ಟಿಯಿಂದ ಒಂಬತ್ತು ಸಂಖ್ಯೆಗಳಿಗೆ ಮೀರದಂತೆ ಹಾಗೂ ಅಸೆಂಬ್ಲಿಯ ಸಂದರ್ಭದಲ್ಲಿ ಗಣ್ಯರ ಸಂಖ್ಯೆಯನ್ನು 13 ಕ್ಕೆ ಮೀರದಂತೆ ಆಯ್ಕೆ ಮಾಡುವುದು. ವೇದಿಕೆಯ ಮೇಲೆ ಆಸೀನರಾಗುವ ಗಣ್ಯರ ಹೆಸರುಗಳಲ್ಲಿ ಸ್ಥಳೀಯ ಶಾಸಕರನ್ನು ಕಡ್ಡಾಯವಾಗಿ ಸೇರಿಸತಕ್ಕದ್ದು.

(d)ಕಾರ್ಯಕ್ರಮದ ಆಯೋಜನೆ: -

(i) ಜಿಲ್ಲಾಡಳಿತ ಆಯೋಜಿಸುವ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಆಹ್ವಾನ ಪತ್ರಿಕೆ ಮತ್ತು ವೇದಿಕೆಯ ಮೇಲೆ ಆಸೀನರಾಗುವ ಗೌರವಾನ್ವಿತ ಅತಿಥಿಗಳ ವಿವರಗಳನ್ನು ಮತ್ತು ಅವರಿಗೆ ಕಲ್ಪಿಸಿರುವ ಆಸನದ ವಿವರಗಳನ್ನುಳ್ಳ ವೇದಿಕೆ ಯೋಜನೆಯನ್ನು ತಯಾರಿಸಿ ಜಿಲ್ಲಾ ಉಸ್ತುವಾರಿ ಸಚಿವರಿಂದ ಅನುಮೋದಿಸಿಕೊಳ್ಳುವುದು.

(ii) ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಸಚಿವರ ಅನುಮೋದನೆಯೊಂದಿಗೆ ಕಾರ್ಯಕ್ರಮದ / ಸಮಾರಂಭದ ಶಿಷ್ಟಾಚಾರದ ಮೇಲ್ವಿಚಾರಣೆಯ ಒಟ್ಟಾರೆ ಉಸ್ತುವಾರಿಗಾಗಿ ಜಿಲ್ಲೆಯ ಒಬ್ಬ ಹಿರಿಯ ಅಧಿಕಾರಿಯನ್ನು ನೇಮಿಸುವುದು. ಇವರಲ್ಲಿ ಹೊಣೆಗಾರಿಕೆ ವ್ಯಾಖ್ಯೀಕರಣ. ಸಮಾರಂಭದ ಹಿನ್ನೆಲೆ ಟಿಪ್ಪಣಿ ಸಿದ್ಧಪಡಿಸಿ ಕಳುಹಿಸುವುದು, ಮುಖ್ಯ ಅತಿಥಿ ಮತ್ತು ಗೌರವಾನ್ವಿತ ಅತಿಥಿಗಳ ಸ್ವಾಗತ ಮತ್ತು ಬೀಳ್ಕೊಡುವುದು ಸೇರಿರುತ್ತದೆ

5. ತಾಲ್ಲೂಕು ಮಟ್ಟದ ಕಾರ್ಯಕ್ರಮಗಳಿಗೆ ಮಾರ್ಗಸೂಚಿಗಳು. –

(a) ಉದ್ಘಾಟನೆ: -ತಾಲ್ಲೂಕು ಮಟ್ಟದ ಕಾರ್ಯಕ್ರಮಗಳನ್ನು ಈ ಕೆಳಕಂಡ ಗಣ್ಯರು ಉದ್ಘಾಟಿಸುತ್ತಾರೆ.

ಜಿಲ್ಲಾ ಉಸ್ತುವಾರಿ ಸಚಿವರು / ಸ್ಥಳೀಯ ಶಾಸಕರು / ಜಿಲ್ಲಾ ಉಸ್ತುವಾರಿ ಸಚಿವರಿಂದ ಅನುಮೋದಿಸಲ್ಪಟ್ಟ ಇತರೇ ಗಣ್ಯರು.

(b) ಅಧ್ಯಕ್ಷತೆ: -

(i) ಜಿಲ್ಲಾ ಉಸ್ತುವಾರಿ ಸಚಿವರು ಕಾರ್ಯಕ್ರಮವನ್ನು ಉದ್ಘಾಟಿಸಿದಾಗ, ಕಾರ್ಯಕ್ರಮ ನಡೆಯುವ ಸ್ಥಳದ ವ್ಯಾಪ್ತಿಗೊಳಪಡುವ ಸ್ಥಳೀಯ ಶಾಸಕರು ಅಧ್ಯಕ್ಷತೆಯನ್ನು ವಹಿಸುವುದು.

(ii) ಸ್ಥಳೀಯ ಶಾಸಕರು ಕಾರ್ಯಕ್ರಮವನ್ನು ಉದ್ಘಾಟಿಸಿದಾಗ, ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಯಾರು ವಹಿಸಬೇಕೆಂಬುದನ್ನು ಜಿಲ್ಲಾ ಉಸ್ತುವಾರಿ ಸಚಿವರ ಸಹಮತಿ ಮೇರೆಗೆ ಆಯೋಜಕರಾಗುವ ಗಣ್ಯರು ಅಧ್ಯಕ್ಷತೆಯನ್ನು ವಹಿಸುವುದು.

(iii) ಇತರೆ ಗಣ್ಯರು ಕಾರ್ಯಕ್ರಮವನ್ನು ಉದ್ಘಾಟಿಸಿದಾಗ, ಕಾರ್ಯಕ್ರಮದ ಅಧ್ಯಕ್ಷತೆಯನ್ನು, ಯಾರು ವಹಿಸಬೇಕೆಂಬುದನ್ನು, ಜಿಲ್ಲಾ ಉಸ್ತುವಾರಿ ಸಚಿವರು ನಿರ್ಧರಿಸುವರು.

(c) ಮುಖ್ಯ ಅತಿಥಿಗಳು /ಗೌರವಾನ್ವಿತ ಅತಿಥಿಗಳು: -ಜಿಲ್ಲಾ ಉಸ್ತುವಾರಿ ಸಚಿವರ ಸಹಮತಿ ಮೇರಿಗೆ ಸಂಬಂಧಪಟ್ಟ ತಾಲ್ಲೂಕು ಅಧಿಕಾರಿಯವರು ಆಹ್ವಾನ ಪತ್ರಿಕೆ ಹಾಗೂ ವೇದಿಕೆಯ ಮೇಲೆ ಆಸೀನರಾಗುವ ಗಣ್ಯರ ಹೆಸರುಗಳನ್ನು, ಅನುಬಂಧದಲ್ಲಿರುವ ಪಟ್ಟಿಯಿಂದ ಒಂಬತ್ತು ಸಂಖ್ಯೆಗಳಿಗೆ ಮೀರದಂತೆ ಹಾಗೂ ಅನಿವಾರ್ಯ ಸಂದರ್ಭ ವಲ್ಲಿ ಗಣ್ಯರ ಸಂಖ್ಯೆಯನ್ನು 13 ಕ್ಕೆ ಮೀರದಂತೆ ಆಯ್ಕೆ ಮಾಡುವುದು. ವೇದಿಕೆಯ ಮೇಲೆ ಆಸೀನರಾಗುವ ಗಣ್ಯರ ಹೆಸರುಗಳಲ್ಲಿ ತಾಲ್ಲೂಕಿನ ಎಲ್ಲಾ ಶಾಸಕರನ್ನು ಹಾಗೂ ಸಂಸದರುಗಳನ್ನು ಕಡ್ಡಾಯವಾಗಿ ಸೇರಿಸತಕ್ಕದ್ದು.

(d) ಕಾರ್ಯಕ್ರಮದ ಆಯೋಜನೆ: -

(i) ತಾಲ್ಲೂಕು ಮಟ್ಟದ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಆಹ್ವಾನ ಪತ್ರಿಕೆ ಮತ್ತು ವೇದಿಕೆಯ ಮೇಲೆ ಆಸೀನರಾಗುವ ಗೌರವಾನ್ವಿತ ಅತಿಥಿಗಳ ವಿವರಗಳನ್ನು ಮತ್ತು ಅವರಿಗೆ ಕಾಯ್ದಿರಿಸುವ ಆಸನದ ವಿವರಗಳನ್ನುಳ್ಳ ವೇದಿಕೆ ಯೋಜನೆಯನ್ನು ತಯಾರಿಸಿ ಜಿಲ್ಲಾ ಉಸ್ತುವಾರಿ ಸಚಿವರಿಂದ ಅನುಮೋದಿಸಿಕೊಳ್ಳುವುದು.

(ii) ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಸಚಿವರ ಅನುಮೋದನೆಯೊಂದಿಗೆ ಕಾರ್ಯಕ್ರಮದ / ಸಮಾರಂಭದ ಶಿಷ್ಟಾಚಾರದ ಮೇರಿಗೆಯಂತೆ ಒಟ್ಟಾರೆ ಉಸ್ತುವಾರಿಗಾಗಿ ಇಲಾಖೆಯ ಒಬ್ಬ ಹಿರಿಯ ಅಧಿಕಾರಿಯನ್ನು ನೇಮಿಸುವುದು. ಇದರಲ್ಲಿ ಹಾಜರಾತಿ ದೃಢೀಕರಣ, ಸಮಾರಂಭದ ಹಿನ್ನೆಲೆ ಟಿಪ್ಪಣಿ ಸಿದ್ಧಪಡಿಸಿ ಕಳುಹಿಸುವುದು. ಮುಖ್ಯ ಅತಿಥಿ ಮತ್ತು ಗೌರವಾನ್ವಿತ ಅತಿಥಿಗಳ ಸ್ವಾಗತ ಮತ್ತು ಬೀಳ್ಕೊಡುವುದು ಸೇರಿರುತ್ತವೆ

6. ರಾಜ್ಯದಲ್ಲಿ ಆಯೋಜಿಸುವ ಕೇಂದ್ರ ಪುರಸ್ಕೃತ/ ಪ್ರಾಯೋಜಿತ/ಬೆಂಬಲಿತ ಕಾರ್ಯಕ್ರಮಗಳು: -

(a) ಉದ್ಘಾಟನೆ: - ಕೇಂದ್ರ ಪುರಸ್ಕೃತ/ ಪ್ರಾಯೋಜಿತ/ಬೆಂಬಲಿತ ಕಾರ್ಯಕ್ರಮಗಳನ್ನು ಈ ಕೆಳಕಂಡ ಗಣ್ಯರು ಉದ್ಘಾಟಿಸುತ್ತಾರೆ:

ಗೌರವಾನ್ವಿತ ರಾಜ್ಯಪಾಲರು / ಮಾನ್ಯ ಮುಖ್ಯ ಮಂತ್ರಿಗಳು / ಕೇಂದ್ರ ಸಚಿವ ಸಂಪುಟ ದರ್ಜೆ ಯ ಸಚಿವರು / ಮಾನ್ಯ ಉಪ ಮುಖ್ಯ ಮಂತ್ರಿಗಳು / ಸಂಬಂಧಪಟ್ಟ ಇಲಾಖಾ ಸಚಿವರು / ಮಾನ್ಯ ಮುಖ್ಯ ಮಂತ್ರಿಗಳು ಸೂಚಿಸುವ ಯಾವುದೇ ಗಣ್ಯರು.

(b)ಅಧ್ಯಕ್ಷತೆ: -

(i) ಗೌರವಾನ್ವಿತ ರಾಜ್ಯಪಾಲರು ಕಾರ್ಯಕ್ರಮವನ್ನು ಉದ್ಘಾಟಿಸಿದಾಗ, ಮಾನ್ಯ ಮುಖ್ಯ ಮಂತ್ರಿಗಳು / ಕೇಂದ್ರ ಸಚಿವ ಸಂಪುಟ ದರ್ಜೆಯ ಸಚಿವರು / ಉಪ ಮುಖ್ಯ ಮಂತ್ರಿಗಳು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುತ್ತಾರೆ.

(ii) ಮಾನ್ಯ ಮುಖ್ಯ ಮಂತ್ರಿಗಳು / ಕೇಂದ್ರ ಸಚಿವ ಸಂಪುಟ ದರ್ಜೆಯ ಸಚಿವರು / ಉಪ ಮುಖ್ಯ ಮಂತ್ರಿಗಳು ಕಾರ್ಯಕ್ರಮವನ್ನು ಉದ್ಘಾಟಿಸದಿದ್ದಲ್ಲಿ, ಇಲಾಖಾ ಸಚಿವರು ಅಧ್ಯಕ್ಷತೆ ವಹಿಸುತ್ತಾರೆ.

(iii) ಇಲಾಖಾ ಸಚಿವರು ಕಾರ್ಯಕ್ರಮವನ್ನು ಉದ್ಘಾಟಿಸಿದಾಗ ಕಾರ್ಯಕ್ರಮವು ನಡೆಯುವ ಸ್ಥಳದ ಸ್ಥಳೀಯ ಶಾಸಕರು ಅಧ್ಯಕ್ಷತೆ ವಹಿಸುತ್ತಾರೆ.

(iv) ಇತರೆ ಗಣ್ಯರು ಕಾರ್ಯಕ್ರಮವನ್ನು ಉದ್ಘಾಟಿಸಿದಾಗ, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಯಾರು ವಹಿಸಬೇಕೆಂಬುದರ ಕುರಿತು ಮಾನ್ಯ ಮುಖ್ಯ ಮಂತ್ರಿಗಳು ನಿರ್ಧರಿಸುತ್ತಾರೆ.

(c) ಮುಖ್ಯ ಅತಿಥಿಗಳು/ಗೌರವಾನ್ವಿತ ಅತಿಥಿಗಳು: -

(i) ಇಲಾಖಾ ಸಚಿವರು ಆಹ್ವಾನ ಪತ್ರಿಕೆ ಹಾಗೂ ವೇದಿಕೆಯ ಮೇಲೆ ಆಸೀನರಾಗುವ ಗಣ್ಯರ ಹೆಸರುಗಳನ್ನು ಅನುಬಂಧದಲ್ಲಿರುವ ಪಟ್ಟಿಯಿಂದ ಒಂದಿತ್ತು ಸಂಖ್ಯೆಗಳಿಗೆ ಮೀರದಂತೆ ಹಾಗೂ ಅನಿವಾರ್ಯ ಸಂದರ್ಭದಲ್ಲಿ ಗಣ್ಯರ ಸಂಖ್ಯೆಯನ್ನು 13 ಕ್ಕೆ ಮೀರದಂತೆ ಆಯ್ಕೆ ಮಾಡುವುದು. ವೇದಿಕೆಯ ಮೇಲೆ ಆಸೀನರಾಗುವ ಗಣ್ಯರ ಹೆಸರುಗಳಲ್ಲಿ ಸ್ಥಳೀಯ ಶಾಸಕರನ್ನು ಮತ್ತು ಸ್ಥಳೀಯ ಸಂಸದರನ್ನು ಕಡ್ಡಾಯವಾಗಿ ಸೇರಿಸತಕ್ಕದ್ದು.

(ii) ಸರ್ಕಾರಿ ಕಾರ್ಯಕ್ರಮವನ್ನು ವಿಧಾನ ಸೌಧ, ವಿಕಾಸ ಸೌಧದ ಆವರಣದಲ್ಲಿ ಆಯೋಜಿಸಿದಾಗ ಸಂಬಂಧಿತ ಇಲಾಖೆ ಸಚಿವರು ಮಾನ್ಯ ವಿಧಾನ ಪರಿಷತ್ತಿನ ಸಭಾಪತಿ ಹಾಗೂ ವಿಧಾನ ಸಭೆಯ ಸಭಾಧ್ಯಕ್ಷರ ಸಹಮತಿಯನ್ನು ಪಡೆದು ಅವರುಗಳನ್ನು ವೇದಿಕೆಯ ಮೇಲೆ ಆಸೀನರಾಗುವ ಗೌರವಾನ್ವಿತ ಅತಿಥಿಗಳನ್ನಾಗಿ ಆಹ್ವಾನಿಸತಕ್ಕದ್ದು.

(d) ಆಯೋಜನೆ: -

(i) ರಾಜ್ಯದ ಯಾವುದೇ ಕೇಂದ್ರ ಸಹಾಯದ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಯಾವುದೇ ಶಿಬಿರಗಳು / ಶಂಕುಸ್ಥಾಪನೆ / ಸೌಲಭ್ಯ ವಿತರಣೆ ಕಾರ್ಯಕ್ರಮಗಳಿಗೆ ಕೇಂದ್ರ ಮಟ್ಟದ ಇಲಾಖೆಗಳು ಮುಂಚಿತವಾಗಿ ಮಾನ್ಯ ಮುಖ್ಯಮಂತ್ರಿಗಳ ಅನುಮತಿಯನ್ನು ಪಡೆದು, ಅವರು ಸೂಚಿಸಿದ ದಿನಾಂಕ ಮತ್ತು ಸ್ಥಳದಲ್ಲಿ ಕಾರ್ಯಕ್ರಮವನ್ನು ಆಯೋಜಿಸಬೇಕು ಹಾಗೂ ಶಿಷ್ಟಾಚಾರವನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು ಮತ್ತು ಅದರ 'ಬ್ಲೂ ಬುಕ್' ಅನ್ನು ಅನುಸರಿಸಬೇಕು.

(ii) ಕೇಂದ್ರ ಪುರಸ್ಕೃತ/ ಆಯೋಜಿತ/ಬೆಂಬಲಿತ ಕಾರ್ಯಕ್ರಮಗಳನ್ನು ರಾಜ್ಯದ ಗ್ರಾಮ ಪಂಚಾಯಿತಿ / ತಾಲ್ಲೂಕು / ಜಿಲ್ಲೆ / ರಾಜ್ಯಮಟ್ಟದಲ್ಲಿ ಆಚರಿಸುವ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಅಧಿಕೃತ ಜಿಲ್ಲಾಡಳಿತದ ಪೂರ್ವಾನುಮತಿ ಕಡ್ಡಾಯವಾಗಿ ಪಡೆಯಬೇಕು.

(iii) ಕೇಂದ್ರ ಪುರಸ್ಕೃತ/ ಆಯೋಜಿತ/ಬೆಂಬಲಿತ ಕಾರ್ಯಕ್ರಮಗಳನ್ನು ಆಯೋಜಿಸುವ ಸಂದರ್ಭದಲ್ಲಿ, ಕೇಂದ್ರ ಮತ್ತು ರಾಜ್ಯದ ಗಣ್ಯರ ಭಾಗವಹಿಸುವಿಕೆ ಖಚಿತಪಡಿಸಲು, ದಿನಾಂಕ, ಸಮಯ ಮತ್ತು ಸ್ಥಳವನ್ನು ಸಂಬಂಧಪಟ್ಟ ಇಲಾಖೆಯ ಮಾನ್ಯ ಸಚಿವರು ಅಥವಾ ಮುಖ್ಯ ಕಾರ್ಯದರ್ಶಿಗಳು ಅಥವಾ ಜಿಲ್ಲಾಧಿಕಾರಿಗಳ ಪೂರ್ವಾನುಮತಿಯಿಂದ ನಿಗದಿ ಮಾಡಬೇಕು.

(iv) ಇಲಾಖೆಯು ಆಯೋಜಿಸುವ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಆಹ್ವಾನ ಪತ್ರಿಕೆ ಮತ್ತು ವೇದಿಕೆಯ ಮೇಲೆ ಆಸೀನರಾಗುವ ಗೌರವಾನ್ವಿತ ಅತಿಥಿಗಳ ವಿವರಗಳನ್ನು ಮತ್ತು ಅವರಿಗೆ ಕಾಯ್ದಿರಿಸುವ ಆಸನದ ವಿವರಗಳನ್ನೊಳಗೊಂಡ ವೇದಿಕೆ ಯೋಜನೆಯನ್ನು ತಯಾರಿಸಿ ಇಲಾಖಾ ಸಚಿವರಿಂದ ಅನುಮೋದಿಸಿಕೊಳ್ಳುವುದು.

(v) ಸಂಬಂಧಪಟ್ಟ ಇಲಾಖಾ ಸಚಿವರು ಕಾರ್ಯಕ್ರಮದ / ಸಮಾರಂಭದ ಶಿಷ್ಟಾಚಾರದ ಮೇಲ್ವಿಚಾರಣೆಯ ಒಟ್ಟಾರೆ ಜವಾಬ್ದಾರಿಗಾಗಿ ಇಲಾಖೆಯು ಒಬ್ಬ ಹಿರಿಯ ಅಧಿಕಾರಿಯನ್ನು ನೋಡಿಕೊಳ್ಳುವುದು ಇದರಲ್ಲಿ ಹಾಜರಾತಿ ದೃಢೀಕರಣ, ಸಮಾರಂಭದ ಹಿನ್ನೆಲೆ ಟಿಪ್ಪಣಿ ಸಿದ್ಧಪಡಿಸಿ ಕಳುಹಿಸುವುದು, ಮುಖ್ಯ ಅತಿಥಿ ಮತ್ತು ಗೌರವಾನ್ವಿತ ಅತಿಥಿಗಳ ಸ್ವಾಗತ ಮತ್ತು ಬೀಳ್ಕೊಡುವುದು ಸೇರಿರುತ್ತದೆ.

7. ಸಾಮಾನ್ಯ ಮಾರ್ಗಸೂಚಿಗಳು: -

(a) ರಾಜಭವನದಲ್ಲಿ ಆಯೋಜಿಸುವ ಸರ್ಕಾರದ ಎಲ್ಲಾ ಸಮಾರಂಭಗಳು / ಕಾರ್ಯಕ್ರಮಗಳು ಮಾನ್ಯ ರಾಜ್ಯಪಾಲರ ನಿರ್ದೇಶನ ಹಾಗೂ ಅವರ ಅನುಮೋದನೆಯಂತೆ ನಡೆಯುತ್ತವೆ.

(b) ಕಾರ್ಯಕ್ರಮ/ ಸಮಾರಂಭದ ಅತಿಥಿಗಳಿಗೆ ಯಾವುದೇ ಹಾರಗಳು/ ಹೂಗುಚ್ಛಗಳನ್ನು ಅಥವಾ ಸ್ಮರಣಿಕೆಗಳನ್ನು ನೀಡಬಾರದು. ಕಾರ್ಯಕ್ರಮ/ ಸಮಾರಂಭಕ್ಕೆ ಆಹ್ವಾನಿಸಲಾದ ಅತಿಥಿಗಳಿಗೆ ಸ್ವಾಗತದ ಸಂಕೇತವಾಗಿ ಸಂಘಟಕರು ಸ್ಥಳೀಯ ವಿಶ್ವವಿದ್ಯಾಲಯಗಳ ಪ್ರಕಟಣೆ ಅಥವಾ ಸ್ಥಳೀಯ ಸ್ವಸಹಾಯ ಗುಂಪುಗಳು ತಯಾರಿಸಿರುವ ಉತ್ಪನ್ನಗಳನ್ನು ನೀಡಬಹುದು.

(c) ಒಂದಕ್ಕಿಂತ ಹೆಚ್ಚು ಇಲಾಖೆಗಳ ಸಮ್ಮಿಶ್ರ ಇಲಾಖೆಗಳ ಕಾರ್ಯಕ್ರಮ ಇರುವಾಗ ಹೆಚ್ಚಿನ ಪಾಲು ಇರುವ ಇಲಾಖೆಯ ಸಚಿವರು ಕಾರ್ಯಕ್ರಮದ ಆಯೋಜನೆ, ನಿರ್ವಹಣೆ ಹಾಗೂ ಶಿಷ್ಟಾಚಾರದ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

(d) ವೇದಿಕೆಯ ಮೇಲೆ ಆಸೀನರಾಗುವ ಅತಿಥಿ ಗಣ್ಯರ ಆಸನಗಳ ಮೇಲೆ ಜೇಷ್ಠತೆಯನುಸಾರ ಅವರ ಹೆಸರುಗಳನ್ನು ಬರೆಯಿಸುವುದು.

10	8	6	4	2	ಅ	1	3	5	7	9	11

(e) ವೇದಿಕೆಯಲ್ಲಿ ಆಸೀನರಾದ ಗೌರವಾನ್ವಿತ ಅತಿಥಿಗಳನ್ನು ಹೊರತುಪಡಿಸಿ, ಆಹ್ವಾನ ಪತ್ರಿಕೆಯಲ್ಲಿರದ ಇತರೆ ಗಣ್ಯರಿಗೆ ವೇದಿಕೆಯ ಮುಂಭಾಗದ ಮೊದಲನೆಯ ಸಾಲಿನಲ್ಲಿ ಆಸನಗಳನ್ನು ಕಾಯ್ದಿರಿಸುವುದು.

(f) ಮಂಡಳಿಗಳು / ನಿಗಮಗಳು /ಆಯೋಗಗಳು/ ನಗರ ಅಥವಾ ಗ್ರಾಮೀಣ ಸ್ಥಳೀಯ ಸಂಸ್ಥೆಗಳು/ ಬ್ಯಾಂಕುಗಳು / ಅಕಾಡೆಮಿಗಳು ಮತ್ತು ಸರ್ಕಾರದ ಯಾವುದೇ ಇನ್ನಿತರೆ ಅಂಗಸಂಸ್ಥೆಗಳು ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಆಯೋಜಿಸುವ ಕಾರ್ಯಕ್ರಮ / ಸಮಾರಂಭಗಳಿಗೆ ಗರಿಷ್ಠ ಒಂಬತ್ತು ಅತಿಥಿಗಳನ್ನು ಅನುಬಂಧದಲ್ಲಿ ಸೂಚಿಸಿರುವ ಗಣ್ಯರ ಪಟ್ಟಿಯಿಂದ ಆಯ್ಕೆಮಾಡುವುದು ಹಾಗೂ ರಾಜ್ಯ ಮಟ್ಟದ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಯ ಶಿಷ್ಟಾಚಾರ ಕುರಿತು ಸರ್ಕಾರದ ಉಪ ಕಾರ್ಯದರ್ಶಿ, ಸಿಆಸುಇ (ರಾಜ್ಯ ಶಿಷ್ಟಾಚಾರ) ಇವರ ಅನುಮೋದನೆಯನ್ನು ಪಡೆದು ಸಂಸ್ಥೆಯ ಮುಖ್ಯಸ್ಥರು ನಿರ್ಧರಿಸತಕ್ಕದ್ದು. ರಾಜ್ಯದ ಇತರೆ ಭಾಗಗಳಲ್ಲಿ ನಡೆಯುವ ಕಾರ್ಯಕ್ರಮ/ ಸಮಾರಂಭಗಳ ಅತಿಥಿಗಳ ಪಟ್ಟಿ (ಒಂಬತ್ತಕ್ಕೆ ಮೀರದಂತೆ) ಹಾಗೂ ಶಿಷ್ಟಾಚಾರ ಕುರಿತು ಕಾರ್ಯಕ್ರಮ ನಡೆಯುವ ಸ್ಥಳದ ತಾಲೂಕು ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ಅನುಮೋದನೆಯನ್ನು ಪಡೆಯುವುದು.

(g) ಈ ಮಾರ್ಗಸೂಚಿಗಳು ಶಾಸನಗಳಲ್ಲಿ, ನಿಯಮಗಳಲ್ಲಿ, ಇಂತಹುದೇ ಸಭೆಗಳಿಗೆ ಅಧ್ಯಕ್ಷರಾಗಬೇಕೆಂದು ನಿರ್ದಿಷ್ಟವಾಗಿ ಸೂಚಿಸಿದ್ದರೆ / ವಿಶ್ವವಿದ್ಯಾಲಯಗಳು ಆಯೋಜಿಸುವ ಕಾರ್ಯಕ್ರಮಗಳಿಗೆ / ಸಮಾರಂಭಗಳಿಗೆ ಅನ್ವಯಿಸುವುದಿಲ್ಲ. ಆದಾಗ್ಯೂ, ವಿಶ್ವವಿದ್ಯಾಲಯಗಳು ಇಚ್ಛಿಸಿದ್ದಲ್ಲಿ, ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಬಹುದಾಗಿರುತದೆ.

(h) ಈ ಮಾರ್ಗಸೂಚಿಗಳು ಸಾರ್ವಜನಿಕರು ಭಾಗವಹಿಸುವಂತೆ ಸಭೆ ಸಮಾರಂಭಗಳಿಗೆ ಅನ್ವಯಿಸುತ್ತದೆ. ಆದರೆ, ಸಾರ್ವಜನಿಕರನ್ನು ಆಹ್ವಾನಿಸದೇ ನಿರ್ದಿಷ್ಟ ಗುಂಪಿನ ಸದಸ್ಯರನ್ನು ಆಹ್ವಾನಿಸಿ ಆಯೋಜಿಸುವ ಕಾರ್ಯಕ್ರಮಗಳಿಗೆ ಅನ್ವಯಿಸುವುದಿಲ್ಲ. ಉದಾಹರಣೆ: ಜಿಲ್ಲಾ ಪಂಚಾಯತಿ ಸದಸ್ಯರು, ಯೋಜನಾ ಫಲಾನುಭವಿಗಳು, ತಂತ್ರಜ್ಞರು, ಬುದ್ಧಿ ಜೀವಿಗಳು ಇತ್ಯಾದಿ ಇಂತಹ ಕಾರ್ಯಕ್ರಮಗಳನ್ನು ಸಂಬಂಧಪಟ್ಟ ಇಲಾಖೆ / ಸಂಸ್ಥೆಗಳು ತಮ್ಮ ಹಂತದಲ್ಲಿಯೇ ಆಯೋಜಿಸಲು ಕ್ರಮವಹಿಸುವುದು.

(i) ಆಯೋಜಕರು, ಕಾರ್ಯಕ್ರಮ ನಡೆಯುವ ಜಿಲ್ಲೆಯ ಎಲ್ಲಾ ಶಾಸಕರು, ಸಂಸದರು ಹಾಗೂ ಪಟ್ಟಿಯಲ್ಲಿ ವಿವರಿಸಿದ ಗಣ್ಯರನ್ನು ಮುಂಚಿತವಾಗಿ ಆಹ್ವಾನ ಪತ್ರಿಕೆ ತಲುಪಿರುವ ಬಗ್ಗೆ ಖಾತರಿಪಡಿಸತಕ್ಕದ್ದು.

(j) ಸರ್ಕಾರಿ ಆದೇಶಗಳಲ್ಲಿ ಮಾನ್ಯ ಸಂಸದರು, ಶಾಸಕರು ಅಧ್ಯಕ್ಷರಾಗಿ ಖಾಸಗಿ ಪ್ರಮುಖರು ಅಧ್ಯಕ್ಷತೆಯಲ್ಲಿ ಸುಲವು ಸಮಿತಿಗಳನ್ನು ನೇಮಕ ಮಾಡಲಾಗಿದೆ ಆಯಾ ಸಮಿತಿಯ ಕಾರ್ಯ ವ್ಯಾಪ್ತಿಗೆ ಒಳಪಟ್ಟು ಸಮೀಕ್ಷಣಾ ಸಭೆಗಳನ್ನು ನಡೆಸಬಹುದು.

ಇದನ್ನು ಹೊರತುಪಡಿಸಿ ಸಂಸದರಾಗಲಿ, ಶಾಸಕರೇ ಆಗಲಿ ಇತರೇ ಖಾಸಗಿ ಪ್ರಮುಖರೇ ಆಗಲೀ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಸಮೀಕ್ಷಣಾ ಸಭೆಗಳನ್ನು ಅಥವಾ ಸರ್ಕಾರದ ಸಮಾರಂಭಗಳನ್ನು ನಡೆಸುವಂತಿಲ್ಲ.

ವಿರೋಧ ಪಕ್ಷದ ನಾಯಕರಿಗೂ ಸಹ ಅಧಿಕಾರಿಗಳ ಸಭೆ ಕರೆಯಲು ಅಥವಾ ಸರ್ಕಾರದ ಸಮಾರಂಭಗಳನ್ನು ನಡೆಸಲು ಅವಕಾಶವಿರುವುದಿಲ್ಲ. ಆದರೆ, ಅಗತ್ಯ ಮಾಹಿತಿಯನ್ನು ಸೂಕ್ಷ್ಮವಾಗಿ ಒದಗಿಸಬಹುದಾಗಿದೆ ಇಂತಹ ಸಭೆಗಳನ್ನು ನಡೆಸಲು ಮಾನ್ಯ ಸಚಿವರು ಮತ್ತು ಅಧಿಕಾರಿಗಳಿಗೆ ಮಾತ್ರ ಅವಕಾಶವಿರುತ್ತದೆ

(k) ಗಾರವಾನ್ವಿತ ರಾಜ್ಯಪಾಲರು, ಮಾನ್ಯ ಮುಖ್ಯಮಂತ್ರಿಗಳು, ಗಾರವಾನ್ವಿತ ರಾಜ್ಯ ಪಾಲರು, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇನ್ನಿತರ ಅತೀ ಮುಖ್ಯ ಗಣ್ಯ ವ್ಯಕ್ತಿಗಳು ಉಪಸ್ಥಿತರಿರುವ ಸರ್ಕಾರಿ ಕಾರ್ಯಕ್ರಮಗಳ ಪಾಸ್‌ಗಳನ್ನು ವಿತರಿಸುವ ಸಂಬಂಧ ಈ ಕೆಳಕಂಡ ಮಾರ್ಗ ಸೂಚಿಗಳನ್ನು ಅನುಸರಿಸತಕ್ಕದ್ದು.

i) ಪ್ರತಿ ಪಾಸ್‌ನ ಕೆಳಭಾಗದಲ್ಲಿ ಸದರಿ ಪಾಸ್‌ನ್ನು ಪಡೆದವರು ಕಾರ್ಯಕ್ರಮದ ಸ್ಥಳದ ಯಾವ ಭಾಗದಲ್ಲಿ ಕುಳಿತುಕೊಳ್ಳಬಹುದೆಂದು ಸ್ಪಷ್ಟವಾಗಿ ನಮೂದಿಸುವುದು.

ii) ಪಾಸ್‌ಗಳು ಅಧಿಸೂಚನೆಯಲ್ಲಿನ ಪತ್ರಿಕೆಗಳ ಮೇರೆ ಸರಣಿ ಸಂಖ್ಯೆಗಳು ವಿಶೇಷ ಸರಣಿ ಸಂಖ್ಯೆಯನ್ನು ಮುದ್ರಿಸುವುದು ನಮೂದಿಸಿ ಪಾಸ್‌ಗಳನ್ನು ವಿತರಿಸಬೇಕು.

iii) ಪಾಸ್‌ಗಳನ್ನು ನೀಡುವುದರಲ್ಲಿ ಹಾಗೂ ಕಡತಗಳನ್ನು ಖಚಿತಪಡಿಸಿಕೊಳ್ಳಲು ಯಾರಿಗೆ, ಯಾವ ಕಛೇರಿಗೆ ಎಷ್ಟು ಪಾಸ್‌ಗಳನ್ನು (ಪ್ರತಿ ಪಾಸ್‌ಗೆ ವಿಶೇಷ ಸರಣಿ ಸಂಖ್ಯೆ ಯೊಂದಿಗೆ) ಹಾಗು ಯಾವ ಸರಣಿ ಸಂಖ್ಯೆಯ ಪಾಸ್‌ಗಳನ್ನು ಅಧಿಸೂಚನೆಯ ಪತ್ರಿಕೆಗಳನ್ನು ಯಾರಿಗೆ ನೀಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಹಾಗು ಈ ಬಗ್ಗೆ ಲಿಖಿತ ದಾಖಲೆಗಳನ್ನು ನಿರ್ವಹಿಸುವುದು.

iv) ಪಾಸ್‌ಗಳನ್ನು ಅಧಿಸೂಚನೆ ಪತ್ರಿಕೆಗಳನ್ನು ನೀಡಲಾದ ವ್ಯಕ್ತಿಗಳ ಕಛೇರಿಗಳ ಪಟ್ಟಿಯನ್ನು, ತೆಗೆದುಕೊಂಡ ಬಾಬ್ತುಗಳನ್ನು ನಿರ್ವಹಿಸುವುದು

v) ಕೇಂದ್ರ ಸರ್ಕಾರದ / ರಾಜ್ಯ ಸರ್ಕಾರದ ಮಾರ್ಗಸೂಚಿಗಳಂತೆಯೇ ಕಾರ್ಯಕ್ರಮದ ಆಯಾಸ್ಥಳದಲ್ಲಿ ಪೋದಿಕೆಯ ಮೇಲೆ ಕುಳಿತುಕೊಳ್ಳಲು ಅರ್ಹ ರಾಗುವ ಗಣ್ಯರ ವಿಷಯದಲ್ಲಿ ಕಟ್ಟುನಿಟ್ಟಿನ ಪೂರ್ವಸೂಚನೆಗಳನ್ನು ನೀಡಿ ಅನಧಿಕೃತ ವ್ಯಕ್ತಿ / ವ್ಯಕ್ತಿಗಳು ಪಡೆಯಾಗೆ ಪ್ರವೇಶ ಪಡೆಯುವುದನ್ನು ತಪ್ಪಿಸಲು ಪೊಲೀಸ್ ಇಲಾಖೆಯು ಕ್ರಮಕೈಗೊಳ್ಳುವುದು.

(ಡಾ. ಕೆ. ಜಿ. ಜಗದೀಶ)
ಸರ್ಕಾರದ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಅನುಬಂಧ

ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ಕಾರ್ಯಕ್ರಮಗಳಲ್ಲಿ ಅನುಸರಿಸಬೇಕಾದ ಗಣ್ಯರ ಜೇಷ್ಠತಾ ಪಟ್ಟಿ

01	ರಾಜ್ಯಪಾಲರು
02	ಮುಖ್ಯಮಂತ್ರಿಗಳು
03	ಕೇಂದ್ರ ಸಚಿವ ಸಂಪುಟ ದರ್ಜೆಯ ಸಚಿವರು
04	ಉಪಮುಖ್ಯಮಂತ್ರಿಗಳು
05	ಕೇಂದ್ರ ರಾಜ್ಯ ಸಚಿವರು
06	ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು
07	ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ
08	ರಾಜ್ಯ ಸಚಿವ ಸಂಪುಟ ದರ್ಜೆಯ ಸಚಿವರುಗಳು
09	ವಿರೋಧ ಪಕ್ಷದ ನಾಯಕರುಗಳು, ವಿಧಾನ ಸಭೆ ಮತ್ತು ವಿಧಾನ ಪರಿಷತ್ತು
10	ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಧೀಶರು
11	ಅಡ್ವೋಕೇಟ್ ಜನರಲ್
12	ಉಪ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು
13	ಉಪ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ
14	ಸರ್ಕಾರಿ ಮುಖ್ಯ ಸಚೇತಕರು, ವಿಧಾನ ಸಭೆ ಮತ್ತು ವಿಧಾನ ಪರಿಷತ್ತು
15	ಸಚಿವ ಸಂಪುಟ ದರ್ಜೆಯ ಸ್ಥಾನಮಾನ ಹೊಂದಿರುವ ಗಣ್ಯರು
16	ಸಂಸದರು, ಲೋಕಸಭೆ
17	ಸಂಸದರು, ರಾಜ್ಯಸಭೆ
18	ರಾಜ್ಯ ಸಚಿವರ ದರ್ಜೆಯ ಸ್ಥಾನಮಾನ ಹೊಂದಿರುವ ಗಣ್ಯರು
19	ವಿಧಾನ ಸಭೆಯ ಶಾಸಕರುಗಳು
20	ವಿಧಾನ ಪರಿಷತ್ತಿನ ಶಾಸಕರುಗಳು
21	ಮಂಡಳಿಗಳು, ನಿಗಮಗಳು, ಆಯೋಗಗಳು, ನಗರ ಸ್ಥಳೀಯ ಸಂಸ್ಥೆಗಳು, ಪಂಚಾಯತ್ ರಾಜ್ ಸಂಸ್ಥೆಗಳು, ಪ್ರಾಧಿಕಾರಗಳ ಅಕಾಡೆಮಿಗಳು ಮತ್ತು ಇನ್ನಿತರೇ ಸರ್ಕಾರಿ ಅಂಗ ಸಂಸ್ಥೆ ಅಧ್ಯಕ್ಷರುಗಳು, ಸದಸ್ಯರು
22	(i) ರಾಜ್ಯ ಮಟ್ಟದ ಕಾರ್ಯಕ್ರಮಗಳಾಗಿದ್ದಲ್ಲಿ ಮುಖ್ಯ ಕಾರ್ಯದರ್ಶಿಗಳು, ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು
	(ii) ಜಿಲ್ಲಾ ಮಟ್ಟದ ಕಾರ್ಯಕ್ರಮಗಳಾಗಿದ್ದಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಗಳು, ಮುಖ್ಯಕಾರ್ಯ ನಿವ ಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಇಲಾಖಾ

	ಮುಖ್ಯಸ್ಥರು.
23	ಸ್ವಾತಂತ್ರ್ಯ ಹೋರಾಟಗಾರರು/ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು/ಇನ್ಫಿತರೇ ಪ್ರಶಸ್ತಿ ಪುರಸ್ಕೃತರು/ಕಲಾವಿದರು/ ಪರಿಣಿತರು/ ಶಿಕ್ಷಣ ತಜ್ಞರು/ ಬುದ್ಧಿ ಜೀವಿಗಳು/ ಲೇಖಕರು/ ವಿಜ್ಞಾನಿಗಳು/ ಕ್ರೀಡಾಪಟುಗಳು / ರೈತ ಪ್ರತಿನಿಧಿಗಳು/ ಸಮಾಜ ಸೇವಕರು/ ಹಿರಿಯ ನ್ಯಾಯವಾದಿಗಳು.

15/10/24

(ಡಾ. ಕೆ. ಜಿ. ಜಗದೀಶ)
ಸರ್ಕಾರದ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
ಇಲಾಖೆ

ಪ್ರತಿಗಳು

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು
3. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ
4. ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ
5. ಕಾರ್ಯದರ್ಶಿ , ಕರ್ನಾಟಕ ವಿಧಾನಸಭೆ ಸಚಿವಾಲಯ
6. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ ಸಚಿವಾಲಯ
7. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು
8. ಎಲ್ಲಾ ಇಲಾಖಾ ಮುಖ್ಯಸ್ಥರುಗಳು
9. ಎಲ್ಲಾ ಜಿಲ್ಲಾಧಿಕಾರಿಗಳು
10. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
11. ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು
12. ಪತ್ರಿಕಾ ಪ್ರಕಟಣೆ/ಹೆಚ್ಚುವರಿ ಪ್ರತಿಗಳು

ಮಾಹಿತಿಗಾಗಿ

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ವಿಶೇಷಾಧಿಕಾರಿಗಳು
2. ಸರ್ಕಾರದ ಅಪರ ಕಾರ್ಯದರ್ಶಿಗಳು, ಸಚಿವ ಸಂಪುಟ ಶಾಖೆ, ವಿಧಾನ ಸೌಧ ಬೆಂಗಳೂರು (ಪ್ರಕರಣ ಸಂಖ್ಯೆ: ಸಿ.695/2025)
3. ಮಾನ್ಯ ಮುಖ್ಯ ಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು
4. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಸೀಆಸು ಇಲಾಖೆ
5. ಸರ್ಕಾರದ ಅಪರ ಕಾರ್ಯದರ್ಶಿಗಳು, ಸೀಆಸುಇ (ರಾಜ್ಯ ಶಿಷ್ಟಾಚಾರ)
6. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸೀಆಸುಇ (ರಾಜಕೀಯ)

ಅನುಬಂಧ -4

ಡಾ. ತಳವಾರ ಸಾಬಣ್ಣ
ಎಂ.ಎ., ಎಂ.ಫಿಲ್., ಪಿಎಚ್.ಡಿ
ಕರ್ನಾಟಕ ವಿಧಾನ ಪರಿಷತ್ ಸದಸ್ಯರು

ಸದಸ್ಯರು
ಕರ್ನಾಟಕ ವಿಧಾನ ಪರಿಷತ್

ಶಾಸಕರ ಭವನ, ಬೆಂಗಳೂರು - 560 001

E-mail : sabannatalwars@gmail.com
Cell : 9448393647

ದಿನಾಂಕ:08-04-2025

ಇವರಿಗೆ,
ಸನ್ಮಾನ್ಯ ಸಭಾಪತಿಗಳು
ವಿಧಾನ ಪರಿಷತ್ತು
ಕರ್ನಾಟಕ ಸರಕಾರ
ವಿಧಾನ ಸೌಧ
ಬೆಂಗಳೂರು

15/4/25
ಬಸವರಾಜ ಹೊರಟ್ಟಿ
ಸಭಾಪತಿ
ಕರ್ನಾಟಕ ವಿಧಾನ ಪರಿಷತ್ತು

ಮಾನ್ಯರೇ,

ವಿಷಯ: ಬೆಳಗಾವಿ ಮಹಾನಗರ ಪಾಲಿಕೆಯ ಪರಿಷತ್ ಸಭೆಗೆ ಆಹ್ವಾನಿಸಿ ಅವಮಾನಿಸಿರುವ ಕುರಿತು.

ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:05-04-2025 ರಂದು ಮುಂಜಾನೆ 11.00 ಗಂಟೆಗೆ ಬೆಳಗಾವಿ ಮಹಾನಗರ ಪಾಲಿಕೆಯ ಪರಿಷತ್ ಸಭಾಗೃಹದಲ್ಲಿ ಪರಿಷತ್ ಸಭೆಗೆ ನನಗೆ ಆಹ್ವಾನ ನೀಡಲಾಗಿತ್ತು (ಪ್ರತಿ ಲಗತ್ತಿಸಲಾಗಿದೆ). ನಾನ ಬೆಳಗಾವಿ ನಗರದ ನಿವಾಸಿಯಾಗಿದ್ದು ವಿಧಾನ ಪರಿಷತ್ ಸದಸ್ಯನಾಗಿರುವುದರಿಂದ ಬೆಳಗಾವಿ ಮಹಾನಗರ ಪಾಲಿಕೆಯ ಪರಿಷತ ಸದಸ್ಯನೂ ಆಗಿದ್ದೇನೆ. ಈ ಹಿನ್ನಲೆಯಲ್ಲಿ, ಆಹ್ವಾನದ ಮೇರೆಗೆ ದಿನಾಂಕ:05-04-2025 ರಂದು ಮುಂಜಾನೆ 11.20 ಕ್ಕೆ ಸಭೆ ಹಾಜರಾಗಲು ಹೋದಾಗ ಪರಿಷತ್ ಸಭಾಗೃಹ ಖಾಲಿಯಾಗಿತ್ತು. ಯಾವ ಸದಸ್ಯರು ಇರಲಿಲ್ಲಾ. ನಾನು ಸಹಜವಾಗಿ ನಿಗದಿಪಡಿಸಿದ ನನ್ನ ಸೀಟ್ ಮೇಲೆ ಹೋಗಿ ಕುಳಿತುಕೊಂಡೆ (ಫೋಟೋ ಪ್ರತಿಗಳನ್ನು ಲಗತ್ತಿಸಲಾಗಿದೆ). ಕೆಲವು ನಿಮಿಷಗಳ ನಂತರ ಮಹಾನಗರ ಪಾಲಿಕೆಯ ಸಿಬ್ಬಂದಿ ಬಂದು ಪರಿಷತ್ ಸಭೆ 12.30 ಕ್ಕೆ ಮುಂದೂಡಲಾಗಿದೆ. ಮುಂದೂಡಲು ಕಾರಣವೇನು ಎಂದು ಕೇಳಿದಾಗ ಮಹಾನಗರ ಪಾಲಿಕೆಯ ಕಮಿಷನರ್‌ರವರು ವಿ. ಸಿ (ವೀಡಿಯೋ ಕಾನ್ಫರೆನ್ಸನಲ್ಲಿದ್ದಾರೆ) ಹೀಗಾಗಿ ಮುಂದೂಡಲಾಗಿದೆ. ನನಗೆ ಇದರಿಂದ ತುಂಬಾ ಅವಮಾನಕರವೆನಿಸಿತು. ಪರಿಷತ್ ಸಭೆ ಮುಂದೂಡಿದನ್ನು ಮಹಾನಗರ ಪಾಲಿಕೆಯ ಎಲ್ಲಾ ಸದಸ್ಯರುಗಳಿಗೆ ಮತ್ತ ಬೆಳಗಾವಿ ನಗರದ ಇಬ್ಬರು ವಿಧಾನ ಸಭೆ ಸದಸ್ಯರುಗಳಿಗೆ ತಿಳಿಸಿದ್ದಾರೆ. ಆದರೆ ನನಗೆ ಪರಿಷತ್ ಸಭೆ ಮುಂದೂಡಿರುವ ಕುರಿತ ಮಾಹಿತಿ ನೀಡದಿರುವುದು, ನಾನು ಹೋಗಿ ಪರಿಷತ್ ಸಭಾಗೃಹದಲ್ಲಿ ಕುಳಿತು ಸಭೆಗಾಗಿ ಕಾಯ್ದಿರುವುದು ಒಬ್ಬ ಗೌರವಾನ್ವಿತ ವಿಧಾನ ಪರಿಷತ್ ಸದಸ್ಯರಿಗೆ ಮಾಡಿರುವ ಅವಮಾನ. ಇದು ವಿಧಾನ ಪರಿಷತ್ ಸದಸ್ಯರಿಗೆ ಉದ್ದೇಶಪೂರ್ವಕವಾಗಿ ಸಭೆಯಿಂದ ದೂರ ಇಟ್ಟಿದ್ದು ಮತ್ತು ಸಭೆಗೆ ಬಂದು ಹೋಗುವಾಗ ಮುಜುಗರವಾಗುವಂತೆ ಮಾಡಿದ್ದು ನನ್ನ ಹಕ್ಕಿಗೆ ಬಾಧ್ಯತೆ ಉಂಟಾಗಿದ್ದು ಮತ್ತ ಅವಮಾನಕರವಾಗಿದ್ದು, ಇದನ್ನು ನಾನು ಕಠೋರವಾಗಿ ವಿರೋಧಿಸುತ್ತೇನೆ. ತಕ್ಷಣವೇ ಬೆಳಗಾವಿ ಮಹಾನಗರ ಪಾಲಿಕೆಯ ಕಮಿಷನರ ಶ್ರೀಮತಿ ಬಿ. ಶುಭ, ಮಹಾನಗರ ಪಾಲಿಕೆಯ ಪರಿಷತ್ ಕಾರ್ಯದರ್ಶಿ ಮತ್ತು ಸಂಬಂಧಿಸಿದ ಸಿಬ್ಬಂದಿಯನ್ನು ವಿಚಾರಿಸಿ ಅವರ ವಿರುದ್ಧ ಕಠಿಣ ಕ್ರಮಕೈಗೊಳ್ಳಲು ಈ ವಿಷಯವನ್ನು 'ಹಕ್ಕು ಬಾಧ್ಯತಾ ಸಮಿತಿಗೆ' ಒಪ್ಪಿಸಬೇಕೆಂದು ತಮ್ಮಲ್ಲಿ ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಡಾ. ತಳವಾರ ಸಾಬಣ್ಣಾ
ವಿಧಾನ ಪರಿಷತ್ ಸದಸ್ಯರು

ಸಭಾಪತಿ
ಕ್ರ ಸಂಖ್ಯೆ: 538
ದಿನಾಂಕ: 15/04/25
ಕರ್ನಾಟಕ ವಿಧಾನ ಪರಿಷತ್ತು

ಅನುಬಂಧ - 05

ನಮೂನೆ

ಕ್ರ. ಸಂ	ಮಾನ್ಯ ಶಾಸಕರು ನೀಡಿರುವ ಹಕ್ಕುಚ್ಯುತಿ ಪ್ರಕರಣದ ವಿವರ	ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ನೀಡಿದ ವಿವರ	ಇಲಾಖಾ ಮುಖ್ಯಸ್ಥರ ಅಭಿಪ್ರಾಯ
1	ಡಾ. ತಳವಾರ ಸಾಬಣ್ಣಾ, ಮಾನ್ಯ ಕರ್ನಾಟಕ ವಿಧಾನ ಪರಿಷತ್ ಸದಸ್ಯರು ಇವರನ್ನು ಬೆಳಗಾವಿ ಮಹಾನಗರ ಪಾಲಿಕೆಯ ಪರಿಷತ್ ಸಭೆಗೆ ಆಹ್ವಾನಿಸಿ ಅವಮಾನಿಸಿರುವ ಕುರಿತು.	ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ದಿನಾಂಕ: 05-04-2025 ರಂದು ಬೆಳಿಗ್ಗೆ 11-00 ಗಂಟೆಗೆ ಪರಿಷತ್ ಸಭೆ ಜರುಗಿಸುವ ಕುರಿತು ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಸದರಿ ದಿನದಂದು ಪೂಜ್ಯ ಮಹಾಪೌರರು ಹಾಗೂ ಉಪಮಹಾಪೌರರು ಹಸಿರು ಕ್ರಾಂತಿಯ ಹರಿಕಾರ ಶ್ರೀ ಬಾಬು ಜಗಜೀವನರಾಮ ರವರ ಜನ್ಮ ದಿನಾಚರಣೆ ಅಂಗವಾಗಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಕಾರ್ಯಕ್ರಮ ಮುಗಿಸಿ ಬರಲು ವಿಳಂಭವಾಗಿರುತ್ತದೆ. ಮುಂದುವರೆದು ಅದೇ ದಿವಸ ಆಯುಕ್ತರು, ಬೆಳಗಾವಿ ರವರು ಸಹಿತ ಸರ್ಕಾರದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಕೇಸ್ಕಾನ್ ಕೇಂದ್ರದಲ್ಲಿ ವಿಡಿಯೋ ಸಂವಾದದ ಸಭೆಯಿದ್ದ ಪ್ರಯುಕ್ತ ಸದರಿ ಸಭೆಯಲ್ಲಿ ಭಾಗವಹಿಸಿ, ಮಹಾಪೌರರು ಪರಿಷತ್ ಬೆಳಗಾವಿ ರವರು ಸಭೆಗೆ ಆಗಮಿಸುವ ಪೂರ್ವದಲ್ಲಿಯೇ ಸಭೆಗೆ ಆಗಮಿಸಿರುತ್ತೇನೆ ಎಂದು ಆಯುಕ್ತರು, ಪತ್ರದಲ್ಲಿ ತಿಳಿಸಿರುತ್ತಾರೆ ಹಾಗೂ ಮಹಾಪೌರರು ಪರಿಷತ್ ಸಭೆಗೆ ಆಗಮಿಸದೇ ಇರುವ ಹಿನ್ನೆಲೆಯಲ್ಲಿ ಸಮಯದ ಅಭಾವ ಉಂಟಾಗಿರುತ್ತದೆ. ಈ ವಿಷಯವನ್ನು ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಡಾ: ತಳವಾರ್ ಸಾಬಣ್ಣ ರವರ ಗಮನಕ್ಕೆ ತರಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪೂಜ್ಯ ಮಹಾಪೌರರು ಒಂದು ಗಂಟೆ ತಡವಾಗಿ ಆಗಮಿಸಿದ್ದಕ್ಕೆ ಸಭೆ ಪ್ರಾರಂಭಿಸಲು ವಿಳಂಭವಾಗಿರುತ್ತದೆ. ಈ ಘಟನೆಯು ಯಾವುದೇ ಉದ್ದೇಶಪೂರ್ವಕವಾಗಿ ಆಗಿರುವುದಿಲ್ಲ ಮತ್ತು ಇನ್ನು ಮುಂದೆ ಯಾವುದೇ ಲೋಪದೋಷಗಳು ಆಗದಂತೆ ಎಚ್ಚರಿಕೆ ವಹಿಸುತ್ತೇನೆಂದು ತಿಳಿಸಿ, ಹಕ್ಕುಚ್ಯುತಿ ಸಂಬಂದಿಸಿದ ವಿಷಯವನ್ನು ಕೈಬಿಡಬೇಕಂದು ಕೋರಿರುತ್ತಾರೆ.	ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ದಿನಾಂಕ: 05-04-2025 ರಂದು ಬೆಳಿಗ್ಗೆ 11-00 ಗಂಟೆಗೆ ಪರಿಷತ್ ಸಭೆ ಜರುಗಿಸುವ ಕುರಿತು ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಸದರಿ ದಿನದಂದು ಪೂಜ್ಯ ಮಹಾಪೌರರು ಹಾಗೂ ಉಪಮಹಾಪೌರರು ಹಸಿರು ಕ್ರಾಂತಿಯ ಹರಿಕಾರ ಶ್ರೀ ಬಾಬು ಜಗಜೀವನರಾಮ ರವರ ಜನ್ಮ ದಿನಾಚರಣೆ ಅಂಗವಾಗಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಕಾರ್ಯಕ್ರಮ ಮುಗಿಸಿ ಬರಲು ವಿಳಂಭವಾಗಿರುತ್ತದೆ ಹಾಗೂ ಅದೇ ದಿವಸ ಆಯುಕ್ತರು, ಬೆಳಗಾವಿ ರವರು ಸಹಿತ ಸರ್ಕಾರದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಕೇಸ್ಕಾನ್ ಕೇಂದ್ರದಲ್ಲಿ ವಿಡಿಯೋ ಸಂವಾದದ ಸಭೆಯಿದ್ದ ಪ್ರಯುಕ್ತ ಸದರಿ ಸಭೆಯಲ್ಲಿ ಭಾಗವಹಿಸಿ, ಮಹಾಪೌರರು ಪರಿಷತ್ ಸಭೆಗೆ ಆಗಮಿಸದೇ ಇರುವ ಹಿನ್ನೆಲೆಯಲ್ಲಿ ಸಮಯದ ಅಭಾವ ಉಂಟಾಗಿರುತ್ತದೆ. ಈ ವಿಷಯವನ್ನು ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಡಾ: ತಳವಾರ್ ಸಾಬಣ್ಣ ರವರ ಗಮನಕ್ಕೆ ತರಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪೂಜ್ಯ ಮಹಾಪೌರರು ಒಂದು ಗಂಟೆ ತಡವಾಗಿ ಆಗಮಿಸಿದ್ದಕ್ಕೆ ಸಭೆ ಪ್ರಾರಂಭಿಸಲು ವಿಳಂಭವಾಗಿರುತ್ತದೆ. ಈ ಘಟನೆಯು ಯಾವುದೇ ಉದ್ದೇಶಪೂರ್ವಕವಾಗಿ ಆಗಿರುವುದಿಲ್ಲವೆಂದು, ಇನ್ನು ಮುಂದೆ ಯಾವುದೇ ಲೋಪದೋಷಗಳು ಆಗದಂತೆ ಎಚ್ಚರಿಕೆ ವಹಿಸುತ್ತೇನೆಂದು ಆಯುಕ್ತರು, ಬೆಳಗಾವಿ ಮಹಾನಗರ ಪಾಲಿಕೆ ಇವರು ನೀಡಿದ ಸ್ಪಷ್ಟೀಕರಣವನ್ನು ಪರಿಗಣಿಸುವಂತೆ ಕೋರಲಾಗಿದೆ.

ಕಡತ ಸಂಖ್ಯೆ: ನಅಇ 19 ಎಸಿಬಿ 2025
ದಿನಾಂಕ:17.06.2025.

17/6/25

(ಡಾ|| ನಾಗೇಂದ್ರ ಎಫ್ ಹೊನ್ನಳ್ಳಿ)
ಸರ್ಕಾರದ ಅಪರ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ನಮೂನೆ

ಕ್ರ. ಸಂ	ಮಾನ್ಯ ಶಾಸಕರು ನೀಡಿರುವ ಹಕ್ಕುಚ್ಯುತಿ ಪ್ರಕರಣದ ವಿವರ	ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ನೀಡಿದ ವಿವರ	ಇಲಾಖಾ ಮುಖ್ಯಸ್ಥರ ಅಭಿಪ್ರಾಯ
1	ಡಾ. ತಳವಾರ ಸಾಬಣ್ಣಾ, ಮಾನ್ಯ ಕರ್ನಾಟಕ ವಿಧಾನ ಪರಿಷತ್ ಸದಸ್ಯರು ಇವರನ್ನು ಬೆಳಗಾವಿ ಮಹಾನಗರ ಪಾಲಿಕೆಯ ಪರಿಷತ್ ಸಭೆಗೆ ಆಹ್ವಾನಿಸಿ ಅವಮಾನಿಸಿರುವ ಕುರಿತು.	ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ದಿನಾಂಕ: 05-04-2025 ರಂದು ಬೆಳಿಗ್ಗೆ 11-00 ಗಂಟೆಗೆ ಪರಿಷತ್ ಸಭೆ ಜರುಗಿಸುವ ಕುರಿತು ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಸದರಿ ದಿನದಂದು ಪೂಜ್ಯ ಮಹಾಪೌರರು ಹಾಗೂ ಉಪಮಹಾಪೌರರು ಹಸಿರು ಕ್ರಾಂತಿಯ ಹರಿಕಾರ ಶ್ರೀ ಬಾಬು ಜಗಜೀವನರಾಮ ರವರ ಜನ್ಮ ದಿನಾಚರಣೆ ಅಂಗವಾಗಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಕಾರ್ಯಕ್ರಮ ಮುಗಿಸಿ ಬರಲು ವಿಳಂಭವಾಗಿರುತ್ತದೆ. ಮುಂದುವರೆದು ಅದೇ ದಿವಸ ಆಯುಕ್ತರು, ಬೆಳಗಾವಿ ರವರು ಸಹಿತ ಸರ್ಕಾರದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಕೇಸ್ಸಾನ್ ಕೇಂದ್ರದಲ್ಲಿ ವಿಡಿಯೋ ಸಂವಾದದ ಸಭೆಯಿದ್ದ ಪ್ರಯುಕ್ತ ಸದರಿ ಸಭೆಯಲ್ಲಿ ಭಾಗವಹಿಸಿ, ಮಹಾಪೌರರು ಪರಿಷತ್ ಬೆಳಗಾವಿ ರವರು ಸಭೆಗೆ ಆಗಮಿಸುವ ಪೂರ್ವದಲ್ಲಿಯೇ ಸಭೆಗೆ ಆಗಮಿಸಿರುತ್ತೇನೆ ಎಂದು ಆಯುಕ್ತರು, ಪತ್ರದಲ್ಲಿ ತಿಳಿಸಿರುತ್ತಾರೆ ಹಾಗೂ ಮಹಾಪೌರರು ಪರಿಷತ್ ಸಭೆಗೆ ಆಗಮಿಸದೇ ಇರುವ ಹಿನ್ನೆಲೆಯಲ್ಲಿ ಸಮಯದ ಅಭಾವ ಉಂಟಾಗಿರುತ್ತದೆ. ಈ ವಿಷಯವನ್ನು ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಡಾ: ತಳವಾರ್ ಸಾಬಣ್ಣ ರವರ ಗಮನಕ್ಕೆ ತರಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪೂಜ್ಯ ಮಹಾಪೌರರು ಒಂದು ಗಂಟೆ ತಡವಾಗಿ ಆಗಮಿಸಿದ್ದಕ್ಕೆ ಸಭೆ ಪ್ರಾರಂಭಿಸಲು ವಿಳಂಭವಾಗಿರುತ್ತದೆ. ಈ ಘಟನೆಯು ಯಾವುದೇ ಉದ್ದೇಶಪೂರ್ವಕವಾಗಿ ಆಗಿರುವುದಿಲ್ಲ ಮತ್ತು ಇನ್ನು ಮುಂದೆ ಯಾವುದೇ ಲೋಪದೋಷಗಳು ಆಗದಂತೆ ಎಚ್ಚರಿಕೆ ವಹಿಸುತ್ತೇನೆಂದು ತಿಳಿಸಿ, ಹಕ್ಕುಚ್ಯುತಿ ಸಂಬಂದಿಸಿದ ವಿಷಯವನ್ನು ಕೈಬಿಡಬೇಕಂದು ಕೋರಿರುತ್ತಾರೆ.	ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ದಿನಾಂಕ: 05-04-2025 ರಂದು ಬೆಳಿಗ್ಗೆ 11-00 ಗಂಟೆಗೆ ಪರಿಷತ್ ಸಭೆ ಜರುಗಿಸುವ ಕುರಿತು ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಸದರಿ ದಿನದಂದು ಪೂಜ್ಯ ಮಹಾಪೌರರು ಹಾಗೂ ಉಪಮಹಾಪೌರರು ಹಸಿರು ಕ್ರಾಂತಿಯ ಹರಿಕಾರ ಶ್ರೀ ಬಾಬು ಜಗಜೀವನರಾಮ ರವರ ಜನ್ಮ ದಿನಾಚರಣೆ ಅಂಗವಾಗಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಕಾರ್ಯಕ್ರಮ ಮುಗಿಸಿ ಬರಲು ವಿಳಂಭವಾಗಿರುತ್ತದೆ ಹಾಗೂ ಅದೇ ದಿವಸ ಆಯುಕ್ತರು, ಬೆಳಗಾವಿ ರವರು ಸಹಿತ ಸರ್ಕಾರದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಕೇಸ್ಸಾನ್ ಕೇಂದ್ರದಲ್ಲಿ ವಿಡಿಯೋ ಸಂವಾದದ ಸಭೆಯಿದ್ದ ಪ್ರಯುಕ್ತ ಸದರಿ ಸಭೆಯಲ್ಲಿ ಭಾಗವಹಿಸಿ, ಮಹಾಪೌರರು ಪರಿಷತ್ ಸಭೆಗೆ ಆಗಮಿಸದೇ ಇರುವ ಹಿನ್ನೆಲೆಯಲ್ಲಿ ಸಮಯದ ಅಭಾವ ಉಂಟಾಗಿರುತ್ತದೆ. ಈ ವಿಷಯವನ್ನು ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಡಾ: ತಳವಾರ್ ಸಾಬಣ್ಣ ರವರ ಗಮನಕ್ಕೆ ತರಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪೂಜ್ಯ ಮಹಾಪೌರರು ಒಂದು ಗಂಟೆ ತಡವಾಗಿ ಆಗಮಿಸಿದ್ದಕ್ಕೆ ಸಭೆ ಪ್ರಾರಂಭಿಸಲು ವಿಳಂಭವಾಗಿರುತ್ತದೆ. ಈ ಘಟನೆಯು ಯಾವುದೇ ಉದ್ದೇಶಪೂರ್ವಕವಾಗಿ ಆಗಿರುವುದಿಲ್ಲವೆಂದು, ಇನ್ನು ಮುಂದೆ ಯಾವುದೇ ಲೋಪದೋಷಗಳು ಆಗದಂತೆ ಎಚ್ಚರಿಕೆ ವಹಿಸುತ್ತೇನೆಂದು ಆಯುಕ್ತರು, ಬೆಳಗಾವಿ ಮಹಾನಗರ ಪಾಲಿಕೆ ಇವರು ನೀಡಿದ ಸ್ಪಷ್ಟೀಕರಣವನ್ನು ಪರಿಗಣಿಸುವಂತೆ ಕೋರಲಾಗಿದೆ.

ಕಡತ ಸಂಖ್ಯೆ: ನಅಇ 19 ಎಸಿಬಿ 2025
ದಿನಾಂಕ:17.06.2025.

17/6/25

(ಡಾ|| ನಾಗೇಂದ್ರ ಎಫ್ ಹೊನ್ನಳ್ಳಿ)
ಸರ್ಕಾರದ ಅಪರ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಅನುಬಂಧ-6

ವಿ. ನಾರಾಯಣಸ್ವಾಮಿ
ವಿರೋಧ ಪಕ್ಷದ ನಾಯಕರು
ಕರ್ನಾಟಕ ವಿಧಾನ ಪರಿಷತ್ತು

ಕೊಠಡಿ ಸಂಖ್ಯೆ: 151, ಮೊದಲನೇ ಮಹಡಿ,
ವಿಧಾನಸೌಧ, ಬೆಂಗಳೂರು-560 001
ದೂರವಾಣಿ : 080-22257323
22250335
22033528
22033002
ಫ್ಯಾಕ್ಸ್: 22355117
ಇ-ಮೇಲ್: clnmlc2022@gmail.com

ದಿನಾಂಕ: 23-05-2025

ಸಂಖ್ಯೆ : ಕ.ವಿ.ಪ./ವಿ.ಪ.ನಾ./ 691 /2025

ನೋಡಿಕೆ
ಪತ್ರ ಸಂಖ್ಯೆ: 557
ದಿನಾಂಕ: 23/05/25
ಕರ್ನಾಟಕ ವಿಧಾನ ಪರಿ...

ರವರಿಗೆ,
ಸನ್ಮಾನ್ಯ ಸಭಾಪತಿಗಳು,
ಕರ್ನಾಟಕ ವಿಧಾನ ಪರಿಷತ್,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ :- ಹಕ್ಕುಚ್ಯುತಿ ಮಂಡನೆ ಮಾಡುವ ಕುರಿತು

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ : 21.05.2025 ರಂದು ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ನಡೆದ ತಿರಂಗಾ ಯಾತ್ರೆಯ ಸಂದರ್ಭದಲ್ಲಿ ಭಾರತೀಯ ಸೈನಿಕರ ಗೌರವಾರ್ಥವಾಗಿ ಆಯೋಜಿಸಲಾದ "ಆಪರೇಷನ್ ಸಿಂಧೂರ" ಕಾರ್ಯಕ್ರಮದ ಅಂಗವಾಗಿ ನನ್ನ ಅಧಿಕೃತ ಭೇಟಿಯ ಸಂದರ್ಭದಲ್ಲಿ ನನ್ನ ಹಕ್ಕುಚ್ಯುತಿ ಆಗಿರುವುದನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ.

ನನ್ನ ಪೂರ್ವ ನಿರ್ಧಾರಿತ ಪ್ರವಾಸ ಕಾರ್ಯಕ್ರಮದಂತೆ, ದಿನಾಂಕ : 21.05.2025 ರಂದು ಮಾಧ್ಯಹ್ನ 03.30ಕ್ಕೆ ಕಲಬುರಗಿ ನಗರದಿಂದ ಚಿತ್ತಾಪುರದ ಸರ್ಕಾರಿ ಅತಿಥಿ ಗೃಹಕ್ಕೆ ಆಗಮಿಸಿದ್ದೆ. ನನ್ನ ಆಗಮನದ ಸ್ವಲ್ಪ ಸಮಯದಲ್ಲೇ ಕೆಲವು ಕಾಂಗ್ರೆಸ್ ಕಾರ್ಯಕರ್ತರೆಂದು, ರಾಜಕೀಯ ಪ್ರೇರಿತ ಗುಂಡಾಗಳು ಅಲ್ಲಿ ಜಮಾಯಿಸಿ, ನನ್ನನ್ನು ಕೀಳು ಮಟ್ಟದ ಪದಗಳಿಂದ ಹಾಗೂ ಇನ್ನಿತರ ಶಬ್ದಗಳನ್ನು ಬಳಸುತ್ತಾ, ನಿಂದಿಸುತ್ತಾ ಘೋಷಣೆಗಳನ್ನು ಕೂಗಿ ಮುಖ್ಯದ್ವಾರದ ಎದುರು ಪ್ರತಿಭಟನೆಯನ್ನು ನಡೆಸಿದರು.

ಘಟನಾ ಸ್ಥಳಕ್ಕೆ ಆಗಮಿಸದ ಹಾಗೂ ನನ್ನ ಕರೆಗೆ ಸರಿಯಾಗಿ ಸ್ಪಂದಿಸದ ಕಲಬುರಗಿ ಎಸ್‌ಪಿ ಅಡುರು ಶ್ರೀನಿವಾಸುಲು ಹಾಗೂ ಸ್ಥಳದಲ್ಲಿದ್ದ ಹೆಚ್ಚುವರಿ ಎಸ್.ಪಿ. ಮಹೇಶ ಮೇಘಣ್ಣನವರ್, ಡಿವೈಎಸ್‌ಪಿ ಶಂಕರಗೌಡ ಪಾಟೀಲ್, ಸಿಪಿಐಗಳಾದ ಚಂದ್ರಶೇಖರ ತಿಗಡಿ, ನಟರಾಜ ಲಾಡೆ, ಪಿಎಐಗಳಾದ ಶ್ರೀಶೈಲ್ ಅಂಬಾಟಿ, ತಿಮ್ಮಯ್ಯ, ಚಂದ್ರಕಾಂತ ಮೆಕಾಲೆ, ಶೀಲಾದೇವಿ ಹಾಗೂ ಇನ್ನುಳಿದ ಡಿವೈಎಸ್‌ಪಿಗಳು, ಸಿಪಿಐಗಳು ಮತ್ತು ಪಿಎಸ್‌ಐಗಳು ಸ್ಥಳದಲ್ಲಿ ಹಾಜರಿದ್ದರೂ ಸಹ ರಾತ್ರಿ 07.38 ರ ಸುಮಾರಿಗೆ ಆ ಗುಂಪು ಬಲವಂತವಾಗಿ ಸರ್ಕ್ಯೂಟ್ ಹೌಸ್ ಆವರಣಕ್ಕೆ ನುಗ್ಗಿ, ನನ್ನ ಅಧಿಕೃತ ಸರ್ಕಾರಿ ವಾಹನ (ಸಂಖ್ಯೆ : ಕೆಎ 01 ಜಿಎ 1999) ಮೇಲೆ ನೀಲಿ ಬಣ್ಣ ಎರಚಿ ವಾಹನವನ್ನು ಜಖಂಗೊಳಿಸಿದರು. ನನ್ನ ಮೇಲೆ ಹಲ್ಲೆ ಯತ್ನಕ್ಕೆ ಪ್ರಯತ್ನಿಸಿ ಪದೇ ಪದೇ ಅತ್ಯಂತ ಕೀಳು ಮಟ್ಟದ ಭಾಷೆಯನ್ನು ಬಳಸಿ ಅವಮಾನವನ್ನೂ ಮಾಡಿ ಜೀವ ಬೆದರಿಕೆ (Life Threat) ಹಾಕಿದರು. ಇದನ್ನು ಪೊಲೀಸರು

ಾದಿ ಟಿ. ನಾರಾಯಣಸ್ವಾಮಿ
ೋಧ ಪಕ್ಷದ ನಾಯಕರು
ಕರ್ನಾಟಕ ವಿಧಾನ ಪರಿಷತ್ತು

ಕೊಠಡಿ ಸಂಖ್ಯೆ: 155, ಮೊದಲನೇ ಮಹಡಿ,
ವಿಧಾನಸೌಧ, ಬೆಂಗಳೂರು-560 001
ದೂರವಾಣಿ : 080-22257323
22259335
22033528
22033802
ಫ್ಯಾಕ್ಸ್: 22355117
ಇ-ಮೇಲ್: ctnmlc2022@gmail.com

ದಿನಾಂಕ:.....

ಮೂಕವಿಸ್ಮಿತರಂತೆ ಸುಮ್ಮನೆ ನೋಡುತ್ತಾ ಕಾಲಕಳೆಯುತ್ತಿದ್ದರು ಹಾಗೂ ಸ್ಥಳದಲ್ಲಿ ಹಾಜರಿದ್ದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳು, DYSP ಗಳು ಮತ್ತು ಪೊಲೀಸ್ ಇನ್ಸ್ ಪೆಕ್ಟರ್‌ಗಳಿಗೆ ಪದೇ ಪದೇ ದೂರವಾಣಿ ಕರೆಗಳು ಬರುತ್ತಿದ್ದವು. ಪೊಲೀಸರಿಗೆ ದೂರವಾಣಿಯಲ್ಲಿ ಬರುವ ಸೂಚನೆಗಳ ಪ್ರಕಾರ ಅವರು ವರ್ತಿಸುತ್ತಿದ್ದರು. ನಾನು ಆ ಅತಿಥಿ ಗೃಹದಲ್ಲಿ ಸುಮಾರು ಆರು ಗಂಟೆಗಳಿಗೂ ಹೆಚ್ಚು ಕಾಲ ಸಿಕ್ಕಿಹಾಕಿಕೊಂಡು, ಸೂಕ್ತ ರಕ್ಷಣೆಯಿಲ್ಲದೇ ಅಕ್ರಮ ಬಂಧನದಲ್ಲಿ (Illegal Detention) ನನ್ನನ್ನು ಉಳಿಸಿ ನನ್ನ ಹಕ್ಕಿಗೆ ಚ್ಯುತಿ ತಂದಿರುತ್ತಾರೆ.

ಈ ಘಟನೆ ವಿರೋಧಪಕ್ಷದ ನಾಯಕನಾಗಿ ನನ್ನ ಸ್ವಾನಮಾನ ಹಾಗೂ ಗೌರವಕ್ಕೆ ಧಕ್ಕೆಯಾಗುವಂತಹದು ಮಾತ್ರವಲ್ಲದೆ, ರಾಜ್ಯದ ಚುನಾಯಿತ ಪ್ರತಿನಿಧಿಗಳಿಗೆ ನೀಡಲಾಗುವ ಗೌರವ ಮತ್ತು ಭದ್ರತೆಯ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟಿಸುತ್ತದೆ. ಪ್ರತಿಭಟನೆ ನಡೆಸಲು ಅವರಿಗೆ ಅನುಮತಿ ನೀಡಿದವರು ಯಾರು? ಅವರು ಕಲ್ಲು, ದೊಣ್ಣೆ, ಬಣ್ಣ, ಮೊಟ್ಟೆ, ಟೊಮ್ಯಾಟೋ ಇತ್ಯಾದಿ ವಸ್ತುಗಳನ್ನು ತಂದಿರುವುದು ಪೊಲೀಸರ ಗಮನಕ್ಕೆ ಬಂದಿರಲಿಲ್ಲವೇ? ಪ್ರತಿಭಟನೆ ನಡೆಸಲು ಅವರಿಗೆ ಕುಮ್ಮಕ್ಕು ನೀಡಿದವರು ಯಾರು? ಹಾಗೂ ರಾತ್ರಿ ಸುಮಾರು 09.30 ಗಂಟೆಯ ಸಮಯದಲ್ಲಿ ಸರ್ಕಾರಿ ವಸತಿ ಗೃಹದಿಂದ ಹೊರಬರುವ ಸಮಯದಲ್ಲಿ ಪೊಲೀಸರ ಸಮ್ಮುಖದಲ್ಲಿಯೇ ಪ್ರತಿಭಟನಾ ನಿರತ ಗೂಂಡಾಗಳು ನಮ್ಮ ಕಾರಿನತ್ತ ಕಲ್ಲುಗಳನ್ನು ತೂರಿರುತ್ತಾರೆ.

ಹೀಗಾಗಿ, ಈ ಅಪರಾಧಕರ ಮತ್ತು ಅವಮಾನಕಾರಿ ಕೃತ್ಯದಲ್ಲಿ ಭಾಗವಹಿಸಿ ನನ್ನ ಹಕ್ಕಿಗೆ ಚ್ಯುತಿ ಬರುವ ರೀತಿಯಲ್ಲಿ ಕಲಬುರಗಿ ಎಸ್‌ಪಿ ಅಡುರು ಶ್ರೀನಿವಾಸುಲು ಹಾಗೂ ಸ್ಥಳದಲ್ಲಿದ್ದ ಹೆಚ್ಚುವರಿ ಎಸ್.ಪಿ. ಮಹೇಶ ಮೇಘಣ್ಣನವರ್, ಡಿವೈಎಸ್‌ಪಿ ಶಂಕರಗೌಡ ಪಾಟೀಲ್, ಸಿಪಿಐಗಳಾದ ಚಂದ್ರಶೇಖರ ತಿಗಡಿ, ನಟರಾಜ ಲಾಡೆ, ಪಿಎಐಗಳಾದ ಶ್ರೀಶೈಲ್ ಅಂಬಾಟಿ, ತಿಮ್ಮಯ್ಯ, ಚಂದ್ರಕಾಂತ ಮೆಕಾಲೆ, ಶೀಲಾದೇವಿ ಹಾಗೂ ಇನ್ನುಳಿದ ಡಿವೈಎಸ್ ಪಿಗಳು, ಸಿಪಿಐಗಳು ಮತ್ತು ಪಿಎಸ್‌ಐಗಳು ಕರ್ತವ್ಯ ನಿರ್ವಹಿಸಿದ್ದಾರೆ.

ಆದಕಾರಣ ನನ್ನ ಹಕ್ಕಿಗೆ ಚ್ಯುತಿ ಬರುವ ರೀತಿಯಲ್ಲಿ ಕರ್ತವ್ಯ ನಿರ್ವಹಿಸಿರುವ ಹಾಗೂ ನನ್ನ ಭದ್ರತೆಯಲ್ಲಿ ಲೋಪವೆಸಗಿರುವ ಮೇಲ್ಕಾಣಿಸಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಕುರಿತು ಈ ಮೂಲಕ ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಛಲವಾದಿ ಟಿ. ನಾರಾಯಣಸ್ವಾಮಿ)

ಅನುಬಂಧ-07

ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ ನಾರಾಯಣಸ್ವಾಮಿರ ಹಕ್ಕುಚ್ಯುತಿಗೆ ಸಂಬಂಧಿಸಿದ ವಿವರ

ಕ್ರ.ಸಂ.	ಮಾನ್ಯ ಶಾಸಕರು ನೀಡಿರುವ ಹಕ್ಕುಚ್ಯುತಿ ಪ್ರಕರಣದ ವಿವರ	ಪ್ರಕರಣಕ್ಕೆ ಸಂಭಂಧಿಸಿದ ಅಧಿಕಾರಿಗಳು ನೀಡಿರುವ ವಿವರಣೆ	ಇಲಾಖಾ ಮುಖ್ಯಸ್ಥರ ಅಭಿಪ್ರಾಯ
1	ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ ನಾರಾಯಣಸ್ವಾಮಿರವರು ದಿನಾಂಕ: 21-05-2025 ರಂದು ಕಲಬುರಗಿ ಜಿಲ್ಲೆಯ ಚಿತ್ತಾಪೂರದಲ್ಲಿ ನಡೆದ ತಿರಂಗಾ ಯಾತ್ರೆಯ ಸಂದರ್ಭದಲ್ಲಿ ಭಾರತೀಯ ಸೈನೀಕರ ಗೌರವಾರ್ಥವಾಗಿ ಆಯೋಜಿಸಲಾಗಿದ್ದ "ಆಪರೇಷನ್ ಸಿಂಧೂರ" ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸಿದ ಸಮಯದಲ್ಲಿ ತಮಗೆ ಸೂಕ್ತ ರಕ್ಷಣೆ ಹಾಗೂ ಭದ್ರತೆ ನೀಡುವಲ್ಲಿ ವೈಫಲ್ಯತೆ ಉಂಟಾಗಿರುವುದಲ್ಲದೇ, ಅತಿಥಿ ಗೃಹದಲ್ಲಿ 6 ಗಂಟೆಗಳಗೂ ಹೆಚ್ಚು ಕಾಲ ಅಕ್ರಮ ಬಂಧನದಲ್ಲಿ ಉಳಿಸುವ ಮೂಲಕ ತಮ್ಮ ಕರ್ತವ್ಯದಲ್ಲಿ ಲೋಪವೆಸಗಿರುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಕೋರಿ ವಿಧಾನ ಪರಿಷತ್ತು ಹಕ್ಕು ಭಾದ್ಯತಾ ಸಮಿತಿಗೆ ವಹಿಸಿರುವ ಕುರಿತು.	**1] ಶ್ರೀ ಅಡ್ಡೂರು ಶ್ರೀನಿವಾಸಲು, ಐಪಿಎಸ್, ಪೊಲೀಸ್ ಅಧೀಕ್ಷಕರು, ಕಲಬುರಗಿ ಜಿಲ್ಲೆ ರವರ ವಿವರಣೆ** ದಿನಾಂಕ:20/05/2025 ರಂದು ಜಿಲ್ಲಾ ನಿಸ್ತಂತು ಕೋಣೆ, ಕಲಬುರಗಿ ಜಿಲ್ಲೆಯಿಂದ ಮಾನ್ಯ ಛಲವಾದಿ ನಾರಾಯಣಸ್ವಾಮಿ, ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನ ಪರಿಷತ್ತು ರವರ ಪ್ರವಾಸ ಕಾರ್ಯಕ್ರಮದ ಮಾಹಿತಿಯು ವಸೂಲಾಗಿದ್ದು ಇರುತ್ತದೆ. ಮಾನ್ಯರವರ ಪ್ರವಾಸ ಕಾರ್ಯಕ್ರಮದ ಮಾಹಿತಿ ವಸೂಲಾದ ತಕ್ಷಣ ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನ್ಯರವರ ಕಾರ್ಯಕ್ರಮ ಕುರಿತು ಸೂಕ್ತವಾದ ಬಂದೋಬಸ್ತ ವ್ಯವಸ್ಥೆ ಮಾಡುವುದಾಗಿ, ಅಲ್ಲದೇ ಯಾವುದೇ ತರಹದ ಅಹಿತಕರ ಘಟನೆ ನಡೆಯದ ಹಾಗೇ ನೋಡಿಕೊಳ್ಳಲು ಮತ್ತು ಬೆಂಗಾವಲು ಕರ್ತವ್ಯಕ್ಕೆ ಅಧಿಕಾರಿ ಮತ್ತು ಸಿಬ್ಬಂದಿಯವರನ್ನು ನೇಮಿಸಲು ಡಿಎಸ್‌ಪಿ, ಡಿಎಆರ್ ಕೇಂದ್ರಸ್ಥಾನ ಕಲಬುರಗಿ ರವರಿಗೆ ಇ-ಮೇಲ್ ಮುಖಾಂತರ ಆದೇಶಿಸಿದ್ದು, ಅಲ್ಲದೇ ಮಾನ್ಯರವರ ಕಾರ್ಯಕ್ರಮಕ್ಕೆ ಬಂದೋಬಸ್ತ ಕರ್ತವ್ಯಕ್ಕಾಗಿ ಹೆಚ್ಚಿನ ಅಧಿಕಾರಿ ಮತ್ತು ಸಿಬ್ಬಂದಿಯವರ ಅವಶ್ಯಕತೆ ಇದ್ದಲ್ಲಿ ಕೋರಿಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರವಾಣಿ ಮುಖಾಂತರ ಸಲಹೆಸೂಚನೆಗಳನ್ನು ನೀಡಿರುತ್ತೇನೆ. ನಂತರ ದಿನಾಂಕ:21/05/2025 ರಂದು ಮಾನ್ಯ ಛಲವಾದಿ ನಾರಾಯಣಸ್ವಾಮಿ, ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನ ಪರಿಷತ್ತು ರವರು ತಮ್ಮ ನಿಗದಿತ ಕಾರ್ಯಕ್ರಮದಂತೆ ಜಿಲ್ಲಾ ಜಿಪಿ ಕಾರ್ಯಾಲಯದಲ್ಲಿ ಪತ್ರಿಕಾಗೋಷ್ಠಿ ಕಾರ್ಯಕ್ರಮ ಹಮ್ಮಿಕೊಂಡು, ಪತ್ರಿಕಾಗೋಷ್ಠಿ ಮುಗಿಸಿಕೊಂಡು ರಸ್ತೆ ಮೂಲಕ ಮಧ್ಯಾಹ್ನ 03:30 ಗಂಟೆಗೆ ಚಿತ್ತಾಪೂರ ಪಟ್ಟಣಕ್ಕೆ ಹೋದ ಬಗ್ಗೆ ನನಗೆ ಜಿಲ್ಲಾ ನಿಸ್ತಂತು ಕೋಣೆಯಿಂದ	ಈ ಪ್ರಕರಣದ ವಿಚಾರಣೆ ಕಾಲಕ್ಕೆ ತಿಳಿದುಬಂದ ಅಂಶವೇನೆಂದರೆ, ಶ್ರೀ ಛಲವಾದಿ ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನ ಪರಿಷತ್ತುರವರು ದಿನಾಂಕ:21/05/2025 ರಂದು ಚಿತ್ತಾಪೂರ ಪಟ್ಟಣಕ್ಕೆ ಭೇಟಿ ನೀಡುವ ಮುಂಚಿತವಾಗಿ ಕಲಬುರಗಿ ನಗರದಲ್ಲಿ ಪತ್ರಿಕಾಗೋಷ್ಠಿ ಕರೆದಿದ್ದು ಪತ್ರಿಕಾಗೋಷ್ಠಿಯಲ್ಲಿ "ಆನೆ ಹೋಗುವಾಗ ಶ್ವಾನ ಬೊಗಳಿದರೆ ಆನೆ ಶ್ವಾನಕ್ಕೆ ಹೆದರುವುದಿಲ್ಲ" ಅಂತಾ ನಾನ್ಯೂಡಿ ಹೇಳಿದ್ದು, ಈ ವೇಳೆಗೆ ಪತ್ರಕರ್ತರು ಆನೆ ಎಂದರೆ ಯಾರು, ಶ್ವಾನ ಎಂದರೆ ಯಾರು ಎಂದು ಪ್ರಶ್ನಿಸಿದ ಕಾರಣ ಆನೆ ಅಂದರೆ ಮಾನ್ಯ ಪ್ರಧಾನ ಮಂತ್ರಿಗಳು, ನಾಯಿ ಅಂದರೆ ಪ್ರಿಯಾಂಕ್ ಖರ್ಗೆ ಅಂತಾ ಹೇಳಿದ್ದು ಕಾರಣ ಮಾನ್ಯ ಶ್ರೀ ಛಲವಾದಿ ನಾರಾಯಣಸ್ವಾಮಿರವರ ಹೇಳಿಕೆಯನ್ನು ಗಮನಿಸಿದ ಕಾಂಗ್ರೇಸ್ ಪಕ್ಷದ ಕಾರ್ಯಕರ್ತರು ಮಾನ್ಯ ಛಲವಾದಿ ನಾರಾಯಣಸ್ವಾಮಿ ರವರು ತಂಗಿದ ಚಿತ್ತಾಪೂರ ಸರ್ಕಾರಿ ವಿಶ್ರಾಂತಿ ಗೃಹದ ಬಳ ಜಮಾಯಿಸಿ ಇವರ ವಿರುದ್ಧ ಪ್ರತಿಭಟನೆ

		ಮಾಹಿತಿ ತಿಳಿದುಬಂದಿರುತ್ತದೆ. ನಂತರ ನನಗೆ ಚಿತ್ತಾಪೂರ ಪಟ್ಟಣದಲ್ಲಿ ಬಂದೋಬಸ್ತ ಕರ್ತವ್ಯದಲ್ಲಿದ್ದ ಅಧಿಕಾರಿಯವರಿಂದ ತಿಳಿದುಬಂದ ಮಾಹಿತಿ ಏನೆಂದರೆ, ಕಲಬುರಗಿ ನಗರದಲ್ಲಿ ದಿನಾಂಕ:21/05/2025 ರಂದು ಬೆಳಗ್ಗೆ ಹಮ್ಮಿಕೊಂಡ ಪತ್ರಿಕಾಗೋಷ್ಠಿಯಲ್ಲಿ "ಆನೆ ಹೋಗುವಾಗ ಶ್ವಾನ ಬೊಗಳಿದರೆ, ಆನೆ ಶ್ವಾನಕ್ಕೆ ಹೆದರುವುದಿಲ್ಲ" ಅಂತಾ ನಾನ್ನೂಡಿ ಹೇಳಿದ್ದು ಈ ವೇಳೆಗೆ ಪತ್ರಕರ್ತರು ಆನೆ ಎಂದರೆ ಯಾರು, ಶ್ವಾನ ಎಂದರೆ ಯಾರು ಎಂದು ಮೇಲಿಂದ ಮೇಲೆ ಪ್ರಶ್ನಿಸಿದ ಕಾರಣ ಆನೆ ಅಂದರೆ ಮಾನ್ಯ ಪ್ರಧಾನ ಮಂತ್ರಿಗಳು, ನಾಯಿ ಅಂದರೆ ಪ್ರಿಯಾಂಕ್ ಖರ್ಗೆ ಅಂತಾ ಹೇಳಿದ ಕಾರಣ ಈ ಹೇಳಿಕೆಯನ್ನು ಆಲಿಸಿದ ಕಾಂಗ್ರೇಸ್ ಪಕ್ಷದ ಕಾರ್ಯಕರ್ತರು ಚಿತ್ತಾಪುರ ಪಟ್ಟಣದಲ್ಲಿ ಮಾನ್ಯ ಛಲವಾದಿ ನಾರಾಯಣಸ್ವಾಮಿ, ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನ ಪರಿಷತ್ತು ಇವರು ಚಿತ್ತಾಪುರ ಪಟ್ಟಣ ಟೋಕೋಪಯೋಗಿ ವಿಶ್ರಾಂತಿ ಗೃಹಕ್ಕೆ ಹೋದಾಗ ವಿಶ್ರಾಂತಿ ಗೃಹದ ಎದುರುಗಡೆ ನೂರಾರು ಕಾಂಗ್ರೇಸ್ ಕಾರ್ಯಕರ್ತರು ಜಮಾಯಿಸಿಕೊಂಡು ತಮ್ಮ ನಾಯಕರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ ಛಲವಾದಿ ನಾರಾಯಣಸ್ವಾಮಿ ರವರು ತಕ್ಷಣ ಕ್ಷಮೆ ಕೇಳಬೇಕು ಅಂತಾ ಪ್ರತಿಭಟನೆ ನಡೆಸುತ್ತಿರುವ ವಿಷಯ ನನಗೆ ಕರ್ತವ್ಯದಲ್ಲಿದ್ದ ಅಧಿಕಾರಿಗಳಿಂದ ತಿಳಿದು ಬಂದಿದ್ದು ಇರುತ್ತದೆ. ನಾನು, ತಕ್ಷಣವೇ ಅಪರ ಎಸ್.ಪಿ ಕಲಬುರಗಿ ರವರಿಗೆ ಬಂದೋಬಸ್ತ ಕರ್ತವ್ಯಕ್ಕೆ ಕಳುಹಿಸಿ ಹಾಗೂ ಲಭ್ಯವಿದ್ದ ಡಿ.ಎ.ಆರ್ ತುಕಡಿಗಳನ್ನು ಮತ್ತು ಅಧಿಕಾರಿ & ಸಿಬ್ಬಂದಿಯವರನ್ನು ಬಂದೋಬಸ್ತ ಕರ್ತವ್ಯಕ್ಕೆ ರವಾನಿಸಿದ್ದು, ಸದರಿ ವಿಷಯ ಮೇಲಾಧಿಕಾರಿಗಳಿಗೆ ಫೋನ್ ಮೂಲಕ ತಿಳಿಸಿ, ಎರಡು ಕೆ.ಎಸ್.ಆರ್.ಪಿ ಪ್ರಹಾರ ಬಲಗಳನ್ನು ಮೌಖಿಕವಾಗಿ ವಿನಂತಿಸಿಕೊಂಡು ಮಂಜೂರಿಸಿಕೊಂಡೆನು. ಜಿಲ್ಲೆಯಿಂದ, ವಿಜಯನಗರ ಜಿಲ್ಲೆಯ ಬಂದೋಬಸ್ತ ಕರ್ತವ್ಯದಲ್ಲಿದಂತಹ ಒಟ್ಟು 289 ಜನ ಅಧಿಕಾರಿ ಮತ್ತು ಸಿಬ್ಬಂದಿ ಜನರು ಮರಳಿ ಕೇಂದ್ರ ಸ್ಥಾನಕ್ಕೆ ಇನ್ನೂ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ	ಮಾಡುವ ಬಗ್ಗೆ ಕಲಬುರಗಿ ಜಿಲ್ಲಾ ಪೋಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರು ಮಾಹಿತಿಯನ್ನು ಕಲೆ ಹಾಕಿ ಕೂಲೇ ವಿಶ್ರಾಂತಿಗೃಹಕ್ಕೆ ಸೂಕ್ತವಾದ ಬಂದೋಬಸ್ತ ಒದಗಿಸಿದ್ದು ಇರುತ್ತದೆ. ಅಲ್ಲದೇ ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ರವರ ವಿಜಯನಗರದಲ್ಲಿ ಹಾಗೂ ಬಳ್ಳಾರಿಯಲ್ಲಿ ಹಮ್ಮಿಕೊಂಡ ಕಾರ್ಯಕ್ರಮಕ್ಕೆ ಬಂದೋಬಸ್ತ ಕರ್ತವ್ಯಕ್ಕಾಗಿ ಕಲಬುರಗಿ ಜಿಲ್ಲೆಯಿಂದ ಹೆಚ್ಚಿನ ಪ್ರಮಾಣದಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಯವರನ್ನು ಕರ್ತವ್ಯಕ್ಕೆ ನೇಮಿಸಿದರೂ ಕೂಡಾ ಕೂಡಲೇ ಕಾರ್ಯಪ್ರವೃತ್ತರಾಗಿ ಪೋಲೀಸ್ ಅಧಿಕಾರಿಗಳು ಮೇಲಾಧಿಕಾರಿರವರೊಂದಿಗೆ ಸಂಪರ್ಕ ಸಾಧಿಸಿ ಸೂಕ್ತವಾದ ಬಂದೋಬಸ್ತ ಒದಗಿಸಿ ರಕ್ಷಣೆ ನೀಡಿದ್ದು ಇರುತ್ತದೆ. ಈ ವಿಷಯವಾಗಿ ಚಿತ್ತಾಪೂರ ಪೋಲೀಸ್ ಠಾಣೆ ಗುನ್ನೆ ನಂ. 52/2025 ಕಲಂ 126(2), 115(2), 133, 352, 351(2) ಸಂಗಡ 3(5) ಜಿ.ಎಸ್.ಎಸ್. ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಾಗಿದ್ದು ಸದರಿ ಪ್ರಕರಣದಲ್ಲಿ ಇಬ್ಬರು ಆರೋಪಿತರನ್ನು ದಸ್ತಗಿರಿ ಮಾಡಿ ನಿಯಮಾವಳಿಯನ್ನು ಪಾಲಿಸಿದ್ದು ಇರುತ್ತದೆ. ಅಲ್ಲದೇ ಮಾನ್ಯ ಛಲವಾದಿ ನಾರಾಯಣಸ್ವಾಮಿ, ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನ ಪರಿಷತ್ ರವರ ವಿರುದ್ಧ ಗುಂಪು ಕಟ್ಟಿಕೊಂಡು

		ಇರುವುದರಿಂದ, ಯಾದಗಿರಿ ಜಿಲ್ಲೆಯಿಂದ ಮೂರು ಜನ ಪೋಲೀಸ್ ಅಧಿಕಾರಿಗಳು ಮತ್ತು ಎರಡು ಡಿ.ಎ.ಆರ್ ವ್ಯಾನ್‌ಗಳು ಚಿತ್ತಾಪೂರ ಪಟ್ಟಣಕ್ಕೆ ಕಳುಹಿಸಿಕೊಟ್ಟಿನ್ನು. ದಿನಾಂಕ:21/05/2025 ರಂದು ಚಿತ್ತಾಪುರ ಪಟ್ಟಣದ ಚಿತ್ತಾವಲ ವೃತ್ತದಲ್ಲಿ ರಾಷ್ಟ್ರ ರಕ್ಷಣೆಗಾಗಿ ನಾಗರಿಕ ವೇದಿಕೆ ಸದಸ್ಯರು ತಿರಂಗಾ ಯಾತ್ರೆ ಕಾರ್ಯಕ್ರಮಕ್ಕಾಗಿ ಸುಮಾರು 200-300 ಜನ ನಾಗರಿಕರು ಮತ್ತು ಸಾರ್ವಜನಿಕರು ಸೇರಿರುತ್ತಾರೆ ಅಂತಾ ಮಾಹಿತಿ ತಿಳಿದ ನಂತರ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಕ್ತ ಬಂದೋಬಸ್ತ ಕೈಗೊಳ್ಳಲು ಸೂಚಿಸಿ, ಜಿಲ್ಲಾ ನಿಯಂತ್ರಣಾ ಕೋಣೆಯಿಂದ ಸ್ಥಳದಲ್ಲಿರುವ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆದುಕೊಂಡು, ತಿಳಿಸುವಂತೆ ಸೂಚಿಸಿ ಕೇಂದ್ರಸ್ಥಾನದಿಂದ ಚಿತ್ತಾಪುರಕ್ಕೆ ಹೊರಟೆನು. ಚಿತ್ತಾಪುರ ಪಟ್ಟಣದ ಸರಕಾರಿ ವಿಶ್ರಾಂತಿ ಗೃಹದ ಮುಖ್ಯ ಗೇಟ್ ಎದುರುಗಡೆ ತಲುಪಿದಾಗ ನೂರಾರು ಜನ ಕಾಂಗ್ರೇಸ್ ಕಾರ್ಯಕರ್ತರು ಪ್ರತಿಭಟನೆ ಮಾಡುತ್ತಿರುವುದನ್ನು ಗಮನಿಸಿದೆನು. ಸ್ಥಳದಲ್ಲಿಯೇ ಇದ್ದು ಅಧಿಕಾರಿಗಳಿಗೆ ಸಲಹೆ ಸೂಚನೆಗಳನ್ನು ನೀಡಿರುತ್ತೇನೆ. ನಂತರ ಚಿತ್ತಾಪುರ ಸರಕಾರಿ ವಿಶ್ರಾಂತಿ ಗೃಹದಲ್ಲಿದ್ದ, ಮಾನ್ಯರವರು ಕಲಬುರಗಿ ನಗರದಲ್ಲಿ ನೀಡಿರುವ ತಮ್ಮ ಹೇಳಿಕೆಯ ಕುರಿತು ತುರ್ತು ಪತ್ರಿಕಾಗೋಷ್ಠಿ ಕರೆದು ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಳ್ಳುತ್ತಾರೆ, ಈ ವಿಷಯ ತಿಳಿದು ಕಾಂಗ್ರೇಸ್ ಕಾರ್ಯಕರ್ತರು ಪ್ರತಿಭಟನೆ ತೀವ್ರಗೊಳಿಸಿರುತ್ತಾರೆ. ಅದೇ ವೇಳೆಯಲ್ಲಿ ಐಜಿ ಕಾಪೌಂಡ ಹಾರಿ ಕೆಲವು ಕಾರ್ಯಕರ್ತರು ಆವರಣದಲ್ಲಿ ನಿಲ್ಲಿಸಿದ ಸರಕಾರಿ ವಾಹನಕ್ಕೆ ನೀಲಿ ಬಣ್ಣವನ್ನು ಎರಚಿರುತ್ತಾರೆ, ಅದೇ ವೇಳೆಗೆ ಐ.ಜಿ ಗೇಟ್ ಹತ್ತಿರ ಜಿಜೆಪಿ ಮುಖಂಡರಾದ ಅಂಬಾರಾಯ ಅಷ್ಟಗಿ ರವರು ಬಂದು ಕಾಂಗ್ರೇಸ್ ಕಾರ್ಯಕರ್ತರಿಗೆ ಅವಾಚ್ಯವಾಗಿ ಬೈದು ಘೋಷಣೆ ಕೂಗಿದ್ದರಿಂದ, ಅಲ್ಲಿದ್ದ ಕಾಂಗ್ರೇಸ್ ಕಾರ್ಯಕರ್ತರು ರೊಚ್ಚಿಗೆದ್ದು ಅವರನ್ನು ಎಳೆದಾಡುತ್ತಿದ್ದಾಗ ಕರ್ತವ್ಯದಲ್ಲಿದ್ದ ಅಧಿಕಾರಿಗಳಿಗೆ ಅವರನ್ನು ಸುರಕ್ಷಿತವಾಗಿ ಅಲ್ಲಿಂದ ಕರೆದುಕೊಂಡು ಹೋಗಿ	ಮಾನ್ಯರವರಿಗೆ ನಿಂದಿಸಿ ಅವರ ಸರ್ಕಾರಿ ಕಾರಿನ ಮೇಲೆ ಬಣ್ಣ ಎರಚಿದ ಆರೋಪಿತರ ವಿರುದ್ಧ ಚಿತ್ತಾಪೂರ ಪೋಲೀಸ್ ಠಾಣೆಯಲ್ಲಿ ಗುನ್ನೆ ನಂ.54/2025 ಕಲಂ.189(2), 191(2), 324(4), 352, 190 ಬಿಎನ್‌ಎಸ್ ಕಾಯ್ದೆ ಪ್ರಕಾರ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣದಲ್ಲಿ ಈಗಾಗಲೇ ನಾಲ್ಕು ಜನ ಆರೋಪಿತರನ್ನು ದಸ್ತಗಿರಿ ಮಾಡಿ ನಿಯಮಾವಳಿಯನ್ನು ಪಾಲಿಸಿದ್ದು ಸದ್ಯ ಎರಡೂ ಪ್ರಕರಣಗಳು ತನಿಖೆ ಹಂತದಲ್ಲಿರುತ್ತದೆ. ಸದರಿ ಘಟನೆಯು ಹಠಾತ್ತಾಗಿ ನಡೆದಿದ್ದು ಅಲ್ಲದೇ ಸಿಬ್ಬಂದಿಯವರ ಕೊರತೆ ಇದ್ದರೂ ಸಹ ಹಾಜರಿದ್ದ ಅಧಿಕಾರಿ ಮತ್ತು ಸಿಬ್ಬಂದಿಯವರೊಂದಿಗೆ ಹಾಗೂ ಮೇಲಾಧಿಕಾರಿಯವರೊಂದಿಗೆ ಸಂಪರ್ಕ ಸಾಧಿಸಿ ಮಾನ್ಯ ಶ್ರೀ ಛಲವಾದಿ ನಾರಾಯಣಸ್ವಾಮಿ, ವಿರೋಧ ಪಕ್ಷದ ನಾಯಕರು, ವಿಧಾನ ಪರಿಷತ್ ರವರಿಗೆ ಎರಡು ಬಾರಿ ಪತ್ರಿಕಾಗೋಷ್ಠಿಯನ್ನು ನಡೆಸಲು ಅನುಕೂಲ ಮಾಡಿಕೊಟ್ಟಿದ್ದು ಇರುತ್ತದೆ, ಅಲ್ಲದೇ ದಿನಾಂಕ:21-05-2025 ರಂದು ಚಿತ್ತಾಪೂರ ಪಟ್ಟಣದಲ್ಲಿ ತಿರಂಗಾ ಯಾತ್ರೆಯ ಕಾರ್ಯಕ್ರಮ ಇದ್ದು ಸದರಿ ಕಾರ್ಯಕ್ರಮಕ್ಕೆ ನೂರಾರು ಜನ ಜಮಾಯಿಸಿದ್ದು ಅಲ್ಲದೇ ಮಾನ್ಯರವರು ತಂಗಿದ ಸರಕಾರಿ ವಿಶ್ರಾಂತಿ ಗೃಹದ ಬಳ

		ತಹಸೀಲ್ದಾರ್ ಕಾರ್ಯಾಲಯದಲ್ಲಿ ಕೂಡಿಸುವಂತೆ ಸೂಚಿಸಿರುತ್ತೇನೆ. ನಂತರ ರೊಚ್ಚಿಗೆದ್ದ ಕಾಂಗ್ರೇಸ್ ಕಾರ್ಯಕರ್ತರಿಗೆ ಸಮಾಧಾನ ಪಡಿಸಲು ನಮ್ಮ ಅಧಿಕಾರಿಗಳಿಗೆ ಸೂಚಿಸಿದೆನು. ಇದಾದ ನಂತರ ಮಾನ್ಯರವರು ಮತ್ತೊಮ್ಮೆ ತುರ್ತು ಪತ್ರಿಕಾಗೋಷ್ಠಿ ಕರೆದು ತಮ್ಮ ಹೇಳಿಕೆಗೆ ವಿಷಾದ ವ್ಯಕ್ತಪಡಿಸಿರುತ್ತಾರೆ. ಸದರಿ ವಿಷಯ ಕಾಂಗ್ರೇಸ್ ಕಾರ್ಯಕರ್ತರಿಗೆ ಮನವರಿಕೆ ಮಾಡಿಸುವಂತೆ ನಮ್ಮ ಅಧಿಕಾರಿಗಳಿಗೆ ಸೂಚಿಸಿದೆನು. ಈ ಘಟನೆ ಕುರಿತು ಜಿತ್ತಾಪುರ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂಬರ 52/2025 ಮತ್ತು ಗುನ್ನೆ ನಂಬರ 54/2025 ನೇದ್ದವುಗಳು ದಾಖಲಾಗಿರುತ್ತವೆ. ಸದರಿ ಪ್ರಕರಣಗಳು ತನಿಖೆಯಲ್ಲಿರುತ್ತವೆ. ಶ್ರೀ ಛಲವಾದಿ ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನ ಪರಿಷತ್ತು ರವರಿಗೆ ಯಾವುದೇ ತರಹದ ದಿಗ್ಭಂದನೆ ಹೇರಿರುವುದಿಲ್ಲ, ಕಾನೂನು ಮತ್ತು ವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಮಾನ್ಯರವರಿಗೆ ಸೂಕ್ತ ರಕ್ಷಣೆ ನೀಡಿದ್ದು ಅಲ್ಲದೇ ಈ ವೇಳೆಗೆ ಮಾನ್ಯರವರಿಗೆ ನೀಡಬೇಕಾದ ಗೌರವಗಳನ್ನು ನೀಡಿರುತ್ತೇವೆ ಅಂತಾ ತಮ್ಮ ಹೇಳಿಕೆಯಲ್ಲಿ ನುಡಿದಿರುತ್ತಾರೆ. **ಶ್ರೀ ಮಹೇಶ ಮೇಘಣ್ಣವರ, ಕೆ.ಎಸ್.ಪಿ.ಎಸ್, ಅಪರ ಪೊಲೀಸ್ ಅಧೀಕ್ಷಕರು, ಕಲಬುರಗಿ ಜಿಲ್ಲೆರವರ ವಿವರಣೆ** ಕಲಬುರಗಿ ನಗರದಲ್ಲಿ ದಿನಾಂಕ:21-05-2025 ರಂದು ಬೆಳಗ್ಗೆ ಹಮ್ಮಿಕೊಂಡ ಪತ್ರಿಕಾ ಗೋಷ್ಠಿಯಲ್ಲಿ ಆನೆ ಹೋಗುವಾಗ ಶ್ವಾನ ಬೊಗಳಿದರೆ ಆನೆ ಶ್ವಾನಕ್ಕೆ ಹೆದರುವುದಿಲ್ಲಾ ಅಂತಾ ನಾಣ್ಣುಡಿ ಹೇಳಿದ್ದು ಈ ವೇಳೆಗೆ ಪತ್ರಕರ್ತರು ಆನೆ ಎಂದರೆ ಯಾರು, ಶ್ವಾನ ಎಂದರೆ ಯಾರು ಎಂದು ಮೇಲಿಂದ ಮೇಲೆ ಪ್ರಶ್ನಿಸಿದ ಕಾರಣ ಆನೆ ಅಂದರೆ ಮಾನ್ಯ ಪ್ರಧಾನ ಮಂತ್ರಿಗಳು, ನಾಯಿ ಅಂದರೆ ಪ್ರಿಯಾಂಕ್ ಖರ್ಗೆ ಅಂತಾ ಹೇಳಿದ ಕಾರಣ ಈ	ಕಾಂಗ್ರೇಸ್ ಕಾರ್ಯಕರ್ತರು ಪ್ರತಿಭಟನೆ ಮಾಡುತ್ತಿದ್ದು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಯಾವುದೇ ತರಹದ ಅಹಿತಕರ ಘಟನೆ ನಡೆಯದ ಹಾಗೆ ಪೊಲೀಸ್ ಅಧಿಕಾರಿಯವರು ಜನರನ್ನು ತಿಳಿಹೇಳಿ ಅಲ್ಲಿಂದ ಕಳುಹಿಸಿಕೊಟ್ಟಿದ್ದು ಇರುತ್ತದೆ. ಅಲ್ಲದೇ ಮಾನ್ಯ ಶ್ರೀ ಛಲವಾದಿ ನಾರಾಯಣಸ್ವಾಮಿರವರು ತೆರಳುವ ವೇಳೆಗೆ ಯಾವುದೇ ತರಹದ ಆಹಿತಕರ ಘಟನೆ ನಡೆಯದ ಹಾಗೇ ಕಲಬುರಗಿ ಜಿಲ್ಲಾ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರು ನಿಷ್ಪಕ್ಷಪಾತವಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಿದ್ದು ಯಾವುದೇ ಅಕ್ರಮ ಬಂಧನ ಹಾಕಿರುವುದು ನಡೆದಿರುವುದಿಲ್ಲ ಹಾಗೂ ಮಾನ್ಯರವರು ಹೋಗುವ ಮುಂದಿನ ಜಿಲ್ಲೆಯವರೆಗೆ ಸೂಕ್ತವಾದ ಬೆಂಗಾವಲು ವ್ಯವಸ್ಥೆ ಮಾಡಿರುತ್ತಾರೆ. ಅಲ್ಲದೇ ಮಾನ್ಯರವರು ತೆರಳುವ ಮುಂದಿನ ಜಿಲ್ಲೆಯಾದ ಯಾದಗಿರಿ ಪೊಲೀಸ್ ಅಧೀಕ್ಷಕರವರೊಂದಿಗೆ ನಿರಂತರವಾಗಿ ಸಂಪರ್ಕ ಸಾಧಿಸಿ ಕಲಬುರಗಿ ಜಿಲ್ಲೆಯಿಂದ ಯಾದಗಿರಿ ಜಿಲ್ಲೆಯವರೆಗೆ ಸೂಕ್ತವಾದ ಬೆಂಗಾವಲು ಹಾಗೂ ಬಂದೋಬಸ್ತ ವ್ಯವಸ್ಥೆ ಮಾಡಿದ್ದು ಕಲಬುರಗಿ ಜಿಲ್ಲಾ ಪೊಲೀಸ್ ವತಿಯಿಂದ ಉತ್ತಮವಾದ ಬಂದೋಬಸ್ತ ಕರ್ತವ್ಯ ನಿರ್ವಹಿಸಿರುತ್ತಾರೆ ಅಂತಾ ವಿಚಾರಣೆ ಕಾಲಕ್ಕೆ ತಿಳಿದುಬಂದಿರುತ್ತದೆ.

		ಹೇಳಿಕೆಯನ್ನು ಆಲಿಸಿದ ಕಾಂಗ್ರೇಸ್ ಪಕ್ಷದ ಕಾರ್ಯಕರ್ತರು ಮತ್ತು ಅಭಿಮಾನಿಗಳು ಚಿತ್ತಾಪುರ ಪಟ್ಟಣದಲ್ಲಿ ಶ್ರೀ ಭಲವಾದಿ ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನ ಪರಿಷತ್ತು ಇವರು ಚಿತ್ತಾಪುರ ಪಟ್ಟಣ ಲೋಕೋಪಯೋಗಿ ವಿಶ್ರಾಂತಿ ಗೃಹಕ್ಕೆ ಹೋದಾಗ ವಿಶ್ರಾಂತಿ ಗೃಹದ ಎದುರುಗಡೆ ನೂರಾರು ಕಾಂಗ್ರೇಸ್ ಕಾರ್ಯಕರ್ತರು ಜಮಾಯಿಸಿಕೊಂಡು ತಮ್ಮ ನಾಯಕರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ ಭಲವಾದಿ ನಾರಾಯಣಸ್ವಾಮಿ ರವರು ತಕ್ಷಣ ಕ್ಷಮೆಯಾಚಿಸುವಂತೆ ಪ್ರತಿಭಟನೆ ನಡೆಸುತ್ತಿರುವ ವಿಷಯವನ್ನು ಕರ್ತವ್ಯದಲ್ಲಿದ್ದ ಅಧಿಕಾರಿಗಳಿಂದ ತಿಳಿದು ಬಂದಿದ್ದು ಇರುತ್ತದೆ. ಅದೇ ಸಮಯಕ್ಕೆ ಮಾನ್ಯ ಎಸ್.ಪಿ. ಸಾಹೇಬ ಕಲಬುರಗಿರವರು ಘಟನಾ ಸ್ಥಳಕ್ಕೆ ಹೋಗಲು ಸೂಚಿಸಿದ ಮೇರೆಗೆ ನಾನು ಚಿತ್ತಾಪುರ ಪಟ್ಟಣಕ್ಕೆ ಹೋಗಿರುತ್ತೇನೆ. ಅದೇ ಸಮಯಕ್ಕೆ ಡಿ.ಎ.ಆರ್. ತುಕಡಿಗಳೊಂದಿಗೆ ಹಾಗೂ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ಬಂದೋಬಸ್ತ ಕರ್ತವ್ಯಕ್ಕೆ ಹಾಜರಾದೆವು. ನಂತರ ಎರಡು ಕೆ.ಎಸ್.ಆರ್.ಪಿ. ಪ್ರಹಾರ ಬಲಗಳು ಸ್ಥಳಕ್ಕೆ ಬಂದವು ಅಲ್ಲದೇ ಯಾದಗಿರಿ ಜಿಲ್ಲೆಯಿಂದ ಮೂರು ಜನ ಅಧಿಕಾರಿಯವರು ಮತ್ತು ಎರಡು ಡಿ.ಎ.ಆರ್. ವ್ಯಾನ್‌ಗಳು ಕರ್ತವ್ಯಕ್ಕೆ ಹಾಜರಾದವು. ದಿನಾಂಕ:21-05-2025 ರಂದು ಚಿತ್ತಾಪೂರ ಪಟ್ಟಣದ ಚಿತ್ತಾವಲಿ ವೃತ್ತದಲ್ಲಿ ರಾಷ್ಟ್ರ ರಕ್ಷಣೆಗಾಗಿ ನಾಗರೀಕ ವೇದಿಕೆಯ ಸದಸ್ಯರು ತಿರಂಗಾ ಯಾತ್ರೆಯ ಕಾರ್ಯಕ್ರಮಕ್ಕಾಗಿ ಸುಮಾರು 200-300 ಜನ ನಾಗರಿಕರು ಮತ್ತು ಸಾರ್ವಜನಿಕರು ಸೇರಿರುತ್ತಾರೆ ಅಂತಾ ಮಾಹಿತಿ ತಿಳಿದ ನಂತರ ಸ್ಥಳದಲ್ಲಿ ಸೂಕ್ತ ಬಂದೋಬಸ್ತ ಮಾಡಿಕೊಳ್ಳುವಂತೆ ಚಿತ್ತಾಪುರ ಪಟ್ಟಣದಲ್ಲಿ ಹಾಜರಿದ್ದ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ಕರ್ತವ್ಯಕ್ಕೆ ನೀಡಿ ಬಂದೋಬಸ್ತ ಮೇಲುಸ್ತುವಾರಿ ನೋಡಿಕೊಂಡಿರುತ್ತೇನೆ. ಅದೇ ವೇಳೆಗೆ ಸರಕಾರಿ ವಿಶ್ರಾಂತಿ ಗೃಹದ ಮುಖ್ಯ ಗೇಟ್ ಎದುರುಗಡೆ ನೂರಾರು ಜನ ಕಾಂಗ್ರೇಸ್ ಕಾರ್ಯಕರ್ತರು ಪ್ರತಿಭಟನೆ ಮಾಡುತ್ತಿರುವ ಸ್ಥಳದಲ್ಲಿ ಅಧಿಕಾರಿಗಳಿಗೆ ಸಲಹೆ ಸೂಚನೆಗಳನ್ನು	

		ನೀಡಿರುತ್ತೇನೆ. ನಂತರ ಚಿತ್ತಾಪೂರ ಸರಕಾರಿ ವಿಶ್ರಾಂತಿ ಗೃಹದಲ್ಲಿದ್ದ ಮಾನ್ಯರವರು ಕಲಬುರಗಿ ನಗರದಲ್ಲಿ ನೀಡಿರುವ ತಮ್ಮ ಹೇಳಿಕೆಯ ಕುರಿತು ತುರ್ತು ಪತ್ರಿಕಾಗೋಷ್ಠಿ ಕರೆದು ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿರುತ್ತಾರೆ. ಈ ವಿಷಯ ತಿಳಿದು ಕಾಂಗ್ರೇಸ್ ಕಾರ್ಯಕರ್ತರು ಪ್ರತಿಭಟನೆಯನ್ನು ತೀವ್ರಗೊಳಿಸಿರುತ್ತಾರೆ. ಅದೇ ವೇಳೆ ಐ.ಬಿ. ಕಾಂಪೌಂಡ ಹಾರಿ ಕೆಲವು ಕಾರ್ಯಕರ್ತರು ಆವರಣದಲ್ಲಿ ನಿಲ್ಲಿಸಿದ ಸರಕಾರಿ ವಾಹನಕ್ಕೆ ನೀಲಿ ಬಣ್ಣ ಎರಚಿರುತ್ತಾರೆ ಮತ್ತು ಅದೇ ವೇಳೆಗೆ ಐ.ಬಿ. ಹತ್ತಿರ ಐ.ಜಿ.ಪಿ. ಮುಖಂಡರಾದ ಅಂಬಾರಾಯ ಅಷ್ಟಗಿರವರು ಬಂದು ಕಾಂಗ್ರೇಸ್ ಕಾರ್ಯಕರ್ತರಿಗೆ ಅವಾಚ್ಯ ಶಬ್ದಗಳಿಂದ ಬೈದು ಘೋಷಣೆಗಳನ್ನು ಕೂಗಿದ್ದು ಅಲ್ಲಿದ್ದ ಕಾಂಗ್ರೇಸ್ ಕಾರ್ಯಕರ್ತರು ರೊಚ್ಚಿಗೆದ್ದು ಅವರನ್ನು ಎಳೆದಾಡುತ್ತಿರುವಾಗ ಅಲ್ಲೇ ಕರ್ತವ್ಯದಲ್ಲಿದ್ದ ನಾನು ಹಾಗೂ ಇತರೆ ಅಧಿಕಾರಿಗಳು ಅವರನ್ನು ಸುರಕ್ಷಿತವಾಗಿ ಕರೆದುಕೊಂಡು ಹೋಗಿ ತಹಸೀಲ ಕಾರ್ಯಾಲಯದಲ್ಲಿ ಕೂರಿಸಿರುತ್ತೇವೆ ನಂತರ ನಾನು ನಮ್ಮ ಅಧಿಕಾರಿಗಳು ರೊಚ್ಚಿಗೆದ್ದ ಕಾಂಗ್ರೇಸ್ ಕಾರ್ಯಕರ್ತರನ್ನು ಸಮಾಧಾನ ಪಡಿಸಲು ಸುಮಾರು ಅರ್ಧ ಗಂಟೆ ಸಮಯ ತೆಗೆದುಕೊಂಡಿರುತ್ತದೆ. ಇದಾದ ನಂತರ ಮಾನ್ಯರವರು ಮತ್ತೊಮ್ಮೆ ತುರ್ತು ಪತ್ರಿಕಾ ಗೋಷ್ಠಿ ಕರೆದು ತಮ್ಮ ಹೇಳಿಕೆಗೆ ವಿಷಾದ ವ್ಯಕ್ತಪಡಿಸಿರುತ್ತಾರೆ. ಸದರಿ ವಿಷಯ ಕಾಂಗ್ರೇಸ್ ಕಾರ್ಯಕರ್ತರಿಗೆ ಮನವರಿಕೆ ಮಾಡಿ ನನಗೆ ಮತ್ತು ನಮ್ಮ ಅಧಿಕಾರಿಗಳಿಗೆ ಸುಮಾರು ಅರ್ಧ ಗಂಟೆ ಕಾಲ ಸಮಯ ತೆಗೆದುಕೊಂಡಿರುತ್ತದೆ. ಈ ಘಟನೆ ಕುರಿತು ಚಿತ್ತಾಪುರ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ. 52/2025 ಮತ್ತು ಗುನ್ನೆ ನಂ. 54/2025 ನೇದ್ದವುಗಳು ದಾಖಲಾಗಿರುತ್ತವೆ ಸದರಿ ಪ್ರಕರಣಗಳು ತನಿಖೆಯಲ್ಲಿರುತ್ತವೆ.	

		ಶ್ರೀ ಛಲವಾದಿ ನಾರಾಯಣಸ್ವಾಮಿ ಮಾನ್ಯ ವಿರೋಧ ಪಕ್ಷದ ನಾಯಕರು ಕರ್ನಾಟಕ ವಿಧಾನ ಪರಿಷತ್ತು ರವರಿಗೆ ಯಾವುದೇ ತರಹದ ದಿಗ್ಬಂಧನೆ ಹೇರಿರುವುದಿಲ್ಲಾ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಹಿತ ದೃಷ್ಟಿಯಿಂದ ಮಾನ್ಯರವರಿಗೆ ಸೂಕ್ತ ರಕ್ಷಣೆ ನೀಡಿದ್ದು ಅಲ್ಲದೇ ಮಾನ್ಯರವರಿಗೆ ಶಿಷ್ಟಾಚಾರದೊಂದಿಗೆ ನಡೆದುಕೊಂಡು ಸುರಕ್ಷಿತವಾಗಿ ಸೂಕ್ತ ಬೆಂಗಾವಲಿನೊಂದಿಗೆ ಯಾದಗಿರಿ ಪಟ್ಟಣಕ್ಕೆ ಕಳುಹಿಸಿ ಮಾನ್ಯ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿರುತ್ತೇನೆ ಅಂತಾ ತಮ್ಮ ಹೇಳಿಕೆ ನೀಡಿರುತ್ತಾರೆ. 3) **ಶ್ರೀ ಶಂಕರಗೌಡ ಪಾಟೀಲ್, ಡಿಎಸ್‌ಪಿ, ಶಹಾಪುರ ಉಪ ವಿಭಾಗರವರ ವಿವರಣೆ:** ದಿನಾಂಕ:20/05/2025 ರಂದು ನಾನು ವಿಜಯನಗರ ಬಂದೋಬಸ್ತ್ ಕರ್ತವ್ಯಕ್ಕೆ ಹೋಗಿದ್ದು ದಿನಾಂಕ:21/05/2025 ಮರಳಿ ಬರುತ್ತಿರುವ ಸಮಯದಲ್ಲಿ ಶ್ರೀ ಶ್ರೀಶೈಲ ಅಂಬಾಟಿ, ಪಿಎಸ್‌ಐ ಚಿತ್ತಾಪೂರ ಪೊಲೀಸ್ ಠಾಣೆ ರವರು ತಿಳಿಸಿದ್ದೇನೆಂದರೆ, ಇಂದು ಮಾನ್ಯ ಛಲವಾದಿ ನಾರಾಯಣಸ್ವಾಮಿ, ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನ ಪರಿಷತ್ತು ರವರು ಕಲಬುರಗಿ ನಗರದಲ್ಲಿ ಹಮ್ಮಿಕೊಂಡ ಪತ್ರಿಕಾಗೋಷ್ಠಿಯಲ್ಲಿ "ಆನೆ ಹೋಗುವಾಗ ಶ್ವಾನ ಬೊಗಳಿದರೆ ಆನೆ ಶ್ವಾನಕ್ಕೆ ಹೆದರುವುದಿಲ್ಲ" ಅಂತಾ ನಾಣ್ಣುಡಿ ಹೇಳಿದ್ದು ಈ ವೇಳೆಗೆ ಪತ್ರಕರ್ತರು ಆನೆ ಎಂದರೆ ಯಾರು, ಶ್ವಾನ ಎಂದರೆ ಯಾರು ಎಂದು ಮೇಲಿಂದ ಮೇಲೆ ಪ್ರಶ್ನಿಸಿದ ಕಾರಣ ಆನೆ ಅಂದರೆ ಮಾನ್ಯ ಪ್ರಧಾನ ಮಂತ್ರಿಗಳು, ನಾಯಿ ಅಂದರೆ ಪ್ರಿಯಾಂಕ್ ಖರ್ಗೆ ಅಂತಾ ಹೇಳಿದ ಕಾರಣ ಈ ಹೇಳಿಕೆಯನ್ನು ಆಲಿಸಿದ ಕಾಂಗ್ರೇಸ್ ಪಕ್ಷದ ಕಾರ್ಯಕರ್ತರು ಮಾನ್ಯ ಛಲವಾದಿ ನಾರಾಯಣಸ್ವಾಮಿ ರವರ ಹೇಳಿಕೆಯ ವಿರೋದ ವ್ಯಕ್ತಪಡಿಸಲು ಚಿತ್ತಾಪುರ ಪಟ್ಟಣಕ್ಕೆ ಬರುತ್ತಿರುವ ಬಗ್ಗೆ ಮಾಹಿತಿಯನ್ನು ತಿಳಿಸಿದ್ದು ಇರುತ್ತದೆ. ನಾನು ಕೂಡಲೇ ಪಿ.ಎಸ್.ಐ (ಕಾಸು) ರವರಿಗೆ ದೂರವಾಣಿ ಮುಖಾಂತರ ತಿಳಿಸಿದ್ದೇನೆಂದರೆ, ಸರಕಾರಿ ಪರಿವೀಕ್ಷಣೆ ಗೃಹಕ್ಕೆ ಸೂಕ್ತವಾದ	

<u>ಟಿಪ್ಪಣಿ:</u>

ಮೇಲ್ಕಂಡ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಆಹ್ವಾನಿಸಬೇಕಾಗಿರುವ ಜನಪ್ರತಿನಿಧಿಗಳನ್ನು ಹೊರತುಪಡಿಸಿ, ಇತರೆ ಸಚಿವರು/ ಜನಪ್ರತಿನಿಧಿಗಳು/ ಗಣ್ಯ ವ್ಯಕ್ತಿಗಳನ್ನು ಆಹ್ವಾನಿಸಲು ಕಾರ್ಯಕ್ರಮದ ಸಂದರ್ಭಕ್ಕನುಗುಣವಾಗಿ ಆಯೋಜಕರು ತೀರ್ಮಾನ ತೆಗೆದುಕೊಳ್ಳತಕ್ಕದ್ದು.

<u>ಆಹ್ವಾನ ಪತ್ರಿಕೆ ಮುದ್ರಿಸುವ ಬಗ್ಗೆ :</u>

10. ಸಮಾರಂಭದಲ್ಲಿ ಪಾಲ್ಗೊಳ್ಳುವಂತಹ ಸಂದರ್ಭ, ರಾಜ್ಯ ಆದ್ಯತಾ ಸೂಚಿ ಪಟ್ಟಿ ಮತ್ತು ಇತರೆ ಸನ್ನಿವೇಶಗಳನ್ನು ಆದರಿಸಿ ಕೇಂದ್ರ ಸಚಿವರುಗಳು, ರಾಜ್ಯ ಸಂಪುಟ ದರ್ಜೆ ಸಚಿವರುಗಳು, ರಾಜ್ಯ ಸಚಿವರು, ಸಂಸತ್ ಮತ್ತು ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳಿಗೆ, ಘನ ಉಪಸ್ಥಿತಿ, ಉದ್ಘಾಟನೆ/ ಶಂಕುಸ್ಥಾಪನೆ/ಲೋಕಾರ್ಪಣೆ, ಅಧ್ಯಕ್ಷರು, ಮುಖ್ಯ ಅತಿಥಿಗಳು, ವಿಶೇಷ ಆಹ್ವಾನಿತರು ಹೀಗೆ ಸ್ಥಾನಗಳನ್ನು ನೀಡಬೇಕು. ಇದೇ ಅನುಕ್ರಮದಲ್ಲಿ ಆಹ್ವಾನ ಪತ್ರಿಕೆಯನ್ನು ಮುದ್ರಿಸತಕ್ಕದ್ದು.

11. ಸರ್ಕಾರದ ಕಾರ್ಯಕ್ರಮದ ಎಲ್ಲಾ ಆಹ್ವಾನ ಪತ್ರಿಕೆಗಳಲ್ಲಿ ಆಹ್ವಾನಿತರ ಹೆಸರುಗಳನ್ನು ರಾಜ್ಯ ಆದ್ಯತಾ ಸೂಚಿಪಟ್ಟಿಗೆ ಅನುಗುಣವಾಗಿಯೇ ಮುದ್ರಿಸಬೇಕು. ಈ ಆದ್ಯತಾಸೂಚಿ ಪಟ್ಟಿಯನ್ನು ಪರಿಗಣಿಸುವಾಗ ಜನಪ್ರತಿನಿಧಿಗಳು ಹೊಂದಿರುವ ಸ್ಥಾನಮಾನವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಆದರೆ, ರಾಜ್ಯ ಆದ್ಯತಾ ಸೂಚಿ ಪಟ್ಟಿಯ ಟಿಪ್ಪಣಿ 6(ಎ) ರಲ್ಲಿ ತಿಳಿಸಿರುವಂತೆ ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ಆಹ್ವಾನ ಪತ್ರಿಕೆಯಲ್ಲಿ ಘನ ಉಪಸ್ಥಿತಿ, ಉದ್ಘಾಟನೆ/ ಶಂಕುಸ್ಥಾಪನೆ/ಲೋಕಾರ್ಪಣೆಯ ನಂತರ ನಮೂದಿಸುವುದು.

<u>ಟಿಪ್ಪಣಿ</u>

ಅ) ಸರ್ಕಾರದ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಆಹ್ವಾನಿಸಬೇಕಾದ ಮತ್ತು ಕರ್ನಾಟಕ ರಾಜ್ಯದ ಆದ್ಯತಾ ಸೂಚಿ ಪಟ್ಟಿಯಲ್ಲಿ ಯಾವುದೇ ಸ್ಥಾನಮಾನವನ್ನು ಹೊಂದದೇ ಇರುವ ಜನಪ್ರತಿನಿಧಿಗಳನ್ನು/ಗಣ್ಯ ವ್ಯಕ್ತಿಗಳನ್ನು ಆಹ್ವಾನ ಪತ್ರಿಕೆಯಲ್ಲಿ ಕೊನೆಯ ಶಾಸಕರ ನಂತರ ಈ ಕೆಳಗಿನ ಆದ್ಯತೆಯಂತೆ ನಮೂದಿಸಲು ಕ್ರಮಕೈಗೊಳ್ಳತಕ್ಕದ್ದು.

I. ಶಾಸಕರಲ್ಲದ ಮತ್ತು ಸಚಿವ ಸ್ಥಾನಮಾನ ಹೊಂದದೇ ಇರುವ ರಾಜ್ಯ ಮಟ್ಟದ ಇತರೆ ನಿಗಮ ಮತ್ತು ಮಂಡಳಿಗಳ ಅಧ್ಯಕ್ಷರುಗಳು.

- ಒಂದಕ್ಕಿಂತ ಹೆಚ್ಚಿಗೆ ನಿಗಮ ಮತ್ತು ಮಂಡಳಿಗಳ ಅಧ್ಯಕ್ಷರುಗಳು ಇದ್ದಲ್ಲಿ, ಆಯಾ ಅಧ್ಯಕ್ಷರುಗಳು ಆ ಹುದ್ದೆಗೆ ಸೇರಿದ ದಿನಾಂಕವನ್ನು ಪರಿಗಣನೆಗೆ ತೆಗೆದುಕೊಂಡು ಪರಸ್ಪರ ಆದ್ಯತೆ ನಿಗದಿಪಡಿಸುವುದು.

ii. ಕಾರ್ಯಕ್ರಮ ನಡೆಯುವ ಸ್ಥಳದ ಮಹಾನಗರಪಾಲಿಕೆಯ ಮಹಾಪೌರರು.

iii. ಕಾರ್ಯಕ್ರಮ ನಡೆಯುವ ಸ್ಥಳದ ತಾಲ್ಲೂಕ್ ಪಂಚಾಯತ್ ಅಧ್ಯಕ್ಷರು.

iv. ಕಾರ್ಯಕ್ರಮ ನಡೆಯುವ ಸ್ಥಳದ ನಗರ ಸ್ಥಳೀಯ ಸಂಸ್ಥೆಯ/ಗ್ರಾಮ ಪಂಚಾಯತಿನ ಅಧ್ಯಕ್ಷರು.

ಆ) ಸರ್ಕಾರದ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಆಹ್ವಾನಿಸಬೇಕಾದ ಜನಪ್ರತಿನಿಧಿಗಳನ್ನು ಹೊರತುಪಡಿಸಿ ಇತರೆ ಜನಪ್ರತಿನಿಧಿಗಳನ್ನು ಮತ್ತು ಗಣ್ಯವ್ಯಕ್ತಿಗಳನ್ನು ಆಹ್ವಾನಿಸಿದಾಗ,

i. ಈಗಾಗಲೇ ಅವರಿಗೆ ಕರ್ನಾಟಕ ರಾಜ್ಯದ ಆದ್ಯತಾ ಸೂಚಿಪಟ್ಟಿಯಲ್ಲಿ ಸ್ಥಾನಮಾನ ನೀಡಿದ್ದರೆ ಅವರ ಹೆಸರುಗಳನ್ನು ಆ ಪ್ರಕಾರ ಆಹ್ವಾನ ಪತ್ರಿಕೆಗಳಲ್ಲಿ ನಮೂದಿಸುವುದು.

ii. ಅವರಿಗೆ ಯಾವುದೇ ಸ್ಥಾನಮಾನವಿಲ್ಲದಿದ್ದಾಗ ಅವರ ಹೆಸರುಗಳನ್ನು ಕಡ್ಡಾಯವಾಗಿ ಆಹ್ವಾನಿಸಬೇಕಾದ ಎಲ್ಲಾ ಜನಪ್ರತಿನಿಧಿಗಳ ನಂತರ ಅವರ ಹೆಸರುಗಳನ್ನು ನಮೂದಿಸುವುದು.

12. 2018 ರ ಆದ್ಯತಾ ಸೂಚಿಪಟ್ಟಿಯ ಪ್ರಕಾರ ಲೋಕಸಭಾ ಸದಸ್ಯರು ಮತ್ತು ರಾಜ್ಯಸಭಾ ಸದಸ್ಯರು ಕ್ರಮ ಸಂಖ್ಯೆ:21 ಅನುಚ್ಛೇದದಲ್ಲಿ ಹಾಗೂ ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ ಸದಸ್ಯರುಗಳು ಕ್ರಮ ಸಂಖ್ಯೆ:21 (ಎ) ಅನುಚ್ಛೇದದಲ್ಲಿ ಸ್ಥಾನವನ್ನು ಪಡೆಯುತ್ತಾರೆ. ಭಾರತ ಸರ್ಕಾರದ ಗೃಹ ಮಂತ್ರಾಲಯವು "as per the practice the person who has served more than one term continuously are placed higher in the Table of Precedence (ToP)* ಎಂದು ಅಭಿಪ್ರಾಯಿಸಿರುವ ಹಿನ್ನೆಲೆಯಲ್ಲಿ ಆದ್ಯತಾಸೂಚಿ ಪಟ್ಟಿಯಲ್ಲಿ ಒಂದೇ ಅನುಚ್ಛೇದದಲ್ಲಿರುವ ಹುದ್ದೆಗಳ ನಡುವೆ ಆದ್ಯತೆ ನೀಡುವಾಗ ಲೋಕಸಭಾ ಸದಸ್ಯರ ನಂತರ ರಾಜ್ಯಸಭಾ ಸದಸ್ಯರು ಹಾಗೂ ವಿಧಾನ ಸಭಾ ಸದಸ್ಯರ ನಂತರ ವಿಧಾನ ಪರಿಷತ್ತು ಸದಸ್ಯರು ಎಂಬ ಎರಡು ವಿಂಗಡನೆಗಳಾಗಿ ಮಾಡಿಕೊಳ್ಳದೇ ಯಾವ ವ್ಯಕ್ತಿಗಳು ಒಂದಕ್ಕಿಂತ

ಹೆಚ್ಚು ಅವಧಿಗೆ ಸತತವಾಗಿ ಅದೇ ಸ್ಥಾನದಲ್ಲಿ ಮುಂದುವರೆದಿರುತ್ತಾರೋ ಅಂತಹವರಿಗೆ ಪರಸ್ಪರ ಆದ್ಯತೆಯನ್ನು ನಿಗದಿಪಡಿಸುವಾಗ ಮೇಲಿನ ಸ್ಥಾನವನ್ನು ನಿಗದಿಪಡಿಸುವುದು.

ಟಿಪ್ಪಣಿ

ಜಿಲ್ಲಾ ಮಟ್ಟದ ಹಾಗೂ ರಾಜ್ಯ ಮಟ್ಟದ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ, ಕಾರ್ಯಕ್ರಮ ನಡೆಯುವ ಸ್ಥಳದ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸದರನ್ನು ಮೊದಲಿಗೆ ಹಾಕುವುದು. ತದನಂತರ ಉಳಿದ ಸಂಸದರುಗಳನ್ನು (ಲೋಕಸಭಾ ಮತ್ತು ರಾಜ್ಯ ಸಭಾ ಸಂಸದರನ್ನೊಳಗೊಂಡಂತೆ) ಆದ್ಯತಾ ಪಟ್ಟಿಯ ಪ್ರಕಾರ ನಮೂದು ಮಾಡುವುದು.

Scanned by CamScanner

13. ಸರ್ಕಾರದ ಸಮಾರಂಭಗಳ ಆಮಂತ್ರಣ ಪತ್ರಿಕೆಯಲ್ಲಿ ವಿಧಾನ ಪರಿಷತ್ತು ಮತ್ತು ವಿಧಾನ ಸಭೆಯ ಸದಸ್ಯರ ಹೆಸರುಗಳನ್ನು ನಮೂದು ಮಾಡುವ ಸಂದರ್ಭಗಳಲ್ಲಿ "ಶಾಸಕರು (ವಿಧಾನ ಪರಿಷತ್ತು) ಮತ್ತು ಶಾಸಕರು (ವಿಧಾನ ಸಭೆ) ಎಂದು ಹಾಗೂ ಲೋಕಸಭಾ ಸದಸ್ಯರ ಮತ್ತು ರಾಜ್ಯಸಭಾ ಸದಸ್ಯರ ಹೆಸರುಗಳನ್ನು ನಮೂದು ಮಾಡುವ ಸಂದರ್ಭಗಳಲ್ಲಿ ಸಂಸದರು (ಲೋಕಸಭೆ) ಮತ್ತು ಸಂಸದರು (ರಾಜ್ಯಸಭೆ) ಎಂದು ನಮೂದು ಮಾಡುವುದು.

14. ಜಿಲ್ಲೆಯಲ್ಲಿ ಯಾವುದೇ ಸರ್ಕಾರಿ ಸಮಾರಂಭ ಏರ್ಪಡಿಸುವ ಮುನ್ನ ಆಹ್ವಾನ ಪತ್ರಿಕೆಗೆ ಆಯಾ ಜಿಲ್ಲಾಧಿಕಾರಿಗಳ / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆ ಪಡೆಯಬೇಕು

15. ಸರ್ಕಾರದ ಸಮಾರಂಭವನ್ನು ಏರ್ಪಡಿಸುವ ಎಲ್ಲಾ ಇಲಾಖಾ ಮುಖ್ಯಸ್ಥರು ಮತ್ತು ಜಿಲ್ಲಾಧಿಕಾರಿಗಳು ಸಂಸತ್ತಿನ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ತಪ್ಪದೇ ಆಹ್ವಾನ ಪತ್ರಿಕೆಗಳನ್ನು ಕಳುಹಿಸುವ ವ್ಯವಸ್ಥೆ ಮಾಡತಕ್ಕದ್ದಲ್ಲದೇ. ಇಲಾಖೆಯ ಹಿರಿಯ ಅಧಿಕಾರಿಗಳ ಮುಖಾಂತರ ಅವರುಗಳಿಗೆ ಆಹ್ವಾನ ಪತ್ರಿಕೆಗಳನ್ನು ಖುದ್ದಾಗಿ ತಲುಪಿಸಲು ಏರ್ಪಾಡು ಮಾಡಬೇಕು.

16 ಆಹ್ವಾನ ಪತ್ರಿಕೆಗಳನ್ನು ಮುದ್ರಿಸಿದಿದ್ದ ಪಕ್ಷದಲ್ಲಿ ಕನಿಷ್ಠ ಪಕ್ಷ ಪತ್ರದ ಮುಖೇನ ಅನೌಪಚಾರಿಕವಾಗಿ ಜವಾಬ್ದಾರಿಯುತ ಅಧಿಕಾರಿಗಳ ಮುಖಾಂತರ ಸಂಸತ್ ಸದಸ್ಯರುಗಳನ್ನು ರಾಜ್ಯ ವಿಧಾನ ಮಂಡಲದ ಸದಸ್ಯರನ್ನು ಹಾಗೂ ಇತರರನ್ನು ಸಮಾರಂಭಕ್ಕೆ ಆಹ್ವಾನಿಸಬೇಕು.

17 ಶಂಕುಸ್ಥಾಪನೆ / ಉದ್ಘಾಟನೆ ಇತ್ಯಾದಿಗಳಿಗೆ ಸಂಬಂಧಪಟ್ಟ ಶಿಲೆಗಳಲ್ಲೂ ಸಹ ಆಹ್ವಾನ ಪತ್ರಿಕೆಯಲ್ಲಿರುವ ಹೆಸರುಗಳನ್ನು ಅದೇ ಆದ್ಯತೆಯಲ್ಲಿ ನಮೂದಿಸಬೇಕು.

ಆಸನ ವ್ಯವಸ್ಥೆ

18. ಆಸನ ವ್ಯವಸ್ಥೆ ಮಾಡುವಾಗಲೂ ರಾಜ್ಯ ಆದ್ಯತಾ ಪಟ್ಟಿಯ ಪ್ರಕಾರವೇ ಗಣ್ಯರಿಗೆ ಸಲ್ಲಬೇಕಾದ ಸ್ಥಾನಮಾನಗಳನ್ನು ಆಯಾ ವರಿಷ್ಠರಿಗೆ ತಪ್ಪದೇ ಸಲ್ಲಿಸಬೇಕು. ಆದ್ದರಿಂದ ಆಹ್ವಾನ ಪತ್ರಿಕೆಯನ್ನು ಆದ್ಯತಾಪಟ್ಟಿಯ ಮೇರೆಗೆ ಮುದ್ರಿಸುವುದರಿಂದ ಆಸನ ವ್ಯವಸ್ಥೆಯನ್ನು ಆಹ್ವಾನ ಪತ್ರಿಕೆಯ ಅನುಗುಣವಾಗಿ ಮಾಡುವುದು.

19 ಸಾಮಾನ್ಯವಾಗಿ ಶಿಷ್ಟಾಚಾರದಂತೆ ಅನುಸರಿಸಬೇಕಾದ ಆಸನ ವ್ಯವಸ್ಥೆಯನ್ನು ಕೆಳಕಂಡಂತೆ ನೀಡಲಾಗಿದೆ.

10	8	6	4	2	1	3	5	7	9	11

ಮೇಲ್ಕಂಡಂತೆ ಕಾರ್ಯಕ್ರಮದ ಆಹ್ವಾನ ಪತ್ರಿಕೆಯ ಪ್ರಕಾರ ಮೊದಲಿಗರೋ ಯಾರೋ ಅವರನ್ನು ಮಧ್ಯದಲ್ಲಿ (ಆಸನ ಸಂಖ್ಯೆ: 1) ಕೂರಿಸಬೇಕು ಅವರ ನಂತರ ಆಹ್ವಾನ ಪತ್ರಿಕೆಯ ಅನುಗುಣವಾಗಿ ಉಳಿದ ಗಣ್ಯರನ್ನು ಬಲ ಮತ್ತು ಎಡ ಭಾಗದಲ್ಲಿ ಮೇಲ್ಕಂಡಂತೆ ಆಸನ ವ್ಯವಸ್ಥೆಯನ್ನು ಮಾಡಬೇಕು.

20. ಕಾರ್ಯಕ್ರಮಗಳಿಗೆ ತಡವಾಗಿ ಬರುವ ಸಂಸತ್ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಗೆ

ಆಗುವ ಅನಾನುಕೂಲತೆಗಳನ್ನು ನಿವಾರಿಸುವ ಸಲುವಾಗಿ ಅವರಿಗಾಗಿ ಪ್ರತ್ಯೇಕವಾಗಿರಿಸಿದ ಆಸನಗಳನ್ನು ಸಮಾರಂಭ ಮುಗಿಯುವವರೆಗೂ ಕಾದಿರಿಸತಕ್ಕದ್ದು. ಹಾಗೂ ಆ ಆಸನಗಳು ಖಾಲಿಯಿದ್ದಾಗ್ಯೂ ಅವುಗಳನ್ನು ಇತರರು ಉಪಯೋಗಿಸಿಕೊಳ್ಳತಕ್ಕದಲ್ಲ.

21. ಸರ್ಕಾರಿ ಅಧಿಕಾರಿಗಳು ಸಾಮಾನ್ಯವಾಗಿ ಯಾವುದೇ ಸರ್ಕಾರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸುವುದು ಮತ್ತು ಉದ್ಘಾಟಿಸುವುದನ್ನು ನಿಷೇಧಿಸಿದೆ. ಆದರೆ, ಅನಿವಾರ್ಯ ಸಂದರ್ಭಗಳಲ್ಲಿ ಅಂದರೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹೊರತುಪಡಿಸಿ, ಇನ್ನಿತರ ಸರ್ಕಾರಿ ಕಾರ್ಯಕ್ರಮಗಳಾದ ಜಯಂತಿ/ ಉತ್ಸವ/ ಅರಿವು ಮೂಡಿಸುವ ಕಾರ್ಯಕ್ರಮಗಳಲ್ಲಿ ಆಹ್ವಾನ ಪತ್ರಿಕೆಯಲ್ಲಿ ನಮೂದಿಸಿದ ಯಾವುದೇ ಜನಪ್ರತಿನಿಧಿಗಳು ಕಾರ್ಯಕ್ರಮಕ್ಕೆ ಹಾಜರಾಗದೇ ಇದ್ದ ಸಂದರ್ಭದಲ್ಲಿ ಮಾತ್ರ ಅಧ್ಯಕ್ಷತೆ ವಹಿಸಬಹುದು ಮತ್ತು ಉದ್ಘಾಟನೆ ಮಾಡಬಹುದು ಮತ್ತು ಅವಶ್ಯಕತೆಗೆ ಅನುಗುಣವಾಗಿ ಸಂಬಂಧಪಟ್ಟ ಅಧಿಕಾರಿಗಳು ಕಾರ್ಯಕ್ರಮದ ವೇದಿಕೆ ಮೇಲೆ ಉಪಸ್ಥಿತರಿರಬಹುದು.

ವಿಶೇಷ ಸೂಚನೆಗಳು:

22. ನ್ಯಾಯಾಲಯಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಕುರಿತಾಗಿ ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದನ್ವಯ ಕ್ರಮವನ್ನು ಕೈಗೊಳ್ಳುವುದು.

23 ಮಾನ್ಯ ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು ಮತ್ತು ಪ್ರಧಾನ ಮಂತ್ರಿಗಳು ಭಾಗವಹಿಸುವ ಕಾರ್ಯಕ್ರಮಗಳನ್ನು ಮಾನ್ಯ ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು ಮತ್ತು ಪ್ರಧಾನ ಮಂತ್ರಿಗಳ ಕಾರ್ಯಾಲಯದ ಅನುಮೋದನೆಯಂತೆ ನಡೆಸುವುದು.

24. ಕೇಂದ್ರ ಸರ್ಕಾರದ ಸಮಾರಂಭಗಳಿಗೆ ಸಂಸತ್ತು ಸದಸ್ಯರನ್ನು ಆಹ್ವಾನಿಸುವ ರೀತಿಯಲ್ಲಿಯೇ ಸ್ಥಳೀಯ ಚುನಾಯಿತ ಪ್ರತಿನಿಧಿಗಳಾದ ವಿಧಾನಮಂಡಲದ ಸದಸ್ಯರುಗಳನ್ನು ಶಿಷ್ಟಾಚಾರದನ್ವಯ ತಪ್ಪದೇ ಆಹ್ವಾನಿಸುವುದು.

25 ಗಣರಾಜ್ಯೋತ್ಸವ ಹಾಗೂ ಸ್ವಾತಂತ್ರ್ಯ ದಿನಾಚರಣೆ ದಿನಗಳಂದು ಯಾರು ಧ್ವಜಾರೋಹಣ ಮಾಡಬೇಕು ಎನ್ನುವ ಬಗ್ಗೆ ಭಾರತ ಸರ್ಕಾರ ಹೊರಡಿಸಿದ ಸುತ್ತೋಲೆಗಳಲ್ಲಿ ನೀಡಲಾದ ನಿರ್ದೇಶನವನ್ನು ಮುಂದುವರೆಸಿಕೊಂಡು ಹೋಗುವುದು.

26. ಸರ್ಕಾರಿ ಆದೇಶಗಳಲ್ಲಿ ಶಾಸಕರು ಅಥವಾ ಖಾಸಗಿ ಪ್ರಮುಖರ ಅಧ್ಯಕ್ಷತೆಯಲ್ಲಿ ಹಲವು ಸಮಿತಿಗಳನ್ನು ನೇಮಕ ಮಾಡಲಾಗಿದೆ. ಆಯಾ ಸಮಿತಿಯ ಕಾರ್ಯವ್ಯಾಪ್ತಿಗೆ ಒಳಪಟ್ಟು ಸಮೀಕ್ಷಣಾ ಸಭೆಗಳನ್ನು ನಡೆಸಬಹುದು. ಇದನ್ನು ಹೊರತುಪಡಿಸಿ ಶಾಸಕರೇ ಆಗಲೀ ಇತರೇ ಖಾಸಗಿ ಪ್ರಮುಖರೇ ಆಗಲೀ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಮೀಕ್ಷಣಾ ಸಭೆಗಳನ್ನು ನಡೆಸುವಂತಿಲ್ಲ. ವಿರೋಧ ಪಕ್ಷದ ನಾಯಕರಿಗೂ ಸಹ ಅಧಿಕಾರಿಗಳ ಸಭೆ ಕರೆಯಲು ಅವಕಾಶವಿರುವುದಿಲ್ಲ ಆದರೆ ಅಗತ್ಯ ಮಾಹಿತಿಯನ್ನು ಸೂಕ್ತವಾಗಿ ಒದಗಿಸಬಹುದಾಗಿದೆ. ಅಂತಹ ಸಭೆಗಳನ್ನು ನಡೆಸಲು ಮಾನ್ಯ ಸಚಿವರು ಮತ್ತು ಅಧಿಕಾರಿಗಳಿಗೆ ಮಾತ್ರ ಅವಕಾಶವಿರುತ್ತದೆ.

Scanned by CamScanner

27. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಮ್ಮ ಹಂತದಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೆ ಶಿಷ್ಟಾಚಾರದ ಬಗ್ಗೆ ಪೂರ್ಣವಾಗಿ ತರಬೇತಿ ನೀಡುವುದು. ಶಿಷ್ಟಾಚಾರ ಲೋಪವಾದ ಪ್ರಕರಣಗಳಲ್ಲಿ ಸಂಬಂಧಪಟ್ಟವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆಂದು ಸಂಬಂಧಪಟ್ಟವರಿಗೆಲ್ಲ ತಿಳಿಸತಕ್ಕದ್ದು. ಸಂಬಂಧಪಟ್ಟ ಅಧಿಕಾರಿಗಳಲ್ಲದೇ, ಶಿಷ್ಟಾಚಾರ ಪಾಲಿಸುವುದರಲ್ಲಿ ವಿಫಲರಾದ ಹಿರಿಯ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದೆಂದು ಈ ಮೂಲಕ ಸೂಚಿಸಿದೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ

<u>ಪ್ರತಿಗಳು:</u>

1) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
2) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
3) ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು.
4) ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
5) ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ.
6) ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್.
7) ಎಲ್ಲಾ ವಿಭಾಗಾಧಿಕಾರಿಗಳು.
8) ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
9) ಎಲ್ಲಾ ಜಿಲ್ಲಾಧಿಕಾರಿಗಳು.
10) ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
11) ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು.
12) ಪತ್ರಿಕಾ ಪ್ರಕಟಣೆ / ಹೆಚ್ಚುವರಿ ಪ್ರತಿಗಳು.

<u>ಮಾಹಿತಿಗಾಗಿ:</u>

1) ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸು ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ (ರಾಜಕೀಯ)



ದಿನಾಂಕ: 21-11-2023, ಮಂಗಳವಾರ

ಸಮಯ : ಮಧ್ಯಾಹ್ನ 1.00 ಗಂಟೆ.

ಸ್ಥಳ : ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಂಗಳೂರು.

ಶ್ರೀ ಗುರುರಾಜ ಗುಣಾರ್ಯರು ಪ್ರತಿಷ್ಠಾಪಿಸಿದ

ಶ್ರೀ ಗುರುರಾಜ ಗುಣಾರ್ಯ ಪ್ರಾಥಮಿಕ ಶಾಲೆ

ಸುವರ್ಣ ಸಂಭ್ರಮ - ಪೂರ್ವ ಸಿದ್ಧತಾ ಕಾರ್ಯಕ್ರಮ

ದಿನಾಂಕ: 21.11.2023, ಮಂಗಳವಾರ

ಮುಂಜಾನೆ ಗಂಟೆ 10.00 ಗಂಟೆಗೆ ಸರಿಯಾಗಿ

ಸ್ಥಳ : ಬ್ರಾಂಡೆಡ್ ಹಾಲ್, ಪಿಂಡಾಸೊರ್ಲ, ಮಂಗಳೂರು

ಅಧ್ಯಕ್ಷರು

ಶ್ರೀ ಸುಧ್ಧರಾಮಯ್ಯ

ಗೌರವ ಅತಿಥಿಗಳು

ಶ್ರೀಮತಿ ಸುಮಲತಾ ಸುಬ್ಬಾರಾಯನ್

ಶ್ರೀ ಟಿ. ಜಿ. ವೀರಮುಷಾಲ್

ಮುಖ್ಯ ಅತಿಥಿಗಳು

ಶ್ರೀ ಡಿ. ರಾಜೀವ್ ಚಂದ್ರಶೇಖರ್

ಶ್ರೀ ಹುಂಡಾಲ ನಾಗ, ಪೈಲ್

ಶುಭಾಶಯ ಅತಿಥಿಗಳು:

ಶ್ರೀ ಬಾಷಣಗಾರ ಶಿವಲಿಂಗಪ್ಪ ಹೊನಗಲ್ಲ

ಶ್ರೀ ಎಸ್.ಸಿ. ಜಾವರ್ ಫರೀದ್

ಅಧ್ಯಕ್ಷರು

ಶ್ರೀ ರಜ್ಜಾಕ್ ಬಪ್ಪಳಿಗೆ

మొదటి వరుసలో కూర్చున్నవారు/నిలబడి ఉన్నవారు

శ్రీ ఎం. వెంకయ్య
ఎం.పి. రాజ్యసభ
మాజీ కేంద్ర సమాచార శాఖ మంత్రి

శ్రీ ఎం.ఎం. కుమారస్వామి గారు
ఎం.పి. లోక్‌సభ
మాజీ కేంద్ర ఉక్కు మంత్రి

శ్రీ జి.వి. రావు
మాజీ ఎం.పి.
ఆంధ్రప్రదేశ్ రాష్ట్ర మాజీ ఆర్థిక మంత్రి

శ్రీ ఎం.వి. వెంకటేష్
ఎం.పి. లోక్‌సభ
మాజీ కేంద్ర మంత్రి

శ్రీ వి.ఎం.ఎస్. మూర్తి గారు
మాజీ ఎం.పి.
రాజ్యసభ ఛైర్మన్ మాజీ కార్యదర్శి

శ్రీ జి.వి. హర్షకుమార్
మాజీ ఎం.పి. లోక్‌సభ
మాజీ కేంద్ర మంత్రి

శ్రీ ఎం.వి. మైసూరారెడ్డి
ఎం.పి. రాజ్యసభ
మాజీ ఎం.పి. లోక్‌సభ

శ్రీ వి. ఆనందరావు
మాజీ ఎం.పి. లోక్‌సభ
మాజీ కేంద్ర మంత్రి

శ్రీ ఎం. వి. వి. ఎస్. మూర్తి
మాజీ ఎం.పి. లోక్‌సభ
మాజీ కేంద్ర మంత్రి

మొదటి వరుసలో కూర్చున్నవారు/నిలబడి ఉన్నవారు

శ్రీ ఎస్. వెంకయ్య
ఎం.పి. రాజ్యసభ
మాజీ కేంద్ర మంత్రి

శ్రీ ఎం.ఎం. కుమార్ మంగళం
ఎం.పి. లోక్‌సభ
మాజీ కేంద్ర మంత్రి

శ్రీ ఎం. రఘు
ఎం.పి. లోక్‌సభ
మాజీ కేంద్ర మంత్రి

[illegible] శ్రీ [illegible]
[illegible]

శ్రీ ఎస్. ఎ. అయ్యర్
మాజీ ఎం.పి. లోక్‌సభ
మాజీ కేంద్ర మంత్రి

శ్రీ వి. శ్రీ
మాజీ ఎం.పి. లోక్‌సభ
మాజీ కేంద్ర మంత్రి

శ్రీ ఎం. ఎస్. ఎస్. ఎం.
మాజీ ఎం.పి. లోక్‌సభ
మాజీ కేంద్ర మంత్రి

శ్రీ ఎం. ఎస్. ఎస్. ఎం.
మాజీ ఎం.పి. లోక్‌సభ
మాజీ కేంద్ర మంత్రి

శ్రీ ఎం. ఎస్. ఎస్. ఎం.
మాజీ ఎం.పి. లోక్‌సభ
మాజీ కేంద్ర మంత్రి

శ్రీ ఎం. ఎస్. ఎస్. ఎం.
మాజీ ఎం.పి. లోక్‌సభ
మాజీ కేంద్ర మంత్రి

శ్రీ ఎం. ఎస్. ఎస్. ఎం.
మాజీ ఎం.పి. లోక్‌సభ
మాజీ కేంద్ర మంత్రి

శ్రీ ఎం. ఎస్. ఎస్. ఎం.
మాజీ ఎం.పి. లోక్‌సభ
మాజీ కేంద్ర మంత్రి

శ్రీ ఎం. ఎస్. ఎస్. ఎం.
మాజీ ఎం.పి. లోక్‌సభ
మాజీ కేంద్ర మంత్రి



ಅನುಬಂಧ-16

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 34 ಹೆಚ್‌ಪಿಎ 2024

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:12.09.2024

ಸುತ್ತೋಲೆ

ವಿಷಯ: ಸರ್ಕಾರದ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಯನ್ನು ಶಿಷ್ಟಾಚಾರ ರೀತ್ಯ ಮುದ್ರಿಸುವ ಬಗ್ಗೆ.

ಉಲ್ಲೇಖ: 1. ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಹಕ್ಕು ಬಾಧ್ಯತಾ ಸಮಿತಿಯ ಸಭೆ ನಡವಳಿಯ ದಿನಾಂಕ:02.02.2024.

2. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 34 ಹೆಚ್‌ಪಿಎ 2018 (1), ದಿನಾಂಕ:16.04.2019.

3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 04 ಹೆಚ್ಚಬ್ಲ್ಯೂಪಿ 2020, ದಿನಾಂಕ:22.03.2021.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದವತಿಯಿಂದ ಆಯೋಜಿಸುವ ಕಾರ್ಯಕ್ರಮಗಳ ಎಲ್ಲಾ ಆಹ್ವಾನ ಪತ್ರಿಕೆಗಳಲ್ಲಿ ಸಂವಿಧಾನದತ್ತ ಹುದ್ದೆಯಲ್ಲಿರುವ ಗಣ್ಯರನ್ನು ಆಹ್ವಾನಿಸುವಾಗ ಕರ್ನಾಟಕ ರಾಜ್ಯದಲ್ಲಿ ಅನುಸರಿಸಬೇಕಾದ ಆದ್ಯತಾ ಸೂಚಿಪಟ್ಟಿಯನ್ವಯ ಮುದ್ರಿಸದೇ ಶಿಷ್ಟಾಚಾರ ಉಲ್ಲಂಘನೆಯಾಗಿರುವ ಪ್ರಕರಣಗಳ ಕುರಿತಂತೆ ದಿನಾಂಕ:02.08.2024ರಂದು ನಡೆದ ಮಾನ್ಯ ವಿಧಾನ ಪರಿಷತ್ತಿನ ಹಕ್ಕು ಭಾದ್ಯತಾ ಸಮಿತಿ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿರುತ್ತದೆ. ಅದರಂತೆ ಮಾನ್ಯ ಸಭಾಪತಿಯವರು / ಸಭಾಧ್ಯಕ್ಷರು / ಮುಖ್ಯ ಮಂತ್ರಿಗಳು / ಉಪ ಮುಖ್ಯಮಂತ್ರಿಗಳು / ಮಾಜಿ ಪ್ರಧಾನ ಮಂತ್ರಿಗಳು ಹಾಗೂ ಕೇಂದ್ರ ಮತ್ತು ರಾಜ್ಯ ಸಚಿವರ ಸ್ಥಾನಮಾನಗಳ ವ್ಯತ್ಯಾಸ ಕುರಿತು ಅತ್ಯಂತ ಗಂಭೀರವಾಗಿ ಪರಿಗಣಿಸುವುದರೊಂದಿಗೆ ತೀವ್ರ ಅಸಮಾಧಾನವನ್ನು ಮಾನ್ಯ ಸಮಿತಿಯು ವ್ಯಕ್ತಪಡಿಸಿರುತ್ತದೆ.

ಸರ್ಕಾರದ ಸಭೆ ಸಮಾರಂಭಗಳ ಆಯೋಜನೆಯಲ್ಲಿ ಪಾಲಿಸಬೇಕಾದ ಶಿಷ್ಟಾಚಾರ ಕುರಿತು ಸಮಗ್ರ ಸೂಚನೆಗಳನ್ನು ಉಲ್ಲೇಖ(2)ರಲ್ಲಿ ನೀಡಲಾಗಿರುತ್ತದೆ ಹಾಗೂ ಸರ್ಕಾರದ ಕಾರ್ಯಕ್ರಮದ ಎಲ್ಲಾ ಆಹ್ವಾನ ಪತ್ರಿಕೆಗಳಲ್ಲಿ ಆಹ್ವಾನಿತರ ಹೆಸರುಗಳನ್ನು ಉಲ್ಲೇಖ (3)ರ ಆದೇಶನುಸಾರ ಮುದ್ರಿಸುವುದು ಕಡ್ಡಾಯವಾಗಿರುತ್ತದೆ.

ಪ್ರಸ್ತುತ ಸರ್ಕಾರದ ಸಭೆ ಸಮಾರಂಭಗಳ ಆಯೋಜನೆಯಲ್ಲಿ ಪಾಲಿಸಬೇಕಾದ ಶಿಷ್ಟಾಚಾರ ಕುರಿತಾದ ಸಮಗ್ರ ಸೂಚನೆಗಳು ಹಾಗೂ ರಾಜ್ಯ ಆದ್ಯತಾ ಸೂಚಿ ಪಟ್ಟಿಯು ಸ್ಪಷ್ಟವಾಗಿದ್ದಾಗ್ಯೂ ಸಹ ಸರ್ಕಾರಿ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಗಳನ್ನು ಮುದ್ರಿಸುವಲ್ಲಿ ಶಿಷ್ಟಾಚಾರ ಉಲ್ಲಂಘನೆ ಪ್ರಕರಣಗಳು ಮೇಲಿಂದ ಮೇಲೆ ಪುನರಾವರ್ತನೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರದ ಆಯೋಜಿತ ಕಾರ್ಯಕ್ರಮಗಳಲ್ಲಿ ಆಹ್ವಾನ ಪತ್ರಿಕೆಗಳನ್ನು ಮುದ್ರಿಸುವಲ್ಲಿ ಉಲ್ಲೇಖದ ಸರ್ಕಾರದ ಸುತ್ತೋಲೆ/ ಆದೇಶಗಳಲ್ಲಿನ ಸೂಚನೆ & ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಈ ಮೂಲಕ ಸೂಚಿಸಿದೆ ಹಾಗೂ ಮುಂದಿನ ದಿನಗಳಲ್ಲಿ ಆಹ್ವಾನ ಪತ್ರಿಕೆಗಳನ್ನು ಮುದ್ರಿಸುವಲ್ಲಿ ಶಿಷ್ಟಾಚಾರ ಉಲ್ಲಂಘನೆ ಪ್ರಕರಣಗಳು ಮರುಕಳಿಸಿದಲ್ಲಿ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಮತ್ತು ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿಸಿ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದೆಂದು ತಿಳಿಸಲಾಗಿದೆ.

(ಡಾ.ಶಾಲಿನಿ ರಜನೀಶ್)
ಸರ್ಕಾರದ ಮುಖ್ಯ ಕಾರ್ಯದರ್ಶಿ

ಪ್ರತಿಗಳು:

1. ಸರ್ಕಾರದ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
2. ರಾಜ್ಯದ ಎಲ್ಲಾ ಪ್ರಾದೇಶಿಕ ಆಯುಕ್ತರುಗಳು
3. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. ಬೆಂಗಳೂರು
4. ರಾಜ್ಯದ ಎಲ್ಲಾ ಇಲಾಖಾ ಮುಖ್ಯಸ್ಥರುಗಳು
5. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು
6. ಎಲ್ಲಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
7. ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರು
8. ಎಲ್ಲಾ ಜಿಲೇಯ ಉಪ ವಿಭಾಗಾಧಿಕಾರಿಗಳು
9. ಎಲ್ಲಾ ಪಟ್ಟಣ ಪಂಚಾಯತಿ / ಪುರಸಭಾ / ನಗರಸಭೆಯ ಆಯುಕ್ತರುಗಳು ಆಯಾ ಜಿಲ್ಲಾಧಿಕಾರಿಗಳ ಮೂಲಕ
10. ರಾಜ್ಯದ ಎಲ್ಲಾ ತಾಲ್ಲೂಕಿನ ತಹಶೀಲ್ದಾರರು.
11. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ.
12. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್.
13. ಶಾಖಾ ರಕ್ಷಾ ಕಡತ / ಬಿಡಿ ಪ್ರತಿಗಳು

ನಿಯಮ 174

ದಿನಾಂಕ:23.03.2020

ರವರಿಗೆ,
ಸನ್ಮಾನ್ಯ ಸಭಾಪತಿಗಳು,
ಕರ್ನಾಟಕ ವಿಧಾನ ಪರಿಷತ್ತು,
ವಿಧಾನ ಸೌಧ, ಬೆಂಗಳೂರು.

ಮಾನ್ಯರೇ,

ಕೆ. ಪ್ರತಾಪಚಂದ್ರ ಶೆಟ್ಟಿ
ಸಭಾಪತಿ
ಕರ್ನಾಟಕ ವಿಧಾನ ಪರಿಷತ್ತು

ವಿಷಯ : ನಿಯಮ 174ರ ಅಡಿಯಲ್ಲಿ ನಮಗೆ ವಿಷಯ ಮಂಡಿಸಲು ಅನುಮತಿಗಾಗಿ ಕೆಳಕಂಡ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಲು ಅನುಮತಿ ಕೊಡಬೇಕಾಗಿ ವಿನಂತಿ.

****

ದಿನಾಂಕ:20.03.2020ರ ಪ್ರಜಾವಾಣಿ ಕನ್ನಡ ದಿನಪತ್ರಿಕೆ ಪುಟ 6ರಲ್ಲಿ **"ಕೆ.ಪಿ.ಎಸ್.ಸಿ ಮರುಪರಿಶೀಲನಾ ಅರ್ಜಿ ಸಲ್ಲಿಸುವ ನಿರ್ಧಾರ ಸರಿಯಲ್ಲ"** ಎಂಬ ಶೀರ್ಷಿಕೆಯಡಿಯಲ್ಲಿ 2011ನೇ ಸಾಲಿನ 362 ಗೆಜೆಟೆಡ್ ಪ್ರೋಬೇಷನರಿ ಹುದ್ದೆಗಳಿಗೆ ನಡೆದ ನೇಮಕಾತಿ ವಿಷಯದಲ್ಲಿ ಕೋರ್ಟ್‌ಗೆ ರಾಜ್ಯ ಸರ್ಕಾರ ಮರುಪರಿಶೀಲನಾ ಅರ್ಜಿ ಸಲ್ಲಿಸಲಿದೆ ಎಂದು ಕಾನೂನು ಸಚಿವರ ಹೇಳಿಕೆಗೆ ಪ್ರಜಾವಾಣಿ ಪತ್ರಿಕೆಯ ಸಂಪಾದಕೀಯ ಸ್ವಯಂ ಪ್ರೇರಿತವಾಗಿ **"ಕಾನೂನು ಸಚಿವರ ಮತ್ತು ಸದಸ್ಯರ"** ವಾದ ನೋಡಿ **ಅಳಬೇಕೋ, ನಗಬೇಕೋ** ಎಂದು ಗೊತ್ತಾಗುತ್ತಿಲ್ಲ" ಎಂದು ಅಣಕ ಮಾಡಿದ್ದು, ಮುಂದುವರೆದಂತೆ, **"ಕೋರ್ಟ್ ತೀರ್ಪನ್ನು ನೀಡಿದ ನಂತರವು ಸಚಿವರು ಈ ಅಭ್ಯರ್ಥಿಗಳ ಪರವಾಗಿ ನಿಲ್ಲುವುದು ಸಮಾಜಕ್ಕೆ ಬೇರೆಯದೆ ಸಂದೇಶ ರವಾನಿಸುತ್ತದೆ". "ಮುಖ್ಯ ಪರೀಕ್ಷೆ ಹಾಗೂ ಸಂದರ್ಶನದಲ್ಲಿ ನಡೆದ ಅಕ್ರಮಗಳ ಬಗ್ಗೆ ಸಿ.ಐ.ಡಿ ತನ್ನ ವರದಿಯಲ್ಲಿ ದಾಖಲೆ ಸಮೇತ ವಿವರಿಸಿದೆ".**

ಯಾರೋ ಮಾಡಿದ ತಪ್ಪಿಗೆ 362 ಅಭ್ಯರ್ಥಿಗಳ ಭವಿಷ್ಯ ಬಲಿಯಾಗಿದೆ. ಪ್ರಾಮಾಣಿಕವಾಗಿ ಪರೀಕ್ಷೆ ಬರೆದು ಆಯ್ಕೆಯಾದವರಿಗೆ ಅನ್ಯಾಯವಾಗಿದೆ. ಭ್ರಷ್ಟಾಚಾರ ನಡೆಸಿದ್ದಾರೆ ಎಂಬ ಆರೋಪ ಎದುರಿಸುತ್ತಿರುವ ಕೆ.ಪಿ.ಎಸ್.ಸಿ ಸದಸ್ಯರು, ಅಧಿಕಾರಿಗಳ ಮೇಲೆ ಈವರೆಗೆ ಯಾವುದೇ ಕ್ರಮ ಆಗಿಲ್ಲ. ಹೀಗಾಗಿ ಈ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲು ಸರ್ಕಾರ ಮುಂದಾಗಬೇಕು **ಎಂದು ವಿಧಾನ ಪರಿಷತ್ತಿನ ಕೆಲವು ಸದಸ್ಯರು ವಾದಿಸಿರುವುದು ನೈತಿಕ ದಿವಾಳಿಯ ದ್ಯೋತಕ.**

ಈ ಪ್ರಕರಣದಲ್ಲಿ ಕೆಲವು ಸದಸ್ಯರು ಮತ್ತು ಅಧಿಕಾರಿಗಳು ಕೈ ಜೋಡಿಸಿಯೇ ಅಕ್ರಮ ಎಸಗಿದ್ದಾರೆ. ಅಕ್ರಮ ಎಸಗಿಸಿದ ಸದಸ್ಯರ ಮತ್ತು ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸುವ ಬದಲು ಅಕ್ರಮ ನಡೆಸಿರುವವರ ಪರ ನಿಲ್ಲುವುದು ಯಾರೂ ಮೆಚ್ಚುವ ವಿಷಯವಲ್ಲ. **"ವಿಧಾನ ಪರಿಷತ್ ಸದಸ್ಯರ ಘನತೆಗೆ ಅದು ತಕ್ಕುದಾದ ನಡವಳಿಕೆಯು ಅಲ್ಲ"**. ವಿಧಾನ ಮಂಡಲದ ಉಭಯ ಸದನದಲ್ಲಿ ವರದಿ ಮಂಡಿಸಿದೆ. ಆದರೆ ಸಂವಿಧಾನ ವಿಧಿ 323 (2) ಅನ್ವಯ ಸದಸ್ಯರಿಗೆ ಈ ವಿಷಯದ ಮೇಲೆ ಅವಕಾಶ ಸಿಕ್ಕಿಲ್ಲ. ಆದ್ದರಿಂದ ಈ ನೇಮಕಾತಿಯನ್ನು ಪುನರ್ ಪರಿಶೀಲಿಸಬೇಕೆಂದು ಕೆಲವು ಸದಸ್ಯರು ವಾದಿಸಿದ್ದರು. **ಇದು ಕೂಡ ಅತ್ಯಂತ ಬಾಲಿಷ ವಾದ.**

ಈ ಮೇಲೆ ಹೇಳಿರುವ ಪ್ರಜಾವಾಣಿ ಪತ್ರಿಕೆಯ ಸ್ವಯಂ ಪ್ರಕಟಣೆಯು, ಸಾರ್ವಜನಿಕವಾಗಿ ಅವಹೇಳನಕಾರಿ ಪ್ರಕಟಣೆಯಾಗಿದ್ದು, ಇದರಿಂದ ವಿಧಾನ ಪರಿಷತ್ ಸದಸ್ಯರ ಹಾಗೂ ಸದನದ ಗೌರವ ಹಾಗೂ ಹಕ್ಕುಚ್ಯುತಿ ಉಂಟಾಗಿರುವುದರಿಂದ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳಾದ 174 ಅಡಿಯಲ್ಲಿ ದಿನಾಂಕ:23.03.2020ರಂದು ಸದನದಲ್ಲಿ ಪ್ರಸ್ತಾಪಿಸಲು ಅನುಮತಿಯನ್ನು ಕೋರುತ್ತೇವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿಗಳು,

1) (S.R.Patil)

(2)

(3)

(4) (R.Chowdareddy)

(5)

(T.A.Sharavana)

ಕಮಬಂಧ-18

ಡಾ॥ ಚಂದ್ರಶೇಖರ ಬಿ. ಪಾಟೀಲ

ಎಂ.ಬಿ.ಬಿ.ಎಸ್.

ಶಾಸಕರು ಕರ್ನಾಟಕ ವಿಧಾನ ಪರಿಷತ್

ಈಶಾನ್ಯ ಪದವೀಧರರ ಕ್ಷೇತ್ರ

Dr. Char[redacted]r B. Patil

M.B.B.

Membe[redacted]egislative Counc

No[redacted] Constituency

Ref.No MLC/HBD/2024-25/150 **Date: 28.08.2024**

ಇವರಿಗೆ,

ಸನ್ಮಾನ್ಯ ಶ್ರೀ ಬಸವರಾಜ ಹೊರಟ್ಟಿ ರವರು,
ಮಾನ್ಯ ಸಭಾಪತಿಗಳು ವಿಧಾನ್ ಪರಿಷತ್,
ಕರ್ನಾಟಕ ಸರ್ಕಾರ ವಿಧಾನಸೌಧ,
ಬೆಂಗಳೂರು.

ಕಾರ್ಯದರ್ಶಿಗಳು
ಬಸವರಾಜ ಹೊರಟ್ಟಿ
ಸಭಾಪತಿ
ವಿಧಾನ ಪರಿಷತ್ತು
ಕರ್ನಾಟಕ ಸರ್ಕಾರ
13/9/24

ಮಾನ್ಯರೇ,

ವಿಷಯ: ಮಾನ್ಯ ಜಿಲ್ಲಾಧಿಕಾರಿ ಬೀದರ, ಯೋಜನಾ ವ್ಯವಸ್ಥಾಪಕರು ನಿರ್ಮಿತಿ ಕೇಂದ್ರ ಬೀದರ ಹಾಗೂ ಕೀರಿಯ ಅಧಿಯಂತರರುಗಳು ಮತ್ತು ಗುತ್ತಿಗೇದಾರರುಶಿಷ್ಟಾಚಾರ ಉಲ್ಲಂಘನೆ ಮಾಡಿರುವವರ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಕುರಿತು.

—******—

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯರ ದಯಾಪರರ ಸನ್ನಿಧಿಯಲ್ಲಿ ಸಾದರಪಡಿಸುವುದೇನೆಂದರೆ, 2023-24 ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಯೋಜನೆ ಅಡಿಯಲ್ಲಿ ಹುಮನಾಬಾದ ಪಟ್ಟಣದಲ್ಲಿ ದಿನಾಂಕ 27.08.2024 ರಂದು ಸಮಯ ಬೆಳಿಗ್ಗೆ 11:00 ಗಂಟೆಗೆ ವಿವಿಧ ಕಾಮಗಾರಿಗಳ ಅಡಿಗಲ್ಲು ಸಮಾರಂಭ ನಿಗದಿಪಡಿಸಿದ್ದು ಅದರ ಕಾರ್ಯಕ್ರಮಕ್ಕೆ ಆಹ್ವಾನದ ಬಗ್ಗೆ ದಿನಾಂಕ 24.08.2024 ರಂದು ಯೋಜನೆ ವ್ಯವಸ್ಥಾಕರು ನಿರ್ಮಿತಿ ಕೇಂದ್ರ ಬೀದರ ಕಛೇರಿಯ ಸಿಬ್ಬಂದಿ ಶ್ರೀ ನಾವೇದ ರವರು ನನ್ನ ಕಛೇರಿಗೆ ಬಂದು ಪತ್ರ ನೀಡಿರುತ್ತಾರೆ.

ಹಾಗೆಯೇ ಸರ್ಕಾರದ ಯಾವುದೇ ಉದ್ಘಾಟನೆ/ಶಂಕುಸ್ಥಾಪನೆ/ಲೋಕಾರ್ಪಣೆ, ಕಾರ್ಯಕ್ರಮಕ್ಕೆ ಸರ್ಕಾರದ ಚುನಾಯಿತ ಜನಪ್ರತಿನಿಧಿಗಳನ್ನು ರಾಜ್ಯ ಅಧ್ಯಕ್ಷಾ ಸೂಚಿ ಪಟ್ಟಿ ಮತ್ತು ಇತರೆ ಸನೀವೇಶಗಳನ್ನು ಆಧರಿಸಿ ಕೇಂದ್ರ ಸಚಿವರುಗಳು, ರಾಜ್ಯ ಸಂಪುಟ ದರ್ಜೆ ಸಚಿವರು, ರಾಜ್ಯ ಸಚಿವರು, ಸಂಸತ್ ಮತ್ತು ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳಿಗೆ ಆಹ್ವಾನಿಸಿ ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸತಕ್ಕದು ಎಂದು ಈಗಾಗಲೆ ರಾಜ್ಯ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸೂಇ34 ಹೆಚ್‌ಪಿಎ 2018 (1) ದಿನಾಂಕ: 16-04-2019ರಂದು ಹೊರಡಿಸಲಾಗಿದ್ದು, ಅದರಂತೆ ಈ ಹಿಂದೆ ಮಾನ್ಯ ಬೀದರ ಜಿಲ್ಲಾಧಿಕಾರಿ ರವರು ಶಿಷ್ಟಾಚಾರ ಬಗ್ಗೆ ವಿಶೇಷವಾಗಿ ತರಬೇತಿ ಹಾಗೂ ಮಾಹಿತಿ ನೀಡಿ ಸರಕಾರದ ಸೂತ್ರೋಲೆಯಂತೆ ಚುನಾಯಿತ ಜನಪ್ರತಿನಿಧಿಯವರನ್ನು 7 ದಿವಸಗಳ ಮುಂಚಿತವಾಗಿ ಪೂರ್ವಾನುಮತಿ ಪಡೆದು ಕಾರ್ಯಕ್ರಮಕ್ಕೆ ಖುದ್ದಾಗಿ ಸಂಬಂದಪಟ್ಟ ಇಲಾಖೆಯ ಮುಖ್ಯಸ್ಥರು ಹೋಗಿ ಆಹ್ವಾನ ನೀಡುವಂತೆ ಸೂಚಿಸಿರುತ್ತಾರೆ.

ಮುಂದುವರೆದು ನಮ್ಮ ಆಪ್ತ ಸಹಾಯಕರು ಸದರಿ ಸಿಬ್ಬಂದಿ ರವರಿಗೆ ದಿನಾಂಕ 26.08.2024 ರಂದು ಸಂಜೆ ದೂರವಾಣಿ ಮೂಖಾಂತರ ಮಾತನಾಡಿ ದಿನಾಂಕ 27.08.2024 ರಂದು ಹುಮನಾಬಾದ ಪಟ್ಟಣದಲ್ಲಿ ನಡೆಯಲಿರುವ ಕಾರ್ಯಕ್ರಮದ ಬಗ್ಗೆ ವಿಚಾರಿಸಿದಾಗ ನಾನು ಹುಮನಾಬಾದನ ಗೌರವಾನ್ವಿತ ಶಾಸಕರ ಕಛೇರಿಗೆ ಕೇಳಿದಾಗ ಇನ್ನು ಯಾವುದೇ ಸ್ಪಷ್ಟನೆ ಬಂದಿಲ್ಲ ಹಿಗಾಗಿ ಸದರಿ ಅಡಿಗಲ್ಲು ಪೂಜೆ ಕಾರ್ಯಕ್ರಮದ ಬಗ್ಗೆ ನಿಖರ ಮಾಹಿತಿ ಇಲ್ಲ ಎಂದು ನಿರ್ಮಿತಿ ಕ್ರೇಂದ್ರದ ಸಿಬ್ಬಂದಿಯಾದ ಶ್ರೀ ನಾವೇದ ರವರು ನಮ್ಮ ಆಪ್ತ ಸಹಾಯಕರಿಗೆ ತಿಳಿಸಿರುತ್ತಾರೆ. ಆದರೆ ಸದರಿ ನಿರ್ಮಿತಿ ಕ್ರೇಂದ್ರದ ಸಿಬ್ಬಂದಿ ರವರು ದಿನಾಂಕ 27.08.2024 ಬೆಳಿಗ್ಗೆ 11.00 ನನ್ನ ಪೂರ್ವನಿಯೋಜಿತ ಕಾರ್ಯಕ್ರಮಕ್ಕೆ ಹೋಗುತ್ತಿರುವ ಸಂದರ್ಭದಲ್ಲಿ ಸದರಿ ಸಿಬ್ಬಂದಿ ರವರು ನನ್ನ ಕಛೇರಿಗೆ ಆಗಮಿಸಿ ಸದರಿ ಅಡಿಗಲ್ಲು ಪೂಜೆ ಕಾರ್ಯಕ್ರಮವು ಆಯೋಜನೆ ಮಾಡಲಾಗಿದೆ ಎಂದು ಕಾರ್ಯಕ್ರಮ ಪ್ರಾರಂಭವಾಗಲು ಕೇವಲ 15 ನಿಮಿಷಗಳ ಮುಂಚೆ ತಿಳಿಸಿರುವುದು ವಿಷಾದನೀಯ ಸಂಗತಿ, ಜೊತೆಗೆ ನಾನು ನನ್ನ ಪೂರ್ವನಿಯೋಜಿತ ಕಾರ್ಯಕ್ರಮಕ್ಕೆ ಹೋಗಬೇಕಾಗಿರುವದರಿಂದ ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗದೇ ಇರುವ ಪ್ರಯುಕ್ತ ಅಡಿಗಲ್ಲು ಸಮಾರಂಭ ಮುಂದೂಡಲು ವಿನಂತಿಸಿದರು ಕೂಡಾ ಸ್ಥಳೀಯ ಶಾಸಕರು, ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಸೇರಿಕೊಂಡು ಅಡಿಗಲ್ಲು ಪೂಜೆ ಕಾರ್ಯಕ್ರವು ನೇರವೇರಿಸಿ, ಚುನಾಯಿತ ಶಾಸಕರು (ವಿಧಾನ ಪರಿಷತ್) ರವರಿಗೆ ತೋರಿಸಿದ ಅಗೌರವದ ಜೊತೆಗೆ ಸರಕಾರದ ಶಿಷ್ಟಾಚಾರ ಉದ್ದೇಶ ಪೂರ್ವಕವಾಗಿ ಉಲ್ಲಂಘನೆ ಮಾಡಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ.

ಹಾಗೆಯೆ ದಿನಾಂಕ: 29-07-2024 ರಂದು ಹುಮನಾಬಾದ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎನ್.ಹೆಚ್-9 ರಿಂದ ಚಿಟಗುಪ್ಪ ವಾಯ ಶಾಮಕಾಬಾದ ಕೀ.ಮೀ 6.40 ರಿಂದ 9.20 ವರೆಗೆ ರಸ್ತೆ ಸುಧಾರಣೆ ಕಾಮಗಾರಿಯ ಅಂದಾಜು ಮೊತ್ತ 293 ಲಕ್ಷ ರೂಪಾಯಿ ಹಾಗೂ ಮಾಡಗೂಳ ಗ್ರಾಮದಿಂದ ಮಂಗಲಗಿ ಗ್ರಾಮಕ್ಕೆ ಹೊಗುವ ರಸ್ತೆ ಕೀ.ಮೀ 0.00 ರಿಂದ 1.5 ವರೆಗೆ ರಸ್ತೆ ಸುಧಾರಣೆ ಕಾಮಗಾರಿ ಅಂದಾಜು ಮೊತ್ತ 447.47 ಲಕ್ಷ ರೂಪಾಯಿಯ ಎರಡು ಕಾಮಗಾರಿಗಳು ಹಾಗೂ ಗುತ್ತಿಗೆದಾರರು, ಕ್ಷೇತ್ರದ ವಿಧಾನ ಪರಿಷತ್ ಸದಸ್ಯರ ಗಮನಕ್ಕೆ ತರದೆ ಕೇವಲ ಶಾಸಕರಿಗೆ ಮಾತ್ರ ಆಮಂತ್ರಿಸಿ ಕಾಮಗಾರಿಗಳ ಭೂಮಿ ಪೂಜೆಸಲ್ಲಿಸಿ ವಿಧಾನ ಪರಿಷತ್ ಸದಸ್ಯರಿಗೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಸೇರಿಕೊಂಡು ಅಗೌರವ ತೋರಿಸಿ ಶಿಷ್ಟಾಚಾರ ಉಲ್ಲಂಘನೆ ಮಾಡಿರುತ್ತಾರೆ ಎಂದು ಸಂಬಂಧ ಪಟ್ಟ ಇಲಾಖೆಯ ಸಚಿವರಿಗೂ ಹಾಗೂ ಜಿಲ್ಲೇಯ ಜಿಲ್ಲಾಧಿಕಾರಿಗಳಿಗೆ ಶಿಷ್ಟಾಚಾರ ಉಲ್ಲಂಘನೆ ಮಾಡಿರುತ್ತಾರೆ, ಇವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮನವಿ ಪತ್ರ ಸಲ್ಲಿಸಿರುತ್ತೇನೆ. ಪತ್ರ ಸಂಖ್ಯೆ: **Ref.No MLC/HBD/2024-25/143 Date: 29.07.2024** ಯಾಗಿದ್ದು, ಸುಮಾರು 30 ದಿನಗಳಾದರು ಕೂಡ ಸಂಬಂಧಪಟ್ಟವರ ಮೇಲೆ ಯಾವುದೇ ರೀತಿಯಾದಂತ ಕಾನೂನಿನ ಪ್ರಕಾರ ಸೂಕ್ತ ಕ್ರಮಗೈಗೊಳ್ಳದ ಇರುವುದರಿಂದ ದಿನಾಂಕ:27-08-2024ರಂದು ನಡೆದ ಕಾರ್ಯಕ್ರಮದಲ್ಲಿಯೂ ಕೂಡ ಶಿಷ್ಟಾಚಾರ ಉಲ್ಲಂಘನೆ ಮಾಡಿರುತ್ತಾರೆ. ಮುಂದುವರೆದು ದಯಾಳುಗಳಾದ ತಾವುಗಳು ಇನ್ನಾದರೂ ಕಾನೂನಿನ ಚೌಕಟ್ಟಿನ ಅಡಿಯಲ್ಲಿ ಕ್ರಮಕ್ಕೆಗೊಳ್ಳದಿದ್ದರೆ, ಜನಪ್ರತಿನಿಧಿಗಳಿಗೆ ತೋರುವ ಅಗೌರವ ಹಾಗೂ ಶಿಷ್ಟಾಚಾರ ಉಲ್ಲಂಘನೆ ಹಾಗೇಯೆ ಮುಂದುವರೆಯುತ್ತದ ಎಂದು ಮನನೋಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದ್ದರಿಂದ ಈ ಮೇಲ್ಕಂಡ ಎರಡು ಇಲಾಖೆಯ ಕಾರ್ಯಕ್ರಮದ ಶಿಷ್ಟಚಾರ ಉಲ್ಲಂಘನೆಯ ಕಾರಣೀಭೂತರಾದ ಜಿಲ್ಲಾಧಿಕಾರಿಗಳು ಬೀದರ, ಮಾನ್ಯ ಕಾರ್ಯನಿರ್ವಾಹಕ ಅಧಿಯಂತರರು ಬೀದರ, ಸಹಾಯಕ ಕಾರ್ಯನಿರ್ವಾಹಕ ಅಧಿಯಂತರರು ಹುಮನಾಬಾದ ಹಾಗೂ ಕೀರಿಯ ಅಧಿಯಂತರರು ಲೋಕೋಪಯೋಗಿ ಇಲಾಖೆ ಹುಮನಾಬಾದ, ಹಾಗೂ ನಿರ್ಮಿತಿ ಕೇಂದ್ರ ಇಲಾಖೆಯ ಮಾನ್ಯ ಯೋಜನಾ ವ್ಯವಸ್ಥಾಪಕರು ನಿರ್ಮಿತಿ ಕೇಂದ್ರ ಬೀದರ ಹಾಗೂ ಕೀರಿಯ ಅಧಿಯಂತರರುಗಳು ಹುಮನಾಬಾದ ಹಾಗೂ ಗುತ್ತಿಗೇದಾರರ ಮೇಲೆ ಕಾನೂನಿನ ಪ್ರಕಾರ ಸೂಕ್ತ ಕ್ರಮಕ್ಕೆಗೊಳ್ಳಬೇಕಾಗಿ ಈ ಮೂಲಕ ತಮ್ಮಲ್ಲಿ ವಿನಂತಿಸುತ್ತೇನೆ.

"ಗೌರವಗಳೊಂದಿಗೆ"

ಸಭಾಪತಿ ವಿಧಾನ ಪರಿಷತ್ ಕರ್ನಾಟಕ
ಪತ್ರ ಸಂಖ್ಯೆ 444
ದಿನಾಂಕ 13/09/24

(ಡಾ॥ ಚಂದ್ರಶೇಖರ ಬಿ.ಪಾಟೀಲ್)

ಕೊಠಡಿ ಸಂಖ್ಯೆ: 2003, ಶಾಸಕರ ಭವನ-5, ಬೆಂಗಳೂರು - 560 001.

ವಾಸ: ನಂ 22/146, ಹುಮನಾಬಾದ್ ಟೌನ್ ನಿಲ್ದಾಣದ ಹತ್ತಿರ [redacted]

ಅನುಬಂಧ -19.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

"ಅಭಿವೃದ್ಧಿ ಭವನ" ಐವಾನ-ಎ-ಶಾಹಿ, ಕಲಬುರಗಿ-585102
ದೂರವಾಣಿ: (08472) - 256767,239556,255564, ಫ್ಯಾಕ್ಸ್ : (08472) 227527
Email: hkadbgulb@gmail.com Website: hkrdb.kar.nic.in

ಸಂಖ್ಯೆ: ಕೆ.ಕೆ.ಆರ್.ಡಿ.ಬಿ/ಸಿಬ್ಬಂದಿ/03/2023-24 ದಿನಾಂಕ: 26.11.2024

ಇವರಿಗೆ,

ಮಾನ್ಯ ಸರ್ಕಾರದ ಕಾರ್ಯದರ್ಶಿಗಳು,
ಯೋಜನಾ ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ,
ಬೆಂಗಳೂರು.

ಮಾನ್ಯರೇ

ವಿಷಯ: ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳನ್ನು ಸರ್ಕಾರಿ ಕಾರ್ಯಕ್ರಮಕ್ಕೆ ಆಹ್ವಾನಿಸದೇ ಶಿಷ್ಟಾಚಾರ ಉಲ್ಲಂಘಿಸಿರುವ ಕುರಿತು.

ಉಲ್ಲೇಖ: 1) ತಮ್ಮ ಕಾರ್ಯಾಲಯದ ಪತ್ರ ಸಂಖ್ಯೆ: ಪಿ.ಡಿ.ಎಸ್/122/ಹೆಚ್.ಕೆ.ಡಿ/ 2024 ದಿನಾಂಕ: 22.10.2024.

2) ಮಂಡಳಿಯ ಪತ್ರ ಸಮ ಸಂಖ್ಯೆ ದಿನಾಂಕ: 25.10.2024.

3) ಜಿಲ್ಲಾಧಿಕಾರಿಗಳು, ಬೀದರ ಇವರ ಪತ್ರ ಸಂಖ್ಯೆ: ಕಂದಾಯ/ಸಿಬ್ಬಂದಿ/ಸಿ. ಆರ್-62/2024-25 ದಿನಾಂಕ: 25.11.2024.

4) ತಮ್ಮ ಕಾರ್ಯಾಲಯದ ಪತ್ರ ಸಂಖ್ಯೆ: ಪಿ.ಡಿ.ಎಸ್/122/ಹೆಚ್.ಕೆ.ಡಿ/ 2024 ದಿನಾಂಕ: 22.11.2024.

~ @ ~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ(01) ರ ಮೂಲಕ ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಾದ ಶ್ರೀ ಭೀಮರಾವ್ ಪಾಟೀಲ್ ಹಾಗೂ ಡಾ॥ ಚಂದ್ರಶೇಖರ. ಬಿ. ಪಾಟೀಲ್ ಅವರುಗಳು ಮಾನ್ಯ ಸಭಾಪತಿಯವರಿಗೆ ಸಲ್ಲಿಸಿರುವ ಹಕ್ಕುಚ್ಯುತಿ ಸೂಚನಾ ಪತ್ರದಲ್ಲಿ ಕೋರಿರುವ ಅಂಶಗಳಿಗೆ ಸಂಬಂಧಪಟ್ಟವರಿಂದ ವಿವರಣೆಯನ್ನು ಪಡೆದು ವಿಸ್ತೃತ ವರದಿಯನ್ನು ನೂಕ್ತ ದಾಖಲೆಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಿರುತ್ತಿರಿ.

ಅದರಂತೆ ಉಲ್ಲೇಖಿತ(02) ರ ಮೂಲಕ ಉಲ್ಲೇಖಿತ(01) ರಲ್ಲಿ ನಿರ್ದೇಶಿಸಿರುವಂತೆ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಂಡು, ಕೈಗೊಂಡಿರುವ ಕ್ರಮದ ಕುರಿತು ವಿವರವಾದ ವರದಿಯನ್ನು ಸಂಪೂರ್ಣ ದಾಖಲೆಗಳೊಂದಿಗೆ ಮೂರು ದಿನಗಳ ಒಳಗಾಗಿ ಮಂಡಳಿಗೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು, ಬೀದರ ಇವರಿಗೆ ತಿಳಿಸಲಾಗಿರುತ್ತದೆ.

ಮು.ತಿ.ನೋ

ಉಲ್ಲೇಖಿತ(03) ರ ಮೂಲಕ ಜಿಲ್ಲಾಧಿಕಾರಿಗಳು, ಬೀದರ ಇವರು ವರದಿಯನ್ನು ಸಲ್ಲಿಸಿದ್ದು, ವಿವರಗಳು ಈ ಕೆಳಗಿನಂತಿರುತ್ತವೆ.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ 2023-24 ನೇ ಸಾಲಿನ ಯೋಜನೆ ಅಡಿಯಲ್ಲಿ ಹುಮನಾಬಾದ ಪಟ್ಟಣದಲ್ಲಿ ದಿನಾಂಕ: 27.08.2024ರಂದು ಬೆಳಗ್ಗೆ: 11.00 ಗಂಟೆಗೆ ನಿಗಧಿಪಡಿಸಲಾಗಿದ್ದ ವಿವಿಧ ಕಾಮಗಾರಿಗಳ ಅಡಿಗಲ್ಲು ಕಾರ್ಯಕ್ರಮದ ಸಮಾರಂಭ ಕುರಿತು ದಿನಾಂಕ: 26.08.2024 ರಂದು ನಿರ್ಮಿತಿ ಕೇಂದ್ರದ ಸಿಬ್ಬಂದಿಯೊಂದಿಗೆ ಕಾರ್ಯಕ್ರಮದ ಬಗ್ಗೆ ಮಾಹಿತಿ ಕೋರಲಾಗಿದ್ದು, ಸರಿಯಾದ ಮಾಹಿತಿ ನೀಡದೆ ಉದ್ದೇಶಪೂರ್ವಕವಾಗಿ ಮರುದಿನ ನಡೆದ ಕಾರ್ಯಕ್ರಮಕ್ಕೆ ಹಾಜರಾಗದಂತೆ ತಡೆಯುವ ಮೂಲಕ ಶಿಷ್ಟಾಚಾರ ಉಲ್ಲಂಘನೆ ಮಾಡಿರುವವರ ಮೇಲೆ ನಿಯಮಾವಳಿ ರೀತ್ಯಾ ಕ್ರಮ ಕೈಗೊಳ್ಳಬೇಕೆಂದು ಕೋರಿರುವ ಪ್ರಕರಣವನ್ನು ಹಕ್ಕುಬಾಧ್ಯತಾ ಸಮಿತಿಯು ದಿನಾಂಕ: 28.11.2024 ರಂದು ನಡೆಯಲಿರುವ ಸಭೆಯಲ್ಲಿ ಪರಿಶೀಲಿಸಲಿರುತ್ತದೆ, ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ಮಾನ್ಯರ ಗಮನಕ್ಕೆ ತರಲಾಗಿದೆ.

1. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳ ಯೋಜನೆ ಅಡಿಯಲ್ಲಿ ಹುಮನಾಬಾದ ತಾಲೂಕಿನಲ್ಲಿ ದಿನಾಂಕ: 27.08.2024 ರಂದು ಅಡಿಗಲ್ಲು ಸಮಾರಂಭಕ್ಕೆ ಶಾಸಕರು ವಿಧಾನಸಭೆ ಹಾಗೂ ವಿಧಾನ ಪರಿಷತ್ ಇವರಿಗೆ ಆಹ್ವಾನಿಸಲಾಗಿರುತ್ತದೆ.

2. ಹುಮನಾಬಾದ ತಾಲೂಕಿನ ನಿರ್ಮಿತಿ ಕೇಂದ್ರದ ಅಭಿಯಂತರರು ತಮ್ಮ ಪತ್ರ ಸಂಖ್ಯೆ: ನಿ.ಕೆ.ಐ/ಕೆ.ಕೆ.ಆರ್.ಡಿ.ಬಿ/ಕಾಮಗಾರಿ/ಸಿ.ಆರ್/2024-25 ದಿನಾಂಕ: 22.08.2024 ರ ಮೂಲಕ ಮಾನ್ಯ ಶಾಸಕರು ವಿಧಾನ ಪರಿಷತ್ ಇವರಿಗೆ, ದಿನಾಂಕ: 27.08.2024 ರಂದು ಬೆಳಿಗ್ಗೆ 11.00 ಗಂಟೆಗೆ ನಿಗದಿಪಡಿಸಲಾದ ಸಮಾರಂಭ ಕಾರ್ಯಕ್ರಮಕ್ಕೆ ಆಹ್ವಾನಿಸಿ ಮಾನ್ಯ ಶಾಸಕರ ಆಪ್ತ ಸಹಾಯಕರ ಸಹಿ ಪಡೆದಿರುತ್ತಾರೆ.

3. ಮಾನ್ಯ ಶಾಸಕರು, ವಿಧಾನ ಪರಿಷತ್ ಇವರು, ನಿರ್ಮಿತಿ ಕೇಂದ್ರ ಹುಮನಾಬಾದ ತಾಲೂಕಿನ ಅಭಿಯಂತರರಾದ ಶ್ರೀ ನಾವೇದ್ ಇವರಿಗೆ ಕಾರ್ಯಕ್ರಮದ ಒಂದು ದಿವಸ ಮುಂಚೆ ದೂರವಾಣಿ ಮೂಲಕ ಅಡಿಗಲ್ಲು ಸಮಾರಂಭದ ಮಾಹಿತಿ ನೀಡದಿರುವ ಕುರಿತು ಉಲ್ಲೇಖಿಸಲಾಗಿರುತ್ತದೆ, ಸದರಿ ಅಭಿಯಂತರರಿಗೆ ಮಾನ್ಯ ವಿಧಾನ ಪರಿಷತ್ ಸದಸ್ಯರು ದೂರವಾಣಿ ಮೂಲಕ ಕಾರ್ಯಕ್ರಮದ ವಿವರಣೆ ಕೋರಿದಾಗ, ಮಾನ್ಯ ಶಾಸಕರು, ವಿಧಾನ ಸಭೆ ಹುಮನಾಬಾದ ಮತಕ್ಷೇತ್ರ ಇವರು ಅಡಿಗಲ್ಲು ಸಮಾರಂಭದ ನಿಖರ ಮಾಹಿತಿ ನೀಡದಿರುವುದಕ್ಕೆ ಸ್ಪಷ್ಟವಾಗಿ ಸಮಾರಂಭದ ವಿವರ ನೀಡಿರುವುದಿಲ್ಲ.

4. ನಂತರ ಸಮಾರಂಭದ ದಿವಸ ಅಡಿಗಲ್ಲು ಸಮಾರಂಭದ ಕುರಿತು ದೂರವಾಣಿ ಮೂಲಕ ನಿರ್ಮಿತಿ ಕೇಂದ್ರದ ಅಧಿಕಾರಿಗಳು ಮಾನ್ಯ ವಿಷಧಾನಪರಿಷತ್ ಸದಸ್ಯರಿಗೆ ತಿಳಿಸಿರುತ್ತಾರೆ.

5. ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರ ವಿರುದ್ಧ ಅನೇಕ ದೂರುಗಳು ಇದ್ದು ಸಮಗ್ರ ತನಿಖೆ ನಡೆಸಲಾಗುತ್ತಿದೆ, ಸದ್ಯ ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರು ಅಪಘಾತದಲ್ಲಿ ಮರಣಹೊಂದಿರುವುದರಿಂದ ವಿವರಣೆ ಪಡೆಯಲು ಸಾಧ್ಯವಾಗಿರುವುದಿಲ್ಲ.

6. ನಿರ್ಮಿತಿ ಕೇಂದ್ರದ ಹುಮಾನಾದ ತಾಲೂಕಿನ ಅಭಿಯಂತರರು ಜಿಲ್ಲಾಧಿಕಾರಿಗಳ ಕಛೇರಿ ಕಾರಣ ಕೆಳಿ ನೋಟೀಸಿಗೆ ಉತ್ತರಿಸುತ್ತ, ದಿನಾಂಕ: 27.08.2024 ರಂದು ಮಾನ್ಯ ವಿಧಾನ ಪರಿಷತ್ ಸದಸ್ಯರಿಗೆ ಸಮಾರಂಭದ ಮಾಹಿತಿ ನೀಡಿರುವುದಾಗಿ ತಿಳಿಸಿರುತ್ತಾರೆ.

ಜಿಲ್ಲಾಧಿಕಾರಿಗಳು, ಬೀದರ ಇವರು ಪತ್ರ ಸಂಖ್ಯೆ: ಕಂದಾಯ/ಸಿಬ್ಬಂದಿ/ಸಿ.ಆರ್/2024-25 ದಿನಾಂಕ: 09.10.2024 ರ ಮೂಲಕ ಜಿಲ್ಲಾಧಿಕಾರಿಗಳ ಶಿಷ್ಟಾಚಾರ ಪಾಲನೆ ಸುತ್ತೋಲೆ ಅನ್ವಯ ಜಿಲ್ಲೆಯ ಅನುಷ್ಠಾನ ಅಧಿಕಾರಿಗಳಿಗೆ ಸೂಕ್ತ ಶಿಷ್ಟಾಚಾರ ಪಾಲನೆ ಮಾಡಲು ಸೂಚಿಸಲಾಗಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ.

ಪ್ರಯುಕ್ತ, ಉಲ್ಲೇಖಿತ(03) ರ ವರದಿ ಹಾಗೂ ಅದರ ಅಡಕಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮಾನ್ಯರ ಅವಗಾಹನೆಗಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

ಲಗತ್ತು: (06 ಪುಟಗಳು)

ಕಾರ್ಯದರ್ಶಿ. 26/11/2024

ಕೆ.ಕೆ.ಆರ್.ಡಿ.ಬಿ, ಕಲಬುರಗಿ.

ಪ್ರತಿಯನ್ನು: ಜಿಲ್ಲಾಧಿಕಾರಿಗಳು ಬೀದರ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೀದರ ಜಿಲ್ಲೆ , ಬೀದರ್
Office of the Deputy Commissioner, Bidar District, Bidar-585401, Karnataka
Phone: 08482-225409 Fax: 08482-225262 Email: dco.bidar@gmail.com

ಸಂಖ್ಯೆ:ಕಂದಾಯ/ಸಿಬ್ಬಂದಿ/ಸಿಆರ್-62/2024-25 ದಿನಾಂಕ: 25.11.2024.

ಇವರಿಗೆ,

ಮಾನ್ಯ ಕಾರ್ಯದರ್ಶಿಗಳು,
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳ,
'ಅಭಿವೃದ್ಧಿ ಭವನ' ಐವಾನ-ಎ-ಶಾಹಿ ಎದುರುಗಡೆ,
ಕಲಬುರಗಿ.

ಮಾನ್ಯರೆ,

ವಿಷಯ:-2023-24 ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳ ಯೋಜನೆ ಅಡಿಯಲ್ಲಿ ಹುಮನಾಬಾದ ತಾಲೂಕಿಗೆ ಮಂಜೂರಾದ ಕಾಮಗಾರಿ ಪ್ರಾರಂಭಿಸಲು ಮಾನ್ಯ ವಿಧಾನ ಪರಿಷತ್ ಶಾಸಕರಿಗೆ ಆಹ್ವಾನಿಸಲು ಶಿಷ್ಟಾರ ಉಲ್ಲಂಘನೆ ಮಾಡಿರುವ ಕುರಿತು.

ಉಲ್ಲೇಖ:-1)ಮಾನ್ಯ ಕಾರ್ಯದರ್ಶಿಗಳು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳ ಕಲಬುರಗಿ ಇವರ ಪತ್ರ ಸಂಖ್ಯೆ:ಕೆ.ಕೆ.ಆರ್.ಡಿ.ಬಿ/ಸಿಬ್ಬಂದಿ/03/2023-24/6772. ದಿನಾಂಕ:25.10.2024.

2)ಯೋಜನಾ ವ್ಯವಸ್ಥಾಪಕರು ನಿರ್ಮಿತಿ ಕೇಂದ್ರ ಬೀದರ ಇವರ ಪತ್ರ ಸಂಖ್ಯೆ:ನಿಕೆಬ/ ಕೆಕೆಆರ್‌ಡಿಬಿ/ಕಾಮಗಾರಿ/ಸಿಆರ್- /2024-25. ದಿನಾಂಕ: 22.08.2024.

3)ಜಿಲ್ಲಾಧಿಕಾರಿಗಳ ಕಛೇರಿ ಶಿಷ್ಟಾಚಾರ ಪಾನೆ ಪತ್ರ ಸಂಖ್ಯೆ: ಕಂದಾಯ/ಸಿಬ್ಬಂದಿ/ ಸಿಆರ್- /2024-25. ದಿನಾಂಕ:09.10.2024.

* * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಪತ್ರದ ಮೂಲಕ 2023-24 ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳ ಯೋಜನೆ ಅಡಿಯಲ್ಲಿ ಮಂಜೂರಾದ ಹುಮನಾಬಾದ ಪಟ್ಟಣದಲ್ಲಿ ದಿನಾಂಕ: 27.08.2024 ರಂದು ಬೆಳಗ್ಗೆ 11.00 ಗಂಟೆಗೆ ನಿಗದಿಪಡಿಸಲಾಗಿದ್ದ ವಿವಿಧ ಕಾಮಗಾರಿಗಳ ಅಡಿಗಲ್ಲು ಸಮಾರಂಭ ಕಾರ್ಯಕ್ರಮದ ದಿನಾಂಕ: 26.08.2024 ನಿರ್ಮಿತಿ ಕೇಂದ್ರದ ಸಿಬ್ಬಂದಿಯೊಂದಿಗೆ ಕಾರ್ಯಕ್ರಮದ ಮಾಹಿತಿ ಕೋರಲಾಗಿದ್ದು, ಸದರಿಯವರು ಸರಿಯಾದ ಮಾಹಿತಿ ನೀಡದೆ ಉದ್ದೇಶಪೂರ್ವಕವಾಗಿ ಮರುದಿನ ನಡೆದ ಕಾರ್ಯಕ್ರಮಕ್ಕೆ ಹಾಜರಾಗದಂತೆ ತಡೆಯುವ ಮೂಲಕ ಶಿಷ್ಟಾಚಾರ ಉಲ್ಲಂಘನೆ ಮಾಡಿರುವವರ ಮೇಲೆ ನಿಯಮಾವಳಿ ರೀತ್ಯ ಕ್ರಮ ಕೈಗೊಳ್ಳಬೇಕೆಂದು ಕೋರಿರುವ ಪ್ರಕರಣವನ್ನು ಹಕ್ಕು ಬಾಧ್ಯತಾ ಸಮಿತಿಗೆ ಒದಗಿಸಲು ಸೂಚಿಸಿರುತ್ತಾರೆ, ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ಮಾನ್ಯರ ಗಮನಕ್ಕೆ ತರಲಾಗಿದೆ.

1. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳ ಯೋಜನೆ ಅಡಿಯಲ್ಲಿ ಹುಮನಾಬಾದ ತಾಲೂಕಿನಲ್ಲಿ ದಿನಾಂಕ:27.08.2024 ರಂದು ಅಡಿಗಲ್ಲು ಸಮಾರಂಭಕ್ಕೆ ಶಾಸಕರು ವಿಧಾನಸಭೆ ಹಾಗೂ ವಿಧಾನ ಪರಿಷತ್ ಇವರಿಗೆ ಆಹ್ವಾನಿಸಲಾಗಿರುತ್ತದೆ.

2. ಹುಮನಾಬಾದ ತಾಲೂಕಿನ ನಿರ್ಮಿತಿ ಕೇಂದ್ರದ ಅಭಿಯಂತರರು ಉಲ್ಲೇಖ (2) ಪತ್ರದನ್ವಯ ಮಾನ್ಯ ಶಾಸಕರು ವಿಧಾನ ಪರಿಷತ್ ಇವರಿಗೆ ದಿನಾಂಕ: 27.08.2024 ರಂದು ಬೆಳ್ಗೆ 11.00 ಗಂಟೆಗೆ ನಿಗದಿಪಡಿಸಲಾದ ಸಮಾರಂಭ ಕಾರ್ಯಕ್ರಮಕ್ಕೆ ಆಹ್ವಾನಿಸಿ ಮಾನ್ಯ ಶಾಸಕರ ಆಪ್ತ ಸಹಾಯಕರ ಸಹಿ ಪಡೆದಿರುತ್ತಾರೆ.
3. ಮಾನ್ಯ ಶಾಸಕರು ವಿಧಾನ ಪರಿಷತ್ ಇವರು ನಿರ್ಮಿತಿ ಕೇಂದ್ರ ಹುಮನಾಬಾದ ತಾಲೂಕಿನ ಅಭಿಯಂತರರಾದ ಶ್ರೀ ನಾವೇದ್ ಇವರಿಗೆ ಕಾರ್ಯಕ್ರಮದ ಒಂದು ದಿವಸ ಮುಂಚೆ ದೂರವಾಣಿ ಮೂಲಕ ಅಡಿಗಲ್ಲು ಸಮಾರಂಭದ ಮಾಹಿತಿ ನೀಡಿರುವ ಕುರಿತು ಉಲ್ಲೇಖಿಸಲಾಗಿರುತ್ತದೆ. ಸದರಿ ಅಭಿಯಂತರರಿಗೆ ಮಾನ್ಯ ವಿಧಾನ ಪರಿಷತ್ ಸದಸ್ಯರು ದೂರವಾಣಿ ಮೂಲಕ ಕಾರ್ಯಕ್ರಮದ ವಿವರಣೆ ಕೋರಿದಾಗ ಮಾನ್ಯ ಶಾಸಕರು ವಿಧಾನ ಸಭೆ ಹುಮನಾಬಾದ ಮತಕ್ಷೇತ್ರ ಇವರು ಅಡಿಗಲ್ಲು ಸಮಾರಂಭದ ನಿಖರ ಮಾಹಿತಿ ನೀಡದಿರುವುದಕ್ಕೆ ಸ್ಪಷ್ಟವಾಗಿ ಸಮಾರಂಭದ ವಿವರ ನೀಡಿರುವುದಿಲ್ಲ.
4. ನಂತರ ಸಮಾರಂಭದ ದಿವಸ ಅಡಿಗಲ್ಲು ಸಮಾರಂಭದ ಕುರಿತು ದೂರವಾಣಿ ಮೂಲಕ ನಿರ್ಮಿತಿ ಕೇಂದ್ರದ ಅಧಿಕಾರಿಗಳು ಮಾನ್ಯ ವಿಧಾನಪರಿಷತ್ ಸದಸ್ಯರಿಗೆ ತಿಳಿಸಿರುತ್ತಾರೆ.
5. ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರ ವಿರುದ್ಧ ಅನೇಕ ದೂರುಗಳು ಇದ್ದು ಸಮಗ್ರ ತನಿಖೆ ನಡೆಸಲಾಗುತ್ತಿದೆ, ಸದ್ಯ ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರು ಅಪಘಾತದಲ್ಲಿ ಮರಣಹೊಂದಿರುವುದರಿಂದ ವಿವರಣೆ ಪಡೆಯಲು ಸಾಧ್ಯವಾಗಿರುವುದಿಲ್ಲ.
6. ನಿರ್ಮಿತಿ ಕೇಂದ್ರದ ಹುಮನಾಬಾದ ತಾಲೂಕಿನ ಅಭಿಯಂತರರು ಜಿಲ್ಲಾಧಿಕಾರಿಗಳ ಕಛೇರಿ ಕಾರಣ ಕೇಳಿ ನೋಟೀಸಿಗೆ ಉತ್ತರಿಸುತ್ತ, ದಿನಾಂಕ: 27.08.2024 ರಂದು ಮಾನ್ಯ ವಿಧಾನ ಪರಿಷತ್ ಸದಸ್ಯರಿಗೆ ಸಮಾರಂಭದ ಮಾಹಿತಿ ನೀಡಿರುವುದಾಗಿ ತಿಳಿಸಿರುತ್ತಾರೆ.

ಉಲ್ಲೇಖ (3) ರ ಜಿಲ್ಲಾಧಿಕಾರಿಗಳ ಶಿಷ್ಟಾಚಾರ ಪಾಲನೆ ಸುಸ್ತೋಲೆ ಅನ್ವಯ ಜಿಲ್ಲೆಯ ಅನುಷ್ಠಾನ ಅಧಿಕಾರಿಗಳಿಗೆ ಸೂಕ್ತ ಶಿಷ್ಟಾಚಾರ ಪಾಲನೆ ಮಾಡಲು ಸೂಚಿಸಲಾಗಿರುತ್ತದೆ.

ಸದರಿ ವಿಷಯವನ್ನು ಮಾನ್ಯರ ಅವಗಾಹನೆಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ

ಅಡಕ: ( ).

ಜಿಲ್ಲಾಧಿಕಾರಿ. 25/11/24

ಬೀದರ ಜಿಲ್ಲೆ, ಬೀದರ

ನಿರ್ದೇಶಕರ ಕಛೇರಿ, ಬೀದರ
ಜಿಲ್ಲಾ ಪಂಚಾಯತ ಆವರಣ, ಬೀದರ

ದಿನಾಂಕ: 23/04/2024

ಸಂ:ನಿಕಚ/ಕೆಳಆಂದಿಪ/ಜಾಮೀನು/ಟಿಆರ್- /2024-25

ಇವರಿಗೆ,
ಮಾನ್ಯರೇ/ಮಾನ್ಯರೆ
ಶ್ರೀ ಶ್ರೀಮಂತ ಬಿ. ಪಟ್ಟೇದಾರ
ಎಲ್ಲಾ ಪಕ್ಷಕಾರರಿಗೆ ತಿಳಿಸಿದೆ ಹುಬನಗಾಂವ

ಮಾನ್ಯರೆ,

ವಿಷಯ :-ವಿವಿಧ ಜಾಮೀನುದಾರರಿಗೆ ಅಡಿಗಲ್ಲು ಸಮಾದಂಡ ಜಾಮೀನ್ಯನ್ನು ನಿಗದಿಪಡಿಸಿರುವ ಬಗ್ಗೆ.

ಉಲ್ಲೇಖ :ಮಾನ್ಯ ಜಾಮೀನು, ಹುಮನಾಬಾದ ವಿಭಾಗದವರ ಕೋರ್ಟ ಬೀದರ, ರವರ ಪತ್ರ ಸಂ:ಜಿ/ಹು.ಸಿ/87/2024-25 ದಿನಾಂಕ: 18.04.2024.

* * * * *

ಮೇಲ್ಕಂಡ ವಿಷಯ ಮತ್ತು ಉಲ್ಲೇಖದನ್ವಯ ಸದರಿ ಕಛೇರಿಯಿಂದ 2023-24ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಮಂಜೂರಾದ ವಿವಿಧ ಜಾಮೀನುದಾರರಿಗೆ ಅಡಿಗಲ್ಲು ಸಮಾದಂಡ ಜಾಮೀನ್ಯನ್ನು ನಿಗದಿಪಡಿಸಿರುವ ಬಗ್ಗೆ ಪತ್ರವನ್ನು ಬರೆಯಲಾಗಿದೆ. ಸದರಿ ಪತ್ರದಲ್ಲಿ ಜಾಮೀನುದಾರರಿಗೆ ಅಡಿಗಲ್ಲು ಸಮಾದಂಡ ಜಾಮೀನ್ಯನ್ನು ನಿಗದಿಪಡಿಸಿರುವ ಬಗ್ಗೆ ಪತ್ರವನ್ನು ಬರೆಯಲಾಗಿದೆ. ಪಟ್ಟಾದಲ್ಲಿರುವ ಗ್ರಂಥಾಲಯದ ಮುಂದೆ ಜಾಮೀನು ಪಡೆಯಲು (ಬಾಂಡ್) ಪತ್ರ ಇದಾ ವಿಧಾನ ಮೊದಲಾದ ಮಾಹಿತಿ(ಫೋಟೊ & ಆಧಾರ್) ಸಹಿತ ಖುದ್ದಾಗಿ ಅಡಿಗಲ್ಲು ಸಮಾದಂಡ ಜಾಮೀನ್ಯನ್ನು ದಿನಾಂಕ: 27.04.2024 ರಂದು ಬೆಳಿಗ್ಗೆ 11.00 ಗಂಟೆಗೆ ಬೀದರ ಜಿಲ್ಲಾ ಪಂಚಾಯತ ಕಛೇರಿಗೆ. ಬಂದು ತಮ್ಮ ಈ ಮೂಲಕ ತಮಗೆ ಸದರಿ ಜಾಮೀನ್ಯನ್ನು ಗಂಧಾಸಾಕ್ಷಿದಾರರ ಅಫಿದಾವಿತ್ ಪಡೆಯಲು ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಸಮಾದಂಡಾಧಿಕಾರಿ
ನಿರ್ದೇಶಕರ ಕಛೇರಿ, ಬೀದರ

O/C

Received
24/04/24

Scanned with OKEN Scanner

ದಿನಾಂಕ: 29.08.2024

ಇವರಿಗೆ,
ಮಾನ್ಯ ಜಿಲ್ಲಾಧಿಕಾರಿಗಳು
ಬೀದರ

ಮಾನ್ಯರೇ

ವಿಷಯ: ಕಾರಣ ಕೇಳುವ ನೋಟಿಸಿಗೆ ಉತ್ತರಿಸುವ [redacted] ಸಿಬ್ಬಂದಿ/ಸಿಆರ್-
ಉಲ್ಲೇಖ: ತಮ್ಮ ಕಚೇರಿಯ ಕಾರಣ ಕೇಳುವ ನೋಟಿ[redacted]
62/2024-25/753 ದಿನಾಂಕ: 28.08.2024.

[redacted]

ಮೇಲ್ಕಂಡ ವಿಷಯಕ್ಕೆ ಹಾಗೂ ಉಲ್ಲೇಖಿತ [redacted]ರಂತೆ, ನಾನು ಪವೀದ್ ಅಹಮದ್ ಇಂಜಿನಿಯರ್ ವಿಮೋಚಿ ಕೇಂದ್ರ ಬೀದರ, ತಮ್ಮ [redacted] ಯೋಜನೆಯಡಿಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಯೋಜನೆಯಡಿ [redacted]ಸುತ್ತಿರುವ ಕಾಮಗಾರಿಗಳಿಗೆ ಅಡಿಗಲ್ಲು ಸಮಾರಂಭದ ಕುರಿತು ಮಾನ್ಯ ಶಾಸಕರ [redacted]ದಿನಾಂಕ: 18.08.2024ರಂದು ತಿಳಿಸಿರುತ್ತಾರೆ, ದಿನಾಂಕ 18.08.2024 ರಿಂದ 22.08.2024ರವ[redacted] ವಿಮೋಚಿ ಕೇಂದ್ರದ ಯೋಜನಾ ವ್ಯವಸ್ಥಾಪಕರಾದ ಶ್ರೀ ಓಂಕಾರ ಕೇಟಿಕರ ರವರಿಗೆ ಫಲೇ [redacted] ಸಮಾರಂಭ ಕಾರ್ಯಕ್ರಮ ಹಾಗೂ ಮಾನ್ಯ ವಿಧಾನ ಪರಿಷತ ಸದಸ್ಯರಿಗೆ ಭೇಟಿಯಾಗಿ [redacted]ಂತೆ ಗಮನಕ್ಕೆ ತಂದಿರುತ್ತೇನೆ ಆದರೂ ನಂತ ಅವರು ಯಾವುದೇ ಪ್ರತಿಕ್ರಿಯೆ ನೀಡಿರುವುದಿ[redacted] ವಿಷಯವಿಷಯ ಪರಿಹರಿಸುತ್ತಾರೆ ಮತ್ತು ದಿನಾಂಕ 22.08.2024ರಂದು ನಾನು ಅವರಿಗೆ ದೂರವಾ[redacted]ದಾಗ ನಿಮ್ಮ ಕೆಲಸ ಹಾಗೂ ನಿಮ್ಮ ಕಾರ್ಯಕ್ರಮ ನಿಮಗೆ ಗೊತ್ತು, ನಾನು ಯೋಜನಾ [redacted]ರ ಹುದ್ದೆಯು ನಿರ್ವಹಿಸುತ್ತಿಲ್ಲ ಎಂದು ಉತ್ತರ ನೀಡಿರುತ್ತಾರೆ.

ನಂತರ ಕಾಮಗಾರಿಗಳ ಅಡಿಗಲ್ಲು ಸಮಾರಂಭ [redacted] ಮಾನ್ಯ ಶಾಸಕರಿಗೆ ದಿನಾಂಕ: 23.08.2024ರಂದು ಗಮನಕ್ಕೆ ತಂದು ಕಾರ್ಯಕ್ರಮದ ದಿ[redacted]ನ್ನು ಮುಂದೂಡಿಸಲು ಮನವಿ ಮಾಡಿರುತ್ತೇನೆ, ಆದರೂ ದಿನಾಂಕವನ್ನು ಮುಂದೂಡಿಸಲು ಅವರು [redacted]ರುತ್ತಾರೆ.

ಆದಕಾರಣ ದಿನಾಂಕ: 24.08.2024ರಂದು ಮಾನ್ಯ ಶ್ರೀ [redacted]ಶೇಖರ ಬಿ. ಪಾಟೀಲ್ ವಿಧಾನ ಪರಿಷತ ಸದಸ್ಯರು ಹಾಗೂ ಶ್ರೀ ಭೀಮರಾವ ಬಿ. ಪಾಟೀಲ್ [redacted]ಗೃಹ ಕಚೇರಿಗೆ ಹೋಗಿ, ಅವರ ಆಪ್ತರಿಗೆ ಭೇಟಿ ಮಾಡಿ ಆಹ್ವಾನ ಪತ್ರ ನೀಡಿರುತ್ತೇನೆ. ಶ್ರೀ ಭೀಮರಾವ ಬಿ. ಪಾಟೀಲ್ ವಿಧಾನ ಪರಿಷತ ಸದಸ್ಯರ ಆಪ್ತರು ನನಗೆ ಮಾನ್ಯ ವಿಧಾನ ಪರಿಷತ ಸದಸ್ಯರಿಗೆ ದೂರವಾಣಿ ಕರೆ ಮಾಡಲು ಸೂಚಿಸಿರುತ್ತಾರೆ, ತದನಂತರ ದೂರವಾಣಿ ಮುಖಾಂತರ ಮಾತನಾಡಿದಾಗ ಮಾನ್ಯ ವಿಧಾನ ಪರಿಷತ ಸದಸ್ಯರು ಕಾರ್ಯಕ್ರಮದ ಪ್ರಯುಕ್ತ ಎಲ್ಲಾ ಮಾಹಿತಿಯನ್ನು ಪಡೆದಿರುತ್ತಾರೆ.

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಅಂಚೆ ಪತ್ರ ಸಂಖ್ಯೆ - [redacted]
3 1 AUG 2024
OFFICE OF THE
DEPUTY COMMISSIONER
BIDAR - [redacted]

Scanned with OKEN Scanner

[redacted] ಸದಸ್ಯರು ಭೀಮರಾವ ಬಿ ಪಾಟೀಲ್ ಆಪ್ತರು ದಿನಾಂಕ: 27.08.2024ರಂದು [redacted] ಅಡಿಗಲ್ಲು, ಸಮಾರಂಭದ ಎಲ್ಲಿ ಮತ್ತು ಯಾವಾಗ ಎಂದು ಕೇಳಿರುವ ಪ್ರಯುಕ್ತ [redacted]ವೆ.

ಸದರಿ ವಿಷಯದ [redacted] ಸ್ಥಾಪಕರು ಮಾನ್ಯ ವಿಧಾನ ಪರಿಷತ ಸದಸ್ಯರಿಗೆ ಭೇಟಿಯಾಗಿ ಅಡಿಗಲ್ಲು ಸಮಾರಂಭ [redacted] ಈ ರೀತಿ ತಪ್ಪಾಗಿರುತ್ತಿರಲಿಲ್ಲ ಹಾಗೂ ನಮ್ಮ ತಪ್ಪಿಗೆ ಕ್ಷಮೋಯಾಚಿಸಿ ಇನ್ನು [redacted]ದ ಯಾವುದೇ ತಪ್ಪಾಗದಂತೆ ನೋಡಿಕೊಳ್ಳುತ್ತೇನೆ ಎಂದು ಈ ಮೂಲಕ ತಮ್ಮ ದಯಾ[redacted] ಸಲ್ಲಿಸುತ್ತೇವೆ.

ವಂದನೆಗಳೊಂದಿಗೆ,

ಲಗತ್ತು,
1) ಕಾರ್ಯಕ್ರಮದ ಭಾವಚಿತ್ರ
2) ಆಹ್ವಾನ ಪತ್ರದ ಪ್ರತಿ.

ತಮ್ಮ ವಿಶ್ವಾಸಿ

ಮಹ್ಮದ ನವೀದ ಅಹ್ಮದ
ಅಧಿಯಂತರರು
ನಿರ್ಮಿತಿ ಕೇಂದ್ರ, ಬೀದರ

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೀದರ್ ಜಿಲ್ಲೆ, ಬೀದರ್

Office of the Deputy Commissioner, Bidar District, Bidar-585401, Karnataka
Phone: 08482-225409 Fax: 08482-225262 Email: deo.bidar@gmail.com

ಸಂಖ್ಯೆ: ಕಂ/ಸಿಬ್ಬಂದಿ/ಸಿಆರ್- /2024-25 ದಿನಾಂಕ: 09.10.2024

ಇವರಿಗೆ

ಬೀದರ ಜಿಲ್ಲೆಯ

ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ,

ಮಾನ್ಯರೇ,

ವಿಷಯ: ಜಿಲ್ಲೆಯಲ್ಲಿ ಸರ್ಕಾರದ ಸಭೆ ಸಮಾರಂಭಗಳ ಆಯೋಜನೆಯಲ್ಲಿ ಪಾಲಿಸಬೇಕಾದ ಶಿಷ್ಟಾಚಾರ ಕುರಿತು ಸಮಗ್ರ ಸೂಚನೆಗಳನ್ನು ಹೊರಡಿಸುವ ಕುರಿತು.

ಉಲ್ಲೇಖ: ಮಾನ್ಯ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 34 ಹೆಚ್‌ಪಿಎ 2018(1) ಬೆಂಗಳೂರು ದಿನಾಂಕ: 16.04.2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸುತ್ತೋಲೆಯ ಮೂಲಕ ಸರ್ಕಾರವು ಸಭೆ ಸಮಾರಂಭಗಳ ಆಯೋಜನೆಯಲ್ಲಿ ಪಾಲಿಸಬೇಕಾದ ಶಿಷ್ಟಾಚಾರದ ಬಗ್ಗೆ ರಾಜ್ಯ ಸರ್ಕಾರದ ವತಿಯಿಂದ ನಡೆಸುವ ರಾಜ್ಯ/ಜಿಲ್ಲಾ/ತಾಲ್ಲೂಕು ಮಟ್ಟದ ಸಮಾರಂಭಗಳಿಗೆ ಮತ್ತು ರಾಜ್ಯದ ಧನ ಸಹಾಯದಿಂದ ಸ್ಥಾಪಿಸಲ್ಪಟ ರಾಜ್ಯ ಮಟ್ಟದ ಸಹಕಾರಿ ಸಂಘಗಳು ಹಾಗೂ ಸರ್ಕಾರದ ಸ್ವಾಮ್ಯಕೊಳ್ಳಪಡುವ ಎಲ್ಲಾ ಸಂಸ್ಥೆಗಳು ನಡೆಸುವ ಕಾರ್ಯಕ್ರಮಗಳಿಗೆ ಅನ್ವಯಿಸುತ್ತದೆ. ಜಿಲ್ಲಾ ಉಸ್ತುವಾರಿ ಸಚಿವರು, ಸ್ಥಳೀಯ ಶಾಸಕರು, ವಿಧಾನ ಪರಿಷತ್ತ ಸದಸ್ಯರು, ನಗರಸಭೆ ಅಧ್ಯಕ್ಷ ಸದಸ್ಯರು, ಜಿಲ್ಲಾ/ತಾಲ್ಲೂಕಾ ಪಂಚಾಯತಿ ಅಧ್ಯಕ್ಷ ಸದಸ್ಯರು ಹಾಗೂ ಗ್ರಾಮ ಪಂಚಾಯತಿಯ ಅಧ್ಯಕ್ಷ ಸದಸ್ಯರು ಒಳಗೊಂಡಂತೆ ಸರ್ಕಾರದ ಆಯಾ ಇಲಾಖೆಯ ಅಧಿಕೃತ ಕಾರ್ಯಕ್ರಮಗಳಿಗೆ, ಸಂಬಂಧಪಟ್ಟ ಇಲಾಖೆಯ ಸಚಿವರ ಸಮಾಲೋಚನೆಯೊಂದಿಗೆ ನಿಗದಿಪಡಿಸಿ ಕಾರ್ಯಕ್ರಮವನ್ನು ಏರ್ಪಡಿಸಬೇಕಾಗಿ ನಿರ್ದೇಶನವಿರುತ್ತದೆ. ಪ್ರಯುಕ್ತ ಜಿಲ್ಲೆಯ ಎಲ್ಲಾ ಅಧಿಕಾರಿಗಳು ಈ ಕೆಳಕಂಡ ಸೂಚನೆಗಳನ್ನು ಪಾಲಿಸತಕ್ಕದ್ದು.

- ಸರ್ಕಾರವು ಸೂಚಿಸಿರುವ ಶಿಷ್ಟಾಚಾರದ ಅನುಸಾರ ಆಹ್ವಾನ ಪತ್ರಿಕೆಯನ್ನು ಮುದ್ರಿಸಬೇಕು.
- ಜಿಲ್ಲೆಯಲ್ಲಿ ಸರ್ಕಾರದ ವತಿಯಿಂದ ನಡೆಸುವ ಯಾವುದೇ ಸರ್ಕಾರಿ ಕಾರ್ಯಕ್ರಮದ ಕುರಿತು ಮುದ್ರಿತವಾದ ಆಹ್ವಾನ ಪತ್ರಿಕೆಯನ್ನು ಜನಪ್ರತಿನಿಧಿಗಳಿಗೆ ವಿತರಿಸಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸ್ವೀಕೃತಿಯನ್ನು ಪಡೆಯತಕ್ಕದ್ದು.
- ಸರ್ಕಾರದ ವತಿಯಿಂದ ನಡೆಸುವ ಯಾವುದೇ ಸರ್ಕಾರಿ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಕಾರ್ಯಕ್ರಮಕ್ಕೆ ಹಾಜರಾಗದ ಅವಧಿಯಲ್ಲಿ ಲಿಖಿತ ರೂಪದಲ್ಲಿ ಮೇಲಾಧಿಕಾರಿಗಳ ಅನುಮತಿ ಪಡೆದು ಕೇಂದ್ರ ಸ್ಥಾನ ಬಿಡತಕ್ಕದ್ದು.
- ಸರ್ಕಾರದ ವತಿಯಿಂದ ಕೈಗೊಳ್ಳುವ ಕಾಮಗಾರಿಗಳ ಗುತ್ತಿಗೆದಾರರು ಇಲಾಖೆಯ ಅಧಿಕಾರಿಗಳ ಗಮನಕ್ಕೆ ತರದೇ ಕಾಮಗಾರಿಗಳ ಉದ್ಘಾಟನೆ/ಭೂಮಿ ಪೂಜೆ ನೆರವೇರಿಸಿದಲ್ಲಿ ಅಂತಹ ಗುತ್ತಿಗೆದಾರ ಪರವಾನಗಿಯನ್ನು ಕಪ್ಪು ಪಟ್ಟಿಯಲ್ಲಿ ಇರಿಸಲು ಕ್ರಮ ಕೈಗೊಳ್ಳತಕ್ಕದ್ದು.
- ಬೀದರ ಜಿಲ್ಲೆಯಲ್ಲಿ ಶಿಷ್ಟಾಚಾರ ಉಲ್ಲಂಘನೆಯ ಕುರಿತು ಅಧಿಕಾರಿಗಳ ವಿರುದ್ಧ ಜನಪ್ರತಿನಿಧಿಗಳಿಂದ ಬಹಳಷ್ಟು ದೂರುಗಳು ಸ್ವೀಕೃತಗೊಳ್ಳುತ್ತಿರುವ ಹಿನ್ನೆಯಲ್ಲಿ ಶಿಷ್ಟಾಚಾರ ಉಲ್ಲಂಘನೆಯಾಗದಂತೆ ನೋಡಿಕೊಳ್ಳತಕ್ಕದ್ದು.
- ಸರ್ಕಾರದಿಂದ ಮಂಜೂರಾಗಿರುವ ಕಾಮಗಾರಿಗಳ ಉದ್ಘಾಟನೆ/ಭೂಮಿ ಪೂಜೆಗಳನ್ನು ಅಧಿಕಾರಿಗಳ ಗಮನಕ್ಕೆ ಬರದ ನೇರವಾಗಿ ನಡೆಸುತ್ತಿರುವುದು ಜಿಲ್ಲೆಯಲ್ಲಿ ಕಂಡು ಬರುತ್ತಿವೆ.
- ಸರ್ಕಾರಿ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಕಾಮಗಾರಿಗಳ ಉದ್ಘಾಟನೆ/ಭೂಮಿ ಪೂಜೆಗಳಿಗೆ ಗೈರು ಹಾಜರಾಗುತ್ತಿರುವ ಬಗ್ಗೆ ಹಾಗೂ ಶಿಷ್ಟಾಚಾರ ಉಲ್ಲಂಘನೆ ಕುರಿತು ತುಂಬಾ ಜನಪ್ರತಿನಿಧಿಗಳು ವಿಷಾದ ವ್ಯಕ್ತಪಡಿಸುತ್ತಿದ್ದಾರೆ.

ಉಲ್ಲೇಖಿತ ಸುತ್ತೋಲೆಯ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸುತ್ತಾ, ಸುತ್ತೋಲೆಯಲ್ಲಿನ ಅಂಶಗಳ ಕುರಿತು ಚಾಚು ತಪ್ಪದೇ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಲು ತಪ್ಪಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಯಾವುದೇ ಮುನ್ಸೂಚನೆ ನಿಡದೇ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಅಡಕ: ( )

ತಮ್ಮ ನಿಷ್ಠಾಸಿ,

09-10-24

ಜಿಲ್ಲಾಧಿಕಾರಿ.

ದಿ: 14.11.2025 ಕ್ಷಣ ಇಲಾಖೆ ಪತ್ರ

ಅನುಬಂಧ 20

ಕರ್ನಾಟಕ ಸರ್ಕಾರ

ಸಂಖ್ಯೆ:ಪಿಡಿಎಸ್/122/ಸಹಾಕಾ/2024

ಕರ್ನಾಟಕ ಸರ್ಕಾರದ ಸಚಿವಾಲಯ
ಪರಿಷತ್ತಿನ ಸಭಾಂಗಣ
ಡಾ|| ಬಿ.ಆರ್. ಅಂಬೇಡ್ಕರ್ ವೀಧಿ
ಬೆಂಗಳೂರು,ದಿನಾಂಕ:07.11.2025

ಇವರಿಂದ
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ,
ಬೆಂಗಳೂರು.

ಇವರಿಗೆ,
1.ಜಿಲ್ಲಾಧಿಕಾರಿಗಳು
ಬೀದರ್ ಜಿಲ್ಲೆ.

2. ಯೋಜನಾ ಮತ್ತು ಸಾಂಖ್ಯಿಕ
ನಿರ್ದೇಶಕರು
ಬೀದರ್ ಜಿಲ್ಲೆ

ಮಾನ್ಯರೇ,

ವಿಷಯ: ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳನ್ನು ಸರ್ಕಾರಿ ಕಾರ್ಯಕ್ರಮಕ್ಕೆ ಆಹ್ವಾನಿಸದೇ ನಿರ್ಲಕ್ಷಿಸಿರುವ ಬಗ್ಗೆ.

ಉಲ್ಲೇಖ: ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ ರವರ ಪತ್ರ ಸಂಖ್ಯೆ: ಕವಿಪ/ಪಶಾಲಿಸ್ಥಿ/ಪ್ರಶ್ನೆ/ಪಿಡಿಎಸ್/2024 ದಿನಾಂಕ:07.11.2025

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಗಮನಕ್ಕೆ ತರಲಾಗಿದ್ದು, ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಭೀಮಣ್ಣಾ ಬಸವರಾಜ್ ಪಾಟೀಲ್ ಹಾಗೂ ಡಾ.ಚಂದ್ರಶೇಖರ್ ಬಿ ಪಾಟೀಲ್ ರವರುಗಳು ಕರ್ನಾಟಕ ಸರ್ಕಾರದ ಪ್ರಮುಖ ಅಭಿವೃದ್ಧಿ ಮಂಡಳಿಯಾದ 2023-ನೇ ಸಾಲಿನ ಯೋಜನಾ ಆಡಿಯಲ್ಲಿ ಮಾಡಲಾಗಿರುವ ಪಟ್ಟಿಯಲ್ಲಿ, ದಿನಾಂಕ:27.08.2024ರಂದು ಬೆಳಿಗ್ಗೆ 11.00 ಗಂಟೆಗೆ ನಿಗದಿಪಡಿಸಲಾಗಿದ್ದ ವಿವಿಧ ಕಾಮಗಾರಿಗಳ ಆದೇಶಗಳನ್ನು ನೀಡಲಾರಂಭ ಕಾರ್ಯಕ್ರಮದ ಕುರಿತು ದಿನಾಂಕ:26.08.2024ರಂದು ನಿರ್ದೇಶಕರ ಕಛೇರಿಯ ಸಿಬ್ಬಂದಿಯೊಂದಿಗೆ ಕಾರ್ಯಕ್ರಮದ ಬಗ್ಗೆ ಮಾಹಿತಿ ಕೋರಲಾಗಿದ್ದು, ಸರಿಯಾದ ಮಾಹಿತಿ ನೀಡದೆ ರಾಜಕೀಯಪ್ರೇರಿತವಾಗಿ ಮರುದಿನ ನಡೆದ ಕಾರ್ಯಕ್ರಮಕ್ಕೆ ಹಾಜರಾಗದಂತೆ ತಡೆಯುವ ಮೂಲಕ ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಪ್ರಕರಣವನ್ನು ಹಕ್ಕುಬಾಧ್ಯತಾ ಸಮಿತಿಯು ದಿನಾಂಕ:04.04.2025ರಂದು ನಡೆದ ಸಭೆಯಲ್ಲಿ ಚರ್ಚಿಸಿದ ಸಂದರ್ಭದಲ್ಲಿ, ಮುಂದಿನ ಸಭೆಗೆ ತಮ್ಮ ಉಪಸ್ಥಿತಿಯಲ್ಲಿ ಜಿಲ್ಲಾಧಿಕಾರಿ, ಬೀದರ್ ಜಿಲ್ಲೆ, ಅವರೊಂದಿಗೆ ಚರ್ಚಿಸಲು ತೀರ್ಮಾನಿಸಲಾಗಿರುತ್ತದೆ.

ಆದುದರಿಂದ, ದಿನಾಂಕ:14.11.2025ರಂದು ಬೆಳಿಗ್ಗೆ 11.30 ಗಂಟೆಗೆ ವಿಧಾನ ಭವನ-1ರ 4ನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿರುವ ಸಮಿತಿ ಸಭೆಗೆ ತಾವು ಜಿಲ್ಲಾಧಿಕಾರಿ, ಬೀದರ್ ಜಿಲ್ಲೆ ಹಾಗೂ ಪ್ರಕರಣಕ್ಕೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಹಾಜರಾಗುವುದರ ಜೊತೆಗೆ ಈ ವಿಷಯದ ಕುರಿತು ಪರಿಶೀಲಿಸಿ, ಕೈಗೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯ ರೀತ್ಯಾ 30 ಪ್ರತಿಗಳಲ್ಲಿ ದಿನಾಂಕ:12.11.2025ರಂದು ಸಂಜೆ 05.00 ಗಂಟೆಯೊಳಗಾಗಿ ಪರಿಷತ್ತಿಗೆ

12.11.2025 through gmail at 1:29 pm

ಒಡಿಸಬೇಕೆಂದು ಕಾರ್ಯದರ್ಶಿ-2, ಕರ್ನಾಟಕ [redacted] ರವರು ಉಲ್ಲೇಖದ ಪತ್ರದಲ್ಲಿ ಕೋರಿರುತ್ತಾರೆ

ಆದ್ದರಿಂದ, [redacted] ಬೆಳಿಗ್ಗೆ 11.30 ಗಂಟೆಗೆ ಶಾಸಕರ ಭವನದ 1ರ 4ನೇ ಮಹಡಿಯ [redacted] ನಡೆಯುವ ಹಕ್ಕು ಭಾದ್ಯತಾ ಸಮಿತಿ ಸಭೆಗೆ ಆಗಮಿಸಲು [redacted] ಇಂದಿನ ಸೆಲ್ಫಿಯವರಂತೆ ಹಾಗೂ ಸಭೆಗೆ ಕಡ್ಡಾಯವಾಗಿ [redacted] ತಿಳಿಸಲು ನಿರ್ದೇಶಿಸಲ್ಪಟ್ಟಿದ್ದಾನೆ.

ತಮ್ಮ ವಿಶ್ವಾಸಿ,

ನಿರ್ದೇಶಕರು,
ಎಸಿಬಿ ವಿಭಾಗ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

ಪ್ರತಿಯನ್ನು:
1.ಸರ್ಕಾರದ ಪ್ರಧಾನ ಕಾರ್ಯದರ್ಶಿ, [redacted] ವಿಕಾಸ ಸೌಧ ರವರಿಗೆ ಕಲಿತಿಳಿಸಿಕ್ಕಾ.
ನಿರ್ಮಿತಿ ಕೇಂದ್ರ, ಬೀದರ್ ರವರಿಗೆ [redacted] ನೀಡಲು ಹಾಗೂ ಮೂಹಿತಿಗಳಿಲಾಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
2. ಕಾರ್ಯದರ್ಶಿ, [redacted] ಕಲಬುರಗಿ, ಅಭಿವೃದ್ಧಿ ಭವನ, ಜಿಲ್ಲಾ ಪಂಚಾಯಿತಿ, ಕಲಬುರಗಿ ರವರಿಗೆ [redacted] ಕ್ರಮಕ್ಕಾಗಿ.
3. ಕಾರ್ಯದರ್ಶಿ-2, [redacted] #228, 2ನೇ ಮಹಡಿ, ವಿಧಾನ ಸೌಧ ಬೆಂಗಳೂರು ರವರ ಮಾಹಿತಿಗಾಗಿ

ಎಸ್. ನಿರ್ಮಲ
ಕಾರ್ಯದರ್ಶಿ -2
ವಿಧಾನ ಪರಿಷತ್ತು

S. NIRMALA
Secretary-2
Karnataka Legislative Council

Room No. 228, 2nd Floor
P.B. No. 4879,
Tel. No.

ಪತ್ರ ಸಂಖ್ಯೆ/

ಮಾನ್ಯ ಶ್ರೀ ಮನೋಜ್ ಜೈನ್ ರವರಿಗೆ,

ವಿಧಾನ ಪರಿಷತ್ತಿನ ಮಾನ್ಯ [redacted] ಶ್ರೀ ಘಾಟಿಸುಬ್ರಹ್ಮಣ್ಯ ಅನಂತರಾವ್ ಪಾಟೀಲ್ ಹಾಗೂ ಡಾ.ಅಂಜಲಿ [redacted] ಇವರುಗಳು ಕೆಲವು ಕೊರತೆಯ ಪ್ರದೇಶ ಅಭಿವೃದ್ಧಿ ಮಂಡಳಿಯು [redacted] ಸಮಾನ ಮನಸ್ಕರ ಅಧ್ಯಯನ ಸಮಿತಿಯ ಸಮಾಲೋಚನಾ ಸಭೆಯನ್ನು [redacted] ಬೆಳಿಗ್ಗೆ 10 ಗಂಟೆಗೆ ನಗರಿವೆಸಲಾಗಿದ್ದು ವಿವಿಧ ಅಧಿಕಾರಿಗಳು ಹಾಗೂ ಸಾರ್ವಜನಿಕರು ಆಯೋಕ್ತಕರು ಕುರಿತು ವಿಷಾಲಕರಣ ವಿಮರ್ಶಿಸಲಾಗುವುದು ಸದರಿ ಸಂದರ್ಭದ ಸೂಕ್ತವೆನಿಸಿದಲ್ಲಿ ಕಾರ್ಯಕ್ರಮದ ಬಗ್ಗೆ ಮಾಹಿತಿ ಕೊಡಬೇಕಾಗಿದ್ದು ಹಿನ್ನೆಲೆಯಲ್ಲಿ ಮೇಲಿನ ಉದ್ದೇಶಪೂರ್ವಕವಾಗಿ ಮಧ್ಯಾಹ್ನದ ನಂತರ [redacted] ಮೊದಲಾದ ವಿಷಯಗಳ ಉಪಸ್ಥಿತಿಯ ಮುಂದಿನ [redacted] ಹಿನ್ನೆಲೆಯಲ್ಲಿ ಕೋರಿರುವ ದಿನಾಂಕ:04.04.2025ರಂದು ನಡೆಸಿ ಸಭೆಯ ಮಾಹಿತಿಯನ್ನು ಮಾಧ್ಯಮದವರಿಗೆ ಸಭೆಗೆ ತಮ್ಮ ಉಪಸ್ಥಿತಿಯಲ್ಲಿ ಏರ್ಪಾಡಾದು. ಆದರೆ ಇದ್ದು, ಅವರುಗಳಿಗೆ ಮಾಹಿತಿ ತೀರ್ಮಾನಿಸಲಾಗಿರುತ್ತದೆ. (ದಿನಾಂಕ:04.04.2025ರ ಸಭೆಯ ಸಭೆಯ ನಡಾವಳಿ ಪ್ರತಿಯನ್ನು ಲಗತ್ತಿಸಿದೆ).

ಆದುದರಿಂದ, ದಿನಾಂಕ:04.04.2025ರಂದು ಮಧ್ಯಾಹ್ನ 1 ಗಂಟೆಗೆ ನಡೆಯಲಿರುವ ಸಭೆಯ-ಸ ಮಾಹಿತಿಯನ್ನು ಮಾಧ್ಯಮದವರಿಗೆ ಪ್ರಸಾರಮಾಡುವ ಹಿನ್ನೆಲೆಯಲ್ಲಿ ಸಭೆಗೆ ತಾವು ಏರ್ಪಾಡಿಸಿದ್ದು, ಇದಕ್ಕಾಗಿ ಇದೆ ಸಂಬಂಧ ಪ್ರಸಾರಮಾಡಿಸಲು ಅಧಿಕಾರಿಗಳಿಗೆ ಮಾಹಿತಿಯನ್ನು ಹೊಂದಿಸಿ ಈ ವಿಷಯದ ಮೇಲೆ ಪ್ರಸಾರಮಾಡಿ. ಕೈಗೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಈ ಪತ್ರವನ್ನು ಸ್ವೀಕರಿಸಿದ ದಿವಸ 30 ಘಟಿಕಗಳಲ್ಲಿ ಮಾಹಿತಿಯನ್ನು ಕಳುಹಿಸಿಕೊಡಲು ಸಹಕರಿಸಲಾಗಿ ಸಹಾಯಾಲಂಬಿಸಿ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ತಮ್ಮ ವಿಶ್ವಾಸಿಗಳು,

ಶ್ರೀ ಮನೋಜ್ ಜೈನ್, ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿ-2,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.


ಧಾನ ಪರಿಷತ್ತಿನ ಮಾನ್ಯ ಶಾಸಕರುಗಳನ್ನು ಸರ್ಕಾರಿ ಕಾರ್ಯಕ್ರಮಗಳ್ಲಿ ಆಹ್ವಾನಿಸದೇ ಶಿಷ್ಟಾಚಾರ ಉಲ್ಲಂಘಿಸಿರುವ ಕುರಿತು.

rectoradbplanning1 ADB Division <directoradbplanning1@gmail.com>
dc bidar, Deputy, ma, HKADB, Hasadbkb, HKRDB, Housing, Housing, kc

see find attachment.

no attachment · Scanned by Gmail · Add to Drive

Reply | Reply all | Forward



ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳನ್ನು ಸರಕಾರಿ ಕಾರ್ಯಕ್ರಮಗಳಲ್ಲಿ ಅಚ್ಚುಕಟ್ಟಾಗಿ ಆಯೋಜಿಸಿರುವ ಕುರಿತು. [redacted]


directoradbplanadbg1 ADB Division <directoradbplanadbg1@gmail.com>
to dc.hdsr, Deputy, ee, HKADB, hmadbkb, HKRDB, Housbg, Housbg, kc ▾

Please find attachment.

One attachment • Scanned by Gmail ⓘ Add to Drive

[redacted]

Reply Reply all Forward



ನಿರ್ಮಿತಿ ಕೇಂದ್ರ, ಬೀದರ

ಬಸವೇಶ್ವರ ವೃತ್ತದ ಹತ್ತಿರ, ಸೌಹಾದ ಬೀದರ

ಸಂ:ನಿಕೆಬಿ/ಶಿಷ್ಟಾಚಾರ/ಆಡಳಿತ/ಸಿಆರ್– /2025–26 | 295 ದಿನಾಂಕ: 11.11.2025

ಇವರಿಗೆ,
ಮಾನ್ಯ ನಿರ್ದೇಶಕರು
ಎಡಿಬಿ ವಿಭಾಗ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ,
ಬೆಂಗಳೂರು

ಮಾನ್ಯರೆ,

ವಿಷಯ: ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳನ್ನು ಸರ್ಕಾರಿ ಕಾರ್ಯಕ್ರಮಕ್ಕೆ ಆಹ್ವಾನಿಸದೇ ಶಿಷ್ಟಾಚಾರ ಕುರಿತು.

ಉಲ್ಲೇಖ: ತಮ್ಮ ಕಚೇರಿ ಈ ಮೇಲ್ ಮುಖಾಂತರ ಪತ್ರ ಸಂಖ್ಯೆ:ಪಿಡಿಎಸ್/122/ಹೆಚ್‌ಕೆಡಿ/2024 ದಿನಾಂಕ: 12.11.2025, ಸಮಯ:1:29.

* * * * *

ಈ ಮೆಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದನ್ವಯ ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಾದ ಶ್ರೀ ಭೀಮರಾವ್ ಬಸವರಾಜ್ ಪಾಟೀಲ್ ಹಾಗೂ ಡಾ: ಚಂದ್ರಶೇಖರ್ ಬಿ. ಪಾಟೀಲ್ ಅವರುಗಳ ಹಕ್ಕುಚ್ಯುತಿ ಮಂಡನೆಯ ಕುರಿತು ಹಕ್ಕುಬಾಧ್ಯತಾ ಸಮಿತಿಗೆ ಅಗತ್ಯ ಮಾಹಿತಿಗಳು ಮತ್ತು ಇವರೆಗೆ ಸದರಿ ವಿಷಯದ ಕುರಿತು ಕೈಗೊಂಡಿರುವ ಕ್ರಮದ 30 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಈ ಮೂಲಕ ತಮ್ಮ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗುತ್ತಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಯೋಜನಾ ವ್ಯವಸ್ಥಾಪಕರು
ನಿರ್ಮಿತಿ ಕೇಂದ್ರ, ಬೀದರ

ಪ್ರತಿಯನ್ನು,
ಮಾನ್ಯ ಜಿಲ್ಲಾಧಿಕಾರಿಗಳು, ಬೀದರ ಜಿಲ್ಲೆ, ಬೀದರ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.

ಕರ್ನಾಟಕ ಸರ್ಕಾರ

ಸಂಖ್ಯೆ:ಪಿಡಿಎಸ್/122/ಹೆಚ್‌ಕೆಡಿ/2024

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು,ದಿನಾಂಕ:03.04.2025

ಇವರಿಂದ
ಸರ್ಕಾರದ ಕಾರ್ಯದರ್ಶಿ,
ಯೋಜನೆ, ಕಾರ್ಯಕ್ರಮ ಸಂಯೋಜನೆ,
ಮತ್ತು ಸಾಂಖ್ಯಿಕ ಇಲಾಖೆ,
ಬೆಂಗಳೂರು.

ಇವರಿಗೆ,
1.ಜಿಲ್ಲಾಧಿಕಾರಿಗಳು
ಬೀದರ್ ಜಿಲ್ಲೆ

2.ಯೋಜನಾ ವ್ಯವಸ್ಥಾಪಕ
ನಿರ್ಮಿತಿ ಕೇಂದ್ರ
ಬೀದರ್ ಜಿಲ್ಲೆ

ಮಾನ್ಯರೇ,

ವಿಷಯ: ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳನ್ನು ಸರ್ಕಾರಿ ಕಾರ್ಯಕ್ರಮಕ್ಕೆ ಆಹ್ವಾನಿಸದೇ ಶಿಷ್ಟಾಚಾರ ಉಲ್ಲಂಘಿಸಿರುವ ಕುರಿತು.
ಉಲ್ಲೇಖ: ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ ರವರ ಪತ್ರ ಸಂಖ್ಯೆ: ಕವಿಪಸ/ಶಾರಶಾ/18/ಹಚ್ಯುಪ್ರ/2024 ದಿನಾಂಕ:29.03.2025

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದತ್ತ ಗಮನ ಸೆಳೆಯಲಾಗಿದೆ. ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಾದ ಶ್ರೀ ಭೀಮರಾವ್ ಬಸವರಾಜ್ ಪಾಟೀಲ್ ಹಾಗೂ ಡಾ: ಚಂದ್ರಶೇಖರ ಬಿ ಪಾಟೀಲ್ ಅವರುಗಳ ಹಕ್ಕುಚ್ಯುತಿ ಮಂಡನೆಯ ಕುರಿತು ಹಕ್ಕುಬಾಧ್ಯತಾ ಸಮಿತಿ ಸಭೆಯನ್ನು ದಿನಾಂಕ:04.04.2025 ರಂದು ಬೆಳಗ್ಗೆ:11.30 ಗಂಟೆಗೆ ಶಾಸಕರ ಭವನ -1ರ 4ನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದು,ಸದರಿ ಸಮಿತಿ ಸಭೆಗೆ ಜಿಲ್ಲಾಧಿಕಾರಿ, ಬೀದರ್ ಜಿಲ್ಲೆ ಹಾಗೂ ನಿರ್ಮಿತಿ ಕೇಂದ್ರದ ಮುಖ್ಯಸ್ಥರೊಂದಿಗೆ ಹಾಜರಾಗಬೇಕೆಂದು ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ ರವರು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ.

ಆದ್ದರಿಂದ, ದಿನಾಂಕ:04.04.2025ರಂದು ಬೆಳಗ್ಗೆ:11.30 ಗಂಟೆಗೆ ಶಾಸಕರ ಭವನ -1ರ 4ನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ನಡೆಯುವ ಹಕ್ಕು ಭಾದ್ಯತಾ ಸಮಿತಿ ಸಭೆಗೆ ಅಗತ್ಯ ಮಾಹಿತಿಗಳೊಂದಿಗೆ ಕಡ್ಡಾಯವಾಗಿ ಹಾಜರಾಗುವಂತೆ ತಮಗೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

ನಿರ್ದೇಶಕರು,
ಎಡಿಬಿ ವಿಭಾಗ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

02/05/25

02.05.25

OFFICE OF THE ... DIW No. 624 Dt: 02/05/25

ಪ್ರತಿಯನ್ನು:
1.ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ, ವಿಕಾಸ ಸೌಧ ರವರಿಗೆ ಕಳುಹಿಸುತ್ತಾ, ನಿರ್ಮಿತಿ ಕೇಂದ್ರ, ಬೀದರ್ ರವರಿಗೆ ಸೂಕ್ತ ನಿರ್ದೇಶನ ನೀಡಲು ಹಾಗೂ ಮಾಹಿತಿಗಾಗಿ/ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
2. ಕಾರ್ಯದರ್ಶಿ,ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಅಭಿವೃದ್ಧಿ ಭವನ, ಐವಾನ-ಎ-ಶಾಹಿ, ಕಲಬುರಗಿ-585102 ರವರಿಗೆ ಸೂಕ್ತ ಕ್ರಮಕ್ಕಾಗಿ.

30

ನಿರ್ಮಿತಿ ಕೇಂದ್ರ, ಬೀದರ

ಬಸವೇಶ್ವರ ವೃತ್ತದ ಹತ್ತಿರ, ಸೌಬಾದ ಬೀದರ

ಸಂ:ನಿಕೆಬಿ/ಶಿಷ್ಟಾಚಾರ/ಆಡಳಿತ/ಸಿಆರ್– /2024-25/247 ದಿನಾಂಕ: 11.02.2025

ಇವರಿಗೆ,
ಮಾನ್ಯ ನಿರ್ದೇಶಕರು
ಕರ್ನಾಟಕ ರಾಜ್ಯ ನಿರ್ಮಾಣ ಕೇಂದ್ರ(ಕಾರ್ನಿಕ್)
ಬೆಂಗಳೂರು

ಮಾನ್ಯರೆ,

ವಿಷಯ: ಬೀದರ ಜಿಲ್ಲಾ ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರು ಹಾಗೂ ಸಿಬ್ಬಂದಿಯವರು ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ವಿವರ ನೀಡುವ ಕುರಿತು.

ಉಲ್ಲೇಖ: 1) ಮಾನ್ಯ ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಪರಿಷತ್ತು ರವರ ಪತ್ರ ಸಂಖ್ಯೆ: ಕವಿಪಸ/ಶಾರಶಾ/18/ಹಚ್ಚುಪ್ರ/2024 ದಿನಾಂಕ: 07.02.2025.

2) ತಮ್ಮ ಕಚೇರಿ ಪತ್ರ ಸಂಖ್ಯೆ: ಕಾರ್ನಿಕ್:07:ನೀಕೆ:38:2025/9172 ದಿನಾಂಕ: 10.02.2025.

* * * * *

ಈ ಮೆಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರ 1 ಮತ್ತು 2ರ ಪ್ರಕಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಕೋರಿರುವ ಮಾಹಿತಿಯು ಈ ಪತ್ರದೊಂದಿಗೆ ಲಗತ್ತಿಸಿ ಈ ಮೂಲಕ ತಮ್ಮ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗುತ್ತಿದ್ದು,

ಪ್ರಯುಕ್ತ ಸದರಿ ಪ್ರಕರಣವು ಬೀದರ ನಿರ್ಮಿತಿ ಕೇಂದ್ರದಿಂದ ಯಾವುದೇ ತರಹದ ಹಕ್ಕುಚ್ಯುತಿ, ಶಿಷ್ಟಾಚಾರ ಉಲ್ಲಂಘನೆ ಆಗಿರುವುದಿಲ್ಲ ಎಂದು ಈ ಮೂಲಕ ವಿವರಿಸಿ ತಮ್ಮ ಮುಂದಿನ [redacted] ಕ್ರಮಕ್ಕಾಗಿ ಮಾನ್ಯರಲ್ಲಿ ಸಲ್ಲಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಯೋಜನಾ ವ್ಯವಸ್ಥಾಪಕರು
ನಿರ್ಮಿತಿ ಕೇಂದ್ರ, ಬೀದರ

ಪ್ರತಿಯನ್ನು,
ಮಾನ್ಯ ಜಿಲ್ಲಾಧಿಕಾರಿಗಳು, ಬೀದರ ಜಿಲ್ಲೆ, ಬೀದರ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.

ಕರ್ನಾಟಕ ರಾಜ್ಯ ನಿರ್ಮಾಣ ಕೇಂದ್ರ (ಕಾರ್ನಿಕ್)

(ಕರ್ನಾಟಕ ಸರ್ಕಾರದ ವಸತಿ ಇಲಾಖೆಯ ಸ್ವಾಯತ್ತ ಸಂಸ್ಥೆ)

KARNATAKA STATE BUILDING CENTRE (KARNIK)

(An Autonomous Body Established under the Ministry of Housing, GOK)

KARNIK

ದೂರವಾಣಿ ಸಂಖ್ಯೆ : 080 - 23646069 ಮಿಂಚಂಚೆ : karnikkendra@yahoo.co.in

ಕಾರ್ನಿಕ್: 07:ನೀಕೆ:38: 2025 – 3142 ದಿನಾಂಕ:10.02.2025

ಜಿಲ್ಲಾಧಿಕಾರಿಗಳು ಹಾಗೂ
ಅಧ್ಯಕ್ಷರು ಬೀದರ್ ಜಿಲ್ಲಾ ನಿರ್ಮಿತಿ ಕೇಂದ್ರ,
ಬೀದರ್.

"ಅತಿ ತುರ್ತು" (Most Urgent)

ಮಾನ್ಯರೇ,

ವಿಷಯ : ಬೀದರ್ ಜಿಲ್ಲಾ ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರು ಹಾಗೂ ಸಿಬ್ಬಂದಿಗಳು ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಬಗ್ಗೆ ಶಿಸ್ತು ಕ್ರಮ ಕೈಗೊಳ್ಳುವ ಕುರಿತು.

ಉಲ್ಲೇಖ 1 ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಪರಿಷತ್ತು ರವರ ಪತ್ರ ಸಂಖ್ಯೆ:ಕವಿಪಸ/ಶಾರಶಾ/18/ಪಚ್ಚು:ಪ್ರ/2024 ದಿನಾಂಕ 07.02.2025.

****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಿತ ಪತ್ರದಲ್ಲಿ ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಾದ ಶ್ರೀ. ಬೀಮರಾವ್ ಬಸವರಾಜ್ ಪಾಟೀಲ್ ಹಾಗೂ ಡಾ|| ಚಂದ್ರಶೇಖರ್ ಬಿ ಪಾಟೀಲ್ ರವರು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ 2023-24ನೇ ಸಾಲಿನ ಯೋಜನೆ ಅಡಿಯಲ್ಲಿ ಹುಮನಾಬಾದ ಪಟ್ಟಣದಲ್ಲಿ ದಿನಾಂಕ 27.08.2024ರಂದು ನಿಗಧಿ ಪಡಿಸಲಾಗಿದ್ದು, ವಿವಿಧ ಕಾಮಗಾರಿಗಳ ಆಡಿಗಲ್ಲು ಸಮಾರಂಭ ಕಾರ್ಯಕ್ರಮದ ಕುರಿತು ದಿನಾಂಕ 26.08.2024 ರಂದು ನಿರ್ಮಿತಿ ಕೇಂದ್ರದ ಸಿಬ್ಬಂದಿಗಳೊಂದಿಗೆ ಕಾರ್ಯಕ್ರಮದ ಬಗ್ಗೆ ಮಾಹಿತಿ ಕೋರಲಾಗಿರುತ್ತದೆ. (ಪತ್ರದ ಪ್ರತಿ ಲಗತ್ತಿಸಿದೆ)

ಸದರಿ ಕಾರ್ಯಕ್ರಮಕ್ಕೆ ಸರಿಯಾದ ಮಾಹಿತಿ ನೀಡದೆ ಉದ್ದೇಶ ಪೂರ್ವಕವಾಗಿ ಮರುದಿನ ನಡೆದ ಕಾರ್ಯಕ್ರಮಕ್ಕೆ ಹಾಜರಾಗದಂತೆ ತಡೆಯುವ ಮೂಲಕ ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಪ್ರಕರಣವನ್ನು ಹಕ್ಕುಬಾಧ್ಯತಾ ಸಮಿತಿಯಲ್ಲಿ ಚರ್ಚಿಸಿ, ದಿನಾಂಕ: 13.02.2025 ಹಾಗೂ ಬೆಳಿಗ್ಗೆ 11.30 ಗಂಟೆಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಸತಿ ಇಲಾಖೆ ರವರನ್ನು ಸಮಿತಿಯ ಮುಂದೆ ಹಾಜರಾಗಿ, ಸಮಿತಿಯು ಬಯಸುವ ಮಾಹಿತಿಯನ್ನು ಒದಗಿಸಬೇಕೆಂದು ಕೋರಿರುವ ಹಿನ್ನಲೆಯಲ್ಲಿ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಂಪೂರ್ಣ ವಿವರಗಳನ್ನು ಇಂದೇ ತುರ್ತಾಗಿ ಈ ಕಛೇರಿಗೆ ಸಲ್ಲಿಸಲು ಈ ಮೂಲಕ ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಡಾ|| ಕೆ.ಎನ್.ನಾರಾಯಣಗೌಡ
ನಿರ್ದೇಶಕರು

ಅಡಕ: ದಿನಾಂಕ: 28.11.2024 ರಂದು ನಡೆದ ಹಕ್ಕು ಬಾಧ್ಯತಾ ಸಮಿತಿ ಸಭೆ ...

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ
ವಿಧಾನ ಪರಿಷತ್ತು
K.R. Mahalakshmi
Secretary
Karnataka Legislative Council

TELEPHONE OFF : 080-22250450
080-22033824 Fax : 080-22256892
TEL. RESI : 080-26721377
E-mail : mahalakshmi.kr@ka.gov.in
ಅಂಚೆ ಪೆಟ್ಟಿಗೆ ಸಂಖ್ಯೆ: 5079
ಕೊಠಡಿ ಸಂಖ್ಯೆ: 156-ಸಿ, ಮೊದಲ ಮಹಡಿ
ವಿಧಾನ ಸೌಧ, ಬೆಂಗಳೂರು - 560 001
P.B. No. 5079
Room No.156-C, 1st Floor
Vidhana Soudha, Bengaluru - 560 001

ವಿಪ/ಪಾರಿತಾ/19/ಜಟ್ಟುಪ್ರ/2024

ದಿನಾಂಕ:07.02.2025

ಮಾನ್ಯ ಶ್ರೀ ವಿಜಿನ್‌ರಾಜ್ ಸಿಂಗ್ ರವರೆ,

ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಾದ ಶ್ರೀ ಭೀಮರಾವ್ ಬಸವರಾಜ್ ಪಾಟೀಲ್ ಹಾಗೂ ಡಾ.ಜಂದ್ರಶೇಖರ್ ಬಿ ಪಾಟೀಲ್ ಅವರುಗಳು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ 2023-24ನೇ ಸಾಲಿನ ಯೋಜನೆ ಅಡಿಯಲ್ಲಿ ಕಲಬುರಗಿ ಜಿಲ್ಲೆಯಲ್ಲಿ ದಿನಾಂಕ:27.08.2024ರಂದು ಬೆಳಗ್ಗೆ:11.00 ಗಂಟೆಗೆ ಹಮ್ಮಿಕೊಂಡಿರುವ ವಿವಿಧ ಕಾಮಗಾರಿಗಳ ಅಡಿಗಲ್ಲು ಸಮಾರಂಭ ಕಾರ್ಯಕ್ರಮದ ಕುರಿತು ದಿನಾಂಕ:20.08.2024ರಂದು ನಿಮ್ಮಿತಿ ಕೇಂದ್ರದ ಸಿಬ್ಬಂದಿಯೊಂದಿಗೆ ಕಾರ್ಯಕ್ರಮದ ಬಗ್ಗೆ ಮಾಹಿತಿ ಕೊಟ್ಟಿರುವುದಿಲ್ಲ, ಸರಿಯಾದ ಮಾಹಿತಿ ನೀಡದೆ ಉದ್ದೇಶಪೂರ್ವಕವಾಗಿ ಸಭೆಯ ಕರೆಯ ಕಾರ್ಯಕ್ರಮಕ್ಕೆ ಹಾಜರಾಗದಂತೆ ತಡೆಯುವ ಮೂಲಕ ಶಿಷ್ಟಾಚಾರ ಉಲ್ಲಂಘನೆಯಾಗಿರುವ ಪ್ರಕರಣವು, ಹಕ್ಕುಬಾಧ್ಯತಾ ಸಮಿತಿಯು ದಿನಾಂಕ:23.12.2024ರಂದು ನಡೆಸಿದ ಸಭೆಯಲ್ಲಿ ಪರಿಶೀಲಿಸಿದ ಸಂದರ್ಭದಲ್ಲಿ ಮುಂದಿನ ಸಭೆಗೆ ಕಡತವನ್ನು ಕರೆಯಲು ಬಾಕಿಯಿರುತ್ತದೆ. (ಹಕ್ಕುಚ್ಯುತಿ ಸೂಚನೆ ಹಾಗೂ ಸಂಬಂಧಿಸಿದ ಇತರೆ ದಾಖಲೆಗಳ ಪ್ರತಿಯನ್ನು ಲಗತ್ತಿಸಿದೆ).

ಆದ್ದರಿಂದ, ದಿನಾಂಕ:10.02.2025ರಂದು ಬೆಳಗ್ಗೆ:11.30 ಗಂಟೆಗೆ ಶಾಸಕರ ಭವನದ ಸಭಾಂಗಣದಲ್ಲಿ ನಡೆಯಲಿರುವ ಸಮಿತಿ ಸಭೆಯಲ್ಲಿ ಹಾಜರಿರುವ ಬಗ್ಗೆ ಮಾಹಿತಿಯನ್ನು ಒದಗಿಸಬೇಕೆಂದು ಕೋರಿದೆ.

ತಮ್ಮ ನಂಬುಗೆಯ,

ಕೆ. ಮಹಾಲಕ್ಷ್ಮಿ
ಕಾರ್ಯದರ್ಶಿ
ವಿಧಾನ ಪರಿಷತ್ತು

ಶ್ರೀ ವಿಜಿನ್‌ರಾಜ್ ಸಿಂಗ್ ಐ.ಎ.ಎಸ್.
ಮಾನ್ಯ ಪ್ರಧಾನ ಕಾರ್ಯದರ್ಶಿಗಳು
ಬಿ.ಆರ್.ಡಿ.ಎ.
ಕಲಬುರಗಿ.

(30)

ಕರ್ನಾಟಕ ಸರ್ಕಾರ

ಸಂಖ್ಯೆ:ಪಿಡಿಎಸ್/122/ಹೆಚ್.ಕೆ.ಡಿ/2024

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:27.11.2024.

ಇವರಿಂದ
ಸರ್ಕಾರದ ಕಾರ್ಯದರ್ಶಿ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ,
ಬೆಂಗಳೂರು.

ಇವರಿಗೆ,
1. ಜಿಲ್ಲಾಧಿಕಾರಿ
ಬೀದರ್ ಜಿಲ್ಲೆ.

2. ಯೋಜನಾ ವ್ಯವಸ್ಥಾಪಕರು,
ನಿರ್ಮಿತಿ ಕೇಂದ್ರ, ಬೀದರ್.

ಮಾನ್ಯರೇ,

ವಿಷಯ:- ದಿನಾಂಕ:28.11.2024 ರಂದು ನಡೆಯಲಿರುವ ಹಕ್ಕು ಬಾಧ್ಯತಾ ಸಮಿತಿ ಸಭೆಗೆ ಹಾಜರಾಗುವ ಕುರಿತು.

ಉಲ್ಲೇಖ:- ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು ಇವರ ಅಸ ಪ ಸಂಖ್ಯೆ: ಕವಿಪಸ/ಶಾರಶಾ/18/ಹಚ್ಚುಪ್ರ/2024, ದಿನಾಂಕ:21.11.2024

******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಿಕ್ಕೆ ಸಂಬಂಧಿಸಿದಂತೆ, ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಾದ ಶ್ರೀ ಭೀಮರಾವ್ ಬಸವರಾಜ್ ಪಾಟೀಲ್ ಮತ್ತು ಡಾ. ಚಂದ್ರಶೇಖರ ಪಾಟೀಲ್ ಇವರುಗಳು ಮಾನ್ಯ ಸಭಾಪತಿಯವರಿಗೆ ಸಲ್ಲಿಸಿರುವ ಹಕ್ಕುಚ್ಯುತಿ ಸೂಚನಾ ಪತ್ರಕ್ಕೆ ಸಂಬಂಧಿಸಿದಂತೆ, ದಿನಾಂಕ:28.11.2024 ರ ಪೂರ್ವಾಹ್ನ 11.30 ಗಂಟೆಗೆ ಶಾಸಕರ ಭವನ -1ರ ನಾಲ್ಕನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿರುವ ಹಕ್ಕು ಬಾಧ್ಯತಾ ಸಮಿತಿ ಸಭೆಗೆ ತಾವು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಅಗತ್ಯ ಮಾಹಿತಿಯೊಂದಿಗೆ ಖುದ್ದು ಹಾಜರಾಗುವಂತೆ ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಡಿ. ಚಂದ್ರಶೇಖರಯ್ಯ)
ನಿರ್ದೇಶಕರು, ಎಡಿಬಿ ವಿಭಾಗ,
ಯೋಜನೆ. ಕಾರ್ಯಕ್ರಮ ಸಂಯೋಜನೆ
ಹಾಗೂ ಸಾಂಖ್ಯಿಕ ಇಲಾಖೆ.

27.11.2024

ಕರ್ನಾಟಕ ಸರ್ಕಾರ

ಸಂಖ್ಯೆ:ಪಿಡಿಎಸ್/122/ಹೆಚ್.ಕೆ.ಡಿ/2024

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:27.11.2024.

ಇವರಿಂದ
ಸರ್ಕಾರದ ಕಾರ್ಯದರ್ಶಿ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ,
ಬೆಂಗಳೂರು.

ಇವರಿಗೆ,
1. ಜಿಲ್ಲಾಧಿಕಾರಿ
ಬೀದರ್ ಜಿಲ್ಲೆ.

2. ಯೋಜನಾ ವ್ಯವಸ್ಥಾಪಕರು,
ನಿರ್ಮಿತಿ ಕೇಂದ್ರ, ಬೀದರ್.

ಮಾನ್ಯರೇ,

ವಿಷಯ:- ದಿನಾಂಕ:28.11.2024 ರಂದು ನಡೆಯಲಿರುವ ಹಕ್ಕು ಬಾಧ್ಯತಾ ಸಮಿತಿ ಸಭೆಗೆ ಹಾಜರಾಗುವ ಕುರಿತು.

ಉಲ್ಲೇಖ:- ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು ಇವರ ಅಸ ಪ ಸಂಖ್ಯೆ: ಕವಿಪಸ/ಶಾರಶಾ/18/ಹಚ್ಚುಪ್ರ/2024, ದಿನಾಂಕ:21.11.2024

******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಿಕ್ಕೆ ಸಂಬಂಧಿಸಿದಂತೆ, ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಾದ ಶ್ರೀ ಭೀಮರಾವ್ ಬಸವರಾಜ್ ಪಾಟೀಲ್ ಮತ್ತು ಡಾ. ಚಂದ್ರಶೇಖರ ಪಾಟೀಲ್ ಇವರುಗಳು ಮಾನ್ಯ ಸಭಾಪತಿಯವರಿಗೆ ಸಲ್ಲಿಸಿರುವ ಹಕ್ಕುಚ್ಯುತಿ ಸೂಚನಾ ಪತ್ರಕ್ಕೆ ಸಂಬಂಧಿಸಿದಂತೆ, ದಿನಾಂಕ:28.11.2024 ರ ಪೂರ್ವಾಹ್ನ 11.30 ಗಂಟೆಗೆ ಶಾಸಕರ ಭವನ -1ರ ನಾಲ್ಕನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿರುವ ಹಕ್ಕು ಬಾಧ್ಯತಾ ಸಮಿತಿ ಸಭೆಗೆ ತಾವು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಅಗತ್ಯ ಮಾಹಿತಿಯೊಂದಿಗೆ ಖುದ್ದು ಹಾಜರಾಗುವಂತೆ ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಡಿ. ಚಂದ್ರಶೇಖರಯ್ಯ)
ನಿರ್ದೇಶಕರು, ಎಡಿಬಿ ವಿಭಾಗ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಹಾಗೂ ಸಾಂಖ್ಯಿಕ ಇಲಾಖೆ.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

"ಅಭಿವೃದ್ಧಿ ಭವನ" ಐವಾನ-ಎ-ಶಾಹಿ, ಕಲಬುರಗಿ-585102

ದೂರವಾಣಿ: (08472) - 256767,239556,255564, ಫ್ಯಾಕ್ಸ್ : (08472) 227527

Email: hkadboulb@gmail.com Website: hkrdb.kar.nic.in

ಸಂಖ್ಯೆ: ಕೆ.ಕೆ.ಆರ್.ಡಿ.ಬಿ/ಸಿಬ್ಬಂದಿ/03/2023-24 ದಿನಾಂಕ: 26.11.2024

ಇವರಿಗೆ,

ಮಾನ್ಯ ಸರ್ಕಾರದ ಕಾರ್ಯದರ್ಶಿಗಳು,
ಯೋಜನಾ ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ,
ಬೆಂಗಳೂರು.

ಮಾನ್ಯರೇ

ವಿಷಯ: ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳನ್ನು ಸರ್ಕಾರಿ ಕಾರ್ಯಕ್ರಮಕ್ಕೆ ಆಹ್ವಾನಿಸದೇ ಶಿಷ್ಟಾಚಾರ ಉಲ್ಲಂಘಿಸಿರುವ ಕುರಿತು.

ಉಲ್ಲೇಖ: 1) ತಮ್ಮ ಕಾರ್ಯಾಲಯದ ಪತ್ರ ಸಂಖ್ಯೆ: ಪಿ.ಡಿ.ಎಸ್/122/ಹೆಚ್.ಕೆ.ಡಿ/ 2024 ದಿನಾಂಕ: 22.10.2024.

2) ಮಂಡಳಿಯ ಪತ್ರ ಸಮ ಸಂಖ್ಯೆ ದಿನಾಂಕ: 25.10.2024.

3) ಜಿಲ್ಲಾಧಿಕಾರಿಗಳು, ಬೀದರ ಇವರ ಪತ್ರ ಸಂಖ್ಯೆ: ಕಂದಾಯ/ಸಿಬ್ಬಂದಿ/ಸಿ. ಆರ್-62/2024-25 ದಿನಾಂಕ: 25.11.2024.

4) ತಮ್ಮ ಕಾರ್ಯಾಲಯದ ಪತ್ರ ಸಂಖ್ಯೆ: ಪಿ.ಡಿ.ಎಸ್/122/ಹೆಚ್.ಕೆ.ಡಿ/ 2024 ದಿನಾಂಕ: 22.11.2024.

~ @ ~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ(01) ರ ಮೂಲಕ ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಾದ ಶ್ರೀ ಭೀಮರಾವ್ ಪಾಟೀಲ್ ಹಾಗೂ ಡಾ॥ ಚಂದ್ರಶೇಖರ. ಬಿ. ಪಾಟೀಲ್ ಅವರುಗಳು ಮಾನ್ಯ ಸಭಾಪತಿಯವರಿಗೆ ಸಲ್ಲಿಸಿರುವ ಹಕ್ಕುಚ್ಯುತಿ ಸೂಚನಾ ಪತ್ರದಲ್ಲಿ ಕೋರಿರುವ ಅಂಶಗಳಿಗೆ ಸಂಬಂಧಪಟ್ಟವರಿಂದ ವಿವರಣೆಯನ್ನು ಪಡೆದು ವಿಸ್ತೃತ ವರದಿಯನ್ನು ಸೂಕ್ತ ದಾಖಲೆಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಿರುತ್ತಿರಿ.

ಅದರಂತೆ ಉಲ್ಲೇಖಿತ(02) ರ ಮೂಲಕ ಉಲ್ಲೇಖಿತ(01) ರಲ್ಲಿ ನಿರ್ದೇಶಿಸಿರುವಂತೆ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಂಡು, ಕೈಗೊಂಡಿರುವ ಕ್ರಮದ ಕುರಿತು ವಿವರವಾದ ವರದಿಯನ್ನು ಸಂಪೂರ್ಣ ದಾಖಲೆಗಳೊಂದಿಗೆ ಮೂರು ದಿನಗಳ ಒಳಗಾಗಿ ಮಂಡಳಿಗೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು, ಬೀದರ ಇವರಿಗೆ ತಿಳಿಸಲಾಗಿರುತ್ತದೆ.

ಪು.ತಿ.ಮೊ

ಉಲ್ಲೇಖಿತ(03) ರ ಮೂಲಕ ಜಿಲ್ಲಾಧಿಕಾರಿಗಳು, ಚಿತದರ ಇವರು ವರದಿಯನ್ನು ನಲ್ಲಸಿದ್ದು, ವಿವರಗಳು ಈ ಕೆಳಗಿನಂತ್ತಿರುತ್ತವೆ.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ 2023-24 ನೇ ಸಾಲಿನ ಯೋಜನೆ ಅಡಿಯಲ್ಲಿ ಹುಮನಾಬಾದ ಪಟ್ಟಣದಲ್ಲಿ ದಿನಾಂಕ: 27.08.2024ರಂದು ಬೆಳಿಗ್ಗೆ: 11.00 ಗಂಟೆಗೆ ನಿಗಧಿಪಡಿಸಲಾಗಿದ್ದ ವಿವಿಧ ಕಾಮಗಾರಿಗಳ ಅಡಿಗಲ್ಲು ಕಾರ್ಯಕ್ರಮದ ಸಮಾರಂಭ ಕುರಿತು ದಿನಾಂಕ: 26.08.2024 ರಂದು ನಿರ್ಮಿತಿ ಕೇಂದ್ರದ ಸಿಬ್ಬಂದಿಯೊಂದಿಗೆ ಕಾರ್ಯಕ್ರಮದ ಬಗ್ಗೆ ಮಾಹಿತಿ ಕೋರಲಾಗಿದ್ದು, ಸರಿಯಾದ ಮಾಹಿತಿ ನೀಡದೆ ಉದ್ದೇಶಪೂರ್ವಕವಾಗಿ ಮರುದಿನ ನಡೆದ ಕಾರ್ಯಕ್ರಮಕ್ಕೆ ಹಾಜರಾಗದಂತೆ ತಡೆಯುವ ಮೂಲಕ ಶಿಷ್ಟಾಚಾರ ಉಲ್ಲಂಘನೆ ಮಾಡಿರುವವರ ಮೇಲೆ ನಿಯಮಾವಳಿ ರೀತ್ಯಾ ಕ್ರಮ ಕೈಗೊಳ್ಳಬೇಕೆಂದು ಕೋರಿರುವ ಪ್ರಕರಣವನ್ನು ಹಕ್ಕುಬಾಧ್ಯತಾ ಸಮಿತಿಯು ದಿನಾಂಕ: 28.11.2024 ರಂದು ನಡೆಯಲಿರುವ ಸಭೆಯಲ್ಲಿ ಪರಿಶೀಲಿಸಲಿರುತ್ತದೆ, ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ಮಾನ್ಯರ ಗಮನಕ್ಕೆ ತರಲಾಗಿದೆ.

1. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಯೋಜನೆ ಅಡಿಯಲ್ಲಿ ಹುಮನಾಬಾದ ತಾಲೂಕಿನಲ್ಲಿ ದಿನಾಂಕ: 27.08.2024 ರಂದು ಅಡಿಗಲ್ಲು ಸಮಾರಂಭಕ್ಕೆ ಶಾಸಕರು ವಿಧಾನಸಭೆ ಹಾಗೂ ವಿಧಾನ ಪರಿಷತ್ ಇವರಿಗೆ ಆಹ್ವಾನಿಸಲಾಗಿರುತ್ತದೆ.

2. ಹುಮನಾಬಾದ ತಾಲೂಕಿನ ನಿರ್ಮಿತಿ ಕೇಂದ್ರದ ಅಭಿಯಂತರರು ತಮ್ಮ ಪತ್ರ ಸಂಖ್ಯೆ: ನಿ.ಕೆ.ಐ/ಕೆ.ಕೆ.ಆರ್.ಜಿ.ಐ/ಕಾಮಗಾರಿ/ನಿ.ಆರ್/2024-25 ದಿನಾಂಕ: 22.08.2024 ರ ಮೂಲಕ ಮಾನ್ಯ ಶಾಸಕರು ವಿಧಾನ ಪರಿಷತ್ ಇವರಿಗೆ, ದಿನಾಂಕ: 27.08.2024 ರಂದು ಬೆಳಿಗ್ಗೆ 11.00 ಗಂಟೆಗೆ ನಿಗದಿಪಡಿಸಲಾದ ಸಮಾರಂಭ ಕಾರ್ಯಕ್ರಮಕ್ಕೆ ಆಹ್ವಾನಿಸಿ ಮಾನ್ಯ ಶಾಸಕರ ಆಪ್ತ ಸಹಾಯಕರ ಸಹಿ ಪಡೆದಿರುತ್ತಾರೆ.

3. ಮಾನ್ಯ ಶಾಸಕರು, ವಿಧಾನ ಪರಿಷತ್ ಇವರು, ನಿರ್ಮಿತಿ ಕೇಂದ್ರ ಹುಮನಾಬಾದ ತಾಲೂಕಿನ ಅಭಿಯಂತರರಾದ ಶ್ರೀ ನಾವೇದ್ ಇವರಿಗೆ ಕಾರ್ಯಕ್ರಮದ ಒಂದು ದಿವಸ ಮುಂಚೆ ದೂರವಾಣಿ ಮೂಲಕ ಅಡಿಗಲ್ಲು ಸಮಾರಂಭದ ಮಾಹಿತಿ ನೀಡದಿರುವ ಕುರಿತು ಉಲ್ಲೇಖಿಸಲಾಗಿರುತ್ತದೆ, ನಂತರ ಅಭಿಯಂತರರಿಗೆ ಮಾನ್ಯ ವಿಧಾನ ಪರಿಷತ್ ಸದಸ್ಯರು ದೂರವಾಣಿ ಮೂಲಕ ಕಾರ್ಯಕ್ರಮದ ವಿವರಣೆ ಕೋರಿದಾಗ, ಮಾನ್ಯ ಶಾಸಕರು, ವಿಧಾನ ಸಭೆ ಹುಮನಾಬಾದ ಮತಕ್ಷೇತ್ರ ಇವರು ಅಡಿಗಲ್ಲು ಸಮಾರಂಭದ ನಿಖರ ಮಾಹಿತಿ ನೀಡದಿರುವುದಕ್ಕೆ ಸ್ಪಷ್ಟವಾಗಿ ಸಮಾರಂಭದ ವಿವರ ನೀಡಿರುವುದಿಲ್ಲ.

4. ನಂತರ ಸಮಾರಂಭದ ದಿವಸ ಅಡಿಗಲ್ಲು ಸಮಾರಂಭದ ಕುರಿತು ದೂರವಾಣಿ ಮೂಲಕ ನಿರ್ಮಿತಿ ಕೇಂದ್ರದ ಅಧಿಕಾರಿಗಳು ಮಾನ್ಯ ವಿಧಾನಪರಿಷತ್ ಸದಸ್ಯರಿಗೆ ತಿಳಿಸಿರುತ್ತಾರೆ.

5. ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರ ವಿರುದ್ಧ ಅನೇಕ ದೂರುಗಳು ಇದ್ದು ಸಮಗ್ರ ತನಿಖೆ ನಡೆಸಲಾಗುತ್ತಿದೆ. ಸದ್ಯ ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರು ಅಪಘಾತದಲ್ಲಿ ಮರಣಹೊಂದಿರುವುದರಿಂದ ವಿವರಣೆ ಪಡೆಯಲು ಸಾಧ್ಯವಾಗಿರುವುದಿಲ್ಲ.

6. ನಿರ್ಮಿತಿ ಕೇಂದ್ರದ ಹುಮಾನಾದ ತಾಲೂಕಿನ ಅಭಿಯಂತರರು ಜಿಲ್ಲಾಧಿಕಾರಿಗಳ ಕಛೇರಿ ಕಾರಣ ಕೇಳಿ ನೋಟೀಸಿಗೆ ಉತ್ತರಿಸುತ್ತ, ದಿನಾಂಕ: 27.08.2024 ರಂದು ಮಾನ್ಯ ವಿಧಾನ ಪರಿಷತ್ ಸದಸ್ಯರಿಗೆ ಸಮಾರಂಭದ ಮಾಹಿತಿ ನೀಡಿರುವುದಾಗಿ ತಿಳಿಸಿರುತ್ತಾರೆ.

ಜಿಲ್ಲಾಧಿಕಾರಿಗಳು, ಬೀದರ ಇವರು ಪತ್ರ ಸಂಖ್ಯೆ: ಕಂದಾಯ/ಸಿಬ್ಬಂದಿ/ಸಿ.ಆರ್/2024–25 ದಿನಾಂಕ: 09.10.2024 ರ ಮೂಲಕ ಜಿಲ್ಲಾಧಿಕಾರಿಗಳ ಶಿಷ್ಟಾಚಾರ ಪಾಲನೆ ಸುತ್ತೋಲೆ ಅನ್ವಯ ಜಿಲ್ಲೆಯ ಅನುಷ್ಠಾನ ಅಧಿಕಾರಿಗಳಿಗೆ ಸೂಕ್ತ ಶಿಷ್ಟಾಚಾರ ಪಾಲನೆ ಮಾಡಲು ಸೂಚಿಸಲಾಗಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ.

ಪ್ರಯುಕ್ತ, ಉಲ್ಲೇಖಿತ(03) ರ ವರದಿ ಹಾಗೂ ಅದರ ಅಡಕಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮಾನ್ಯರ ಅವಗಾಹನೆಗಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

ಲಗತ್ತು: (06 ಪುಟಗಳು)

ಕಾರ್ಯದರ್ಶಿ, 26/11/2024

ಕೆ.ಕೆ.ಆರ್.ಡಿ.ಬಿ, ಕಲಬುರಗಿ.

ಪ್ರತಿಯನ್ನು: ಜಿಲ್ಲಾಧಿಕಾರಿಗಳು ಬೀದರ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೀದರ್ ಜಿಲ್ಲೆ, ಬೀದರ್

Office of the Deputy Commissioner, Bidar District, Bidar-585401, Karnataka

Phone: 08482-225409 Fax: 08482-225262 Email: deo.bidar@gmail.com

ಸಂಖ್ಯೆ: ಕಂ/ಸಿಬ್ಬಂದಿ/ಸಿಆರ್- /2024-25 ದಿನಾಂಕ: 09.10.2024

ಇವರಿಗೆ

ಬೀದರ ಜಿಲ್ಲೆಯ

ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ,

ಮಾನ್ಯರೇ,

ವಿಷಯ: ಜಿಲ್ಲೆಯಲ್ಲಿ ಸರ್ಕಾರದ ಸಭೆ ಸಮಾರಂಭಗಳ ಆಯೋಜನೆಯಲ್ಲಿ ಪಾಲಿಸಬೇಕಾದ ಶಿಷ್ಟಾಚಾರ ಕುರಿತು ಸಮಗ್ರ ಸೂಚನೆಗಳನ್ನು ಹೊರಡಿಸುವ ಕುರಿತು.

ಉಲ್ಲೇಖ: ಮಾನ್ಯ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 34 ಹೆಚ್‌ಪಿಎ 2018(1) ಬೆಂಗಳೂರು ದಿನಾಂಕ: 16.04.2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸುತ್ತೋಲೆಯ ಮೂಲಕ ಸರ್ಕಾರವು ಸಭೆ ಸಮಾರಂಭಗಳ ಆಯೋಜನೆಯಲ್ಲಿ ಪಾಲಿಸಬೇಕಾದ ಶಿಷ್ಟಾಚಾರದ ಬಗ್ಗೆ ರಾಜ್ಯ ಸರ್ಕಾರದ ವತಿಯಿಂದ ನಡೆಸುವ ರಾಜ್ಯ/ಜಿಲ್ಲಾ/ತಾಲ್ಲೂಕು ಮಟ್ಟದ ಸಮಾರಂಭಗಳಿಗೆ ಮತ್ತು ರಾಜ್ಯದ ಧನ ಸಹಾಯದಿಂದ ಸ್ಥಾಪಿಸಲ್ಪಟ ರಾಜ್ಯ ಮಟ್ಟದ ಸಹಕಾರಿ ಸಂಘಗಳು ಹಾಗೂ ಸರ್ಕಾರದ ಸ್ವಾಮ್ಯಕೊಳ್ಳಪಡುವ ಎಲ್ಲಾ ಸಂಸ್ಥೆಗಳು ನಡೆಸುವ ಕಾರ್ಯಕ್ರಮಗಳಿಗೆ ಅನ್ವಯಿಸುತ್ತದೆ. ಜಿಲ್ಲಾ ಉಸ್ತುವಾರಿ ಸಚಿವರು, ಸ್ಥಳೀಯ ಶಾಸಕರು, ವಿಧಾನ ಪರಿಷತ್ತ ಸದಸ್ಯರು, ನಗರಸಭೆ ಅಧ್ಯಕ್ಷ ಸದಸ್ಯರು, ಜಿಲ್ಲಾ/ತಾಲ್ಲೂಕಾ ಪಂಚಾಯತಿ ಅಧ್ಯಕ್ಷ ಸದಸ್ಯರು ಹಾಗೂ ಗ್ರಾಮ ಪಂಚಾಯತಿಯ ಅಧ್ಯಕ್ಷ ಸದಸ್ಯರು ಒಳಗೊಂಡಂತೆ ಸರ್ಕಾರದ ಆಯಾ ಇಲಾಖೆಯ ಅಧಿಕೃತ ಕಾರ್ಯಕ್ರಮಗಳಿಗೆ, ಸಂಬಂಧಪಟ್ಟ ಇಲಾಖೆಯ ಸಚಿವರ ಸಮಾಲೋಚನೆಯೊಂದಿಗೆ ನಿಗದಿಪಡಿಸಿ ಕಾರ್ಯಕ್ರಮವನ್ನು ಏರ್ಪಡಿಸಬೇಕಾಗಿ ನಿರ್ದೇಶನವಿರುತ್ತದೆ. ಪ್ರಯುಕ್ತ ಜಿಲ್ಲೆಯ ಎಲ್ಲಾ ಅಧಿಕಾರಿಗಳು ಈ ಕೆಳಕಂಡ ಸೂಚನೆಗಳನ್ನು ಪಾಲಿಸತಕ್ಕದ್ದು.

- ಸರ್ಕಾರವು ಸೂಚಿಸಿರುವ ಶಿಷ್ಟಾಚಾರದ ಅನುಸಾರ ಆಹ್ವಾನ ಪತ್ರಿಕೆಯನ್ನು ಮುದ್ರಿಸಬೇಕು.
- ಜಿಲ್ಲೆಯಲ್ಲಿ ಸರ್ಕಾರದ ವತಿಯಿಂದ ನಡೆಸುವ ಯಾವುದೇ ಸರ್ಕಾರಿ ಕಾರ್ಯಕ್ರಮದ ಕುರಿತು ಮುದ್ರಿತವಾದ ಆಹ್ವಾನ ಪತ್ರಿಕೆಯನ್ನು ಜನಪ್ರತಿನಿಧಿಗಳಿಗೆ ವಿತರಿಸಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಖಚಿತಪಡಿಸಿಕೊಳ್ಳತಕ್ಕದ್ದು.
- ಸರ್ಕಾರದ ವತಿಯಿಂದ ನಡೆಸುವ ಯಾವುದೇ ಸರ್ಕಾರಿ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಕಾರ್ಯಕ್ರಮಕ್ಕೆ ಹಾಜರಾಗದ ಅವಧಿಯಲ್ಲಿ ಲಿಖಿತ ರೂಪದಲ್ಲಿ ಮೇಲಾಧಿಕಾರಿಗಳ ಅನುಮತಿ ಪಡೆದು ಕೇಂದ್ರ ಸ್ಥಾನ ಬಿಡತಕ್ಕದ್ದು.
- ಸರ್ಕಾರದ ವತಿಯಿಂದ ಕೈಗೊಳ್ಳುವ ಕಾಮಗಾರಿಗಳ ಗುತ್ತಿಗೆದಾರರು ಇಲಾಖೆಯ ಅಧಿಕಾರಿಗಳ ಗಮನಕ್ಕೆ ತರದೇ ಕಾಮಗಾರಿಗಳ ಉದ್ಘಾಟನೆ/ಭೂಮಿ ಪೂಜೆ ನೆರವೇರಿಸಿದಲ್ಲಿ ಅಂತಹ ಗುತ್ತಿಗೆದಾರ ಪರವಾನಗಿಯನ್ನು ಕಪ್ಪು ಪಟ್ಟಿಯಲ್ಲಿ ಇರಿಸಲು ಕ್ರಮ ಕೈಗೊಳ್ಳತಕ್ಕದ್ದು.
- ಬೀದರ ಜಿಲ್ಲೆಯಲ್ಲಿ ಶಿಷ್ಟಾಚಾರ ಉಲ್ಲಂಘನೆಯ ಕುರಿತು ಅಧಿಕಾರಿಗಳ ವಿರುದ್ಧ ಜನಪ್ರತಿನಿಧಿಗಳಿಂದ ಬಹಳಷ್ಟು ದೂರುಗಳು ಸ್ವೀಕೃತಗೊಳ್ಳುತ್ತಿರುವ ಹಿನ್ನೆಯಲ್ಲಿ ಶಿಷ್ಟಾಚಾರ ಉಲ್ಲಂಘನೆಯಾಗದಂತೆ ನೋಡಿಕೊಳ್ಳತಕ್ಕದ್ದು.
- ಸರ್ಕಾರದಿಂದ ಮಂಜೂರಾಗಿರುವ ಕಾಮಗಾರಿಗಳ ಉದ್ಘಾಟನೆ/ಭೂಮಿ ಪೂಜೆಗಳನ್ನು ಅಧಿಕಾರಿಗಳ ಗಮನಕ್ಕೆ ಬರದ ಹೇರವಾಗಿ ನಡೆಸುತ್ತಿರುವುದು ಜಿಲ್ಲೆಯಲ್ಲಿ ಕಂಡು ಬರುತ್ತಿವೆ.
- ಸರ್ಕಾರಿ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಕಾಮಗಾರಿಗಳ ಉದ್ಘಾಟನೆ/ಭೂಮಿ ಪೂಜೆಗಳಿಗೆ ಗೈರು ಹಾಜರಾಗುತ್ತಿರುವ ಬಗ್ಗೆ ಹಾಗೂ ಶಿಷ್ಟಾಚಾರ ಉಲ್ಲಂಘನೆ ಕುರಿತು ತುಂಬಾ ಜನಪ್ರತಿನಿಧಿಗಳು ವಿಷಾದ ವ್ಯಕ್ತಪಡಿಸುತ್ತಿದ್ದಾರೆ.

ಉಲ್ಲೇಖಿತ ಸುತ್ತೋಲೆಯ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸುತ್ತಾ, ಸುತ್ತೋಲೆಯಲ್ಲಿನ ಅಂಶಗಳ ಕುರಿತು ಜಾಜು ತಪ್ಪದೇ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಲು ತಪ್ಪಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಯಾವುದೇ ಮುನ್ಸೂಚನೆ ನಿಡದೇ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಅಡಕ: ( )

ತಹಶೀಲ್ದಾರ

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೀದರ ಜಿಲ್ಲೆ , ಬೀದರ್
Office of the Deputy Commissioner, Bidar District, Bidar-585401, Karnataka
Phone: 08482-225409 Fax: 08482-225252 Email: dco.bidar@gmail.com

ಸಂಖ್ಯೆ:ಕಂದಾಯ/ಸಿಬ್ಬಂದಿ/ಸಿಆರ್-62/2024-25 ದಿನಾಂಕ: 25.11.2024.

ಇವರಿಗೆ,

ಮಾನ್ಯ ಕಾರ್ಯದರ್ಶಿಗಳು,
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳ,
'ಅಭಿವೃದ್ಧಿ ಭವನ' ಐವಾನ-ಎ-ಶಾಹಿ ಎದುರುಗಡೆ,
ಕಲಬುರಗಿ.

ಮಾನ್ಯರೆ,

ವಿಷಯ:-2023-24 ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳ ಯೋಜನೆ ಅಡಿಯಲ್ಲಿ ಹುಮನಾಬಾದ ತಾಲೂಕಿಗೆ ಮಂಜೂರಾದ ಕಾಮಗಾರಿ ಪ್ರಾರಂಭಿಸಲು ಮಾನ್ಯ ವಿಧಾನ ಪರಿಷತ್ ಶಾಸಕರಿಗೆ ಆಹ್ವಾನಿಸಲು ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಕುರಿತು.

ಉಲ್ಲೇಖ:-1)ಮಾನ್ಯ ಕಾರ್ಯದರ್ಶಿಗಳು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳ ಕಲಬುರಗಿ ಇವರ ಪತ್ರ ಸಂಖ್ಯೆ:ಕೆ.ಕೆ.ಆರ್.ಡಿ.ಬಿ/ಸಿಬ್ಬಂದಿ/03/2023-24/6772. ದಿನಾಂಕ:25.10.2024.

2)ಯೋಜನಾ ವ್ಯವಸ್ಥಾಪಕರು ನಿರ್ಮಿತಿ ಕೇಂದ್ರ ಬೀದರ ಇವರ ಪತ್ರ ಸಂಖ್ಯೆ:ನಿಕೆಜ/ಕೆಕೆಆರ್‌ಡಿಬಿ/ಕಾಮಗಾರಿ/ಸಿಆರ್- /2024-25. ದಿನಾಂಕ: 22.08.2024.

3)ಜಿಲ್ಲಾಧಿಕಾರಿಗಳ ಕಛೇರಿ ಶಿಷ್ಟಾಚಾರ ಪಾನೆ ಪತ್ರ ಸಂಖ್ಯೆ: ಕಂದಾಯ/ಸಿಬ್ಬಂದಿ/ಸಿಆರ್- /2024-25. ದಿನಾಂಕ:09.10.2024.

• • • •

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಪತ್ರದ ಮೂಲಕ 2023-24 ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳ ಯೋಜನೆ ಅಡಿಯಲ್ಲಿ ಮಂಜೂರಾದ ಹುಮನಾಬಾದ ಪಟ್ಟಣದಲ್ಲಿ ದಿನಾಂಕ: 27.08.2024 ರಂದು ಬೆಳಿಗ್ಗೆ 11.00 ಗಂಟೆಗೆ ನಿಗದಿಪಡಿಸಲಾಗಿದ್ದ ವಿವಿಧ ಕಾಮಗಾರಿಗಳ ಅಡಿಗಲ್ಲು ಸಮಾರಂಭ ಕಾರ್ಯಕ್ರಮದ ದಿನಾಂಕ: 26.08.2024 ನಿರ್ಮಿತಿ ಕೇಂದ್ರದ ಸಿಬ್ಬಂದಿಯೊಂದಿಗೆ ಕಾರ್ಯಕ್ರಮದ ಮಾಹಿತಿ ಕೋರಲಾಗಿದ್ದು, ಸದರಿಯವರು ಸರಿಯಾದ ಮಾಹಿತಿ ನೀಡದೆ ಉದ್ದೇಶಪೂರ್ವಕವಾಗಿ ಮರುದಿನ ನಡೆದ ಕಾರ್ಯಕ್ರಮಕ್ಕೆ ಹಾಜರಾಗದಂತೆ ತಡೆಯುವ ಮೂಲಕ ಶಿಷ್ಟಾಚಾರ ಉಲ್ಲಂಘನೆ ಮಾಡಿರುವವರ ಮೇಲೆ ನಿಯಮಾವಳಿ ರೀತ್ಯ ಕ್ರಮ ಕೈಗೊಳ್ಳಬೇಕೆಂದು ಕೋರಿರುವ ಪ್ರಕರಣವನ್ನು ಹಕ್ಕು ಬಾಧ್ಯತಾ ಸಮಿತಿಗೆ ಒದಗಿಸಲು ಸೂಚಿಸಿರುತ್ತಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ಮಾನ್ಯರ ಗಮನಕ್ಕೆ ತರಲಾಗಿದೆ.

1. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳ ಯೋಜನೆ ಅಡಿಯಲ್ಲಿ ಹುಮನಾಬಾದ ತಾಲೂಕಿನಲ್ಲಿ ದಿನಾಂಕ:27.08.2024 ರಂದು ಅಡಿಗಲ್ಲು ಸಮಾರಂಭಕ್ಕೆ ಶಾಸಕರು ವಿಧಾನಸಭೆ ಹಾಗೂ ವಿಧಾನ ಪರಿಷತ್ ಇವರಿಗೆ ಆಹ್ವಾನಿಸಲಾಗಿರುತ್ತದೆ.

2. ಹುಮನಾಬಾದ ತಾಲೂಕಿನ ನಿರ್ಮಿತಿ ಕೇಂದ್ರದ ಅಭಯಂತರರು ಉಲ್ಲೇಖ (2) ಪತ್ರದನ್ವಯ ಮಾನ್ಯ ಶಾಸಕರು ವಿಧಾನ ಪರಿಷತ್ ಇವರಿಗೆ ದಿನಾಂಕ: 27.08.2024 ರಂದು ಬೆಳಗ್ಗೆ 11.00 ಗಂಟೆಗೆ ನಿಗದಿಪಡಿಸಲಾದ ಸಮಾರಂಭ ಕಾರ್ಯಕ್ರಮಕ್ಕೆ ಆಹ್ವಾನಿಸಿ ಮಾನ್ಯ ಶಾಸಕರ ಆಪ್ತ ಸಹಾಯಕರ ಸಹಿ ಪಡೆದಿರುತ್ತಾರೆ.

3. ಮಾನ್ಯ ಶಾಸಕರು ವಿಧಾನ ಪರಿಷತ್ ಇವರು ನಿರ್ಮಿತಿ ಕೇಂದ್ರ ಹುಮನಾಬಾದ ತಾಲೂಕಿನ ಅಭಯಂತರರಾದ ಶ್ರೀ ನಾವೇದ್ ಇವರಿಗೆ ಕಾರ್ಯಕ್ರಮದ ಒಂದು ದಿವಸ ಮುಂಚೆ ದೂರವಾಣಿ ಮೂಲಕ ಅಡಿಗಲ್ಲು ಸಮಾರಂಭದ ಮಾಹಿತಿ ನೀಡದಿರುವ ಕುರಿತು ಉಲ್ಲೇಖಿಸಲಾಗಿರುತ್ತದೆ. ಸದರಿ ಅಭಯಂತರರಿಗೆ ಮಾನ್ಯ ವಿಧಾನ ಪರಿಷತ್ ಸದಸ್ಯರು ದೂರವಾಣಿ ಮೂಲಕ ಕಾರ್ಯಕ್ರಮದ ವಿವರಣೆ ಕೋರಿದಾಗ ಮಾನ್ಯ ಶಾಸಕರು ವಿಧಾನ ಸಭೆ ಹುಮನಾಬಾದ ಮತಕ್ಷೇತ್ರ ಇವರು ಅಡಿಗಲ್ಲು ಸಮಾರಂಭದ ನಿಖರ ಮಾಹಿತಿ ನೀಡದಿರುವುದಕ್ಕೆ ಸ್ಪಷ್ಟವಾಗಿ ಸಮಾರಂಭದ ವಿವರ ನೀಡಿರುವುದಿಲ್ಲ.

4. ನಂತರ ಸಮಾರಂಭದ ದಿವಸ ಅಡಿಗಲ್ಲು ಸಮಾರಂಭದ ಕುರಿತು ದೂರವಾಣಿ ಮೂಲಕ ನಿರ್ಮಿತಿ ಕೇಂದ್ರದ ಅಧಿಕಾರಿಗಳು ಮಾನ್ಯ ವಿಶೇಷಾನಪರಿಷತ್ ಸದಸ್ಯರಿಗೆ ತಿಳಿಸಿರುತ್ತಾರೆ.

5. ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರ ವಿರುದ್ಧ ಅನೇಕ ದೂರುಗಳು ಇದ್ದು ಸಮಗ್ರ ತನಿಖೆ ನಡೆಸಲಾಗುತ್ತಿದೆ, ಸದ್ಯ ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರು ಅಪಘಾತದಲ್ಲಿ ಮರಣಹೊಂದಿರುವುದರಿಂದ ವಿವರಣೆ ಪಡೆಯಲು ಸಾಧ್ಯವಾಗಿರುವುದಿಲ್ಲ.

6. ನಿರ್ಮಿತಿ ಕೇಂದ್ರದ ಹುಮಾನಾದ ತಾಲೂಕಿನ ಅಭಯಂತರರು ಜಿಲ್ಲಾಧಿಕಾರಿಗಳ ಕಛೇರಿ ಕಾರಣ ಕೇಳಿ ನೋಟೀಸಿಗೆ ಉತ್ತರಿಸುತ್ತ, ದಿನಾಂಕ: 27.08.2024 ರಂದು ಮಾನ್ಯ ವಿಧಾನ ಪರಿಷತ್ ಸದಸ್ಯರಿಗೆ ಸಮಾರಂಭದ ಮಾಹಿತಿ ನೀಡಿರುವುದಾಗಿ ತಿಳಿಸಿರುತ್ತಾರೆ.

ಉಲ್ಲೇಖ (3) ರ ಜಿಲ್ಲಾಧಿಕಾರಿಗಳ ಶಿಷ್ಟಾಚಾರ ಪಾಲನೆ ಸುತ್ತೋಲೆ ಅನ್ವಯ ಜಿಲ್ಲೆಯ ಅನುಷ್ಠಾನ ಅಧಿಕಾರಿಗಳಿಗೆ ಸೂಕ್ತ ಶಿಷ್ಟಾಚಾರ ಪಾಲನೆ ಮಾಡಲು ಸೂಚಿಸಲಾಗಿರುತ್ತದೆ.

ಸದರಿ ವಿಷಯವನ್ನು ಮಾನ್ಯರ ಅವಗಾಹನೆಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ

ಜಿಲ್ಲಾಧಿಕಾರಿ,
ಬೀದರ ಜಿಲ್ಲೆ, ಬೀದರ

ಅಡಕ: ( ).

ಎ.ಆರ್. ರವಿ
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ
ಆಪ್ತ ಕಾರ್ಯದರ್ಶಿ

A.R. RAVI
Private Secretary to Minister for
Forest, Ecology and Environment

ಕೊಠಡಿ ಸಂಖ್ಯೆ: 36 ಮತ್ತು 37, ನೆಲಮಹಡಿ,
ವಿಕಾಸಸೌಧ, ಬೆಂಗಳೂರು-560 001
Room No. 36 & 37, Ground Floor,
Vikasa Soudha, Bengaluru-560 001
Telephone: 080-22386063, 22034214
email: goldforestminister@gmail.com

ಸಂಖ್ಯೆ:ಅಜೀಪ/ಆಕಾ/274/2024-25 ದಿನಾಂಕ:09.09.2024

ಟಿಪ್ಪಣಿ

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಯೋಜನೆಯಡಿಯಲ್ಲಿ ಹುಮನಾಬಾದ ಪಟ್ಟಣದಲ್ಲಿ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಕಾರ್ಯಕ್ರಮವನ್ನು ನಿರ್ಮಿತಿ ಕೇಂದ್ರ, ಬೀದರ ವತಿಯಿಂದ ದಿನಾಂಕ: 27.08.2024ರಂದು ಶಿಷ್ಟಾಚಾರ ಉಲ್ಲಂಘಿಸಿ ನಡೆಸಿರುವುದರಿಂದ ಶ್ರೀ ಭೀಮರಾವ್ ಬಿ. ಪಾಟೀಲ, ವಿಧಾನ ಪರಿಷತ್ ಸದಸ್ಯರು, ಸ್ಥಳೀಯ ಸಂಸ್ಥೆಗಳ ಕ್ಷೇತ್ರ, ಬೀದರ ಇವರು ಯೋಜನಾ ವ್ಯವಸ್ಥಾಪಕರು ಹಾಗೂ ಕಿರಿಯ ಅಭಿಯಂತರು, ನಿರ್ಮಿತಿ ಕೇಂದ್ರ ಹಾಗೂ ಗುತ್ತಿಗೆದಾರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸದರಿ ವಿಷಯದ ಕುರಿತು ತನಿಖೆ ನಡೆಸಿ, 3 ದಿನಗಳೊಳಗಾಗಿ ವರದಿ ನೀಡಲು ಕೋರುವಂತೆ ಮಾನ್ಯ ಸಚಿವರಿಂದ ನಿರ್ದೇಶಿತನಾಗಿದ್ದೇನೆ.

(ಎ. ಆರ್. ರವಿ)

ಜಿಲ್ಲಾಧಿಕಾರಿಗಳು,
ಬೀದರ ಜಿಲ್ಲೆ, ಬೀದರ.

ನಿರ್ಮಿತಿ ಕೇಂದ್ರ, ಬೀದರ

ಬಸವೇಶ್ವರ ವೃತ್ತದ ಹತ್ತಿರ, ಸೌಬಾದ ಬೀದರ

ಸಂ:ನಿಕೆಬಿ/ಅಡಳಿತ/ಸಿಆರ್– /2024–25/104 ದಿನಾಂಕ: 09.09.2024

ಇವರಿಗೆ,
ಮಾನ್ಯ ಎ.ಆರ್.ರವಿ
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ
ಆಪ್ತ ಕಾರ್ಯದರ್ಶಿ,
ವಿಕಾಸ ಸೌಧ, ಬೆಂಗಳೂರು,

ಮಾನ್ಯರೆ,

ವಿಷಯ: 2023–24ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಯೋಜನೆ ಅಡಿಯಲ್ಲಿ ಹುಮನಾಬಾದ ಪಟ್ಟಣದಲ್ಲಿ ನಡೆದ ವಿವಿಧ ಕಾಮಗಾರಿಗಳ ಅಡಿಗಲ್ಲು ಕಾರ್ಯಕ್ರಮಕ್ಕೆ ವಿಧಾನ ಪರಿಷತ ಸದಸ್ಯರನ್ನು ಆಹ್ವಾನಿಸದೇ ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಕುರಿತು.

ಉಲ್ಲೇಖ: ತಮ್ಮ ಕಚೇರಿ ಪತ್ರ ಸಂ: ಅಜೀಪ/ಅಕಾ/274/2024–25 ದಿನಾಂಕ: 09.09.2024. ಈ ಮೇಲ್ ಮುಖಾಂತರ

* * * * *

ಮೇಲೆ ವಿವರಿಸಿರುವ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದ ನಿರ್ದೇಶನದ ಪ್ರಕಾರ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಅಡಿಯಲ್ಲಿ ಮಂಜೂರಾದ 2023–24ನೇ ಸಾಲಿನ ಕಾಮಗಾರಿಯಾದ ಹುಮನಾಬಾದ ಪಟ್ಟಣದಲ್ಲಿ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಕಾರ್ಯಕ್ರಮವನ್ನು ನಿರ್ಮಿತಿ ಕೇಂದ್ರದವತಿಯಿಂದ ನಿರ್ವಹಿಸುತ್ತಿದ್ದು, ಸದರಿ ದಿನಾಂಕ: 27.08.2024ರಂದು ನಡೆದ ಅಡಿಗಲ್ಲು ಸಮಾರಂಭಕ್ಕೆ ಶಿಷ್ಟಾಚಾರ ಉಲ್ಲಂಘನೆ ಯಾಗಿರುವುದರ ಪ್ರಕಾರ, ಶಿಷ್ಟಾಚಾರಕ್ಕೆ ಮೂಲ ಕಾರಣರಾದ ಈ ಹಿಂದೆ ಯೋಜನಾ ವ್ಯವಸ್ಥಾಪಕರಾಗಿದ್ದ ಶ್ರೀ ಓಂಕಾರ ಶೇಟಕಾರ ರವರನ್ನು ಮಾನ್ಯ ಅಧ್ಯಕ್ಷರು ನಿರ್ಮಿತಿ ಕೇಂದ್ರ ಹಾಗೂ ಜಿಲ್ಲಾಧಿಕಾರಿಗಳು ಬೀದರ ರವರ ಆದೇಶದ ಮೇರೆಗೆ ಕರ್ತವ್ಯದಲ್ಲಿ ಬೇಜವಾಬ್ದಾರಿತನ, ನಿಷ್ಕಾಳಜಿತನ ಹಾಗೂ ಕಾರಣಾಂತರದಿಂದ ಸದರಿಯವರನ್ನು ಈಗಾಗಲೇ ಕರ್ತವ್ಯದಿಂದ ವಜಾಗೊಳಿಸಲಾಗಿರುತ್ತದೆ ಎಂದು ಈ ಮೂಲಕ ಮಾನ್ಯರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.

ಮುದನೆಗಳೊಂದಿಗೆ,

ತಮ್ಮ ವಿಶ್ವಾಸಿ

10/9/24

ಯೋಜನಾ ವ್ಯವಸ್ಥಾಪಕರು,
ನಿರ್ಮಿತಿ ಕೇಂದ್ರ ಬೀದರ

ದಿನಾಂಕ: 29.08.2024

ಇವರಿಗೆ,
ಮಾನ್ಯ ಜಿಲ್ಲಾಧಿಕಾರಿಗಳು
ಬೀದರ

ಮಾನ್ಯರೇ


ವಿಷಯ: ಕಾರಣ ಕೇಳುವ ನೋಟಿಸಿಗೆ ಉತ್ತರಿಸುವ [illegible] ಕ೦/ಸಿಬ್ಬ೦ದಿ/ಸಿಆರ್-
ಉಲ್ಲೇಖ: ತಮ್ಮ ಕಚೇರಿಯ ಕಾರಣ ಕೇಳುವ ನೋಟಿಸ್ [illegible]
62/2024-25/753 ದಿನಾಂಕ: 28.08.2024.

****

ಮೇಲ್ಕಂಡ ವಿಷಯಕ್ಕೆ ಹಾಗೂ ಉಲ್ಲೇಖಿತ ಪತ್ರಕ್ಕೆ [illegible]ದ್ರೇಸಿದಂತೆ, ನಾನು ಸಮೀದ್ ಅಹಮದ್ ಇಂಜಿನಿಯರ್ ನಿರ್ಮಿತಿ ಕೇಂದ್ರ ಬೀದರ, ತಮ್ಮ [illegible] ಕರಬಯಸುವುದೆನೆಂದರೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಯೋಜನೆಯಡಿ [illegible]ವರ್ಷಿಸುತ್ತಿರುವ ಕಾಮಗಾರಿಗಳಿಗೆ ಅಡಿಗಲ್ಲು ಸಮಾರಂಭದ ಕುರಿತು ಮಾನ್ಯ ಶಾಸಕರ [illegible] ದಿನಾಂಕ: 18.08.2024ರಂದು ತಿಳಿಸಿರುತ್ತಾರೆ, ದಿನಾಂಕ 18.08.2024 ರಿಂದ 22.08.2024ರವರೆಗೆ [illegible] ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರಾದ ಶ್ರೀ ಓಂಕಾರ ಶೇಟಕಾರ ರವರಿಗೆ ಪದೇ ಪದೇ [illegible]ಗಲ್ಲು ಸಮಾರಂಭ ಕಾರ್ಯಕ್ರಮ ಹಾಗೂ ಮಾನ್ಯ ವಿಧಾನ ಪರಿಷತ ಸದಸ್ಯರಿಗೆ ಭೇಟಿಯಾಗಿ [illegible]ವಂತೆ ಗಮನಕ್ಕೆ ತಂದಿರುತ್ತೇನೆ ಆದರೂ ಸಹ ಅವರು ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ [illegible]ನೊ ನಿಷ್ಕಾಳಜಿತನ ವಹಿಸಿರುತ್ತಾರೆ ಮತ್ತು ದಿನಾಂಕ 22.08.2024ರಂದು ನಾನು ಅವರಿಗೆ ದೂರವಾಣಿ [illegible] ಮಾಡಿದಾಗ ನಿಮ್ಮ ಕೆಲಸ ಹಾಗೂ ನಿಮ್ಮ ಕಾರ್ಯಕ್ರಮ ನಿಮಗೆ ಗೊತ್ತು, ನಾನು ಯೋಜನಾ ವ್ಯವಸ್ಥಾಪಕರ ಹುದ್ದೆಯು ನಿರ್ವಹಿಸುತ್ತಿಲ್ಲ ಎಂದು ಉತ್ತರ ನೀಡಿರುತ್ತಾರೆ.

ನಂತರ ಕಾಮಗಾರಿಗಳ ಅಡಿಗಲ್ಲು ಸಮಾರಂಭ ಕುರಿತು ಮಾನ್ಯ ಶಾಸಕರಿಗೆ ದಿನಾಂಕ: 23.08.2024ರಂದು ಗಮನಕ್ಕೆ ತಂದು ಕಾರ್ಯಕ್ರಮದ ದಿನಾಂಕವನ್ನು ಮುಂದೂಡಿಸಲು ಮನವಿ ಮಾಡಿರುತ್ತೇನೆ, ಆದರೂ ದಿನಾಂಕವನ್ನು ಮುಂದೂಡಿಸಲು ಅವರು [illegible]ಕರಿಸಿರುತ್ತಾರೆ.

ಆದಕಾರಣ ದಿನಾಂಕ: 24.08.2024ರಂದು ಮಾನ್ಯ ಶ್ರೀ [illegible]ದ್ರಶೇಖರ ಬಿ. ಪಾಟೀಲ್ ವಿಧಾನ ಪರಿಷತ ಸದಸ್ಯರು ಹಾಗೂ ಶ್ರೀ ಭೀಮರಾವ ಬಿ. ಪಾಟೀಲ್ ರವರ ಗೃಹ ಕಚೇರಿಗೆ ಹೋಗಿ ಅವರ ಆಪ್ತರಿಗೆ ಭೇಟಿ ಮಾಡಿ ಆಹ್ವಾನ ಪತ್ರ ನೀಡಿರುತ್ತೇನೆ. ಶ್ರೀ ಭೀಮರಾವ ಬಿ. ಪಾಟೀಲ್ ವಿಧಾನ ಪರಿಷತ ಸದಸ್ಯರ ಆಪ್ತರು ನನಗೆ ಮಾನ್ಯ ವಿಧಾನ ಪರಿಷತ ಸದಸ್ಯರಿಗೆ ದೂರವಾಣಿ ಕರೆ ಮಾಡಲು ಸೂಚಿಸಿರುತ್ತಾರೆ, ತದನಂತರ ದೂರವಾಣಿ ಮುಖಾಂತರ ಮಾತನಾಡಿದಾಗ ಮಾನ್ಯ ವಿಧಾನ ಪರಿಷತ ಸದಸ್ಯರು ಕಾರ್ಯಕ್ರಮದ ಪ್ರಯುಕ್ತ ಎಲ್ಲಾ ಮಾಹಿತಿಯನ್ನು ಪಡೆದಿರುತ್ತಾರೆ.



ಮಾನ್ಯ ವಿಧಾನ ಪರಿಷತ್ ಸದಸ್ಯರು ಭೀಮರಾಯ ಬಿ ಪಾಟೀಲ್ ಅಪ್ತರು ದಿನಾಂಕ: 27.08.2024ರಂದು ದೂರವಾಣಿ ಮೂಲಕ ಕೇಳಿರುವ ಪ್ರಯುಕ್ತ ಮಾಹಿತಿ ಅಡಿಗಲ್ಲು ಸಮಾರಂಭವು ಎಲ್ಲಿ ಮತ್ತು ಯಾವಾಗ ಎಂದು ತಿಳಿಸಲಾಗಿದೆ.

ಸದರಿ ವಿಷಯದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು/ಕಾರ್ಯನಿರ್ವಹಣಾಧಿಕಾರಿಗಳು/ಕಾರ್ಯಪಾಲಕ ಅಭಿಯಂತರರು/ಸಹಾಯಕ ಅಭಿಯಂತರರು/ಗುತ್ತಿಗೆದಾರರು ಮಾನ್ಯ ವಿಧಾನ ಪರಿಷತ ಸದಸ್ಯರಿಗೆ ಭೇಟಿಯಾಗಿ ಅಡಿಗಲ್ಲು ಸಮಾರಂಭಕ್ಕೆ ಸಂಬಂಧಪಟ್ಟಂತೆ ಚರ್ಚಿಸಿದ್ದಲ್ಲಿ ಈ ರೀತಿ ತಪ್ಪಾಗಿರುತ್ತದೆಯಲ್ಲಿಲ್ಲ ಹಾಗೂ ನನ್ನ ತಪ್ಪಿಗೆ ಕ್ಷಮೆಯಾಚಿಸಿ ಇನ್ನು ಮುಂದೆ ಇಲಾಖೆಗೆ ಸಂಬಂಧಪಟ್ಟಂತೆ ಇರಹದ ಯಾವುದೇ ತಪ್ಪಾಗದಂತೆ ನೋಡಿಕೊಳ್ಳುತ್ತೇನೆ ಎಂದು ಈ ಮೂಲಕ ತಮ್ಮ ದಯಾಪರ ಮಾಹಿತಿಗಾಗಿ ಸಲ್ಲಿಸಿರುತ್ತೇನೆ.

ವಂದನೆಗಳೊಂದಿಗೆ,

ಲಗತ್ತು.

1) ಕಾರ್ಯಕ್ರಮದ ಭಾವಚಿತ್ರಗಳು
2) ಆಹ್ವಾನ ಪತ್ರದ ಪ್ರತಿ.

ತಮ್ಮ ವಿಶ್ವಾಸಿ

ಮಹ್ಮದ ಸವೀದ ಅಹ್ಮದ
ಅಭಿಯಂತರರು
ನಿರ್ಮಿತಿ ಕೇಂದ್ರ, ಬೀದರ

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೀದರ್ ಜಿಲ್ಲೆ , ಬೀದರ್

Office of the Deputy Commissioner, Bidar District, Bidar-585401, Karnataka

Phone: 08482-225409 Fax: 08482-225262 Email: deo.bidar@gmail.com

ಸಂಖ್ಯೆ: ಕಂ/ಸಿಬ್ಬಂದಿ/ಸಿಆರ್-67/2024-25/4533 ದಿನಾಂಕ: 28.08.2024.

: ಕಾರಣ ಕೇಳುವ ನೋಟಿಸು :

ವಿಷಯ : 2023-24 ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಯೋಜನೆ ಅಡಿಯಲ್ಲಿ ಹುಮನಾಬಾದ ಪಟ್ಟಣದಲ್ಲಿ ನಡೆದ ವಿವಿಧ ಕಾಮಗಾರಿಗಳ ಅಡಿಗಲ್ಲು ಕಾರ್ಯಕ್ರಮಕ್ಕೆ ವಿಧಾನ ಪರಿಷತ್ತ ಸದಸ್ಯರನ್ನು ಆಹ್ವಾನಿಸದೇ ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಕುರಿತು.

ಉಲ್ಲೇಖ: 1. ಡಾ: ಚಂದ್ರಶೇಖರ ಬಿ.ಪಾಟೀಲ್, ಮಾನ್ಯ ಶಾಸಕರು ಕರ್ನಾಟಕ ವಿಧಾನ ಪರಿಷತ್ತ ಈಶಾನ್ಯ ಪದವಿಧರರ ಕ್ಷೇತ್ರ, ಬೀದರ ರವರ ಪತ್ರ ದಿ: 28.08.2024.

2. ಶ್ರೀ ಭೀಮರಾವ ಬಿ.ಪಾಟೀಲ್, ಮಾನ್ಯ ಶಾಸಕರು, ಕರ್ನಾಟಕ ವಿಧಾನ ಪರಿಷತ್ತ ಸದಸ್ಯರು, ಸ್ಥಳಿಯ ಸಂಸ್ಥೆಗಳ ಕ್ಷೇತ್ರ, ಬೀದರ ರವರ ಪತ್ರ ದಿ: 28.08.2024.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನೀವು ಇಂಜಿಯರ್, ನಿರ್ಮಿತಿ ಕೇಂದ್ರ, ಬೀದರ ಎಂದು ಕರ್ತವ್ಯ ನಿರ್ವಹಿಸುತ್ತಿದ್ದು, ಉಲ್ಲೇಖಿತ (01) ಮತ್ತು (02) ರ ಮೂಲಕ 2023-24 ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಯೋಜನೆ ಅಡಿಯಲ್ಲಿ ಹುಮನಾಬಾದ ಪಟ್ಟಣದಲ್ಲಿ ದಿನಾಂಕ: 27.08.2024 ರಂದು ಸಮಯ ಬೆಳಗ್ಗೆ 11.00 ಗಂಟೆಗೆ ವಿವಿಧ ಕಾಮಗಾರಿಗಳ ಅಡಿಗಲ್ಲು ಸಮಾರಂಭ ನಿಗಧಿಪಡಿಸಿದ್ದು ಅದರ ಕಾರ್ಯಕ್ರಮಕ್ಕೆ ಆಹ್ವಾನದ ಬಗ್ಗೆ ದಿನಾಂಕ: 24.08.2024 ರಂದು ನೀವು ಶಾಸಕರ ಕಛೇರಿಗೆ ಪತ್ರ ನೀಡಿರುತ್ತಿರಿ. ಸರ್ಕಾರದ ಯಾವುದೇ ಉದ್ಘಾಟನೆ , ಶಂಕು ಸ್ಥಾಪನೆ, ಲೋಕಾರ್ಪಣೆ ಕಾರ್ಯಕ್ರಮಕ್ಕೆ ಸರ್ಕಾರದ ಚುನಾಯಿತ ಜನಪ್ರತಿನಿಧಿಗಳನ್ನು ಆದ್ಯತಾ ಸೂಚಿ ಪಟ್ಟಿ ಮತ್ತು ಇತರೆ ಸನ್ನಿವೇಶಗಳನ್ನು ಆಧಾರಿಸಿ ಕೇಂದ್ರ ಸಚಿವರಗಳು, ರಾಜ್ಯ ಸಂಪುಟ ದರ್ಜೆ ಸಚಿವರು, ರಾಜ್ಯ ಸಚಿವರು, ಸಂಸತ್ ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ಆಹ್ವಾನಿಸಿ ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸತಕ್ಕದ್ದು ಈಗಾಗಲೇ ಸರ್ಕಾರವು ಸುತ್ತೋಲೆಯನ್ನು ಹೊರಡಿಸಿರುತ್ತದೆ. ಸದರಿ ಸುತ್ತೋಲೆಯ ಪ್ರಕಾರ 07 ದಿವಸಗಳ ಮುಂಚಿತವಾಗಿ ಸಮಾರಂಭ ಕಾರ್ಯಕ್ರಮಕ್ಕೆ ಪೂರ್ವಾನುಮತಿ ಪಡೆದು ಖುದ್ದಾಗಿ ಸಂಬಂಧಪಟ್ಟ ಇಲಾಖೆ ಮುಖ್ಯಸ್ಥರು ಹೋಗಿ ಆಹ್ವಾನ ನೀಡಲು ಸೂಚಿಸಿರುತ್ತಾರೆ.

ಆದರೆ ನೀವು ಸದರಿ ಅಡಿಗಲ್ಲು ಕಾರ್ಯಕ್ರಮದ ನಿಖರ ಮಾಹಿತಿ ನೀಡಿರುವುದಿಲ್ಲ. ದಿನಾಂಕ: 27.08.2024 ರಂದು ದೂರವಾಣಿ ಮೂಲಕ ವಿವಿಧ ಕಾಮಗಾರಿಗಳ ಅಡಿಗಲ್ಲು ಸಮಾರಂಭದ ಬಗ್ಗೆ ವಿಧಾನ ಪರಿಷತ್ತ ಸದಸ್ಯರ ಗಮನಕ್ಕೆ ತಂದಿರುತ್ತಿರಿ. ದಿನಾಂಕ: 26.08.2024 ರಂದು ಮಾನ್ಯ ವಿಧಾನ ಪರಿಷತ್ತ ಸದಸ್ಯರು ನಿಮಗೆ ದೂರವಾಣಿ ಕರೆ ಮಾಡಿದಾಗ, ಸಮಾರಂಭದ ಬಗ್ಗೆ ವಿಚಾರಿಸಿದಾಗ ಮಾನ್ಯ ಶಾಸಕರಿಗೆ ತಿಳಿಸಿರುವುದಿಲ್ಲ ಯಾವುದೇ ಕಾರ್ಯಕ್ರಮ ನಿಶ್ಚಯವಾಗಿರುವುದಿಲ್ಲವೆಂದು ತಿಳಿಸಿರುತ್ತೀರಿ. ಮುಂದೆ ಮಾನ್ಯ ವಿಶಾಣ ಪರಿಷತ್ತ ಸದಸ್ಯರು ಪ್ರಸ್ತಾವನೆಯೋಜಿತ ಕಾರ್ಯಕ್ರಮದ ನಿಮಿತ್ಯ ಬೇರೆ ಕಡೆ ತೆರಳದ ದಿವಸದಂದು ನೀವು ಸ್ಥಳಿಯ ಶಾಸಕರ ಸೇರಿ ದಿನಾಂಕ: 27.08.2024 ರಂದು ಬೆಳಿಗ್ಗೆ 11.00 ಗೆ 2023-24 ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಯೋಜನೆ ಅಡಿಯಲ್ಲಿ ಹುಮನಾಬಾದ ಪಟ್ಟಣದಲ್ಲಿ ಅಡಿಗಲ್ಲು ಸಮಾರಂಭ ನಡೆಸುತ್ತಿರಿ

ಸದರಿ ವಿಷಯವನ್ನು ವಿಧಾನ ಪರಿಷತ್ತಿನ ಸದಸ್ಯರು ಗಂಭೀರವಾಗಿ ಪರಿಗಣಿಸಿರುತ್ತಾರೆ. ಸರ್ಕಾರದ ಯೋಜನೆಗಳ ಅಡಿ ಕಾಮಗಾರಿಗಳ ಅಡಿಗಲ್ಲು ಕಾರ್ಯಕ್ರಮಕ್ಕೆ ಆಹ್ವಾನಿಸದೇ ಇರುವುದು ಶಿಷ್ಟಾಚಾರ ಉಲ್ಲಂಘನೆ ಮತ್ತು ಕರ್ತವ್ಯಲೋಪ ಎಸಗಿರುತ್ತೀರಿ.

ನೀವು ಸರ್ಕಾರದ ನಿಯಮಗಳು ಉಲ್ಲೇಂಘನೆ ಮಾಡಿರುತ್ತೀರಿ. ಕಾರಣ ನೀವು ಕರ್ತವ್ಯ ನಿರ್ವಹಿಸುವಲ್ಲಿ ನಿರ್ಲಕ್ಷತನ ಹಾಗೂ ಬೇಜವಾಬ್ದಾರಿತನ ತೋರಿಸಿರುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಕಾರಣ ನೀವು ಕರ್ತವ್ಯದಲ್ಲಿ ಚ್ಯುತಿ ಎಸಗಿರುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ.

ಪ್ರಯುಕ್ತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 (i)(ii)(iii) ಉಲ್ಲಂಘಿಸಿದ ಕುರಿತು ಏಕೆ ನಿಮ್ಮ ವಿರುದ್ಧ ಶಿಸ್ತಿನ ಕ್ರಮಕ್ಕಾಗಿ ಸರ್ಕಾರಕ್ಕೆ ಶಿಫ್ಹಾರಸ್ಸು ಮಾಡಬಾರದು ಎಂಬುದಕ್ಕೆ ಈ ನೋಟಿಸು ತಲುಪಿದ (3) ದಿವಸಗಳಲ್ಲಿ ನಿಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸತಕ್ಕದ್ದು.

ತಪ್ಪಿದಲ್ಲಿ ನಿಮ್ಮ ಹೇಳಿಕೆ ಏನು ಇಲ್ಲವೆಂದು ಪರಿಗಣಿಸಿ ಸೂಕ್ತ ಕ್ರಮಜರುಗಿಸಲಾಗುವುದು. ಈ ನೋಟಿಸಿನ ಒಂದು ಪ್ರತಿಯನ್ನು ಪಡೆದು ದ್ವಿಪ್ರತಿಯ ಮೇಲೆ ಸಹಿ ಹಾಗೂ ದಿನಾಂಕ ನಮೂದಿಸಿ ಹಿಂದಿರುಗಿಸತಕ್ಕದ್ದು.

ಜಿಲ್ಲಾಧಿಕಾರಿ,
ಬೀದರ ಜಿಲ್ಲೆ, ಬೀದರ.

ಇವರಿಗೆ,
ಶ್ರೀ ಸಾವೇದ,
ಇಂಜಿಯರ್,
ನಿರ್ಮಿತಿ ಕೇಂದ್ರ, ಬೀದರ.

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೀದರ್ ಜಿಲ್ಲೆ , ಬೀದರ್

Office of the Deputy Commissioner, Bidar District, Bidar-585401, Karnataka

Phone: 08482-225409 Fax: 08482-225262 Email: deo.bidar@gmail.com

ಸಂಖ್ಯೆ: ಕಂ/ಸಿಬ್ಬಂದಿ/ಸಿಆರ್-ಬಿಸಿ/2024-25/753 ದಿನಾಂಕ: 28.08.2024.

: ಕಾರಣ ಕೇಳುವ ನೋಟಿಸು :

ವಿಷಯ : 2023-24 ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಯೋಜನೆ ಅಡಿಯಲ್ಲಿ ಹುಮನಾಬಾದ ಪಟ್ಟಣದಲ್ಲಿ ನಡೆದ ವಿವಿಧ ಕಾಮಗಾರಿಗಳ ಅಡಿಗಲ್ಲು ಕಾರ್ಯಕ್ರಮಕ್ಕೆ ವಿಧಾನ ಪರಿಷತ್ತ ಸದಸ್ಯರನ್ನು ಆಹ್ವಾನಿಸದೇ ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಕುರಿತು.

ಉಲ್ಲೇಖ: 1. ಡಾ: ಚಂದ್ರಶೇಖರ ಬಿ.ಪಾಟೀಲ್, ಮಾನ್ಯ ಶಾಸಕರು ಕರ್ನಾಟಕ ವಿಧಾನ ಪರಿಷತ್ತ ಈಶಾನ್ಯ ಪದವಿಧರರ ಕ್ಷೇತ್ರ, ಬೀದರ ರವರ ಪತ್ರ ದಿ: 28.08.2024.

2. ಶ್ರೀ ಭೀಮರಾವ ಬಿ.ಪಾಟೀಲ್, ಮಾನ್ಯ ಶಾಸಕರು, ಕರ್ನಾಟಕ ವಿಧಾನ ಪರಿಷತ್ತ ಸದಸ್ಯರು, ಸ್ಥಳಿಯ ಸಂಸ್ಥೆಗಳ ಕ್ಷೇತ್ರ, ಬೀದರ ರವರ ಪತ್ರ ದಿ: 28.08.2024.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನೀವು ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ, ಬೀದರ ಎಂದು ಕರ್ತವ್ಯ ನಿರ್ವಹಿಸುತ್ತಿದ್ದು, ಉಲ್ಲೇಖಿತ (01) ಮತ್ತು (02) ರ ಮೂಲಕ 2023-24 ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಯೋಜನೆ ಅಡಿಯಲ್ಲಿ ಹುಮನಾಬಾದ ಪಟ್ಟಣದಲ್ಲಿ ದಿನಾಂಕ: 27.08.2024 ರಂದು ಸಮಯ ಬೆಳಿಗ್ಗೆ 11.00 ಗಂಟೆಗೆ ವಿವಿಧ ಕಾಮಗಾರಿಗಳ ಅಡಿಗಲ್ಲು ಸಮಾರಂಭ ನಿಗಧಿಪಡಿಸಿದ್ದು ಅದರ ಕಾರ್ಯಕ್ರಮಕ್ಕೆ ಆಹ್ವಾನದ ಬಗ್ಗೆ ದಿನಾಂಕ: 24.08.2024 ರಂದು ನೀವು ಶಾಸಕರ ಕಛೇರಿಗೆ ಪತ್ರ ನೀಡಿರುತ್ತಿರಿ. ಸರ್ಕಾರದ ಯಾವುದೇ ಉದ್ಘಾಟನೆ , ಶಂಕು ಸ್ಥಾಪನೆ, ಲೋಕಾರ್ಪಣೆ ಕಾರ್ಯಕ್ರಮಕ್ಕೆ ಸರ್ಕಾರದ ಚುನಾಯಿತ ಜನಪ್ರತಿನಿಧಿಗಳನ್ನು ಆದ್ಯತಾ ಸೂಚಿ ಪಟ್ಟಿ ಮತ್ತು ಇತರೆ ಸನ್ನಿವೇಶಗಳನ್ನು ಆಧಾರಿಸಿ ಕೇಂದ್ರ ಸಚಿವರಗಳು, ರಾಜ್ಯ ಸಂಪುಟ ದರ್ಜೆ ಸಚಿವರು, ರಾಜ್ಯ ಸಚಿವರು, ಸಂಸತ್ ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ಆಹ್ವಾನಿಸಿ ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸತಕ್ಕದ್ದು ಈಗಾಗಲೇ ಸರ್ಕಾರವು ಸುತ್ತೋಲೆಯನ್ನು ಹೊರಡಿಸಿರುತ್ತದೆ. ಸದರಿ ಸುತ್ತೋಲೆಯ ಪ್ರಕಾರ 07 ದಿವಸಗಳ ಮುಂಚಿತವಾಗಿ ಸಮಾರಂಭ ಕಾರ್ಯಕ್ರಮಕ್ಕೆ ಪೂರ್ವಾನುಮತಿ ಪಡೆದು ಖುದ್ದಾಗಿ ಸಂಬಂಧಪಟ್ಟ ಇಲಾಖೆ ಮುಖ್ಯಸ್ಥರು ಹೋಗಿ ಆಹ್ವಾನ ನೀಡಲು ಸೂಚಿಸಿರುತ್ತಾರೆ.

ಆದರೆ ನೀವು ಸದರಿ ಅಡಿಗಲ್ಲು ಕಾರ್ಯಕ್ರಮದ ನಿಖರ ಮಾಹಿತಿ ನೀಡಿರುವುದಿಲ್ಲ. ದಿನಾಂಕ: 27.08.2024 ರಂದು ದೂರವಾಣಿ ಮೂಲಕ ವಿವಿಧ ಕಾಮಗಾರಿಗಳ ಅಡಿಗಲ್ಲು ಸಮಾರಂಭದ ಬಗ್ಗೆ ವಿಧಾನ ಪರಿಷತ್ತ ಸದಸ್ಯರ ಗಮನಕ್ಕೆ ತಂದಿರುತ್ತಿರಿ. ದಿನಾಂಕ: 26.08.2024 ರಂದು ಮಾನ್ಯ ವಿಧಾನ ಪರಿಷತ್ತ ಸದಸ್ಯರು ನಿಮಗೆ ದೂರವಾಣಿ ಕರೆ ಮಾಡಿದಾಗ, ಸಮಾರಂಭದ ಬಗ್ಗೆ ವಿಚಾರಿಸಿದಾಗ ಮಾನ್ಯ ಶಾಸಕರಿಗೆ ತಿಳಿಸಿರುವುದಿಲ್ಲ ಯಾವುದೇ ಕಾರ್ಯಕ್ರಮ ನಿಶ್ಚಯವಾಗಿರುವುದಿಲ್ಲವೆಂದು ತಿಳಿಸಿರುತ್ತೀರಿ. ಮುಂದೆ ಮಾನ್ಯ ವಿಶಾಣ ಪರಿಷತ್ತ ಸದಸ್ಯರು ಪೂರ್ವನಿಯೋಜಿತ ಕಾರ್ಯಕ್ರಮದ ನಿಮಿತ್ಯ ಬೇರೆ ಕಡೆ ತೆರಳಿದ ದಿವಸದಂದು ನೀವು ಸ್ಥಳಿಯ ಶಾಸಕರ ಸೇರಿ ದಿನಾಂಕ: 27.08.2024 ರಂದು ಬೆಳಿಗ್ಗೆ 11.00 ಗೆ 2023-24 ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಯೋಜನೆ ಅಡಿಯಲ್ಲಿ ಹುಮನಾಬಾದ ಪಟ್ಟಣದಲ್ಲಿ ಜರುಗಿಸುತ್ತಿರಿ

ಸದರಿ ವಿಷಯವನ್ನು ವಿಧಾನ ಪರಿಷತ್ತಿನ ಸದಸ್ಯರು ಗಂಭಿರವಾಗಿ ಪರಿಗಣಿಸಿರುತ್ತಾರೆ. ಸರ್ಕಾರದ ಯೋಜನೆಗಳ ಅಡಿ ಕಾಮಗಾರಿಗಳ ಅಡಿಗಲ್ಲು ಕಾರ್ಯಕ್ರಮಕ್ಕೆ ಆಹ್ವಾನಿಸದೇ ಇರುವುದು ಶಿಷ್ಟಾಚಾರ ಉಲ್ಲಂಘನೆ ಮತ್ತು ಕರ್ತವ್ಯಲೋಪ ಎಸಗಿರುತ್ತಿರಿ.

ನೀವು ಸರ್ಕಾರದ ನಿಯಮಗಳು ಉಲ್ಲೇಂಘನೆ ಮಾಡಿರುತ್ತಿರಿ. ಕಾರಣ ನೀವು ಕರ್ತವ್ಯ ನಿರ್ವಹಿಸುವಲ್ಲಿ ನಿರ್ಲಕ್ಷತನ ಹಾಗೂ ಬೇಜವಾಬ್ದಾರಿತನ ತೋರಿಸಿರುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಕಾರಣ ನೀವು ಕರ್ತವ್ಯದಲ್ಲಿ ಚ್ಯುತಿ ಎಸಗಿರುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ.

ಪ್ರಯುಕ್ತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 (i)(ii)(iii) ಉಲ್ಲಂಘಿಸಿದ ಕುರಿತು ಏಕೆ ನಿಮ್ಮ ವಿರುದ್ಧ ಶಿಸ್ತಿನ ಕ್ರಮಕ್ಕಾಗಿ ಸರ್ಕಾರಕ್ಕೆ ಶಿಫ್ಪಾರಸ್ಸು ಮಾಡಬಾರದು ಎಂಬುದಕ್ಕೆ ಈ ನೋಟಿಸು ತಲುಪಿದ (3) ದಿವಸಗಳಲ್ಲಿ ನಿಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸತಕ್ಕದ್ದು.

ತಪ್ಪಿದಲ್ಲಿ ನಿಮ್ಮ ಹೇಳಿಕೆ ಏನು ಇಲ್ಲವೆಂದು ಪರಿಗಣಿಸಿ ಸೂಕ್ತ ಕ್ರಮಜರುಗಿಸಲಾಗುವುದು. ಈ ನೋಟಿಸಿನ ಒಂದು ಪ್ರತಿಯನ್ನು ಪಡೆದು ದ್ವಿಪ್ರತಿಯ ಮೇಲೆ ಸಹಿ ಹಾಗೂ ದಿನಾಂಕ ನಮೂದಿಸಿ ಹಿಂದಿರುಗಿಸತಕ್ಕದ್ದು.

28-08-24

ಜಿಲ್ಲಾಧಿಕಾರಿ,
ಬೀದರ ಜಿಲ್ಲೆ, ಬೀದರ.

ಇವರಿಗೆ,
ಶ್ರೀ ಓಂಕಾರ ಶೇಟಕಾರ,
ಯೋಜನಾ ವ್ಯವಸ್ಥಾಪಕರು,
ನಿರ್ಮಿತಿ ಕೇಂದ್ರ, ಬೀದರ.

ನಿರ್ಮಿತಿ ಕೇಂದ್ರ, ಬೀದರ
ಬಸವೇಶ್ವರ ವೃತ್ತದ ಹತ್ತಿರ, ಹುಮನಾಬಾದ ಬೀದರ

ಸಂ:ನಿಕೆಬಿ/ಕೆಕೆಆರ್‌ಡಿಬಿ/ಕಾಮಗಾರಿ/ಸಿಆರ್- /2024-25

ದಿನಾಂಕ: 21/08/2024

ಇವರಿಗೆ,
ಮಾನ್ಯ ಶ್ರೀ ಶರಣಪ್ಪ ಬಿ. ಮಟ್ಟೂರ
ಶ್ರೀ ಬೋಯಿರವ ಬಾಬುರಾವ
ಸರ್ವಸದಸ್ಯರು ಹುಮನಾಬಾದ

ಮಾನ್ಯರೆ,

ವಿಷಯ :-ವಿವಿಧ ಕಾಮಗಾರಿಗಳಿಗೆ ಅಡಿಗಲ್ಲು ಸಮಾರಂಭ ಕಾರ್ಯಕ್ರಮವನ್ನು ನಿಗದಿಪಡಿಸುವ ಕುರಿತು.

ಉಲ್ಲೇಖ : ಮಾನ್ಯ ಶಾಸಕರು, ಹುಮನಾಬಾದ ವಿಧಾನಸಭಾ ಕ್ಷೇತ್ರ ಬೀದರ, ರವರ ಪತ್ರ ಸಂ:ಶಾ/ಹು.ಮ/87/2024-25 ದಿನಾಂಕ: 18.08.2024.

* * * * *


ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, 2023-24ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಯೋಜನೆ ಅಡಿಯಲ್ಲಿ ಹುಮನಾಬಾದ ಮತಕ್ಷೇತ್ರದಲ್ಲಿ ವಿವಿಧ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದ್ದು, ಅದರಂತೆ ಸದರಿ ಕಾಮಗಾರಿಗಳಲ್ಲಿನ ಹುಮನಾಬಾದ ಪಟ್ಟಣದಲ್ಲಿರುವ ಗ್ರಂಥಾಲಯ ಮತ್ತು ಸರಕಾರಿ ಪದವಿ ಪೂರ್ವ ಕಾಲೇಜು (ಬಾಲಕರ) ಪ್ರೌಢ ಶಾಲಾ ವಿಭಾಗ ಮೊದಲನೆ ಮಹಡಿ(ಕನ್ನಡ & ಉರ್ದು) ಕಟ್ಟಡ ನಿರ್ಮಾಣಗಳ ಅಡಿಗಲ್ಲು ಸಮಾರಂಭವನ್ನು ದಿನಾಂಕ: 27.08.2024 ರಂದು ಸಮಯ 11.00 ಗಂಟೆಗೆ ನಿಗದಿ ಪಡಿಸಲಾಗಿದೆ. ಎಂದು ಈ ಮೂಲಕ ತಮಗೆ ಸದರಿ ಕಾರ್ಯಕ್ರಮಕ್ಕೆ ಗೌರವಪೂರ್ವಕ ಆಹ್ವಾನಿಸಲಾಗಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

ಯೋಜನಾ ವ್ಯವಸ್ಥಾಪಕರು
ನಿರ್ಮಿತಿ ಕೇಂದ್ರ, ಬೀದರ

Received


Main Road, Near, Humnabad Rd, Humnabad, Karnataka 585330, India
Humnabad
Karnataka
India
27°C
81°F
Tope Galli Rd
Kallur Rd
Mirza Chowk
Humnabad

ನಮೂನೆ – 1

ಕ್ರ ಸಂ	ಮಾನ್ಯ ಶಾಸಕರು ನೀಡಿರುವ ಹಕ್ಕುಚ್ಯುತಿ ಪ್ರಕರಣದ ವಿವರ	ಪ್ರಕರಣಕ್ಕೆ ಸಂಬಂಧಿಸಿದ ಅಧಿಕಾರಿಗಳು ನೀಡಿರುವ ವಿವರಣೆ (ಹುಮನಾಬಾದ ತಾಲೂಕ ಅಭಯಂತರರು)	ಇಲಾಖಾ ಮುಖ್ಯಸ್ಥರ ಅಭಿಪ್ರಾಯ (ಯೋಜನಾ ವ್ಯವಸ್ಥಾಪಕರು ನಿರ್ಮಿತಿ ಕೇಂದ್ರ)	ಜಿಲ್ಲಾಧಿಕಾರಿಗಳು ಬೀದರ ಇವರ ಅಭಿಪ್ರಾಯ
1	ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃಧ್ಧಿ ಮಂಡಳಿಯ 2023–24ನೇ ಸಾಲಿನ ಯೋಜನೆಯಡಿಯಲ್ಲಿ ಹುಮನಾಬಾದ ಪಟ್ಟಣದಲ್ಲಿ ದಿನಾಂಕ: 27.08.2024ರಂದು ಬೆಳಿಗ್ಗೆ 11:00 ಗಂಟೆಗೆ ನಿಗಧಿಪಡಿಸಲಾಗಿದ್ದ, ವಿವಿಧ ಕಾಮಗಾರಿಗಳ ಅಡಿಗಲ್ಲು ಸಮಾರಂಭ ಕಾರ್ಯಕ್ರಮದ ಕುರಿತು ದಿನಾಂಕ: 26.08.2024ರಂದು ನಿರ್ಮಿತಿ ಕೇಂದ್ರದ ಸಿಬ್ಬಂದಿಯೊಂದಿಗೆ ಕಾರ್ಯಕ್ರಮದ ಬಗ್ಗೆ ಮಾಹಿತಿ ಕೋರಲಾಗಿದ್ದು, ಸರಿಯಾದ ಮಾಹಿತಿ ನೀಡದೆ ಉದ್ದೇಶ ಪೂರ್ವಕವಾಗಿ ಮರುದಿನ ನಡೆದ ಕಾರ್ಯಕ್ರಮಕ್ಕೆ ಹಾಜರಾಗದಂತೆ ತಡೆಯುವ ಮೂಲಕ ಶಿಷ್ಟಾಚಾರ ಉಲ್ಲಂಘನೆ ಮಾಡಿರುವುದಾಗಿ ಮಾನ್ಯ ಶಾಸಕರು ದೂರಿರುತ್ತಾರೆ.	ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃಧ್ಧಿ ಮಂಡಳಿಯ 2023–24ನೇ ಸಾಲಿನ ಯೋಜನೆಯಡಿಯಲ್ಲಿ ಮಂಜೂರಾದ ಕಾಮಗಾರಿ ಅಡಿಗಲ್ಲು ಸಮಾರಂಭಕ್ಕೆ ಶ್ರೀ ಚಂದ್ರಶೇಖರ ಬಿ. ಪಾಟೀಲ್ ಮಾನ್ಯ ವಿಧಾನ ಪರಿಷತ ಸದಸ್ಯರು ಹಾಗೂ ಶ್ರೀ ಭೀಮರಾವ ಬಿ. ಪಾಟೀಲ್ ವಿಧಾನ ಪರಿಷತ್ ಸದಸ್ಯರು ರವರ ಗೃಹ ಕಚೇರಿಗೆ ಹೋಗಿ ಅವರ ಆಪ್ತರಿಗೆ ಭೇಟಿ ಮಾಡಿ ಆಹ್ವಾನ ಪತ್ರ ನೀಡಿರುತ್ತೇನೆ. ಶ್ರೀ ಭೀಮರಾವ ಬಿ. ಪಾಟೀಲ್ ವೀಧಾನ ಪರಿಷತ ಸದಸ್ಯರ ಆಪ್ತರು ನನಗೆ ಮಾನ್ಯ ವಿಧಾನ ಪರಿಷತ ಸದಸ್ಯರಿಗೆ ದೂರವಾಣಿ ಕರೆ ಮಾಡಲು ಸೂಚಿಸಿರುತ್ತಾರೆ, ಅದರಂತೆ ದೂರವಾಣಿ ಮುಖಾಂತರ ಮಾನ್ಯ ಶಾಸಕರಿಗೆ ಮಾತನಾಡಿದ್ದು, ಮಾನ್ಯ ವಿಧಾನ ಪರಿಷತ ಸದಸ್ಯರು ಕಾರ್ಯಕ್ರಮದ ಪ್ರಯುಕ್ತ ಎಲ್ಲಾ ಮಾಹಿತಿಯನ್ನು ಪಡೆದಿರುತ್ತಾರೆ. ಮಾನ್ಯ ವಿಧಾನ ಪರಿಷತ ಸದಸ್ಯರು ಶ್ರೀ ಭೀಮರಾವ ಬಿ.ಪಾಟೀಲ್ ಆಪ್ತರು ದಿನಾಂಕ: 27.08.2024ರಂದು ದೂರವಾಣಿ ಕರೆ ಮಾಡಿ ಅಡಿಗಲ್ಲು ಸಮಾರಂಭವು ಎಲ್ಲಿ ಮತ್ತು ಯಾವಾಗ ಎಂದು ಕೇಳಿರುವ ಪ್ರಯುಕ್ತ ಮಾಹಿತಿ ನೀಡಿರುತ್ತೇನೆ. ಯಾವುದೇ ಶಿಷ್ಟಾಚಾರ ಉಲ್ಲಂಘನೆ ಮಾಡಿರುವುದಿಲ್ಲ, ಈ ಕುರಿತು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ನಿರ್ಮಿತಿ ಕೇಂದ್ರ, ಬೀದರ ರವರ ಸಂಬಂಧಪಟ್ಟ ಪ್ರಕರಣದ ಬಗ್ಗೆ ಕಾರಣ ಕೇಳುವ ನೋಟಿಸ್ ನೀಡಿದ್ದು ಅದರಂತೆ ಉತ್ತರಿಸಿರುತ್ತೇನೆ.	ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಮಗಾರಿ ಸಂಬಂಧಿಸಿದ ಅಭಿಯಂತರರು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃಧ್ಧಿ ಮಂಡಳಿಯ 2023–24ನೇ ಸಾಲಿನ ಯೋಜನೆಯಡಿಯಲ್ಲಿ ಮಂಜೂರಾದ ಕಾಮಗಾರಿ ಅಡಿಗಲ್ಲು ಸಮಾರಂಭಕ್ಕೆ ಸಂಬಂಧಪಟ್ಟ ಶಾಸಕರಿಗೆ ಮಾಹಿತಿ ನೀಡಿರುತ್ತಾರೆ,	ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಮಗಾರಿ ಸಂಬಂಧಿಸಿದ ಅಭಿಯಂತರರು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃಧ್ಧಿ ಮಂಡಳಿಯ 2023–24ನೇ ಸಾಲಿನ ಯೋಜನೆಯಡಿಯಲ್ಲಿ ಮಂಜೂರಾದ ಕಾಮಗಾರಿ ಅಡಿಗಲ್ಲು ಸಮಾರಂಭಕ್ಕೆ ಸಂಬಂಧಪಟ್ಟ ಶಾಸಕರಿಗೆ ಮಾಹಿತಿ ನೀಡಿರುತ್ತಾರೆ. ಮಾನ್ಯ ಶಾಸಕರ ಆಹ್ವಾನ ಪತ್ರ ಆಪ್ತ ಸಹಾಯಕರಿಗೆ ತಲುಪಿಸಿರುವ ಪತ್ರದ ಪ್ರತಿ ಲಗತ್ತಿಸಿದೆ. ಯಾವುದೇ ಶಿಷ್ಟಾಚಾರ ಉಲ್ಲಂಘನೆ ಆಗಿರುವುದಿಲ್ಲ.

ನಿರ್ಮಿತಿ ಅಭಯಂತರರು
ಹುಮನಾಬಾದ

ಯೋಜನಾ ವ್ಯವಸ್ಥಾಪಕರು,
ನಿರ್ಮಿತಿ ಕೇಂದ್ರ, ಬೀದರ.

ಜಿಲ್ಲಾಧಿಕಾರಿ
ಬೀದರ ಜಿಲ್ಲೆ, ಬೀದರ

ದಿ: 14.11.2025ರ ಸಭೆಗೆ ಇಲಾಖಾ ಪ್ರತಿನಿಧಿ
ಅನುಬಂಧ-20



ಕರ್ನಾಟಕ ಸರ್ಕಾರ

ದಿನಾಂಕ: 14.11.2025ರಂದು ನಡೆಯುವ ಕರ್ನಾಟಕ ವಿಧಾನ ಪರಿಷತ್ತಿನ ಹಕ್ಕುಭಾದ್ಯತಾ ಸಮಿತಿ ಸಭೆಗೆ ಮಾಹಿತಿ

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಪರಿವಿಡಿ

ಕ್ರ.ಸಂ	ವಿವರ	ಪುಟ ಸಂಖ್ಯೆ
1	ಮಾಹಿತಿ	1 ರಿಂದ 2
2	ಬೀದರ್ ಜಿಲ್ಲಾಧಿಕಾರಿಗಳ ಪತ್ರ	3 ರಿಂದ 4

ಅನುಬಂಧ -20

ದಿನಾಂಕ: 14.11.2025ರಂದು ನಡೆಯುವ ಹಕ್ಕುಭಾದ್ಯತಾ ಸಮಿತಿಗೆ ಮಾಹಿತಿ

ಕ್ರ. ಸಂ	ಮಾನ್ಯ ಶಾಸಕರು ನೀಡಿರುವ ಹಕ್ಕುಚ್ಯುತಿ ಪ್ರಕರಣದ ವಿವರ	ಪ್ರಕರಣಕ್ಕೆ ಸಂಬಂಧಿಸಿದ ಅಧಿಕಾರಿಗಳು ನೀಡಿರುವ ವಿವರಣೆ	ಯೋಜನಾ ಇಲಾಖೆಯ ಅಭಿಪ್ರಾಯ
1	ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಾದ ಶ್ರೀ ಭೀಮರಾವ್ ಬಸವರಾಜ್ ಪಾಟೀಲ್ ಹಾಗೂ ಡಾ: ಚಂದ್ರಶೇಖರ ಬಿ ಪಾಟೀಲ್ ಅವರುಗಳು ಮಾನ್ಯ ಸಭಾಪತಿಯವರಿಗೆ ಸಲ್ಲಿಸಿರುವ ಹಕ್ಕುಚ್ಯುತಿ ಸೂಚನಾ ಪತ್ರದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ 2023-24ನೇ ಸಾಲಿನ ಯೋಜನೆ ಅಡಿಯಲ್ಲಿ ಹುಮನಾಬಾದ ಪಟ್ಟಣದಲ್ಲಿ ದಿನಾಂಕ: 27.08.2024ರಂದು ಬೆಳಿಗ್ಗೆ 11.00 ಗಂಟೆಗೆ ವಿವಿಧ ಕಾಮಗಾರಿಗಳ ಅಡಿಗಲ್ಲು ಸಮಾರಂಭ ನಿಗದಿಪಡಿಸಿದ್ದು, ಕಾರ್ಯಕ್ರಮಕ್ಕೆ ಆಹ್ವಾನದ ಬಗ್ಗೆ ದಿನಾಂಕ: 24.08.2024ರಂದು ಯೋಜನೆ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ, ಬೀದರ್ ಕಚೇರಿಯ ಸಿಬ್ಬಂದಿ ಶ್ರೀ ನಾವೇದ್ ರವರು ಮಾನ್ಯ ಶಾಸಕರ ಕಚೇರಿಗೆ ಬಂದು ಪತ್ರ ನೀಡಿದ್ದು, ಮಾನ್ಯ ಶಾಸಕರು ದಿನಾಂಕ: 26.08.2024ರಂದು ಸಂಜೆ ದೂರವಾಣಿ ಮುಖಾಂತರ ನಿರ್ಮಿತಿ ಕೇಂದ್ರದ ಸಿಬ್ಬಂದಿಯವರೊಂದಿಗೆ ಮಾತನಾಡಿ ದಿನಾಂಕ: 27.08.2024ರಂದು ಹುಮನಾಬಾದ ಪಟ್ಟಣದಲ್ಲಿ ನಡೆಯಲಿರುವ ಕಾರ್ಯಕ್ರಮದ ಬಗ್ಗೆ ಮಾಹಿತಿ ಕೋರಲಾಗಿದ್ದು, ಸರಿಯಾದ ಮಾಹಿತಿ ನೀಡದೆ ಕಾರ್ಯಕ್ರಮಕ್ಕೆ ಉದ್ದೇಶಪೂರ್ವಕವಾಗಿ ಹಾಜರಾಗದಂತೆ ಮಾಡುವ ಮೂಲಕ ಶಿಷ್ಟಾಚಾರ ಉಲ್ಲಂಘನೆ ಮಾಡಿರುವವರ ಮೇಲೆ ನಿಯಮಾವಳಿ ರೀತ್ಯಾ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ.	ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು, ಬೀದರ್ ರವರು ನೀಡಿರುವ ವಿವರಣೆ ಈ ಕೆಳಕಂಡಂತಿದೆ. 1. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅನುದಾನದಲ್ಲಿ ಹುಮನಾಬಾದ ತಾಲ್ಲೂಕಿನಲ್ಲಿ ದಿನಾಂಕ: 27.08.2024ರಂದು ಅಡಿಗಲ್ಲು ಸಮಾರಂಭಕ್ಕೆ ಶಾಸಕರು ವಿಧಾನ ಸಭೆ ಹಾಗೂ ವಿಧಾನ ಪರಿಷತ್ ಇವರಿಗೆ ಆಹ್ವಾನಿಸಲಾಗಿರುತ್ತದೆ. 2. ಹುಮನಾಬಾದ ತಾಲ್ಲೂಕಿನ ನಿರ್ಮಿತಿ ಕೇಂದ್ರದ ಅಭಿಯಂತರರು ಮಾನ್ಯ ಶಾಸಕರು ವಿಧಾನ ಪರಿಷತ್ ಇವರಿಗೆ ದಿನಾಂಕ: 27.08.2024 ರಂದು ಬೆಳಿಗ್ಗೆ 11.00ಗಂಟೆಗೆ ನಿಗದಿಯಾಗಿದ್ದು, ಸಮಾರಂಭದ ಉದ್ಘಾಟನೆ ಕಾರ್ಯಕ್ರಮಕ್ಕೆ ಆಹ್ವಾನಿಸಿ ಲಿಖಿತ ಪತ್ರವನ್ನು ಮಾನ್ಯ ಶಾಸಕರ ಆಪ್ತ ಸಹಾಯಕರಿಗೆ ಸಲ್ಲಿಸಿ ಸಹಿ ಪಡೆದಿರುತ್ತಾರೆ. 3. ಮಾನ್ಯ ಶಾಸಕರು, ವಿಧಾನ ಪರಿಷತ್ ಇವರು ಹುಮನಾಬಾದ ತಾಲ್ಲೂಕಿನ ನಿರ್ಮಿತಿ ಕೇಂದ್ರದ ಅಭಿಯಂತರರಾದ ಶ್ರೀ ನಾವೇದ್ ಇವರಿಗೆ ಕಾರ್ಯಕ್ರಮದ ಒಂದು ದಿವಸ ಮುಂಚೆ ದೂರವಾಣಿ ಮೂಲಕ ಅಡಿಗಲ್ಲು ಸಮಾರಂಭದ ಮಾಹಿತಿ ನೀಡದಿರುವ ಕುರಿತು ಉಲ್ಲೇಖಿಸಲಾಗಿರುತ್ತದೆ. ಸದರಿ ಅಭಿಯಂತರರಿಗೆ ಮಾನ್ಯ ವಿಧಾನ ಪರಿಷತ್ ಸದಸ್ಯರು ದೂರವಾಣಿ ಮೂಲಕ ಕಾರ್ಯಕ್ರಮ ನಡೆಯುವ ಬಗ್ಗೆ ನಿಖರತೆ ಕೇಳಿದಾಗ ಮಾನ್ಯ ಶಾಸಕರಿಂದ ಸಮಾರಂಭ ನಡೆಯುವ ಬಗ್ಗೆ ನಿಖರ ಮಾಹಿತಿ ಪಡೆದು ನೀಡುತ್ತೇನೆ ಎಂದು ವಿಳಂಬವಾಗಿ ಮಾಹಿತಿ ನೀಡಿರುತ್ತಾರೆ. ಅಂದರೆ, ಸಮಾರಂಭದ ದಿವಸ	ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅನುದಾನದಿಂದ ಕೈಗೊಳ್ಳುತ್ತಿರುವ ಬೀದರ್ ಜಿಲ್ಲೆಯ ಹುಮನಾಬಾದ್ ಪಟ್ಟಣದಲ್ಲಿ ವಿವಿಧ ಕಾಮಗಾರಿಗಳ ಅಡಿಗಲ್ಲು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ದಿನಾಂಕ: 27.08.2024ರಂದು ಸಮಾರಂಭವನ್ನು ಏರ್ಪಡಿಸಲಾಗಿದ್ದು, ಸದರಿ ಕಾರ್ಯಕ್ರಮಗಳ ಅನುಷ್ಠಾನ ಏಜೆನ್ಸಿ ಬೀದರ್ ಜಿಲ್ಲೆಯ ನಿರ್ಮಿತಿ ಕೇಂದ್ರವಾಗಿರುತ್ತದೆ. ನಿರ್ಮಿತಿ ಕೇಂದ್ರ ಅಧ್ಯಕ್ಷರು ಬೀದರ್ ಜಿಲ್ಲಾಧಿಕಾರಿಗಳಾಗಿರುವುದರಿಂದ ನಿರ್ಮಿತಿ ಕೇಂದ್ರ ವಸತಿ ಇಲಾಖೆಯ ವ್ಯಾಪ್ತಿಗೆ ಬರುವುದರಿಂದ ವಸತಿ ಇಲಾಖೆಯ ಅಭಿಪ್ರಾಯ ಪಡೆದು ಸಮಿತಿಯು ಸೂಕ್ತ ತೀರ್ಮಾನ ಕೈಗೊಳ್ಳಬಹುದಾಗಿರುತ್ತದೆ.

ದಿನಾಂಕ: 14.11.2025ರಂದು ನಡೆಯುವ ಹಕ್ಕುಭಾದ್ಯತಾ ಸಮಿತಿಗೆ ಮಾಹಿತಿ			
ಕ್ರ. ಸಂ	ಮಾನ್ಯ ಶಾಸಕರು ನೀಡಿರುವ ಹಕ್ಕುಚ್ಯುತಿ ಪ್ರಕರಣದ ವಿವರ	ಪ್ರಕರಣಕ್ಕೆ ಸಂಬಂಧಿಸಿದ ಅಧಿಕಾರಿಗಳು ನೀಡಿರುವ ವಿವರಣೆ	ಯೋಜನಾ ಇಲಾಖೆಯ ಅಭಿಪ್ರಾಯ
		ಅಡಿಗಲ್ಲು ಸಮಾರಂಭದ ಕುರಿತು ದೂರವಾಣಿ ಮೂಲಕ ನಿರ್ಮಿತಿ ಕೇಂದ್ರದ ಅಧಿಕಾರಿಗಳು ಮಾನ್ಯ ವಿಧಾನ ಪರಿಷತ್ ಸದಸ್ಯರಿಗೆ ಸಮಾರಂಭ ಇರುತ್ತದೆ ಎಂದು ತಿಳಿಸಿರುತ್ತಾರೆ ಎಂದು ಜಿಲ್ಲಾಧಿಕಾರಿಗಳು ವರದಿ ಮಾಡಿರುತ್ತಾರೆ. 4. ಪ್ರಸ್ತುತ ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರು ಅಪಘಾತದಲ್ಲಿ ಮರಣ ಹೊಂದಿರುತ್ತಾರೆ. 5. ನಿರ್ಮಿತಿ ಕೇಂದ್ರದ ಅಭಿಯಂತರರಿಗೆ ಜಿಲ್ಲಾಧಿಕಾರಿಗಳ ಕಚೇರಿಯಿಂದ ಕಾರಣ ಕೇಳಿ ನೋಟೀಸ್ ನೀಡಲಾಗಿದ್ದು, ಸಂಬಂಧಿಸಿದ ಅಭಿಯಂತರರು ವಿವರಣೆ ನೀಡಿ ದಿನಾಂಕ: 27.08.2024ರಂದು ಮಾನ್ಯ ವಿಧಾನ ಪರಿಷತ್ ಸದಸ್ಯರಿಗೆ ಸಮಾರಂಭದ ಮಾಹಿತಿ ನೀಡಿರುವುದಾಗಿ ತಿಳಿಸಿರುತ್ತಾರೆ ಎಂದು ಜಿಲ್ಲಾಧಿಕಾರಿಗಳು ವರದಿ ಮಾಡಿರುತ್ತಾರೆ.	

ನಿರ್ದೇಶಕರು,
ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೀದರ ಜಿಲ್ಲೆ, ಬೀದರ.
Office of the Deputy Commissioner, Bidar District, Bidar-585401, Karnataka
Phone: 08482-225409, Fax: 08482-225262 Email: dc.bidar@gmail.com

ಪತ್ರ ಸಂಖ್ಯೆ:ಕರಂಪ್ರಾಯ/ಸಬ್ಬಂದಿ/ಸಿಆಸ್ಪ-62/2024-25 ದಿನಾಂಕ: 25.11.2024

ಇವರಿಗೆ,

ಮಾನ್ಯ ಕಾರ್ಯದರ್ಶಿಗಳು
ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ
ಬೆಂಗಳೂರು

ಮಾನ್ಯರೆ,

ವಿಷಯ: 2023-24 ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಯೋಜನೆ ಅಡಿಯಲ್ಲಿ ಮಂಜೂರಾದ ಹುಮನಾಬಾದ ಪಟ್ಟಣದಲ್ಲಿ ಕಾಮಗಾರಿ ಪ್ರಾರಂಭಿಸಲು ಮಾನ್ಯ ನಿವೃತ್ತ ನ್ಯಾಯಾಧೀಶರಿಂದ ಉದ್ಘಾಟನೆ ಕಾರ್ಯಕ್ರಮ ಏರ್ಪಡಿಸುವ ಕುರಿತು

ಉಲ್ಲೇಖ: 1)ಮಾನ್ಯ ಕಾರ್ಯದರ್ಶಿಗಳು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ ಇವರ ಪತ್ರ ಸಂಖ್ಯೆ: ಕ.ಕ.ಪ್ರ.ಅ.ಮಂ/ಸಬ್ಬಂದಿ/03/2023-24/6772, ದಿನಾಂಕ:20.09.2024.
2)ಯೋಜನಾ ನಿರ್ವಹಣಾಧಿಕಾರಿ, ನಿರ್ಮಿತಿ ಕೇಂದ್ರ ಬೀದರ ಇವರ ಪತ್ರ ಸಂಖ್ಯೆ:ನಿಕೆಜ/ಕಕಲಂಗಿಪ/ಕಾಮಗಾರಿ/ಸಿಆಸ್ಪ-1/2024-25 ದಿನಾಂಕ: 22.08.2024.
3)ಜಿಲ್ಲಾಧಿಕಾರಿಗಳ ಕಚೇರಿ ಶಿರಸ್ತೇದಾರ/ಪಾನ/ಪತ್ರ ಸಂಖ್ಯೆ: ಕರಂಪ್ರಾಯ/ಸಬ್ಬಂದಿ/ಸಿಆಸ್ಪ-1/2024-25 ದಿನಾಂಕ:09.10.2024

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಪತ್ರದ ಮೂಲಕ 2023-24 ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಯೋಜನೆ ಅಡಿಯಲ್ಲಿ ಮಂಜೂರಾದ ಹುಮನಾಬಾದ ಪಟ್ಟಣದಲ್ಲಿ ದಿನಾಂಕ: 27.08.2024 ರಂದು ಬೆಳಿಗ್ಗೆ 11.00 ಗಂಟೆಗೆ ನಿಗದಿಪಡಿಸಿಲಾಗಿತ್ತು ವಿವಿಧ ಕಾಮಗಾರಿಗಳ ಅಡಿಗಲ್ಲು ಸಮಾರಂಭ ಕಾರ್ಯಕ್ರಮದ ದಿನಾಂಕ: 26.08.2024 ನಿರ್ಮಿತಿ ಕೇಂದ್ರದ ಸಿಬ್ಬಂದಿಯೊಂದಿಗೆ ಕಾರ್ಯಕ್ರಮದ ಮಾಹಿತಿ ಕೋರಲಾಗಿದ್ದು, ಸದರಿಯವರು ಸರಿಯಾದ ಮಾಹಿತಿ ನೀಡದೆ ಉದ್ದೇಶಪೂರ್ವಕವಾಗಿ ಮರುದಿನ ನಡೆದ ಕಾರ್ಯಕ್ರಮಕ್ಕೆ ಹಾಜರಾಗದಂತೆ ತಡೆಯುವ ಮೂಲಕ ಶಿಷ್ಟಾಚಾರ ಉಲ್ಲಂಘನೆ ಮಾಡಿರುವವರ ಮೇಲೆ ನಿಯಮಾವಳಿ ರೀತ್ಯ ಕ್ರಮ ಕೈಗೊಳ್ಳಬೇಕಿದ್ದು ಕೋರಿರುವ ಪ್ರಕರಣವನ್ನು ಹಕ್ಕು ಬಾಧ್ಯತಾ ಸಮಿತಿಗೆ ಒದಗಿಸಲು ಸೂಚಿಸಿರುತ್ತಾರೆ, ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ಮಾನ್ಯರ ಗಮನಕ್ಕೆ ತರಲಾಗಿದೆ.

1. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಯೋಜನೆ ಅಡಿಯಲ್ಲಿ ಹುಮನಾಬಾದ ತಾಲೂಕಿನಲ್ಲಿ ದಿನಾಂಕ:27.08.2024 ರಂದು ಅಡಿಗಲ್ಲು ಸಮಾರಂಭಕ್ಕೆ ಶಾಸಕರು ವಿಧಾನಸಭೆ ಹಾಗೂ ವಿಧಾನ ಪರಿಷತ್ ಇವರಿಗೆ ಆಹ್ವಾನಿಸಲಾಗಿರುತ್ತದೆ.

3---

2. ಹುಮನಾಬಾದ ತಾಲೂಕು ನಿರ್ಮಿತಿ ಕೇಂದ್ರದ ಅಭಿಯಂತರರು ಉಲ್ಲೇಖ (2) ಪತ್ರದನ್ವಯ ಮಾನ್ಯ ಶಾಸಕರು ವಿಧಾನ ಪರಿಷತ್ ಇವರಿಗೆ ದಿನಾಂಕ: 27.08.2024 ರಂದು ಬೆಳಗ್ಗೆ 11.00 ಗಂಟೆಗೆ ನಿಗದಿಪಡಿಸಲಾದ ಸಮಾರಂಭ ಕಾರ್ಯಕ್ರಮಕ್ಕೆ ಆಹ್ವಾನಿಸಿ ಮಾನ್ಯ ಶಾಸಕರ ಆಪ್ತ ಸಹಾಯಕರ ಸಹಿ ಪಡೆದಿರುತ್ತಾರೆ.

3. ಮಾನ್ಯ ಶಾಸಕರು ವಿಧಾನ ಪರಿಷತ್ ಇವರು ನಿರ್ಮಿತಿ ಕೇಂದ್ರ ಹುಮನಾಬಾದ ತಾಲೂಕಿನ ಅಭಿಯಂತರರಾದ ಶ್ರೀ ನಾಗೇಶ ಇವರಿಗೆ ಕಾರ್ಯಕ್ರಮದ ಒಂದು ದಿವಸ (ಮುಂಚೆ) ದೂರವಾಣಿ ಮೂಲಕ ಪದೇಪದೇ ಸಮಾರಂಭದ ಮಾಹಿತಿ ನೀಡಲು ಹಾಗೂ ಕಾರ್ಯಕ್ರಮದ ಬಗ್ಗೆ ಪೂರ್ವಸಿದ್ಧತೆಗಾಗಿ ಸದರಿ ಅಭಿಯಂತರರಿಗೆ ಮಾನ್ಯ ವಿಧಾನ ಪರಿಷತ್ ಸದಸ್ಯರ ಆಪ್ತ ಸಹಾಯಕರಾದ ಶ್ರೀ ಕಾರ್ಯಕ್ರಮದ ಬಗ್ಗೆ ಹಾಗೂ ಕಾರ್ಯಕ್ರಮದ ಬಗ್ಗೆ ಕೊಂಡಾಗ ಮಾನ್ಯ ವಿಧಾನ ಪರಿಷತ್ ಸದಸ್ಯರು ವಿಧಾನ ಸಭೆ ಹುಮನಾಬಾದ ಮತಕ್ಷೇತ್ರ ವ್ಯಾಪ್ತಿಯ ಗ್ರಾಮಗಳಲ್ಲಿ ಸಮಾರಂಭದ ನಿಖರ ಮಾಹಿತಿ ನೀಡಿರುವುದಕ್ಕೆ ಸ್ಪಷ್ಟವಾಗಿ ಸಮಾರಂಭದ ವಿವರ ನೀಡಿರುವುದಿಲ್ಲ.

4. ನಂತರ ಸಮಾರಂಭದ ದಿನ ಅಭಿಯಂತರರು ಸಮಾರಂಭದ ಸ್ಥಳಕ್ಕೆ ದೂರವಾಣಿ ಮೂಲಕ ನಿರ್ಮಿತಿ ಕೇಂದ್ರದ ಅಧಿಕಾರಿಗಳು ಮಾನ್ಯ ವಿಧಾನ ಪರಿಷತ್ ಸದಸ್ಯರಿಗೆ ತಿಳಿಸಲಾಗಿತ್ತು.

5. ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರು ವಿಜಯಪುರ ತನಕ ದೂರವಾಣಿ ಮಾಡಿದ್ದು ಸಮಗ್ರ ತನಿಖೆ ನಡೆಸಲಾಗಿತ್ತು. ಸದರಿ ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರು ಅಪಘಾತದಲ್ಲಿ ಮರಣಹೊಂದಿರುವುದರಿಂದ ವಿವರಣೆ ಪಡೆಯಲು ಸಾಧ್ಯವಾಗಿರುವುದಿಲ್ಲ.

6. ನಿರ್ಮಿತಿ ಕೇಂದ್ರದ ಹುಮನಾಬಾದ ತಾಲೂಕಿನ ಅಭಿಯಂತರರು ಜಿಲ್ಲಾಧಿಕಾರಿಗಳ ಕೆಳೀರಿ ಕಾರಣ ಕೇಳಿ ನೋಟೀಸಿಗೆ ಉತ್ತರಿಸುತ್ತ ದಿನಾಂಕ: 27.08.2024 ರಂದು ಮಾನ್ಯ ವಿಧಾನ ಪರಿಷತ್ ಸದಸ್ಯರಿಗೆ ಸಮಾರಂಭದ ಮಾಹಿತಿ ನೀಡಿರುವುದಾಗಿ ತಿಳಿಸಿರುತ್ತಾರೆ.

ಉಲ್ಲೇಖ (3) ರ ಜಿಲ್ಲಾಧಿಕಾರಿಗಳ ಶಿಷ್ಟಾಚಾರ ಪಾಲನೆ ಸುತ್ತೋಲೆ ಅನ್ವಯ ಜಿಲ್ಲೆಯ ಅನುಷ್ಠಾನ ಅಧಿಕಾರಿಗಳಿಗೆ ಸೂಕ್ತ ಶಿಷ್ಟಾಚಾರ ಪಾಲನೆ ಮಾಡಲು ಸೂಚನೆಯಾಗಿರುತ್ತದೆ.

ಸದರಿ ವಿಷಯವನ್ನು ಮಾನ್ಯರು ಅವಗಾಹನೆಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ

ಅಡಕ: ( )

ಜಿಲ್ಲಾಧಿಕಾರಿ,
ಬೀದರ ಜಿಲ್ಲೆ, ಬೀದರ

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೀದರ ಜಿಲ್ಲೆ , ಬೀದರ್

Office of the Deputy Commissioner, Bidar District, Bidar-585401, Karnataka

Phone: 08482-225409 Fax: 08482-225262 **Email: deo.bidar@gmail.com**

ಸಂಖ್ಯೆ:ಕಂದಾಯ/ಕೆಕೆಆರ್‌ಡಿಬಿ/ಸಿಆರ್-22/2025-26 ದಿನಾಂಕ: .11.2025.

ಇವರಿಗೆ,

ಮಾನ್ಯ ಸರ್ಕಾರದ ಕಾರ್ಯದರ್ಶಿಗಳು,
ಯೋಜನೆ ಕಾರ್ಯಕ್ರಮ ಸಂಯೋಜನೆ,
ಮತ್ತು ಸಾಂಖ್ಯಿಕ ಇಲಾಖೆ,
ಬೆಂಗಳೂರು.

ಮಾನ್ಯರೆ,

ವಿಷಯ:-ದಿನಾಂಕ: 14.11.2025 ರಂದು ಜರುಗುವ ಹಕ್ಕು ಬಾಧ್ಯತಾ ಸಮಿತಿ ಸಭೆಗೆ ವಿನಾಯಿತಿ ನೀಡುವ ಕುರಿತು.

ಉಲ್ಲೇಖ:-ತಮ್ಮ ಪತ್ರ ಸಂಖ್ಯೆ :ಪಿಡಿಎಸ್/122/ಹೆಚ್‌ಕೆಡಿ/2024. ದಿನಾಂಕ :12.11.2025.

* * * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದನ್ವಯ ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಾದ ಶ್ರೀ ಭೀಮರಾವ ಬಸವರಾಜ್ ಪಾಟೀಲ್ ಹಾಗೂ ಡಾ: ಚಂದ್ರಶೇಖರ್ ಬಿ ಪಾಟೀಲ ಅವರುಗಳು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ 2023-24 ನೇ ಸಾಲಿನ ಯೋಜನೆ ಅಡಿಯಲ್ಲಿ ಹುಮನಾಬಾದ ಪಟ್ಟಣದಲ್ಲಿ ದಿನಾಂಕ:27.08.2024 ರಂದು ಬೆಳಿಗ್ಗೆ 11.00 ಗಂಟೆಗೆ ನಿಗಧಿಪಡಿಸಲಾದ ವಿವಿಧ ಕಾಮಗಾರಿಗಳ ಅಡಿಗಲ್ಲು ಸಮಾರಂಭ ಕಾರ್ಯಕ್ರಮ ಕುರಿತು ದಿನಾಂಕ: 26.08.2024 ರಂದು ನಿರ್ಮಿತಿ ಕೇಂದ್ರದ ಸಿಬ್ಬಂದಿಯೊಂದಿಗೆ ಕಾರ್ಯಕ್ರಮದ ಬಗ್ಗೆ ಮಾಹಿತಿ ಕೋರಲಾಗಿದ್ದು, ಸದರಿ ಸಿಬ್ಬಂದಿ ಸರಿಯಾದ ಮಾಹಿತಿ ನೀಡದೆ ಮರುದಿನ ನಡೆಯುವ ಕಾರ್ಯಕ್ರಮಕ್ಕೆ ಹಾಜರಾಗದಂತೆ ತಡೆಯುವ ಮೂಲಕ ಶಿಷ್ಟಾಚಾರ ಉಲ್ಲಂಘನೆ ಪ್ರಕರಣದ ಕುರಿತು ದಿನಾಂಕ: 14.11.2025 ರಂದು ಬೆಂಗಳೂರಿನಲ್ಲಿ ನಡೆಯುವ ಹಕ್ಕು ಬಾಧ್ಯತಾ ಸಮಿತಿ ಸಭೆಗೆ ಹಾಜರಾಗಲು ಸೂಚಿಸಿರುತ್ತೀರಿ.

ಆದರೆ ಜಿಲ್ಲೆಯಲ್ಲಿ ಕಬ್ಬಿನ ಬೆಲೆ ನಿಗದಿ ಸಂಬಂಧ ರೈತರಿಂದ ಪ್ರತಿಭಟನೆಗಳು ನಡೆಯುತಿದ್ದು ಹಾಗೂ ಪರೀಕ್ಷಾರ್ಥ ಭಾ.ಆ.ಸೇ ಅಧಿಕಾರಿಗಳು ತರಬೇತಿಗೆ ಆಗಮಿಸಿದ್ದು ಮತ್ತು ಪೂರ್ವ ನಿರ್ಧಾರಿತ ಸಭೆಗಳು ಇರುವುದರಿಂದ ಜಿಲ್ಲೆಯಲ್ಲಿ ಉಪಸ್ಥಿತಿ ಇರುವುದು ಅವಶ್ಯಕತೆ ಇರುವುದರಿಂದ ಸದರಿ ಸಭೆಗೆ ಹಾಜರಾಗುವುದಕ್ಕೆ ವಿನಾಯಿತಿ ನೀಡಲು ಕೋರಲಾಗಿದೆ.

ತಮ್ಮ ವಿಶ್ವಾಸಿ

13/11/25

ಜಿಲ್ಲಾಧಿಕಾರಿ,
ಬೀದರ ಜಿಲ್ಲೆ, ಬೀದರ

ಅಡಕ: ( ).

ಪ್ರತಿಯನ್ನು: ಮಾನ್ಯ ಕಾರ್ಯದರ್ಶಿ -2, ಕರ್ನಾಟಕ ವಿಧಾನ ಪರಿಷತ್ತು, #228, 2ನೇ ಮಹಡಿ ವಿಧಾನ ಸೌಧ ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.

Scanned with OKEN Scanner

ಅನುಬಂಧ - 20

ನಮೂನೆ - 1

ಕ್ರ ಸಂ	ಮಾನ್ಯ ಶಾಸಕರು ನೀಡಿರುವ ಹಕ್ಕುಚ್ಯುತಿ ಪ್ರಕರಣದ ವಿವರ	ಪ್ರಕರಣಕ್ಕೆ ಸಂಬಂಧಿಸಿದ ಅಧಿಕಾರಿಗಳು ನೀಡಿರುವ ವಿವರಣೆ (ಹುಮನಾಬಾದ ತಾಲೂಕ ಅಭಯಂತರರು)	ಇಲಾಖಾ ಮುಖ್ಯಸ್ಥರ ಅಭಿಪ್ರಾಯ (ಯೋಜನಾ ವ್ಯವಸ್ಥಾಪಕರು ನಿರ್ಮಿತಿ ಕೇಂದ್ರ)	ಜಿಲ್ಲಾಧಿಕಾರಿಗಳು ಬೀದರ ಇವರ ಅಭಿಪ್ರಾಯ
1	ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ 2023-24ನೇ ಸಾಲಿನ ಯೋಜನೆಯಡಿಯಲ್ಲಿ ಹುಮನಾಬಾದ ಪಟ್ಟಣದಲ್ಲಿ ದಿನಾಂಕ: 27.08.2024ರಂದು ಬೆಳಿಗ್ಗೆ 11:00 ಗಂಟೆಗೆ ನಿಗಧಿಪಡಿಸಲಾಗಿದ್ದ, ವಿವಿಧ ಕಾಮಗಾರಿಗಳ ಅಡಿಗಲ್ಲು ಸಮಾರಂಭ ಕಾರ್ಯಕ್ರಮದ ಕುರಿತು ದಿನಾಂಕ: 26.08.2024ರಂದು ನಿರ್ಮಿತಿ ಕೇಂದ್ರದ ಸಿಬ್ಬಂದಿಯೊಂದಿಗೆ ಕಾರ್ಯಕ್ರಮದ ಬಗ್ಗೆ ಮಾಹಿತಿ ಕೋರಲಾಗಿದ್ದು, ಸರಿಯಾದ ಮಾಹಿತಿ ನೀಡದೆ ಉದ್ದೇಶ ಪೂರ್ವಕವಾಗಿ ಮರುದಿನ ನಡೆದ ಕಾರ್ಯಕ್ರಮಕ್ಕೆ ಹಾಜರಾಗದಂತೆ ತಡೆಯುವ ಮೂಲಕ ಶಿಷ್ಟಾಚಾರ ಉಲ್ಲಂಘನೆ ಮಾಡಿರುವುದಾಗಿ ಮಾನ್ಯ ಶಾಸಕರು ದೂರಿರುತ್ತಾರೆ.	ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ 2023-24ನೇ ಸಾಲಿನ ಯೋಜನೆಯಡಿಯಲ್ಲಿ ಮಂಜೂರಾದ ಕಾಮಗಾರಿ ಅಡಿಗಲ್ಲು ಸಮಾರಂಭಕ್ಕೆ ಶ್ರೀ ಚಂದ್ರಶೇಖರ ಬಿ. ಪಾಟೀಲ್ ಮಾನ್ಯ ವಿಧಾನ ಪರಿಷತ ಸದಸ್ಯರು ಹಾಗೂ ಶ್ರೀ ಭೀಮರಾವ ಬಿ. ಪಾಟೀಲ್ ವಿಧಾನ ಪರಿಷತ್ ಸದಸ್ಯರು ರವರ ಗೃಹ ಕಚೇರಿಗೆ ಹೋಗಿ ಅವರ ಆಪ್ತರಿಗೆ ಭೇಟಿ ಮಾಡಿ ಆಹ್ವಾನ ಪತ್ರ ನೀಡಿರುತ್ತೇನೆ. ಶ್ರೀ ಭೀಮರಾವ ಬಿ. ಪಾಟೀಲ್ ವಿಧಾನ ಪರಿಷತ ಸದಸ್ಯರ ಆಪ್ತರು ನನಗೆ ಮಾನ್ಯ ವಿಧಾನ ಪರಿಷತ ಸದಸ್ಯರಿಗೆ ದೂರವಾಣಿ ಕರೆ ಮಾಡಲು ಸೂಚಿಸಿರುತ್ತಾರೆ, ಅದರಂತೆ ದೂರವಾಣಿ ಮುಖಾಂತರ ಮಾನ್ಯ ಶಾಸಕರಿಗೆ ಮಾತನಾಡಿದ್ದು, ಮಾನ್ಯ ವಿಧಾನ ಪರಿಷತ ಸದಸ್ಯರು ಕಾರ್ಯಕ್ರಮದ ಪ್ರಯುಕ್ತ ಎಲ್ಲಾ ಮಾಹಿತಿಯನ್ನು ಪಡೆದಿರುತ್ತಾರೆ. ಮಾನ್ಯ ವಿಧಾನ ಪರಿಷತ ಸದಸ್ಯರು ಶ್ರೀ ಭೀಮರಾವ ಬಿ.ಪಾಟೀಲ್ ಆಪ್ತರು ದಿನಾಂಕ: 27.08.2024ರಂದು ದೂರವಾಣಿ ಕರೆ ಮಾಡಿ ಅಡಿಗಲ್ಲು ಸಮಾರಂಭವು ಎಲ್ಲಿ ಮತ್ತು ಯಾವಾಗ ಎಂದು ಕೇಳಿರುವ ಪ್ರಯುಕ್ತ ಮಾಹಿತಿ ನೀಡಿರುತ್ತೇನೆ. ಯಾವುದೇ ಶಿಷ್ಟಾಚಾರ ಉಲ್ಲಂಘನೆ ಮಾಡಿರುವುದಿಲ್ಲ, ಈ ಕುರಿತು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ನಿರ್ಮಿತಿ ಕೇಂದ್ರ, ಬೀದರ ರವರ ಸಂಬಂಧಪಟ್ಟ ಪ್ರಕರಣದ ಬಗ್ಗೆ ಕಾರಣ ಕೇಳುವ ನೋಟಿಸ್ ನೀಡಿದ್ದು ಅದರಂತೆ ಉತ್ತರಿಸಿರುತ್ತೇನೆ.	ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಮಗಾರಿ ಸಂಬಂಧಿಸಿದ ಅಭಿಯಂತರರು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ 2023-24ನೇ ಸಾಲಿನ ಯೋಜನೆಯಡಿಯಲ್ಲಿ ಮಂಜೂರಾದ ಕಾಮಗಾರಿ ಅಡಿಗಲ್ಲು ಸಮಾರಂಭಕ್ಕೆ ಸಂಬಂಧಪಟ್ಟ ಶಾಸಕರಿಗೆ ಮಾಹಿತಿ ನೀಡಿರುತ್ತಾರೆ.	ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಮಗಾರಿ ಸಂಬಂಧಿಸಿದ ಅಭಿಯಂತರರು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ 2023-24ನೇ ಸಾಲಿನ ಯೋಜನೆಯಡಿಯಲ್ಲಿ ಮಂಜೂರಾದ ಕಾಮಗಾರಿ ಅಡಿಗಲ್ಲು ಸಮಾರಂಭಕ್ಕೆ ಸಂಬಂಧಪಟ್ಟ ಶಾಸಕರಿಗೆ ಮಾಹಿತಿ ನೀಡಿರುತ್ತಾರೆ. ಮಾನ್ಯ ಶಾಸಕರ ಆಹ್ವಾನ ಪತ್ರ ಆಪ್ತ ಸಹಾಯಕರಿಗೆ ತಲುಪಿಸಿರುವ ಪತ್ರದ ಪ್ರತಿ ಲಗತ್ತಿಸಿದೆ. ಯಾವುದೇ ಶಿಷ್ಟಾಚಾರ ಉಲ್ಲಂಘನೆ ಆಗಿರುವುದಿಲ್ಲ.

ನಿರ್ಮಿತಿ ಅಭಯಂತರರು
ಹುಮನಾಬಾದ

ಯೋಜನಾ ವ್ಯವಸ್ಥಾಪಕರು,
ನಿರ್ಮಿತಿ ಕೇಂದ್ರ, ಬೀದರ.

ಜಿಲ್ಲಾಧಿಕಾರಿ 13/11/24
ಬೀದರ ಜಿಲ್ಲೆ, ಬೀದರ

Scanned with OKEN Scanner

ಬಸವೇಶ್ವರ ವೃತ್ತದ ಹತ್ತಿರ, ಬೀದರ

ಸಂ:ನಿಕೆಬಿ/ಕೆಕೆಆರ್‌ಡಿಬಿ/ಕಾಮಗಾರಿ/ಸಿಆರ್- /2024-25

ದಿನಾಂಕ: 21/08/2024

ಇವರಿಗೆ,
ಮಾನ್ಯರೇ,

ವಿಷಯ :-ವಿವಿಧ ಕಾಮಗಾರಿಗಳಿಗೆ ಅಡಿಗಲ್ಲು ಸಮಾರಂಭ ಕಾರ್ಯಕ್ರಮವನ್ನು ನಿಗದಿಪಡಿಸುವ ಕುರಿತು.

ಉಲ್ಲೇಖ : ಮಾನ್ಯ ಶಾಸಕರು, ಹುಮನಾಬಾದ ವಿದಾನಸಭಾ ಕ್ಷೇತ್ರ ಬೀದರ, ರವರ ಪತ್ರ ಸಂ:ಶಾ/ಹು.ಮ/87/2024-25 ದಿನಾಂಕ: 18.08.2024.

* * * * *

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂದಿಸಿದಂತೆ, 2023-24ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಯೋಜನೆ ಅಡಿಯಲ್ಲಿ ಹುಮನಾಬಾದ ಮತಕ್ಷೇತ್ರದಲ್ಲಿ ವಿವಿಧ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದ್ದು, ಅದರಂತೆ ಸದರಿ ಕಾಮಗಾರಿಗಳಲ್ಲಿನ ಹುಮನಾಬಾದ ಪಟ್ಟಣದಲ್ಲಿರುವ ಗ್ರಂಥಾಲಯ ಮತ್ತು ಸರಕಾರಿ ಪದವಿ ಪೂರ್ವ ಕಾಲೇಜು (ಬಾಲಕರ) ಪ್ಲೊಡ್ ಪಾಪಾ ವಿಭಾಗ ಮೊದಲನೆ ಮಹಡಿ(ಕನ್ನಡ & ಉರ್ದು) ಕಟ್ಟಡ ನಿರ್ಮಾಣಗಳ ಅಡಿಗಲ್ಲು ಸಮಾರಂಭವನ್ನು ದಿನಾಂಕ: 27.08.2024 ರಂದು ಸಮಯ 11.00 ಗಂಟೆಗೆ ನಿಗದಿ ಪಡಿಸಲಾಗಿದೆ. ಎಂದು ಈ ಮೂಲಕ ತಮಗೆ ಸದರಿ ಕಾರ್ಯಕ್ರಮಕ್ಕೆ ಗೌರವಪೂರ್ವಕ ಆಹ್ವಾನಿಸಲಾಗಿದೆ.

ವಂದನೆಗಳೊಂದಿಗೆ .

ತಮ್ಮ ವಿಶ್ವಾಸಿ

ಯೋಜನಾ ವ್ಯವಸ್ಥಾಪಕರು
ನಿರ್ಮಿತಿ ಕೇಂದ್ರ, ಬೀದರ

o/c

Received

Scanned with OKEN Scanner

ಅನುಬಂಧ-

110

ಕಾರ್ಯದರ್ಶಿಗಳು

ಇವರಿಗೆ
ಶ್ರೀ ಬಸವರಾಜ ಹೊರಟ್ಟಿಯವರು
ಮಾನ್ಯ ಸಭಾಪತಿಗಳು
ಕರ್ನಾಟಕ ವಿಧಾನ ಪರಿಷತ್
ಬೆಂಗಳೂರು

ವಿಷಯ: ವಿಧಾನ ಪರಿಷತ್ತು ಶಾಸಕರಿಗೆ ಹೆಚ್ಚುಚ್ಚಿತಿ ಆಗಿರುವ ಕುರಿತು.

ಬಸವರಾಜ ಹೊರಟ್ಟಿ
ಸಭಾಪತಿ
ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ 19.12.2024 ಗುರುವಾರದಂದು ಸುವರ್ಣವಿಧಾನ ಸೌಧದಲ್ಲಿ ಚಳಿಗಾಲದ [illegible] ದಿನದಂದು ನಡೆದ ಕಲಾಪದ ನಂತರದ ನಡೆದ ಘಟನೆಗಳು ವಿಧಾನ [illegible] ಹೆಚ್ಚುಚ್ಚಿತಿ ಆಗಿದೆ ಎಂದು ತಮ್ಮ ಅವಗಾಹನೆಗೆ ತರಲು

[illegible] ಸಂದರ್ಭದಲ್ಲಿ ನಾವು ವಿಧಾನ ಪರಿಷತ್ ಶಾಸಕರು ಕಾರಿನಲ್ಲಿ ಮುಖ್ಯ [illegible] ಕೆಲವು ಕಿಡಿಗೇಡಿಗಳು ನಮ್ಮ ಮೇಲೆ ದೈಹಿಕವಾಗಿ ಹಲ್ಲೆ ಮಾಡಲು

[illegible] ಚಳಿಗಾಲದಲ್ಲಿ ಮಾನ್ಯ ವಿಧಾನ ಪರಿಷತ್ತಿನ ಶಾಸಕರುಗಳು [illegible] ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ಮಹಿಳಾ ಮತ್ತು [illegible] ಹಿರಿಯರ ಕಲ್ಯಾಣ ಇಲಾಖೆಯ ಸಚಿವರಾದ [illegible] ಸಹಾಯಕರು ಮತ್ತು ಕೆಲವು ಕಿಡಿಗೇಡಿಗಳು

[illegible] ಮಹಿಳೆಯರ ಮೇಲೆ ಶಾಂತಿಯುತ ಧರಣಿ [illegible] ಅಸಹ್ಯಕರವಾಗಿ ವರ್ತಿಸಿರುವುದಲ್ಲದೆ ವಾಹನದಲ್ಲಿ [illegible] ಮಾನ್ಯ ಇನ್ನೂ ಕೆಲವು [illegible] ಹೊಗಿದ್ದಾರೆ. [illegible] ಕುರಿತು [illegible] ಉಚ್ಚಿತ

[illegible]

4 ವಿಷಯ ತಿಳಿದಾಗ ನಾವುಗಳು ರಾತ್ರಿ 8 ಗಂಟೆಗೆ ಖಾನಾಪೂರ ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ನಮ್ಮ ಶಾಸಕರಾದ ಶ್ರೀ ಸಿ.ಟಿ.ರವಿಯವರನ್ನು ಠಾಣೆಯಲ್ಲಿ ಇದ್ದರು. ನಾವು ಶ್ರೀ ಸಿ.ಟಿ.ರವಿಯವರನ್ನು ಏಕೆ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದಿದ್ದಿರಾ? ಬಂಧಿಸಲು ಮಾನ್ಯ ಸಭಾಪತಿಗಳ ಅನುಮತಿ ಪಡೆದಿದ್ದಿರಾ? ನೀವು ಯಾವುದೇ ನೋಟಿಸನ್ನು ನೀಡದೇ ಹೇಗೆ ಬಂಧಿಸಿರುವಿರಿ? ಎಂದು ಕೇಳಿದಾಗ ಯಾವುದೇ ಉತ್ತರ ನಮಗೆ ಪೊಲೀಸ್ ಅಧಿಕಾರಿಗಳು ನೀಡಲಿಲ್ಲ. ನಾವು ತಕ್ಷಣ ಪ್ರತಿ ದೂರನ್ನು ನೀಡಿದರೂ ಸಹ '0' ಎಫ್.ಆಯ್.ಆರ್ ಕೂಡಾ ಹಾಕದೇ ನಮ್ಮ ದೂರಿಗೆ ಪೊಲೀಸ್ ಅಧಿಕಾರಿಗಳು ಸ್ವೀಕೃತಿ ನೀಡಲಿಲ್ಲ. ಯಾವುದೇ ರೀತಿ ಸ್ಪಂದನೆ ನೀಡಲಿಲ್ಲ. ಆಯುಕ್ತರಾದ ಶ್ರೀ ಏಡಾ ಮಾರ್ಟಿನ್ ಐ.ಪಿ.ಎಸ್ ಹಾಗೂ ಡಿ.ಸಿ.ಪಿ ಶ್ರೀ ರೋಹನ್ ಜಗದೀಶ ಉಪಸ್ಥಿತರಿದ್ದರೂ ಕೂಡಾ ನಮಗೆ ಸ್ಪಂದನೆ ಸಿಗಲಿಲ್ಲ. ನಂತರದಲ್ಲಿ ಏಕಾಏಕಿ ಶಾಸಕರನ್ನು ಹೊರಗೆ ದಬ್ಬಿ ನಂತರ ಶಾಸಕರಾದ ಶ್ರೀ ಸಿ.ಟಿ ರವಿಯವರನ್ನು ಬೆಂಗಳೂರಿಗೆ ಕರೆದುಕೊಂಡು ಹೋಗುತ್ತೇವೆ ಅಂತಾ ಹೇಳಿ ಪೊಲೀಸ್ ವಾಹನದಲ್ಲಿ ಕರದೊಯ್ದರು. ನಂತರ ಬೆಂಗಳೂರಿಗೆ ಹೋಗದೆ ರಾತ್ರಿ ಇಡೀ ಬೆಳಗಾವಿಯ ನಗರ ಹಾಗೂ ಬೆಳಗಾವಿಯ ಸುತ್ತ-ಮುತ್ತಲಿನ ಪ್ರದೇಶಗಳಿಗೆ ಪೊಲೀಸ್ ವಾಹನದಲ್ಲಿ ಸುತ್ತಾಡಿಸಿದ್ದಾರೆ. ದಿನಾಂಕ 20.12.2024 ಶುಕ್ರವಾರದಂದು ಬೆಳಿಗ್ಗೆ 10.30ಕ್ಕೆ ಬೆಳಗಾವಿಯ ಜಿಲ್ಲಾ ನ್ಯಾಯಾಲಯಕ್ಕೆ ಹಾಜರು ಪಡಿಸಿದಾಗ ನಮಗೆ ವಿಷಯ ತಿಳಿದಿರುತ್ತದೆ.

ಈ ಪ್ರಕರಣದಿಂದ ಕರ್ನಾಟಕ ವಿಧಾನ ಪರಿಷತ್ತಿನ ಎಲ್ಲ ಶಾಸಕರಿಗೆ ಚಕ್ಕುಬ್ಬುತಿ ಆಗಿದೆ. ತಾವು ಈ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಶಾಸಕರಿಗೆ ಆಗಿರುವ ಚಕ್ಕುಬ್ಬುತಿಗೆ ನ್ಯಾಯ ದೊರಕಿಸಿ ಕೊಡಲು ಕೋರುತ್ತೇವೆ.

ಇಂತಿ ತಮ್ಮ

ಕ[illegible]

([illegible])

ಅನುಬಂಧ-22

ನಮೂನೆ

ಅ. ನಂ	ಮಾನ್ಯ ಶಾಸಕರು ನೀಡಿರುವ ಹಕ್ಕುಚ್ಯುತಿ ಪ್ರಕರಣದ ವಿವರ	ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ನೀಡಿದ ವಿವರಣೆ	ಇಲಾಖಾ ಮುಖ್ಯಸ್ಥರ ಅಭಿಪ್ರಾಯ
1.	ಕಲಾಪ ನಡೆಯುವ ಸಂದರ್ಭದಲ್ಲಿ ನಾವು ವಿಧಾನ ಪರಿಷತ ಶಾಸಕರು ಕಾರಿನಲ್ಲಿ ಮುಖ್ಯ ದ್ವಾರದಲ್ಲಿ ಬರುವಾಗ ಕೆಲವು ಕಿಡಗೇಡಿಗಳು ನಮ್ಮ ಮೇಲೆ ದೈಹಿಕವಾಗಿ ಹಲ್ಲೆ ಮಾಡಲು ಪ್ರಯತ್ನ ನಡೆಸಿದರು.	➢ ಈ ಘಟನೆಗೆ ಸಂಬಂಧಿಸಿದಂತೆ ಲಭ್ಯವಿರುವ ಸಿಸಿಟಿವಿ ದೃಶ್ಯಾವಳಿಯನ್ನು ಪರಿಶೀಲಿಸಲಾಗಿ ಅಧಿವೇಶನ ಸಂದರ್ಭದಲ್ಲಿ ದಿನಾಂಕ:19.12.2024 ರಂದು ಮಧ್ಯಾಹ್ನ 03:00 ಗಂಟೆ ಸುಮಾರಿಗೆ ಮಾನ್ಯ ಶ್ರೀ ಸಿ ಟಿ ರವಿ ಶಾಸಕರು ಹಾಗೂ ಅವರೊಂದಿಗೆ ಮಾನ್ಯ ಶ್ರೀ ಅರುಣ್ ಡಿ ಎಸ್ ಮತ್ತು ಮಾನ್ಯ ಶ್ರೀ ಎಸ್ ವಿ ಸಂಕನೂರ, ಎಮ್.ಎಲ್.ಸಿ ರವರುಗಳು ಕಾರಿನಲ್ಲಿ ಸುವರ್ಣ ಸೌಧದ ಪಶ್ಚಿಮ ದ್ವಾರದಲ್ಲಿ ವಾಹನವನ್ನು ನಿಲ್ಲಿಸಿ ಇಳಿಯುವಷ್ಟರಲ್ಲಿ ಕೆಲವು ಜನರು ಮಾನ್ಯ ಶ್ರೀ ಸಿ ಟಿ ರವಿ ರವರ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಮಾನ್ಯರವರ ವಾಹನದ ಹತ್ತಿರ ಬರುವಷ್ಟರಲ್ಲಿ ಪಶ್ಚಿಮ ದ್ವಾರದ ಹತ್ತಿರ ಕರ್ತವ್ಯದಲ್ಲಿರುವ ಪೋಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳು ಸುತ್ತುವರೆದು ಸದರಿ ಘೋಷಣೆ ಕೂಗುವ ಜನರನ್ನು ತಡೆದು, ಮಾನ್ಯ ಶ್ರೀ ಸಿ ಟಿ ರವಿ ಶಾಸಕರು ಹಾಗೂ ಅವರೊಂದಿಗೆ ಇರುವ ಮಾನ್ಯ ಶ್ರೀ ಅರುಣ್ ಡಿ ಎಸ್ ಮತ್ತು ಮಾನ್ಯ ಶ್ರೀ ಎಸ್ ವಿ ಸಂಕನೂರ, ಎಮ್.ಎಲ್.ಸಿ ರವರುಳಗೆ ಸುತ್ತುವರೆದು ಯಾವುದೇ ರೀತಿಯ ತೊಂದರೆ ಆಗದಂತೆ ಸೂಕ್ತ ರಕ್ಷಣೆ ಹಾಗೂ ಭದ್ರತೆಯನ್ನು ಒದಗಿಸಿರುತ್ತಾರೆ. ➢ ಮಾನ್ಯ ಶ್ರೀ ಸಿ ಟಿ ರವಿ, ಶಾಸಕರು ಅಥವಾ ಇತರೆ ಮಾನ್ಯ ಶಾಸಕರುಗಳ ಮೇಲೆ ಯಾವುದೇ ರೀತಿಯ ಹಲ್ಲೆಯಾಗಿರುವುದಿಲ್ಲ. ನಂತರ ಮಾನ್ಯ ಎಮ್.ಎಲ್.ಸಿ ರವರು ತಾವು ಸುರಕ್ಷಿತ ಎಂದು ತಿಳಿದ ಮೇರೆಗೆ ಪತ್ರಿಕಾಗೋಷ್ಠಿಯನ್ನೂ ಸಹ ಪಶ್ಚಿಮ ದ್ವಾರದ ಮೆಟ್ಟಿಲುಗಳ ಮೇಲೆಯೆ ಮಾಡಿರುತ್ತಾರೆ. ➢ ಮಾನ್ಯ ಶ್ರೀ ಸಿ ಟಿ ರವಿ ಎಮ್.ಎಲ್.ಸಿ ರವರ ಸುರಕ್ಷತೆ ಮತ್ತು ಭದ್ರತೆ ತಕ್ಷಣಕ್ಕೆ ಅನಿವಾರ್ಯವಿದ್ದು ಮಾನ್ಯ ಶಾಸಕರುಗಳ ಸುರಕ್ಷತೆಗಾಗಿ ಅಲ್ಲಿದ್ದವರನ್ನು ಚದುರಿಸಿ ಅಲ್ಲಿಯೇ ಸಿಕ್ಕ ಇಬ್ಬರನ್ನು ವಶಕ್ಕೆ ಪಡೆದು ಉದ್ಯಮಬಾಗ ಪೋಲೀಸ್ ಠಾಣೆಗೆ ಕಳುಹಿಸಿ ಮುಂಹಾಗೃತೆ ಕ್ರಮದಡಿಯಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಈ ಕುರಿತು ಠಾಣಾ ದಿನಚರಿಯಲ್ಲಿ ನಮೂದಿಸಲಾಗಿದೆ.	---

2	ಸುವರ್ಣ ವಿಧಾನ ಸೌಧದ ಮೊಗಸಾಲೆಯಲ್ಲಿ ಮಾನ್ಯ ವಿಧಾನ ಪರಿಷತ್ತಿನ ಶಾಸಕರುಗಳು ನಡೆದುಕೊಂಡು ಹೋಗುವ ಸಂದರ್ಭದಲ್ಲಿ ಮಾನ್ಯ ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ವಿಕಲಚೇತನ, ಹಿರಿಯರ ಕಲ್ಯಾಣ ಇಲಾಖೆಯ ಸಚಿವರಾದ ಶ್ರೀಮತಿ ಲಕ್ಷ್ಮಿ ಹೆಬ್ಬಾಳಕರ ಇವರ ಆಪ್ತ ಸಹಾಯಕರು ಮತ್ತು ಕೆಲವು ಕಿಡಿಗೇಡಿಗಳು ಹಲ್ಲೆ ಮಾಡಿದರು.	➢ ಈ ಘಟನೆಯ ಬಗ್ಗೆ ಲಭ್ಯವಿದ್ದ ವಿಡಿಯೋ ದೃಶ್ಯಾವಳಿಯನ್ನು ಪರಿಶೀಲಿಸಲಾಗಿ ಸುವರ್ಣ ವಿಧಾನ ಸೌಧದ ಮೊಗಸಾಲೆಯಲ್ಲಿ ಮಾನ್ಯ ಶ್ರೀ ಸಿ ಟಿ ರವಿ ಶಾಸಕರು ಹಾಗೂ ಮಾನ್ಯ ಶ್ರೀ ಕಿಶೋರ್ ಜಿ ಆರ್ ಶಾಸಕರು, ಸಾಯಂಕಾಲ 04:15 ಗಂಟೆಯ ಸುಮಾರಿಗೆ ಬರುತ್ತಿರುವಾಗ ಕೆಲವು ಜನರು ಮಾನ್ಯ ಶ್ರೀ ಸಿ ಟಿ ರವಿ ಶಾಸಕರ ವಿರುದ್ಧ ಅವಾಚ್ಯ ಶಬ್ದಗಳಿಂದ ಏರು ಧ್ವನಿಯಿಂದ ಮಾತನಾಡುತ್ತಾ ಅವರ ಹತ್ತಿರ ಬರುವಷ್ಟರಲ್ಲಿಯೇ ಕರ್ತವ್ಯದಲ್ಲಿದ್ದ ಮಾರ್ಷಲ್‌ಗಳು ಅವರುಗಳನ್ನು ತಡೆದು, ಮಾನ್ಯ ಶ್ರೀ ಸಿ ಟಿ ರವಿ ಶಾಸಕರಿಗೆ ಸೂಕ್ತ ರಕ್ಷಣೆ ಹಾಗೂ ಭದ್ರತೆಯನ್ನು ಗೇಟಿನ ಒಳಗಡೆ ಕಳುಹಿಸಿ ಗೇಟನ್ನು ಹಾಕಿ ಭದ್ರತೆಯನ್ನು ನೀಡಿರುತ್ತಾರೆ. ➢ ಈ ವೇಳೆಯಲ್ಲಿ ಮಾನ್ಯ ಶಾಸಕರ ಮೇಲೆ ಯಾವುದೇ ಹಲ್ಲೆಯಾಗಿರದಂತೆ ಲಭ್ಯವಿರುವ ವಿಡಿಯೋ ದೃಶ್ಯಾವಳಿಯಲ್ಲಿ ಕಾಣಬಹುದಾಗಿದೆ. ➢ ಈ ಘಟನೆಗೆ ಸಂಬಂಧಿಸಿದಂತೆ ಕೂಡಲೇ ಕರ್ತವ್ಯದಲ್ಲಿದ್ದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿರವರು ಸಹ ಧಾವಿಸಿ ಬಂದು ಸುವರ್ಣ ವಿಧಾನಸೌಧದಿಂದ ಮಾನ್ಯ ಸಚಿವರಾದ ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ ರವರ ಆಪ್ತ ಸಹಾಯಕ ಸಂಗನಗೌಡ ಎಸ್ ಪಾಟೀಲ್ ಸೇರಿದಂತೆ 04 ಜನರನ್ನು ವಶಕ್ಕೆ ಪಡೆದು ಉದ್ಯಮಬಾಗ್ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಮುಂಜಾಗೃತಾ ಕ್ರಮದಡಿಯಲ್ಲಿ ಕೆ.ಪಿ ಆಕ್ಟ್ ಕಲಂ-71 ಅಡಿಯಲ್ಲಿ ಕ್ರಮ ಜರುಗಿಸಲಾಗಿರುತ್ತದೆ. ➢ ಮಾನ್ಯ ಶ್ರೀ ಸಿ ಟಿ ರವಿ ರವರ ಮೇಲೆ ಹಲ್ಲೆ ಪ್ರಯತ್ನಕ್ಕೆ ಸಂಬಂಧಿಸಿದಂತೆ ರಾತ್ರಿ 11:00 ಗಂಟೆಯವರೆಗೂ ಸಹ ಯಾರು ಈ ಬಗ್ಗೆ ಪೊಲೀಸ್ ಠಾಣೆಗೆ ಯಾವುದೇ ದೂರು ಸಲ್ಲಿಸಿರುವುದಿಲ್ಲ ನಂತರ ಮುಂಜಾಗೃತಾ ಕ್ರಮದಡಿಯಲ್ಲಿ ವಶಕ್ಕೆ ಪಡೆದ ವ್ಯಕ್ತಿಗಳನ್ನು ಕರ್ನಾಟಕ ಪೊಲೀಸ್ ಕಾಯ್ದೆ ಕಲಂ:71 ಪ್ರಕಾರ ಸೂಕ್ತ ಎಚ್ಚರಿಕೆಯನ್ನು ನೀಡಿ ಬಿಡುಗಡೆ ಮಾಡಲಾಯಿತು. ➢ ಈ ಘಟನೆಯ ಬಗ್ಗೆ ವಿಡಿಯೋ ದೃಶ್ಯಾವಳಿ ಲಭ್ಯವಿರುತ್ತದೆ.	
3	ಕಲಾಪ ಮುಗಿದ ನಂತರ ಮುಖ್ಯದ್ವಾರದ ಮೆಟ್ಟಿಲುಗಳ ಮೇಲೆ ಶಾಂತಿಯುತ ಧರಣಿ ಕುಳಿತ ಸಂದರ್ಭದಲ್ಲಿ ನಮ್ಮನ್ನು ಏಕಾಏಕಿ ಪೊಲೀಸ್‌ರು ಎಳೆದುಕೊಂಡು ವಾಹನದಲ್ಲಿ ಕೆಲವು ಶಾಸಕರನ್ನು	➢ ಈ ಘಟನೆಯ ಬಗ್ಗೆ ಲಭ್ಯವಿದ್ದ ಸಿಸಿಟಿವಿ ಫುಟೇಜ್‌ನ ದೃಶ್ಯಾವಳಿಯನ್ನು ಪರಿಶೀಲಿಸಲಾಗಿ, ಅಧಿವೇಶನದ ಕಲಾಪ ಮುಕ್ತಾಯಗೊಂಡ ನಂತರ ಸುವರ್ಣ ಸೌಧದ ಮುಖ್ಯ ದ್ವಾರದ ಮೆಟ್ಟಿಲುಗಳ ಮೇಲೆ ಮಾನ್ಯ ಶ್ರೀ ಸಿ. ಟಿ. ರವಿ ಶಾಸಕರು ಹಾಗೂ ಇನ್ನಿತರ ಶಾಸಕರುಗಳು ಪ್ರತಿಭಟನೆ ಕೈಗೊಂಡಿದ್ದು ಇರುತ್ತದೆ.	

	ಹಿರೇಬಾಗೇವಾಡಿ ಪೊಲೀಸ್ ಠಾಣೆಗೆ ಹಾಗೂ ಇನ್ನೂ ಕೆಲವು ಶಾಸಕರುಗಳನ್ನು ಖಾನಾಪೂರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದಾರೆ. ಹಿರೇಬಾಗೇವಾಡಿ ಪೊಲೀಸ್ ಠಾಣೆಗೆ ಯಾವ ಕಾರಣಕ್ಕೆ ನಮ್ಮನ್ನು ಬಂಧಿಸಿದ್ದೀರಿ ಕುರಿತು ಕೇಳಿದಾಗ ಅಲ್ಲಿಯ ಪೊಲೀಸ್ ಅಧಿಕಾರಿಗಳು ಯಾವುದೇ ರೀತಿಯ ಸೂಕ್ತ ಉತ್ತರ ನೀಡದೇ ನಮ್ಮನ್ನು ಹಿರೇಬಾಗೇವಾಡಿಯಿಂದ ಬಿಟ್ಟು ಕಳುಹಿಸಿದರು.	➢ ಅಧಿವೇಶನದ ಕೊನೆಯ ದಿನವಾಗಿದ್ದರಿಂದ ಹೆಚ್ಚಿನ ಸಾರ್ವಜನಿಕರು ಪಾಸ್ ಪಡೆದುಕೊಂಡು ಬಂದಿದ್ದರು ಮತ್ತು ಎಲ್ಲ ಜನಪ್ರತಿನಿಧಿಗಳು ಜಮಾಯಿಸಿದ್ದರಿಂದ ಇದನ್ನು ಗಮನಿಸಿ ಕಲಾಪ ವೀಕ್ಷಣೆಗೆ ಬಂದಂತಹ ಎರಡು ಪಕ್ಷದ ಕಾರ್ಯಕರ್ತರು ಹೆಚ್ಚಿನ ಪ್ರಮಾಣದಲ್ಲಿ ಸೇರುತ್ತಿದ್ದುದ್ದನ್ನು ಗಮನಿಸಿ ಪ್ರತಿಭಟನೆ ನಿರತ ಶಾಸಕರುಗಳಿಗೆ ಪ್ರತಿಭಟನೆ ಕೈಬಿಡುವಂತೆ ಸಾಕಷ್ಟು ವಿನಂತಿಸಿದರೂ ಸಹ ಪ್ರತಿಭಟನೆ ಮುಂದುವರೆಸಿದ್ದರಿಂದ. ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಸೇರಿದ್ದರಿಂದ ಶಾಂತಿಭಂಗ ಉಂಟಾಗುವ ವಾತಾವರಣವಿದ್ದುದ್ದರಿಂದ ಮಾನ್ಯ ಶ್ರೀ ಸಿ.ಟಿ ರವಿ ರವರ ರಕ್ಷಣೆ ಹಾಗೂ ಸುರಕ್ಷೆತೆಯ ದೃಷ್ಟಿಯಿಂದ ಅವರನ್ನು ವಶಕ್ಕೆ ಪಡೆಯಲಾಯಿತು. ➢ ಅಲ್ಲದೇ, ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಜಮಾಯಿಸಿದ್ದರಿಂದ ಶಾಸಕರುಗಳ ರಕ್ಷಣೆ ಹಾಗೂ ಸುರಕ್ಷತೆಯ ಹಿತದೃಷ್ಟಿಯಿಂದ ಮಾನ್ಯ ಕೆಲವು ಶಾಸಕರುಗಳನ್ನು ಹಿರೇಬಾಗೇವಾಡಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಅವರಿಗೆ ಸೂಕ್ತ ಭದ್ರತೆ ಕಲ್ಪಿಸಿ ಅಲ್ಪೋಪಹಾರ ವ್ಯವಸ್ಥೆ ಮಾಡಿದ್ದು ಇರುತ್ತದೆ. ಹಿರೇಬಾಗೇವಾಡಿ ಪೊಲೀಸ್ ಠಾಣೆಗೆ ಕರೆದುಕೊಂಡ ಹೋದ ಯಾವುದೇ ಶಾಸಕರುಗಳನ್ನು ಬಂಧನ ಪ್ರಕ್ರಿಯೇಗೆ ಒಳಪಡಿಸಿರುವುದಿಲ್ಲ. ಈ ಸಂದರ್ಭದಲ್ಲಿ ಹಿರೇಬಾಗೇವಾಡಿ ಪೊಲೀಸ್ ಠಾಣೆಯ ಹತ್ತಿರ ಕಾಂಗ್ರೆಸ್ ಕಾರ್ಯಕರ್ತರು ಮಾನ್ಯ ಶ್ರೀ ಸಿ ಟಿ ರವಿ ಶಾಸಕರ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಹೆಚ್ಚಿನ ಸಂಖ್ಯೆಯಲ್ಲಿ ಜಮಾವಣೆ ಆಗುತ್ತಿದ್ದುದ್ದರಿಂದ ಅವರನ್ನು ಚದುರಿಸಿ ಮಾನ್ಯ ಶಾಸಕರ ಸುರಕ್ಷತೆಯನ್ನು ಖಚಿತಪಡಿಸಿಕೊಂಡು ನಂತರ ಮಾನ್ಯ ಶಾಸಕರುಗಳಿಗೆ ಈ ಬಗ್ಗೆ ತಿಳಿಸಿ, ಅವರುಗಳನ್ನು ಸುರಕ್ಷಿತವಾಗಿ, ಗೌರವಯುತವಾಗಿ ಕಳುಹಿಸಲಾಯಿತು.	

4	ವಿಷಯ ತಿಳಿದಾಗ ನಾವುಗಳು ರಾತ್ರಿ ೦೮:೦೦ ಗಂಟೆಗೆ ಖಾನಾಪೂರ ಪೋಲೀಸ್ ಠಾಣೆಗೆ ಹೋದಾಗ ಅಲ್ಲಿ ನಮ್ಮ ಶಾಸಕರಾದ ಮಾನ್ಯ ಶ್ರೀ. ಸಿ. ಟಿ. ರವಿ ಯವರು ಠಾಣೆಯಲ್ಲಿ ಇದ್ದರು. ನಾವು ಮಾನ್ಯ ಶ್ರೀ. ಸಿ. ಟಿ ರವಿ ಯವರನ್ನು ಏಕೆ ಪೋಲೀಸ್ ಠಾಣೆಗೆ ಕರೆದುಕೊಂಡು ಬಂದಿದ್ದಿರಾ? ಬಂಧಿಸಲು ಮಾನ್ಯ ಸಭಾಪತಿಗಳ ಅನುಮತಿ ಪಡೆದಿದ್ದೀರಾ? ನೀಡುವ ಯಾವುದೇ ನೋಟಿಸನ್ನು ನೀಡದೇ ಹೇಗೆ ಬಂಧಿಸಿರುವಿರಿ? ಎಂದು ಕೇಳಿದಾಗ ಯಾವುದೇ ಉತ್ತರ ನಮಗೆ ಪೋಲೀಸ್ ಅಧಿಕಾರಿಗಳು ನೀಡಿರುವುದಿಲ್ಲ. ನಾವು ತಕ್ಷಣ ಫ್ರತಿ ದೂರನ್ನು ನೀಡಿದರೂ ಸಹ "೦" ಎಫ್ಐಆರ್ ಕೂಡ ಹಾಕದೇ ನಮ್ಮ ದೂರಿಗೆ ಪೋಲೀಸ್ ಅಧಿಕಾರಿಗಳು ಸ್ವೀಕೃತಿ ನೀಡಲಿಲ್ಲ. ಯಾವುದೇ ರೀತಿ ಸ್ಪಂದನೆ ನೀಡಲಿಲ್ಲ. ಆಯುಕ್ತರಾದ ಶ್ರೀ. ಯಡಾ ಮಾರ್ಟಿನ್ ಐಪಿಎಸ್ ಹಾಗೂ ಡಿಸಿಪಿ ಶ್ರೀ. ರೋಹನ್ ಜಗದೀಶ ಉಪಸ್ಥಿತರಿದ್ದರೂ ಕೂಡಾ ನಮಗೆ ಸ್ಪಂದನೆ ಸಿಗಲಿಲ್ಲ. ನಂತರದಲ್ಲಿ ಏಕಾಏಕಿ ಶಾಸಕರನ್ನು ಹೊರಗೆ ದಬ್ಬಿ ನಂತರ ಶಾಸಕರಾದ ಶ್ರೀ. ಸಿ. ಟಿ. ರವಿ ಯವರನ್ನು ಬೆಂಗಳೂರಿಗೆ ಕರೆದುಕೊಂಡು ಹೋಗುತ್ತೇವೆ ಅಂತಾ ಹೇಳಿ ಪೋಲೀಸ್ ವಾಹನದಲ್ಲಿ ಕರೆದೊಯ್ದರು. ನಂತರ ಬೆಂಗಳೂರಿಗೆ ಹೋಗದೇ ರಾತ್ರಿ ಇಡೀ ಬೆಳಗಾವಿ ನಗರ ಹಾಗೂ ಬೆಳಗಾವಿಯ ಸುತ್ತಮುತ್ತಲಿನ ಪ್ರದೇಶಗಳಿಗೆ ಪೋಲೀಸ್ ವಾಹನದಲ್ಲಿ ಸುತ್ತಾಡಿಸಿದ್ದಾರೆ. ದಿನಾಂಕ. 20.12.2021 ರಂದು	➢ ದಿನಾಂಕ:19.12.2024 ರಂದು ರಾತ್ರಿ ೦೮:೦೦ ಗಂಟೆಗೆ ಕೆಲ ಮಾನ್ಯ ಶಾಸಕರು ಖಾನಾಪೂರ ಪೋಲೀಸ್ ಠಾಣೆಗೆ ಬಂದು ಮಾನ್ಯ ಶ್ರೀ ಸಿ ಟಿ ರವಿ ಶಾಸಕರು ರವರ ಬಂಧನದ ಬಗ್ಗೆ ಮಾನ್ಯ ಶ್ರೀ ಸಿ ಟಿ ರವಿ ಶಾಸಕರ ಮೇಲೆ ಮಾನ್ಯ ಸಚಿವೆ ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ ರವರು ನೀಡಿದ ದೂರಿನ ಮೇರೆಗೆ ಎಫ್ಐಆರ್ ದಾಖಲಾಗಿದ್ದು, ವಿಚಾರಣೆಗೆ ಕರೆದು ತಂದಿದ್ದೇವೆ ಎಂದು ಹೇಳಲಾಗಿತ್ತು. ಆ ಸಂದರ್ಭದಲ್ಲಿ ಬಂಧನವಾಗದೇ ಇದ್ದುದ್ದರಿಂದ, ನೋಟೀಸ್ ಕೊಡುವದಾಗಲೀ ಅಥವಾ ಸಭಾಪತಿಗಳ ಅನುಮತಿ ಪಡೆಯುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ➢ ಮಾನ್ಯ ಶ್ರೀ ಸಿ. ಟಿ. ರವಿ ಶಾಸಕರು ರವರ ವಿರುದ್ಧ ಹಿರೇಬಾಗೇವಾಡಿ ಪೋಲೀಸ್ ಠಾಣಾ ಅಪರಾಧ ಸಂಖ್ಯೆ:186/2024 ನೇದ್ದರಲ್ಲಿ ದಾಖಲಾದ ಪ್ರಕರಣದ ಬಗ್ಗೆ ತನಿಖಾಧಿಕಾರಿಗಳು ಅವರಿಗೆ ವಿವರಿಸಿದ್ದು, ಮಾನ್ಯ ಶ್ರೀ ಸಿ.ಟಿ. ರವಿ ಶಾಸಕರಿಗೆ ಕಲಂ:35(3) ಬಿಎನ್ಎಸ್ಎಸ್-2023 ನೇದ್ದರಡಿಯಲ್ಲಿ ನೋಟೀಸ್ನ್ನು ಜಾರಿ ಮಾಡುವ ಸಂದರ್ಭದಲ್ಲಿ ಅವರು ನೋಟೀಸ್ನ್ನು ತೆಗೆದುಕೊಳ್ಳದೇ, ನಿರಾಕರಿಸಿರುವುದಲ್ಲದೇ ತನಿಖೆಗೆ ಅಸಹಕಾರ ನೀಡಿರುತ್ತಾರೆ. ಅವರು ವಿಚಾರಣೆಗೆ ಸಹಕರಿಸದೇ ಇರುವುದರಿಂದ, ತನಿಖಾಧಿಕಾರಿಗಳು ನಿಯಮಾನುಸಾರ ಬಂಧನದ ಕುರಿತಂತೆ ನೀಡಲಾದ ನೋಟಿಸಿಗೆ ಮಾನ್ಯ ಸಿ.ಟಿ ರವಿ ರವರು ಸಹಿ ಮಾಡದೇ ತನಿಖೆಗೆ ಅಸಹಕಾರ ನೀಡಿರುತ್ತಾರೆ. ತನಿಖಾಧಿಕಾರಿಗಳು ಅವರ ವಿರುದ್ಧ ದಸ್ತಗಿರಿ ನಿಯಮಗಳನ್ನು ಅನುಸರಿಸಿ ಕಾನೂನಾತ್ಮಕವಾಗಿ ವಶಕ್ಕೆ ಪಡೆದಿರುತ್ತಾರೆ. ➢ ಅದರಂತೆ ಮಾನ್ಯ ಶ್ರೀ ಸಿ ಟಿ ರವಿ ಶಾಸಕರನ್ನು ವಶಕ್ಕೆ ಪಡೆದುಕೊಂಡಾಗ ಅನುಸರಿಬೇಕಾದ ನಿಯಮದಂತೆ ಮಾನ್ಯ ಸಭಾಪತಿಗಳು, ಮಾನ್ಯ ಶ್ರೀ ಕೇಶವಪ್ರಸಾದ್ ಮೌರ್ಯ ಮತ್ತು ಅಲ್ಲಿ ಇದ್ದಂತಹ ಎಲ್ಲ ಮಾನ್ಯ ಶಾಸಕರುಗಳಿಗೆ ಮೌಖಿಕವಾಗಿ ಮಾಹಿತಿಯನ್ನು ನೀಡಲಾಗಿರುತ್ತದೆ. ➢ ಮಾನ್ಯ ಶ್ರೀ ಸಿ ಟಿ ರವಿ ಶಾಸಕರು ರವರನ್ನು ಬಂಧಿಸಿದ ಬಗ್ಗೆ ಮಾನ್ಯ ಸಭಾಪತಿಗಳ ಗಮನಕ್ಕೆ ಮೌಖಿಕವಾಗಿ ಹಾಗೂ ಲಿಖಿತವಾಗಿ ಮಾಹಿತಿಯನ್ನು ನೀಡಲಾಗಿರುತ್ತದೆ. ➢ ಲಭ್ಯವಿರುವ ಸಿಸಿಟಿವಿ ದೃಶ್ಯಾವಳಿಯನ್ನು ಪರಿಶೀಲಿಸಲಾಗಿ ಮಾನ್ಯ ಶ್ರೀ ಸಿ ಟಿ ರವಿ, ಶಾಸಕರು ರವರು ಖಾನಾಪೂರ ಪೋಲೀಸ್ ಠಾಣೆಯಲ್ಲಿ ಪ್ರತಿ	

	ಶುಕ್ರವಾರದಂದು ಬೆಳಗ್ಗೆ. 10:30ಕ್ಕೆ ಬೆಳಗಾವಿಯ ಜಿಲ್ಲಾ ನ್ಯಾಯಾಲಯಕ್ಕೆ ಹಾಜರು ಪಡಿಸಿದಾಗ ನಮಗೆ ವಿಷಯ ತಿಳಿದಿರುತ್ತದೆ.	ದೂರು ನೀಡಿದಾಗ ದೂರು ಪ್ರತಿಯ ಮೇಲೆ ಠಾಣಾಧಿಕಾರಿ ರವರು ಹಿಂಬರಹ ಬರೆದು ಅದರ ಪ್ರತಿಯನ್ನು ಅಲ್ಲಿರತಕ್ಕಂತಹ ಎಲ್ಲ ಶಾಸಕರುಗಳಿಗೆ ತೋರಿಸಿ ಒಂದು ಪ್ರತಿಯನ್ನು ಕೊಟ್ಟಿರುತ್ತಾರೆ. ಆದರೆ ಸದರಿ ಪೋಲೀಸ್ ಠಾಣೆಯು ಬೆಳಗಾವಿ ಜಿಲ್ಲಾ ವ್ಯಾಪ್ತಿಗೆ ಬರುತ್ತಿರುವುದರಿಂದ ಈ ಬಗ್ಗೆ ಅವರಿಗೆ ತಿಳಹೇಳ ಸ್ಪಂದಿಸಲಾಗಿರುತ್ತದೆ. ➢ ಖಾನಾಪೂರ ಪೋಲೀಸ್ ಠಾಣೆಯಲ್ಲಿದ್ದಾಗ ರಾತ್ರಿ ಸಮಯದಲ್ಲಿ ಬಿಜೆಪಿ ಪಕ್ಷದ ಮುಖಂಡರು, ಕಾರ್ಯಕರ್ತರುಗಳು ಮತ್ತು ಮಾನ್ಯ ಶ್ರೀ ಸಿ ಟಿ ರವಿ ರವರ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದರು. ಅಲ್ಲದೆ ಮಾನ್ಯ ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ ಸಚಿವರ ಬೆಂಬಲಿಗರು, ಗ್ರಾಮಸ್ಥರು, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಪೋಲೀಸ್ ಠಾಣೆಯ ಹತ್ತಿರ ಸೇರುತ್ತಿದ್ದರು. ಹಲವಾರು ಪತ್ರಕರ್ತರು, ದೃಶ್ಯ ಮಾಧ್ಯಮದವರು ಜಮಾ ಆಗಿದ್ದರು. ಅಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ಬರುವ ಸಂಭವವಿತ್ತು. ➢ ಮಾನ್ಯ ನ್ಯಾಯಾಧೀಶರು, 5ನೇ ಜೆಎಂಎಫ್‌ಸಿ ನ್ಯಾಯಾಲಯ, ಬೆಳಗಾವಿ ರವರಿಗೆ ಮಾನ್ಯ ಶ್ರೀ ಸಿ ಟಿ ರವಿ ಶಾಸಕರು ರವರನ್ನು ಹಾಜರುಪಡಿಸುವ ಸಲುವಾಗಿ ಶ್ರೀ ನಂದೀಶ್ವರ ಕುಂಬಾರ, ಪಿಐ, ಸಿಸಿಬಿ, ಬೆಳಗಾವಿ ನಗರ ರವರ ಮುಖಾಂತರ ಮನವಿಯನ್ನು ಸಲ್ಲಿಸಲಾಯಿತು. ಈ ಮನವಿಗೆ ಮಾನ್ಯ ನ್ಯಾಯಾಧೀಶರು ಮರುದಿನ ಬೆಳಗ್ಗೆ ನ್ಯಾಯಾಲಯದ ಅವಧಿಯಲ್ಲಿ ತೆರೆದ ನ್ಯಾಯಾಲಯದಲ್ಲಿ ಹಾಜರುಪಡಿಸುವಂತೆ ತಿಳಿಸಿ ನಮ್ಮ ಮನವಿಯನ್ನು ಮೌಖಿಕವಾಗಿ ತಿರಸ್ಕರಿಸಿದರು. ಈ ಸಂದರ್ಭದಲ್ಲಿ ಪೋಲೀಸ್ ಆಯುಕ್ತರು, ಬೆಳಗಾವಿ ನಗರ ರವರ ಕಛೇರಿಯ ಮುಂಭಾಗ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಸೇರುತ್ತಿದ್ದರು. ➢ ಅದನ್ನು ಗಮನಿಸಿ ಮಾನ್ಯ ಶ್ರೀ ಸಿ ಟಿ ರವಿ ಶಾಸಕರನ್ನು ವಿಶೇಷ ಜನಪ್ರತಿನಿಧಿ ನ್ಯಾಯಾಲಯ ಬೆಂಗಳೂರು ರವರ ಮುಂದೆ ಹಾಜರುಪಡಿಸುವುದು ಒಳತು ಎಂದು ಭಾವಿಸಿ ಮತ್ತೊಮ್ಮೆ ಶ್ರೀ ನಂದೀಶ್ವರ ಕುಂಬಾರ ,ಪಿಐ, ರವರನ್ನು ಜನಪ್ರತಿನಿಧಿ ನ್ಯಾಯಾಲಯಕ್ಕೆ ಹಾಜರುಪಡಿಸಲು, ಸ್ಥಳೀಯ 5ನೇ ಜೆಎಂಎಫ್‌ಸಿ ನ್ಯಾಯಾಲಯದಿಂದ ಅನುಮತಿ ಪಡೆಯಲು 5ನೇ ಜೆಎಂಎಫ್‌ಸಿ ನ್ಯಾಯಾಧೀಶರ ಹತ್ತಿರ ಕಳುಹಿಸಿದರು. ಈ ಮಧ್ಯೆ ಮಾನ್ಯ ಶ್ರೀ ಸಿ ಟಿ ರವಿ ಶಾಸಕರನ್ನು ಬೆಂಗಳೂರಿಗೆ ಸ್ಥಳಾಂತರಿಸಲು ಠಾಣೆಯಿಂದ ಹೊರಗೆ ಕರೆತಂದು ಬೆಂಗಳೂರಿಗೆ ಹೊರಡಿಸಲು ಜೀಪ್‌ನಲ್ಲಿ ತನಿಖಾಧಿಕಾರಿಯವರು ಹೋರಟರು	

		ಆದರೆ ರಾತ್ರಿ ಸುಮಾರು ೦1:೦೦ ಗಂಟೆ ಹೊತ್ತಿಗೆ ಶ್ರೀ ನಂದೀಶ್ವರ ಕುಂಬಾರ ,ಪಿಐ, ರವರು ಖಾನಾಪೂರ ಪೋಲೀಸ್ ಠಾಣೆಗೆ ಬಂದು ಮಾನ್ಯ ನ್ಯಾಯಾಧೀಶರು ಬೆಂಗಳೂರಿನ ವಿಶೇಷ ಜನಪ್ರತಿನಿಧಿ ನ್ಯಾಯಾಲಯದ ಮುಂದೆ ಹಾಜರುಪಡಿಸಲು ಅನುಮತಿ ಕೊಡದೆ, ಬೆಳಗ್ಗೆ ತೆರೆದ ನ್ಯಾಯಾಲಯದಲ್ಲಿ ಹಾಜರುಪಡಿಸುವಂತೆ ಹೇಳಿದರು .ಹಾಗಾಗಿ ಈಗಾಗಲೇ ಮಾನ್ಯ ಶ್ರೀ ಸಿ ಟಿ ರವಿ ಶಾಸಕರನ್ನು ಬೆಂಗಳೂರಿನ ಕಡೆಗೆ ಕರೆದೊಯ್ಯುತ್ತಿದ್ದರಿಂದ ಪೋಲೀಸ್ ಕಮೀಷನರ್ ರವರು ಬೆಳಗಾವಿ ಪೋಲೀಸ್ ಅಧೀಕ್ಷಕರು ರವರಿಗೆ ಮಾನ್ಯ ಶ್ರೀ ಸಿ ಟಿ ರವಿ ಶಾಸಕರು ರವರ ಭದ್ರತೆ ದೃಷ್ಟಿಯಿಂದ ಅವರನ್ನು ಸುರಕ್ಷಿತ ಸ್ಥಳಕ್ಕೆ ಕರೆದುಕೊಂಡು ಹೋಗಲು ತಿಳಿಸಿದಂತೆ, ಸುರಕ್ಷತೆ ಮತ್ತು ಭದ್ರತೆಯ ದೃಷ್ಟಿಯಿಂದ ಕಿತ್ತೂರ ಪೋಲೀಸ್ ಠಾಣೆ, ಬೆಳಗಾವಿ ಜಿಲ್ಲೆಗೆ ಕರೆದುಕೊಂಡು ಹೋಗುತ್ತಿರುವಾಗ ಮಾರ್ಗ ಮಧ್ಯದಲ್ಲಿ ಬಿಜೆಪಿ ಮುಖಂಡರು, ಕಾರ್ಯಕರ್ತರು, ಮಾನ್ಯ ಶ್ರೀ ಸಿ ಟಿ ರವಿ ಶಾಸಕರು ರವರ ಬೆಂಬಲಿಗರು ತಮ್ಮ-ತಮ್ಮ ವಾಹನಗಳಲ್ಲಿ ನಿರಂತರವಾಗಿ ಹಿಂಬಾಲಿಸುತ್ತಿದ್ದರು. ಅದೇ ರೀತಿ ಹಲವಾರು ದೃಶ್ಯ ಮಾಧ್ಯಮದವರು ತಮ್ಮ ತಮ್ಮ ವಾಹನಗಳಲ್ಲಿ ನಿರಂತರವಾಗಿ ಹಿಂಬಾಲಿಸುತ್ತಿದ್ದರು. ನಂತರ ನಮ್ಮ ಪೋಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ಜನರು ಬ್ಯಾರಿಕೇಡಿಂಗ್ ವ್ಯವಸ್ಥೆ ಮಾಡಿಕೊಂಡು ಸದರಿರವರಿಗೆ ತಡೆದರೂ ಸಹ ಅವರು ನಿರಂತರವಾಗಿ ಹಿಂಬಾಲಿಸುತ್ತಿದ್ದರು. ➢ ಮಾನ್ಯ ಶ್ರೀ ಸಿ ಟಿ ರವಿ ಶಾಸಕರನ್ನು ಕರೆದುಕೊಂಡು ಹೋಗುವ ಮಾರ್ಗಗಳ ಮೂಲಕ ಸಂಚರಿಸುವ ಕಾಲಕ್ಕೂ ಸಹ ಅಲ್ಲಲ್ಲಿ ಬಿಜೆಪಿ ಪಕ್ಷದ ಮತ್ತು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದರು. ಶಾಂತಿಭಂಗ ಉಂಟಾಗುವ ವಾತಾವರಣ ಸೃಷ್ಟಿಯಾಗಿದ್ದರಿಂದ ಆ ಕಾಲಕ್ಕೆ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಆಯಾ ಜಿಲ್ಲೆಯ ಪೋಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳು ಮಾನ್ಯ ಶ್ರೀ ಸಿ ಟಿ ರವಿ ರವರ ಸುರಕ್ಷತೆ ಮತ್ತು ಭದ್ರತೆ ಕುರಿತು ಅವರನ್ನು ಹಿಂಬಾಲಿಸುವವರನ್ನು ತಡೆಯಲು ಪ್ರಯತ್ನಿಸುತ್ತಿದ್ದರೂ ಸಹ ಅವರ ಬೆಂಬಲಿಗರು ನಿರಂತರವಾಗಿ ಹಿಂಬಾಲಿಸುತ್ತಿದ್ದರು ಕಾರಣ ಅವರನ್ನು ಬೇರೆ ಸ್ಥಳಗಳಿಗೆ ಸ್ಥಳಾಂತರಿಸಲಾಯಿತು. ➢ ಮಾನ್ಯ ಶ್ರೀ ಸಿ.ಟಿ ರವಿರವರು ಖಾನಾಪೂರ ಠಾಣೆಯಲ್ಲಿ ಇದ್ದಾಗ ರಾತ್ರಿ ಅವರನ್ನು ದಸ್ತಗಿರಿ ಮಾಡಿದ ನಂತರ ಒಂದು ಲಿಖಿತ ದೂರನ್ನು ಖನಾಪೂರ	

		ಪೋಲೀಸ್ ನಿರೀಕ್ಷಕರರು ಸ್ವೀಕರಿಸಿ ಪರಿಶೀಲಿಸಿ ಕಲಂ 173 (3) ಬಿಎನ್ಎಸ್ಎಸ್ ಅಡಿಯಲ್ಲಿ ಸೂಕ್ತ ಕ್ರಮ ಕೈಗೊಂಡಿರುತ್ತಾರೆ. ನಂತರ ಮುಂದಿನ ಕಾನೂನು ಕ್ರಮಕ್ಕಾಗಿ ಮಾನ್ಯ ಎಸ್ಪಿ ಬೆಳಗಾವಿ ಜಿಲ್ಲೆ ರವರ ಮುಖಾಂತರ ಪೋಲೀಸ್ ಕಮೀಷನರ ಬೆಳಗಾವಿಗೆ ಕಳುಹಿಸಿರುತ್ತಾರೆ. ➢ ಈ ಮಧ್ಯೆ ಮೇಲೆ ಉಲ್ಲೇಖಿಸಿದ ಹಿರೇಬಾಗೇವಾಡಿ ಪೋಲೀಸ್ ಠಾಣೆ ಗುನ್ನೆ ನಂ.187/2024 ನೇದ್ದು ದಾಖಲಾಗಿದ್ದರಿಂದ ಮತ್ತು ಎರಡೂ ದೂರುಗಳು ಒಂದೇ ಘಟನೆಗೆ ಸಂಬಂಧಿಸಿದ್ದರಿಂದ ಸದರಿ ದೂರನ್ನು ಪ್ರಕರಣದಲ್ಲಿ ಅಳವಡಿಸಿಕೊಂಡು ತನಿಖೆಯನ್ನು ಸಿಐಡಿ ಯವರಿಗೆ ಒಪ್ಪಿಸಲಾಯಿತು. ➢ ಮಾನ್ಯ ಶ್ರೀ ಸಿ ಟಿ ರವಿ ಶಾಸಕರ ಬಂಧನದ ಬಗ್ಗೆ, ಅವರ ಸುರಕ್ಷತೆ ಮತ್ತು ಭದ್ರತೆ ಕುರಿತು ಕೈಗೊಂಡ ಕ್ರಮದ ಬಗ್ಗೆ ಹಾಗೂ ಬಂಧಿಸಲು ಸಭಾಪತಿಗಳ ಅನುಮತಿ ಕುರಿತು ಮಾನ್ಯ ಸಭಾಪತಿಗಳು ದೃಶ್ಯ ಮಾಧ್ಯಮದವರಿಗೆ ನೀಡಿದ ಸಂದರ್ಶನದ ವಿಡಿಯೋ ಲಭ್ಯವಿರುತ್ತದೆ. ➢ ಕಾರಣ ಎಲ್ಲ ಅಂಶಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಿ ನಾನು ಮಾನ್ಯ ಸದನದ ಗೌರವಾನ್ವಿತ ಸದಸ್ಯರ ಘನತೆಗೆ ದಕ್ಕೆ ತರುವಂತಹ ಯಾವುದೇ ರೀತಿಯ ಕ್ರಮಗಳನ್ನು ಕೈಕೊಂಡಿರುವುದಿಲ್ಲ ಮತ್ತು ಮಾನ್ಯ ಶ್ರೀ ಸಿ ಟಿ ರವಿ ಶಾಸಕರು ರವರ ಸುರಕ್ಷತೆ ಮತ್ತು ಭದ್ರತೆ ದೃಷ್ಟಿಯಿಂದ ನಿಯಮಾನುಸಾರ ಬಿಎನ್ಎಸ್ಎಸ್ ಅಡಿಯಲ್ಲಿಯೇ ಕರ್ತವ್ಯ ನಿರ್ವಹಿಸಿರುತ್ತೇನೆ. ಮಾನ್ಯ ಶ್ರೀ ಸಿ ಟಿ ರವಿ ಶಾಸಕರು ಮತ್ತು ಇತರೆ ಮಾನ್ಯ ಶಾಸಕರುಗಳಿಗೆ ಹಕ್ಕುಚ್ಯುತಿ ಮಾಡಿರುವುದಿಲ್ಲ. ಈ ವಿವರಣೆಯನ್ನು ಮಾನ್ಯರವರು ಅಂಗೀಕರಿಸಿ ಹಕ್ಕುಚ್ಯುತಿ ನಿಲುವಳಿಯನ್ನು ಇಲ್ಲಿಯೇ ಮುಕ್ತಾಯಗೊಳಿಸಲು ವಿನಂತಿ.	

ಹೆಚ್ಡಿ 179 ಪಿಇಜಿ 2025

(ಡಾ|| ಜಿ.ಎಸ್. ಮಂಗಳ) 3/6/25
ಸರ್ಕಾರದ ವಿಶೇಷ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೋಲೀಸ್ ಸೇವೆಗಳು).

ನಮೂನೆ

ಅ. ನಂ	ಮಾನ್ಯ ಶಾಸಕರು ನೀಡಿರುವ ಹಕ್ಕುಚ್ಯುತಿ ಪ್ರಕರಣದ ವಿವರ	ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ನೀಡಿದ ವಿವರಣೆ	ಇಲಾಖಾ ಮುಖ್ಯಸ್ಥರ ಅಭಿಪ್ರಾಯ
1.	ಕಲಾಪ ನಡೆಯುವ ಸಂದರ್ಭದಲ್ಲಿ ನಾವು ವಿಧಾನ ಪರಿಷತ ಶಾಸಕರು ಕಾರಿನಲ್ಲಿ ಮುಖ್ಯ ದ್ವಾರದಲ್ಲಿ ಬರುವಾಗ ಕೆಲವು ಕಿಡಗೇಡಿಗಳು ನಮ್ಮ ಮೇಲೆ ದೈಹಿಕವಾಗಿ ಹಲ್ಲೆ ಮಾಡಲು ಪ್ರಯತ್ನ ನಡೆಸಿದರು.	➢ ಈ ಘಟನೆಗೆ ಸಂಬಂಧಿಸಿದಂತೆ ಲಭ್ಯವಿರುವ ಸಿಸಿಟಿವಿ ದೃಶ್ಯಾವಳಿಯನ್ನು ಪರಿಶೀಲಿಸಲಾಗಿ ಅಧಿವೇಶನ ಸಂದರ್ಭದಲ್ಲಿ ದಿನಾಂಕ:19.12.2024 ರಂದು ಮಧ್ಯಾಹ್ನ 03:00 ಗಂಟೆ ಸುಮಾರಿಗೆ ಮಾನ್ಯ ಶ್ರೀ ಸಿ ಟಿ ರವಿ ಶಾಸಕರು ಹಾಗೂ ಅವರೊಂದಿಗೆ ಮಾನ್ಯ ಶ್ರೀ ಅರುಣ್ ಡಿ ಎಸ್ ಮತ್ತು ಮಾನ್ಯ ಶ್ರೀ ಎಸ್ ವಿ ಸಂಕನೂರ, ಎಮ್.ಎಲ್.ಸಿ ರವರುಗಳು ಕಾರಿನಲ್ಲಿ ಸುವರ್ಣ ಸೌಧದ ಪಶ್ಚಿಮ ದ್ವಾರದಲ್ಲಿ ವಾಹನವನ್ನು ನಿಲ್ಲಿಸಿ ಇಳಯುವಷ್ಟರಲ್ಲಿ ಕೆಲವು ಜನರು ಮಾನ್ಯ ಶ್ರೀ ಸಿ ಟಿ ರವಿ ರವರ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಮಾನ್ಯರವರ ವಾಹನದ ಹತ್ತಿರ ಬರುವಷ್ಟರಲ್ಲಿ ಪಶ್ಚಿಮ ದ್ವಾರದ ಹತ್ತಿರ ಕರ್ತವ್ಯದಲ್ಲಿರುವ ಪೋಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳು ಸುತ್ತುವರೆದು ಸದರಿ ಘೋಷಣೆ ಕೂಗುವ ಜನರನ್ನು ತಡೆದು, ಮಾನ್ಯ ಶ್ರೀ ಸಿ ಟಿ ರವಿ ಶಾಸಕರು ಹಾಗೂ ಅವರೊಂದಿಗೆ ಇರುವ ಮಾನ್ಯ ಶ್ರೀ ಅರುಣ್ ಡಿ ಎಸ್ ಮತ್ತು ಮಾನ್ಯ ಶ್ರೀ ಎಸ್ ವಿ ಸಂಕನೂರ, ಎಮ್.ಎಲ್.ಸಿ ರವರುಗಳಿಗೆ ಸುತ್ತುವರೆದು ಯಾವುದೇ ರೀತಿಯ ತೊಂದರೆ ಆಗದಂತೆ ಸೂಕ್ತ ರಕ್ಷಣೆ ಹಾಗೂ ಭದ್ರತೆಯನ್ನು ಒದಗಿಸಿರುತ್ತಾರೆ. ➢ ಮಾನ್ಯ ಶ್ರೀ ಸಿ ಟಿ ರವಿ, ಶಾಸಕರು ಅಥವಾ ಇತರೆ ಮಾನ್ಯ ಶಾಸಕರುಗಳ ಮೇಲೆ ಯಾವುದೇ ರೀತಿಯ ಹಲ್ಲೆಯಾಗಿರುವುದಿಲ್ಲ. ನಂತರ ಮಾನ್ಯ ಎಮ್.ಎಲ್.ಸಿ ರವರು ತಾವು ಸುರಕ್ಷಿತ ಎಂದು ತಿಳಿದ ಮೇರೆಗೆ ಪತ್ರಿಕಾಗೋಷ್ಠಿಯನ್ನೂ ಸಹ ಪಶ್ಚಿಮ ದ್ವಾರದ ಮೆಟ್ಟಿಲುಗಳ ಮೇಲೆಯೆ ಮಾಡಿರುತ್ತಾರೆ. ➢ ಮಾನ್ಯ ಶ್ರೀ ಸಿ ಟಿ ರವಿ ಎಮ್.ಎಲ್.ಸಿ ರವರ ಸುರಕ್ಷತೆ ಮತ್ತು ಭದ್ರತೆ ತಕ್ಷಣಕ್ಕೆ ಅನಿವಾರ್ಯವಿದ್ದು ಮಾನ್ಯ ಶಾಸಕರುಗಳ ಸುರಕ್ಷತೆಗಾಗಿ ಅಲ್ಲಿದ್ದವರನ್ನು ಚದುರಿಸಿ ಅಲ್ಲಿಯೇ ಸಿಕ್ಕ ಇಬ್ಬರನ್ನು ವಶಕ್ಕೆ ಪಡೆದು ಉದ್ಯಮಬಾಗ ಪೋಲೀಸ್ ಠಾಣೆಗೆ ಕಳುಹಿಸಿ ಮುಂಜಾಗೃತೆ ಕ್ರಮದಡಿಯಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಈ ಕುರಿತು ಠಾಣಾ ದಿನಚರಿಯಲ್ಲಿ ನಮೂದಿಸಲಾಗಿದೆ.	----

2	ಸುವರ್ಣ ವಿಧಾನ ಸೌಧದ ಮೊಗಸಾಲೆಯಲ್ಲಿ ಮಾನ್ಯ ವಿಧಾನ ಪರಿಷತ್ತಿನ ಶಾಸಕರುಗಳು ನಡೆದುಕೊಂಡು ಹೋಗುವ ಸಂದರ್ಭದಲ್ಲಿ ಮಾನ್ಯ ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ವಿಕಲಚೇತನ, ಹಿರಿಯರ ಕಲ್ಯಾಣ ಇಲಾಖೆಯ ಸಚಿವರಾದ ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ ಇವರ ಆಪ್ತ ಸಹಾಯಕರು ಮತ್ತು ಕೆಲವು ಕಿಡಿಗೇಡಿಗಳು ಹಲ್ಲೆ ಮಾಡಿದರು.	➢ ಈ ಘಟನೆಯ ಬಗ್ಗೆ ಲಭ್ಯವಿದ್ದ ವಿಡಿಯೋ ದೃಶ್ಯಾವಳಿಯನ್ನು ಪರಿಶೀಲಿಸಲಾಗಿ ಸುವರ್ಣ ವಿಧಾನ ಸೌಧದ ಮೊಗಸಾಲೆಯಲ್ಲಿ ಮಾನ್ಯ ಶ್ರೀ ಸಿ ಟಿ ರವಿ ಶಾಸಕರು ಹಾಗೂ ಮಾನ್ಯ ಶ್ರೀ ಕಿಶೋರ್ ಜಿ ಆರ್ ಶಾಸಕರು, ಸಾಯಂಕಾಲ 04:15 ಗಂಟೆಯ ಸುಮಾರಿಗೆ ಬರುತ್ತಿರುವಾಗ ಕೆಲವು ಜನರು ಮಾನ್ಯ ಶ್ರೀ ಸಿ ಟಿ ರವಿ ಶಾಸಕರ ವಿರುದ್ಧ ಅವಾಚ್ಯ ಶಬ್ದಗಳಿಂದ ಏರು ಧ್ವನಿಯಿಂದ ಮಾತನಾಡುತ್ತಾ ಅವರ ಹತ್ತಿರ ಬರುವಷ್ಟರಲ್ಲಿಯೇ ಕರ್ತವ್ಯದಲ್ಲಿದ್ದ ಮಾರ್ಷಲ್‌ಗಳು ಅವರುಗಳನ್ನು ತಡೆದು, ಮಾನ್ಯ ಶ್ರೀ ಸಿ ಟಿ ರವಿ ಶಾಸಕರಿಗೆ ಸೂಕ್ತ ರಕ್ಷಣೆ ಹಾಗೂ ಭದ್ರತೆಯನ್ನು ಗೇಟಿನ ಒಳಗಡೆ ಕಳುಹಿಸಿ ಗೇಟನ್ನು ಹಾಕಿ ಭದ್ರತೆಯನ್ನು ನೀಡಿರುತ್ತಾರೆ. ➢ ಈ ವೇಳೆಯಲ್ಲಿ ಮಾನ್ಯ ಶಾಸಕರ ಮೇಲೆ ಯಾವುದೇ ಹಲ್ಲೆಯಾಗಿರದಂತೆ ಲಭ್ಯವಿರುವ ವಿಡಿಯೋ ದೃಶ್ಯಾವಳಿಯಲ್ಲಿ ಕಾಣಬಹುದಾಗಿದೆ. ➢ ಈ ಘಟನೆಗೆ ಸಂಬಂಧಿಸಿದಂತೆ ಕೂಡಲೇ ಕರ್ತವ್ಯದಲ್ಲಿದ್ದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿರವರು ಸಹ ಧಾವಿಸಿ ಬಂದು ಸುವರ್ಣ ವಿಧಾನಸೌಧದಿಂದ ಮಾನ್ಯ ಸಚಿವರಾದ ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ ರವರ ಆಪ್ತ ಸಹಾಯಕ ಸಂಗನಗೌಡ ಎಸ್ ಪಾಟೀಲ್ ಸೇರಿದಂತೆ 04 ಜನರನ್ನು ವಶಕ್ಕೆ ಪಡೆದು ಉದ್ಯಮಬಾಗ್ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಮುಂಜಾಗೃತಾ ಕ್ರಮದಡಿಯಲ್ಲಿ ಕೆ.ಪಿ ಆಕ್ಟ್ ಕಲಂ-71 ಅಡಿಯಲ್ಲಿ ಕ್ರಮ ಜರುಗಿಸಲಾಗಿರುತ್ತದೆ. ➢ ಮಾನ್ಯ ಶ್ರೀ ಸಿ ಟಿ ರವಿ ರವರ ಮೇಲೆ ಹಲ್ಲೆ ಪ್ರಯತ್ನಕ್ಕೆ ಸಂಬಂಧಿಸಿದಂತೆ ರಾತ್ರಿ 11:00 ಗಂಟೆಯವರೆಗೂ ಸಹ ಯಾರು ಈ ಬಗ್ಗೆ ಪೊಲೀಸ್ ಠಾಣೆಗೆ ಯಾವುದೇ ದೂರು ಸಲ್ಲಿಸಿರುವುದಿಲ್ಲ ನಂತರ ಮುಂಜಾಗೃತಾ ಕ್ರಮದಡಿಯಲ್ಲಿ ವಶಕ್ಕೆ ಪಡೆದ ವ್ಯಕ್ತಿಗಳನ್ನು ಕರ್ನಾಟಕ ಪೊಲೀಸ್ ಕಾಯ್ದೆ ಕಲಂ:71 ಪ್ರಕಾರ ಸೂಕ್ತ ಎಚ್ಚರಿಕೆಯನ್ನು ನೀಡಿ ಬಿಡುಗಡೆ ಮಾಡಲಾಯಿತು. ➢ ಈ ಘಟನೆಯ ಬಗ್ಗೆ ವಿಡಿಯೋ ದೃಶ್ಯಾವಳಿ ಲಭ್ಯವಿರುತ್ತದೆ.	
3	ಕಲಾಪ ಮುಗಿದ ನಂತರ ಮುಖ್ಯದ್ವಾರದ ಮೆಟ್ಟಿಲುಗಳ ಮೇಲೆ ಶಾಂತಿಯುತ ಧರಣಿ ಕುಳಿತ ಸಂದರ್ಭದಲ್ಲಿ ನಮ್ಮನ್ನು ಏಕಾಏಕಿ ಪೊಲೀಸ್‌ರು ಎಳೆದುಕೊಂಡು ವಾಹನದಲ್ಲಿ ಕೆಲವು ಶಾಸಕರನ್ನು	➢ ಈ ಘಟನೆಯ ಬಗ್ಗೆ ಲಭ್ಯವಿದ್ದ ಸಿಸಿಟಿವಿ ಫುಟೇಜ್‌ನ ದೃಶ್ಯಾವಳಿಯನ್ನು ಪರಿಶೀಲಿಸಲಾಗಿ, ಅಧಿವೇಶನದ ಕಲಾಪ ಮುಕ್ತಾಯಗೊಂಡ ನಂತರ ಸುವರ್ಣ ಸೌಧದ ಮುಖ್ಯ ದ್ವಾರದ ಮೆಟ್ಟಿಲುಗಳ ಮೇಲೆ ಮಾನ್ಯ ಶ್ರೀ ಸಿ. ಟಿ. ರವಿ ಶಾಸಕರು ಹಾಗೂ ಇನ್ನಿತರ ಶಾಸಕರುಗಳು ಪ್ರತಿಭಟನೆ ಕೈಗೊಂಡಿದ್ದು ಇರುತ್ತದೆ.	

	ಹಿರೇಬಾಗೇವಾಡಿ ಪೊಲೀಸ್ ಠಾಣೆಗೆ ಹಾಗೂ ಇನ್ನೂ ಕೆಲವು ಶಾಸಕರುಗಳನ್ನು ಖಾನಾಪೂರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದಾರೆ. ಹಿರೇಬಾಗೇವಾಡಿ ಪೊಲೀಸ್ ಠಾಣೆಗೆ ಯಾವ ಕಾರಣಕ್ಕೆ ನಮ್ಮನ್ನು ಬಂಧಿಸಿದ್ದೀರಿ ಕುರಿತು ಕೇಳಿದಾಗ ಅಲ್ಲಿಯ ಪೊಲೀಸ್ ಅಧಿಕಾರಿಗಳು ಯಾವುದೇ ರೀತಿಯ ಸೂಕ್ತ ಉತ್ತರ ನೀಡದೇ ನಮ್ಮನ್ನು ಹಿರೇಬಾಗೇವಾಡಿಯಿಂದ ಬಿಟ್ಟು ಕಳುಹಿಸಿದರು.	➢ ಅಧಿವೇಶನದ ಕೊನೆಯ ದಿನವಾಗಿದ್ದರಿಂದ ಹೆಚ್ಚಿನ ಸಾರ್ವಜನಿಕರು ಪಾಸ್ ಪಡೆದುಕೊಂಡು ಬಂದಿದ್ದರು ಮತ್ತು ಎಲ್ಲ ಜನಪ್ರತಿನಿಧಿಗಳು ಜಮಾಯಿಸಿದ್ದರಿಂದ ಇದನ್ನು ಗಮನಿಸಿ ಕಲಾಪ ವೀಕ್ಷಣೆಗೆ ಬಂದಂತಹ ಎರಡು ಪಕ್ಷದ ಕಾರ್ಯಕರ್ತರು ಹೆಚ್ಚಿನ ಪ್ರಮಾಣದಲ್ಲಿ ಸೇರುತ್ತಿದ್ದುದ್ದನ್ನು ಗಮನಿಸಿ ಪ್ರತಿಭಟನೆ ನಿರತ ಶಾಸಕರುಗಳಿಗೆ ಪ್ರತಿಭಟನೆ ಕೈಬಿಡುವಂತೆ ಸಾಕಷ್ಟು ವಿನಂತಿಸಿದರೂ ಸಹ ಪ್ರತಿಭಟನೆ ಮುಂದುವರೆಸಿದ್ದರಿಂದ, ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಸೇರಿದ್ದರಿಂದ ಶಾಂತಿಭಂಗ ಉಂಟಾಗುವ ವಾತಾವರಣವಿದ್ದುದ್ದರಿಂದ ಮಾನ್ಯ ಶ್ರೀ ಸಿ.ಟಿ ರವಿ ರವರ ರಕ್ಷಣೆ ಹಾಗೂ ಸುರಕ್ಷೆತೆಯ ದೃಷ್ಟಿಯಿಂದ ಅವರನ್ನು ವಶಕ್ಕೆ ಪಡೆಯಲಾಯಿತು. ➢ ಅಲ್ಲದೇ, ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಜಮಾಯಿಸಿದ್ದರಿಂದ ಶಾಸಕರುಗಳ ರಕ್ಷಣೆ ಹಾಗೂ ಸುರಕ್ಷತೆಯ ಹಿತದೃಷ್ಟಿಯಿಂದ ಮಾನ್ಯ ಕೆಲವು ಶಾಸಕರುಗಳನ್ನು ಹಿರೇಬಾಗೇವಾಡಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಅವರಿಗೆ ಸೂಕ್ತ ಭದ್ರತೆ ಕಲ್ಪಿಸಿ ಅಲ್ಪೋಪಹಾರ ವ್ಯವಸ್ಥೆ ಮಾಡಿದ್ದು ಇರುತ್ತದೆ. ಹಿರೇಬಾಗೇವಾಡಿ ಪೊಲೀಸ್ ಠಾಣೆಗೆ ಕರೆದುಕೊಂಡ ಹೋದ ಯಾವುದೇ ಶಾಸಕರುಗಳನ್ನು ಬಂಧನ ಪ್ರಕ್ರಿಯೇಗೆ ಒಳಪಡಿಸಿರುವುದಿಲ್ಲ. ಈ ಸಂದರ್ಭದಲ್ಲಿ ಹಿರೇಬಾಗೇವಾಡಿ ಪೊಲೀಸ್ ಠಾಣೆಯ ಹತ್ತಿರ ಕಾಂಗ್ರೆಸ್ ಕಾರ್ಯಕರ್ತರು ಮಾನ್ಯ ಶ್ರೀ ಸಿ ಟಿ ರವಿ ಶಾಸಕರ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಹೆಚ್ಚಿನ ಸಂಖ್ಯೆಯಲ್ಲಿ ಜಮಾವಣೆ ಆಗುತ್ತಿದ್ದುದ್ದರಿಂದ ಅವರನ್ನು ಚದುರಿಸಿ ಮಾನ್ಯ ಶಾಸಕರ ಸುರಕ್ಷತೆಯನ್ನು ಖಚಿತಪಡಿಸಿಕೊಂಡು ನಂತರ ಮಾನ್ಯ ಶಾಸಕರುಗಳಿಗೆ ಈ ಬಗ್ಗೆ ತಿಳಿಸಿ, ಅವರುಗಳನ್ನು ಸುರಕ್ಷಿತವಾಗಿ, ಗೌರವಯುತವಾಗಿ ಕಳುಹಿಸಲಾಯಿತು.	

4	ವಿಷಯ ತಿಳಿದಾಗ ನಾವುಗಳು ರಾತ್ರಿ 08:00 ಗಂಟೆಗೆ ಖಾನಾಪೂರ ಪೋಲೀಸ್ ಠಾಣೆಗೆ ಹೋದಾಗ ಅಲ್ಲಿ ನಮ್ಮ ಶಾಸಕರಾದ ಮಾನ್ಯ ಶ್ರೀ. ಸಿ. ಟಿ. ರವಿ ಯವರು ಠಾಣೆಯಲ್ಲಿ ಇದ್ದರು. ನಾವು ಮಾನ್ಯ ಶ್ರೀ. ಸಿ. ಟಿ ರವಿ ಯವರನ್ನು ಏಕೆ ಪೋಲೀಸ್ ಠಾಣೆಗೆ ಕರೆದುಕೊಂಡು ಬಂದಿದ್ದಿರಾ? ಬಂಧಿಸಲು ಮಾನ್ಯ ಸಭಾಪತಿಗಳ ಅನುಮತಿ ಪಡೆದಿದ್ದೀರಾ? ನೀಡುವ ಯಾವುದೇ ನೋಟೀಸನ್ನು ನೀಡದೇ ಹೇಗೆ ಬಂಧಿಸಿರುವಿರಿ? ಎಂದು ಕೇಳಿದಾಗ ಯಾವುದೇ ಉತ್ತರ ನಮಗೆ ಪೋಲೀಸ್ ಅಧಿಕಾರಿಗಳು ನೀಡಿರುವುದಿಲ್ಲ. ನಾವು ತಕ್ಷಣ ಪ್ರತಿ ದೂರನ್ನು ನೀಡಿದರೂ ಸಹ "ಂ" ಎಫ್‌ಐಆರ್ ಕೂಡ ಹಾಕದೇ ನಮ್ಮ ದೂರಿಗೆ ಪೋಲೀಸ್ ಅಧಿಕಾರಿಗಳು ಸ್ವೀಕೃತಿ ನೀಡಲಿಲ್ಲ. ಯಾವುದೇ ರೀತಿ ಸ್ಪಂದನೆ ನೀಡಲಿಲ್ಲ. ಆಯುಕ್ತರಾದ ಶ್ರೀ. ಯಡಾ ಮಾರ್ಟಿನ್ ಐಪಿಎಸ್ ಹಾಗೂ ಡಿಸಿಪಿ ಶ್ರೀ. ರೋಹನ್ ಜಗದೀಶ ಉಪಸ್ಥಿತರಿದ್ದರೂ ಕೂಡಾ ನಮಗೆ ಸ್ಪಂದನೆ ಸಿಗಲಿಲ್ಲ. ನಂತರದಲ್ಲಿ ಏಕಾಏಕಿ ಶಾಸಕರನ್ನು ಹೊರಗೆ ದಬ್ಬಿ ನಂತರ ಶಾಸಕರಾದ ಶ್ರೀ. ಸಿ. ಟಿ. ರವಿ ಯವರನ್ನು ಬೆಂಗಳೂರಿಗೆ ಕರೆದುಕೊಂಡು ಹೋಗುತ್ತೇವೆ ಅಂತಾ ಹೇಳಿ ಪೋಲೀಸ್ ವಾಹನದಲ್ಲಿ ಕರೆದೊಯ್ದರು. ನಂತರ ಬೆಂಗಳೂರಿಗೆ ಹೋಗದೇ ರಾತ್ರಿ ಇಡೀ ಬೆಳಗಾವಿ ನಗರ ಹಾಗೂ ಬೆಳಗಾವಿಯ ಸುತ್ತಮುತ್ತಲಿನ ಪ್ರದೇಶಗಳಿಗೆ ಪೋಲೀಸ್ ವಾಹನದಲ್ಲಿ ಸುತ್ತಾಡಿಸಿದ್ದಾರೆ. ದಿನಾಂಕ. 20.12.2021 ರಂದು	➢ ದಿನಾಂಕ:19.12.2024 ರಂದು ರಾತ್ರಿ 08:00 ಗಂಟೆಗೆ ಕೆಲ ಮಾನ್ಯ ಶಾಸಕರು ಖಾನಾಪೂರ ಪೋಲೀಸ್ ಠಾಣೆಗೆ ಬಂದು ಮಾನ್ಯ ಶ್ರೀ ಸಿ ಟಿ ರವಿ ಶಾಸಕರು ರವರ ಬಂಧನದ ಬಗ್ಗೆ ಮಾನ್ಯ ಶ್ರೀ ಸಿ ಟಿ ರವಿ ಶಾಸಕರ ಮೇಲೆ ಮಾನ್ಯ ಸಚಿವೆ ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ ರವರು ನೀಡಿದ ದೂರಿನ ಮೇರೆಗೆ ಎಫ್‌ಐಆರ್ ದಾಖಲಾಗಿದ್ದು, ವಿಚಾರಣೆಗೆ ಕರೆದು ತಂದಿದ್ದೇವೆ ಎಂದು ಹೇಳಲಾಗಿತ್ತು. ಆ ಸಂದರ್ಭದಲ್ಲಿ ಬಂಧನವಾಗದೇ ಇದ್ದುದ್ದರಿಂದ, ನೋಟೀಸ್ ಕೊಡುವದಾಗಲೀ ಅಥವಾ ಸಭಾಪತಿಗಳ ಅನುಮತಿ ಪಡೆಯುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ➢ ಮಾನ್ಯ ಶ್ರೀ ಸಿ. ಟಿ. ರವಿ ಶಾಸಕರು ರವರ ವಿರುದ್ಧ ಹಿರೇಬಾಗೇವಾಡಿ ಪೋಲೀಸ್ ಠಾಣಾ ಅಪರಾಧ ಸಂಖ್ಯೆ:186/2024 ನೇದ್ದರಲ್ಲಿ ದಾಖಲಾದ ಪ್ರಕರಣದ ಬಗ್ಗೆ ತನಿಖಾಧಿಕಾರಿಗಳು ಅವರಿಗೆ ವಿವರಿಸಿದ್ದು, ಮಾನ್ಯ ಶ್ರೀ ಸಿ.ಟಿ. ರವಿ ಶಾಸಕರಿಗೆ ಕಲಂ:35(3) ಬಿಎನ್‌ಎಸ್‌ಎಸ್-2023 ನೇದ್ದರಡಿಯಲ್ಲಿ ನೋಟೀಸ್‌ನ್ನು ಜಾರಿ ಮಾಡುವ ಸಂದರ್ಭದಲ್ಲಿ ಅವರು ನೋಟೀಸ್‌ನ್ನು ತೆಗೆದುಕೊಳ್ಳದೇ, ನಿರಾಕರಿಸಿರುವುದಲ್ಲದೇ ತನಿಖೆಗೆ ಅಸಹಕಾರ ನೀಡಿರುತ್ತಾರೆ. ಅವರು ವಿಚಾರಣೆಗೆ ಸಹಕರಿಸದೇ ಇರುವುದರಿಂದ, ತನಿಖಾಧಿಕಾರಿಗಳು ನಿಯಮಾನುಸಾರ ಬಂಧನದ ಕುರಿತಂತೆ ನೀಡಲಾದ ನೋಟಿಸಿಗೆ ಮಾನ್ಯ ಸಿ.ಟಿ ರವಿ ರವರು ಸಹಿ ಮಾಡದೇ ತನಿಖೆಗೆ ಅಸಹಕಾರ ನೀಡಿರುತ್ತಾರೆ. ತನಿಖಾಧಿಕಾರಿಗಳು ಅವರ ವಿರುದ್ಧ ದಸ್ತಗಿರಿ ನಿಯಮಗಳನ್ನು ಅನುಸರಿಸಿ ಕಾನೂನಾತ್ಮಕವಾಗಿ ವಶಕ್ಕೆ ಪಡೆದಿರುತ್ತಾರೆ. ➢ ಅದರಂತೆ ಮಾನ್ಯ ಶ್ರೀ ಸಿ ಟಿ ರವಿ ಶಾಸಕರನ್ನು ವಶಕ್ಕೆ ಪಡೆದುಕೊಂಡಾಗ ಅನುಸರಿಬೇಕಾದ ನಿಯಮದಂತೆ ಮಾನ್ಯ ಸಭಾಪತಿಗಳು, ಮಾನ್ಯ ಶ್ರೀ ಕೇಶವಪ್ರಸಾದ್ ಮೌರ್ಯ ಮತ್ತು ಅಲ್ಲಿ ಇದ್ದಂತಹ ಎಲ್ಲ ಮಾನ್ಯ ಶಾಸಕರುಗಳಿಗೆ ಮೌಖಿಕವಾಗಿ ಮಾಹಿತಿಯನ್ನು ನೀಡಲಾಗಿರುತ್ತದೆ. ➢ ಮಾನ್ಯ ಶ್ರೀ ಸಿ ಟಿ ರವಿ ಶಾಸಕರು ರವರನ್ನು ಬಂಧಿಸಿದ ಬಗ್ಗೆ ಮಾನ್ಯ ಸಭಾಪತಿಗಳ ಗಮನಕ್ಕೆ ಮೌಖಿಕವಾಗಿ ಹಾಗೂ ಲಿಖಿತವಾಗಿ ಮಾಹಿತಿಯನ್ನು ನೀಡಲಾಗಿರುತ್ತದೆ. ➢ ಲಭ್ಯವಿರುವ ಸಿಸಿಟಿವಿ ದೃಶ್ಯಾವಳಿಯನ್ನು ಪರಿಶೀಲಿಸಲಾಗಿ ಮಾನ್ಯ ಶ್ರೀ ಸಿ ಟಿ ರವಿ, ಶಾಸಕರು ರವರು ಖಾನಾಪೂರ ಪೋಲೀಸ್ ಠಾಣೆಯಲ್ಲಿ ಪ್ರತಿ	

	ಶುಕ್ರವಾರದಂದು ಬೆಳಗ್ಗೆ. 10:30ಕ್ಕೆ ಬೆಳಗಾವಿಯ ಜಿಲ್ಲಾ ನ್ಯಾಯಾಲಯಕ್ಕೆ ಹಾಜರು ಪಡಿಸಿದಾಗ ನಮಗೆ ವಿಷಯ ತಿಳಿದಿರುತ್ತದೆ.	ದೂರು ನೀಡಿದಾಗ ದೂರು ಪ್ರತಿಯ ಮೇಲೆ ಠಾಣಾಧಿಕಾರಿ ರವರು ಹಿಂಬರಹ ಬರೆದು ಅದರ ಪ್ರತಿಯನ್ನು ಅಲ್ಲಿರತಕ್ಕಂತಹ ಎಲ್ಲ ಶಾಸಕರುಗಳಿಗೆ ತೋರಿಸಿ ಒಂದು ಪ್ರತಿಯನ್ನು ಕೊಟ್ಟಿರುತ್ತಾರೆ. ಆದರೆ ಸದರಿ ಪೋಲೀಸ್ ಠಾಣೆಯು ಬೆಳಗಾವಿ ಜಿಲ್ಲಾ ವ್ಯಾಪ್ತಿಗೆ ಬರುತ್ತಿರುವುದರಿಂದ ಈ ಬಗ್ಗೆ ಅವರಿಗೆ ತಿಳಹೇಳ ಸ್ಪಂದಿಸಲಾಗಿರುತ್ತದೆ. ➢ ಖಾನಾಪೂರ ಪೋಲೀಸ್ ಠಾಣೆಯಲ್ಲಿದ್ದಾಗ ರಾತ್ರಿ ಸಮಯದಲ್ಲಿ ಬಿಜೆಪಿ ಪಕ್ಷದ ಮುಖಂಡರು, ಕಾರ್ಯಕರ್ತರುಗಳು ಮತ್ತು ಮಾನ್ಯ ಶ್ರೀ ಸಿ ಟಿ ರವಿ ರವರ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದರು. ಅಲ್ಲದೆ ಮಾನ್ಯ ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ ಸಚಿವರ ಬೆಂಬಲಿಗರು, ಗ್ರಾಮಸ್ಥರು, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಪೋಲೀಸ್ ಠಾಣೆಯ ಹತ್ತಿರ ಸೇರುತ್ತಿದ್ದರು. ಹಲವಾರು ಪತ್ರಕರ್ತರು, ದೃಶ್ಯ ಮಾಧ್ಯಮದವರು ಜಮಾ ಆಗಿದ್ದರು. ಅಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ಬರುವ ಸಂಭವವಿತ್ತು. ➢ ಮಾನ್ಯ ನ್ಯಾಯಾಧೀಶರು, ೨ನೇ ಜೆಎಂಎಫ್‌ಸಿ ನ್ಯಾಯಾಲಯ, ಖಿಳಗಾವಿ ರವರಿಗೆ ಮಾನ್ಯ ಶ್ರೀ ಸಿ ಟಿ ರವಿ ಶಾಸಕರು ರವರನ್ನು ಹಾಜರುಪಡಿಸುವ ಸಲುವಾಗಿ ಶ್ರೀ ನಂದೀಶ್ವರ ಕುಂಬಾರ, ಪಿಐ, ಸಿಸಿಬಿ, ಬೆಳಗಾವಿ ನಗರ ರವರ ಮುಖಾಂತರ ಮನವಿಯನ್ನು ಸಲ್ಲಿಸಲಾಯಿತು. ಈ ಮನವಿಗೆ ಮಾನ್ಯ ನ್ಯಾಯಾಧೀಶರು ಮರುದಿನ ಬೆಳಗ್ಗೆ ನ್ಯಾಯಾಲಯದ ಅವಧಿಯಲ್ಲಿ ತೆರೆದ ನ್ಯಾಯಾಲಯದಲ್ಲಿ ಹಾಜರುಪಡಿಸುವಂತೆ ತಿಳಿಸಿ ನಮ್ಮ ಮನವಿಯನ್ನು ಮೌಖಿಕವಾಗಿ ತಿರಸ್ಕರಿಸಿದರು. ಈ ಸಂದರ್ಭದಲ್ಲಿ ಪೋಲೀಸ್ ಆಯುಕ್ತರು, ಬೆಳಗಾವಿ ನಗರ ರವರ ಕಛೇರಿಯ ಮುಂಭಾಗ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಸೇರುತ್ತಿದ್ದರು. ➢ ಅದನ್ನು ಗಮನಿಸಿ ಮಾನ್ಯ ಶ್ರೀ ಸಿ ಟಿ ರವಿ ಶಾಸಕರನ್ನು ವಿಶೇಷ ಜನಪ್ರತಿನಿಧಿ ನ್ಯಾಯಾಲಯ ಬೆಂಗಳೂರು ರವರ ಮುಂದೆ ಹಾಜರುಪಡಿಸುವುದು ಒಳತು ಎಂದು ಭಾವಿಸಿ ಮತ್ತೊಮ್ಮೆ ಶ್ರೀ ನಂದೀಶ್ವರ ಕುಂಬಾರ .ಪಿಐ. ರವರನ್ನು ಜನಪ್ರತಿನಿಧಿ ನ್ಯಾಯಾಲಯಕ್ಕೆ ಹಾಜರುಪಡಿಸಲು, ಸ್ಥಳೀಯ ೨ನೇ ಜೆಎಂಎಫ್‌ಸಿ ನ್ಯಾಯಾಲಯದಿಂದ ಅನುಮತಿ ಪಡೆಯಲು ೨ನೇ ಜೆಎಂಎಫ್‌ಸಿ ನ್ಯಾಯಾಧೀಶರ ಹತ್ತಿರ ಕಳುಹಿಸಿದರು. ಈ ಮಧ್ಯೆ ಮಾನ್ಯ ಶ್ರೀ ಸಿ ಟಿ ರವಿ ಶಾಸಕರನ್ನು ಬೆಂಗಳೂರಿಗೆ ಸ್ಥಳಾಂತರಿಸಲು ಠಾಣೆಯಿಂದ ಹೊರಗೆ ಕರೆತಂದು ಬೆಂಗಳೂರಿಗೆ ಹೊರಡಿಸಲು ಜೀಪ್‌ನಲ್ಲಿ ತನಿಖಾಧಿಕಾರಿಯವರು ಹೋರಟರು	

		ಆದರೆ ರಾತ್ರಿ ಸುಮಾರು ೦೧:೦೦ ಗಂಟೆ ಹೊತ್ತಿಗೆ ಶ್ರೀ ನಂದೀಶ್ವರ ಕುಂಬಾರ ,ಪಿಐ, ರವರು ಖಾನಾಪೂರ ಪೋಲೀಸ್ ಠಾಣೆಗೆ ಬಂದು ಮಾನ್ಯ ನ್ಯಾಯಾಧೀಶರು ಬೆಂಗಳೂರಿನ ವಿಶೇಷ ಜನಪ್ರತಿನಿಧಿ ನ್ಯಾಯಾಲಯದ ಮುಂದೆ ಹಾಜರುಪಡಿಸಲು ಅನುಮತಿ ಕೊಡದೆ, ಬೆಳಗ್ಗೆ ತೆರೆದ ನ್ಯಾಯಾಲಯದಲ್ಲಿ ಹಾಜರುಪಡಿಸುವಂತೆ ಹೇಳಿದರು .ಹಾಗಾಗಿ ಈಗಾಗಲೇ ಮಾನ್ಯ ಶ್ರೀ ಸಿ ಟಿ ರವಿ ಶಾಸಕರನ್ನು ಬೆಂಗಳೂರಿನ ಕಡೆಗೆ ಕರೆದೊಯ್ಯುತ್ತಿದ್ದರಿಂದ ಪೋಲೀಸ್ ಕಮೀಷನರ್ ರವರು ಬೆಳಗಾವಿ ಪೋಲೀಸ್ ಅಧೀಕ್ಷಕರು ರವರಿಗೆ ಮಾನ್ಯ ಶ್ರೀ ಸಿ ಟಿ ರವಿ ಶಾಸಕರು ರವರ ಭದ್ರತೆ ದೃಷ್ಟಿಯಿಂದ ಅವರನ್ನು ಸುರಕ್ಷಿತ ಸ್ಥಳಕ್ಕೆ ಕರೆದುಕೊಂಡು ಹೋಗಲು ತಿಳಿಸಿದಂತೆ, ಸುರಕ್ಷತೆ ಮತ್ತು ಭದ್ರತೆಯ ದೃಷ್ಟಿಯಿಂದ ಕಿತ್ತೂರ ಪೋಲೀಸ್ ಠಾಣೆ, ಬೆಳಗಾವಿ ಜಿಲ್ಲೆಗೆ ಕರೆದುಕೊಂಡು ಹೋಗುತ್ತಿರುವಾಗ ಮಾರ್ಗ ಮದ್ಯದಲ್ಲಿ ಬಿಜೆಪಿ ಮುಖಂಡರು, ಕಾರ್ಯಕರ್ತರು, ಮಾನ್ಯ ಶ್ರೀ ಸಿ ಟಿ ರವಿ ಶಾಸಕರು ರವರ ಬೆಂಬಲಿಗರು ತಮ್ಮ-ತಮ್ಮ ವಾಹನಗಳಲ್ಲಿ ನಿರಂತರವಾಗಿ ಹಿಂಬಾಲಿಸುತ್ತಿದ್ದರು. ಅದೇ ರೀತಿ ಹಲವಾರು ದೃಶ್ಯ ಮಾಧ್ಯಮದವರು ತಮ್ಮ ತಮ್ಮ ವಾಹನಗಳಲ್ಲಿ ನಿರಂತರವಾಗಿ ಹಿಂಬಾಲಿಸುತ್ತಿದ್ದರು. ನಂತರ ನಮ್ಮ ಪೋಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ಜನರು ಬ್ಯಾರಿಕೇಡಿಂಗ್ ವ್ಯವಸ್ಥೆ ಮಾಡಿಕೊಂಡು ಸದರಿರವರಿಗೆ ತಡೆದರೂ ಸಹ ಅವರು ನಿರಂತರವಾಗಿ ಹಿಂಬಾಲಿಸುತ್ತಿದ್ದರು. ➢ ಮಾನ್ಯ ಶ್ರೀ ಸಿ ಟಿ ರವಿ ಶಾಸಕರನ್ನು ಕರೆದುಕೊಂಡು ಹೋಗುವ ಮಾರ್ಗಗಳ ಮೂಲಕ ಸಂಚರಿಸುವ ಕಾಲಕ್ಕೂ ಸಹ ಅಲ್ಲಲ್ಲಿ ಬಿಜೆಪಿ ಪಕ್ಷದ ಮತ್ತು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದರು. ಶಾಂತಿಭಂಗ ಉಂಟಾಗುವ ವಾತಾವರಣ ಸೃಷ್ಟಿಯಾಗಿದ್ದರಿಂದ ಆ ಕಾಲಕ್ಕೆ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಆಯಾ ಜಿಲ್ಲೆಯ ಪೋಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳು ಮಾನ್ಯ ಶ್ರೀ ಸಿ ಟಿ ರವಿ ರವರ ಸುರಕ್ಷತೆ ಮತ್ತು ಭದ್ರತೆ ಕುರಿತು ಅವರನ್ನು ಹಿಂಬಾಲಿಸುವವರನ್ನು ತಡೆಯಲು ಪ್ರಯತ್ನಿಸುತ್ತಿದ್ದರೂ ಸಹ ಅವರ ಬೆಂಬಲಿಗರು ನಿರಂತರವಾಗಿ ಹಿಂಬಾಲಿಸುತ್ತಿದ್ದರು ಕಾರಣ ಅವರನ್ನು ಬೇರೆ ಸ್ಥಳಗಳಿಗೆ ಸ್ಥಳಾಂತರಿಸಲಾಯಿತು. ➢ ಮಾನ್ಯ ಶ್ರೀ ಸಿ.ಟಿ ರವಿರವರು ಖಾನಾಪೂರ ಠಾಣೆಯಲ್ಲಿ ಇದ್ದಾಗ ರಾತ್ರಿ ಅವರನ್ನು ದಸ್ತಗಿರಿ ಮಾಡಿದ ನಂತರ ಒಂದು ಅಜ್ಞಿತ ದೂರನ್ನು ಖನಾಪೂರ	

		ಪೊಲೀಸ್ ನಿರೀಕ್ಷಕರು ಸ್ವೀಕರಿಸಿ ಪರಿಶೀಲಿಸಿ ಕಲಂ 173 (3) ಬಿಎನ್ಎಸ್ಎಸ್ ಅಡಿಯಲ್ಲಿ ಸೂಕ್ತ ಕ್ರಮ ಕೈಗೊಂಡಿರುತ್ತಾರೆ. ನಂತರ ಮುಂದಿನ ಕಾನೂನು ಕ್ರಮಕ್ಕಾಗಿ ಮಾನ್ಯ ಎಸ್ಪಿ ಬೆಳಗಾವಿ ಜಿಲ್ಲೆ ರವರ ಮುಖಾಂತರ ಪೊಲೀಸ್ ಕಮೀಷನರ ಬೆಳಗಾವಿಗೆ ಕಳುಹಿಸಿರುತ್ತಾರೆ. ➢ ಈ ಮಧ್ಯೆ ಮೇಲೆ ಉಲ್ಲೇಖಿಸಿದ ಹಿರೇಬಾಗೇವಾಡಿ ಪೊಲೀಸ್ ಠಾಣೆ ಗುನ್ನೆ ನಂ.187/2024 ನೇದ್ದು ದಾಖಲಾಗಿದ್ದರಿಂದ ಮತ್ತು ಎರಡೂ ದೂರುಗಳು ಒಂದೇ ಘಟನೆಗೆ ಸಂಬಂಧಿಸಿದ್ದರಿಂದ ಸದರಿ ದೂರನ್ನು ಪ್ರಕರಣದಲ್ಲಿ ಅಳವಡಿಸಿಕೊಂಡು ತನಿಖೆಯನ್ನು ಸಿಐಡಿ ಯವರಿಗೆ ಒಪ್ಪಿಸಲಾಯಿತು. ➢ ಮಾನ್ಯ ಶ್ರೀ ಸಿ ಟಿ ರವಿ ಶಾಸಕರ ಬಂಧನದ ಬಗ್ಗೆ, ಅವರ ಸುರಕ್ಷತೆ ಮತ್ತು ಭದ್ರತೆ ಕುರಿತು ಕೈಗೊಂಡ ಕ್ರಮದ ಬಗ್ಗೆ ಹಾಗೂ ಬಂಧಿಸಲು ಸಭಾಪತಿಗಳ ಅನುಮತಿ ಕುರಿತು ಮಾನ್ಯ ಸಭಾಪತಿಗಳು ದೃಶ್ಯ ಮಾಧ್ಯಮದವರಿಗೆ ನೀಡಿದ ಸಂದರ್ಶನದ ವಿಡಿಯೋ ಲಭ್ಯವಿರುತ್ತದೆ. ➢ ಕಾರಣ ಎಲ್ಲ ಅಂಶಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಿ ನಾನು ಮಾನ್ಯ ಸದನದ ಗೌರವಾನ್ವಿತ ಸದಸ್ಯರ ಘನತೆಗೆ ದಕ್ಕೆ ತರುವಂತಹ ಯಾವುದೇ ರೀತಿಯ ಕ್ರಮಗಳನ್ನು ಕೈಕೊಂಡಿರುವುದಿಲ್ಲ ಮತ್ತು ಮಾನ್ಯ ಶ್ರೀ ಸಿ ಟಿ ರವಿ ಶಾಸಕರು ರವರ ಸುರಕ್ಷತೆ ಮತ್ತು ಭದ್ರತೆ ದೃಷ್ಟಿಯಿಂದ ನಿಯಮಾನುಸಾರ ಬಿಎನ್ಎಸ್ಎಸ್ ಅಡಿಯಲ್ಲಿಯೇ ಕರ್ತವ್ಯ ನಿರ್ವಹಿಸಿರುತ್ತೇನೆ. ಮಾನ್ಯ ಶ್ರೀ ಸಿ ಟಿ ರವಿ ಶಾಸಕರು ಮತ್ತು ಇತರೆ ಮಾನ್ಯ ಶಾಸಕರುಗಳಿಗೆ ಹಕ್ಕುಚ್ಯುತಿ ಮಾಡಿರುವುದಿಲ್ಲ. ಈ ವಿವರಣೆಯನ್ನು ಮಾನ್ಯರವರು ಅಂಗೀಕರಿಸಿ ಹಕ್ಕುಚ್ಯುತಿ ನಿಲುವಳಿಯನ್ನು ಇಲ್ಲಿಯೇ ಮುಕ್ತಾಯಗೊಳಿಸಲು ವಿನಂತಿ.	

ಹೆಚ್‌ಡಿ 179 ಪಿಇಜಿ 2025

(ಡಾ|| ಜಿ.ಎಸ್. ಮಂಗಳ) 3/6/25
ಸರ್ಕಾರದ ವಿಶೇಷ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೋಲೀಸ್ ಸೇವೆಗಳು).

ದಿನಾಂಕ: 28.12.2024 ಅಲ್ಲಿ ಮಾಹಿತಿ

ದಿನಾಂಕ:19.12.2024 ರಂದು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಮಾನ್ಯ ಸಿ ಟಿ ರವಿ, ವಿಧಾನ ಪರಿಷತ ಸದಸ್ಯರುರವರ ಘಟನೆಗೆ ಸಂಬಂಧಿಸಿದ ಸಂಪೂರ್ಣ ವಿವರ

- ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ದಿನಾಂಕ:09.12.2024 ರಿಂದ 19.12.2024 ರ ವರೆಗೆ ಚಳಗಾಲ ಶಾಸನ ಸಭೆಯ ಅಧಿವೇಶನ ನಡೆದಿದ್ದು, ಈ ಅವಧಿಯಲ್ಲಿ ಕಾನೂನು ಸುವ್ಯವಸ್ಥೆ ಹಾಗೂ ಸುಗಮ ಅಧಿವೇಶನ ಜರುಗಲು ಸೂಕ್ತ ಪೊಲಿಸ್ ಬಂದೋಬಸ್ತ್ ವ್ಯವಸ್ಥೆಯನ್ನು ನಿಯೋಜಿಸಲಾಗಿತ್ತು. ಬಂದೋಬಸ್ತ್ ಕರ್ತವ್ಯ ಉಸ್ತುವಾರಿ ಕುರಿತು ಹಿರಿಯ ಪೋಲೀಸ್ ಅಧಿಕಾರಿಗಳಲ್ಲದೇ ಎಸ್‌ಪಿ-05, ಹೆಚ್ಚುವರಿ ಎಸ್‌ಪಿ-06, ಡಿಎಸ್‌ಪಿ-22, ಪಿಐ-31, ಪಿಎಸ್‌ಐ-79, ಎಎಸ್‌ಐ-105, ಎಚ್‌ಸಿ/ಪಿಸಿ-823 ಹಾಗೂ 25 ಕೆಎಸ್‌ಆರ್‌ಪಿ ಪ್ರಹಾರ ದಳಗಳು ನಿಯೋಜನೆಗೊಂಡಿದ್ದು ಇರುತ್ತದೆ. ಅಲ್ಲದೇ ವಿಶೇಷವಾಗಿ ಸುವರ್ಣ ಸೌಧ ಬಂದೋಬಸ್ತ್ ಕುರಿತು ಎಸ್‌ಪಿ-01, ಹೆಚ್ಚುವರಿ ಎಸ್‌ಪಿ-01, ಡಿಎಸ್‌ಪಿ-08, ಪಿಐ-06, ಪಿಎಸ್‌ಐ-09, ಎಎಸ್‌ಐ-07, ಎಚ್‌ಸಿ/ಪಿಸಿ-106 ಹಾಗೂ 02 ಕೆಎಸ್‌ಆರ್‌ಪಿ ಪ್ರಹಾರ ದಳಗಳನ್ನು ನಿಯೋಜಿಸಲಾಗಿತ್ತು.

- ದಿನಾಂಕ:19.12.2024 ರಂದು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಚಳಗಾಲ ಶಾಸನ ಸಭೆಯ ಅಧಿವೇಶನದ ಕೊನೆಯ ದಿನವಾಗಿದ್ದು, ಅಧಿವೇಶನದ ಸಂದರ್ಭದಲ್ಲಿ ವಿಧಾನ ಪರಿಷತ್ತಿನಲ್ಲಿ ಬಿಜೆಪಿ ಪಕ್ಷದ ಶಾಸಕರುಗಳ ಪ್ರತಿಭಟನೆಯಿಂದ ಮಾನ್ಯ ಸಭಾಪತಿಗಳು, ವಿಧಾನ ಪರಿಷತ್ತಿನ ಕಲಾಪವನ್ನು ಸುಮಾರು 1250 ಗಂಟೆಗೆ ಮುಂದೂಡಿರುತ್ತಾರೆ.

- ವಿಧಾನ ಪರಿಷತ್ತಿನ ಕಲಾಪವು ಮುಂದೂಡಿದ ನಂತರ ಸುಮಾರು 1300 ಗಂಟೆಗೆ ಮಾನ್ಯ ಸಿ ಟಿ ರವಿ, ವಿಧಾನ ಪರಿಷತ ಸದಸ್ಯರು ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ, ಮಹಿಳಾ & ಮಕ್ಕಳ ಕಲ್ಯಾಣ ಅಭಿವೃದ್ಧಿ, ಸಚಿವರು ಇವರ ಮಧ್ಯ ಅನವಾಶ್ಯಕ ಮಾತುಕತೆ ಜರುಗಿರುತ್ತದೆ.

- ಈ ಘಟನೆಯ ಕುರಿತು ದೃಶ್ಯ ಮಾಧ್ಯಮಗಳಲ್ಲಿ ಘಟನೆ ಕುರಿತು ಸುದ್ದಿ ಪ್ರಸಾರವಾಗಿದ್ದು ಇರುತ್ತದೆ. ಅಧಿವೇಶನ ಸಂದರ್ಭದಲ್ಲಿ ವಿಕ್ಷಣೆ ಕುರಿತು ಪಾಸ್ ಪಡೆದುಕೊಂಡು ಸಾಕಷ್ಟು ಸಂಖ್ಯೆಯಲ್ಲಿ ಸಾರ್ವಜನಿಕರು ಹಾಗೂ ಎರಡು ಪಕ್ಷದ ಬೆಂಬಲಿಗರು ಸಹ ಸುವರ್ಣ ವಿಧಾನಸೌಧಕ್ಕೆ ಬಂದಿರುತ್ತಾರೆ.

- ಸುಮಾರು 15:00 ಗಂಟೆಗೆ ಶ್ರೀ ಡಿ ಎಸ್ ಅರುಣ್, ಎಸ್ ವಿ ಸಂಕನೂರ, ಮಾನ್ಯ ಶಾಸಕರುಗಳು, ಶ್ರೀ ಸಿ ಟಿ ರವಿರವರ ಜೊತೆಗೂಡಿ ಊಟ ಮಾಡಿ ಸುವರ್ಣಸೌಧದ ಒಳಗೆ ಮುಖ್ಯದ್ವಾರದ ಹತ್ತಿರ ಕಾರಿನಲ್ಲಿ ಬಂದು ಇಳಯುವ ಸಂದರ್ಭದಲ್ಲಿ ನಮ್ಮ ಕಾರಿನ ಮೇಲೆ ಕೆಲವು ಅಪರಿಚಿತ ವ್ಯಕ್ತಿಗಳು ಶ್ರೀ ಸಿ ಟಿ ರವಿ ರವರ ಮೇಲೆ ದೈಹಿಕವಾಗಿ ಹಲ್ಲೆ ನಡೆಸಲು ಪ್ರಯತ್ನಿಸಿದರು ಅವರು ಶ್ರೀ ಸಿ ಟಿ ರವಿ ರವರ ವಿರುದ್ಧ ಹಾಗೂ ಮಾನ್ಯ ಸಚಿವರಾದ ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ ಪರವಾಗಿ ಘೋಷಣೆ ಹಾಕುತ್ತಿದ್ದರು. ದಯಮಾಡಿ ಸುವರ್ಣ ವಿಧಾನಸೌಧದ ಒಳಗಡೆ ಬಂದು ಶಾಸಕರ ಮೇಲೆ ದೈಹಿಕ

ಹಲ್ಲೆ ನಡೆಸಿ ಜೀವ ಭಯ ಒಡ್ಡಿರುತ್ತಾರೆ. ಈ ದುಷ್ಕರ್ಮಿಗಳ ಮೇಲೆ ಕಾನೂನು ಕ್ರಮ ಕೈಗೊಂಡು ಅವರನ್ನು ತಕ್ಷಣ ಬಂಧಿಸಬೇಕೆಂದು ಮತ್ತು ಶಾಸಕ ಶ್ರೀ ಸಿ ಟಿ ರವಿ ರವರಿಗೆ ಸೂಕ್ತ ಭದ್ರತೆಯನ್ನು ನೀಡಬೇಕಾಗಿ ತಮ್ಮಲ್ಲಿ ಕೋರಿಕೊಳ್ಳುತ್ತೇವೆ ಅಂತಾ ಮನವಿ ಪತ್ರವನ್ನು ಮಾನ್ಯ ಸಭಾಪತಿಗಳಿಗೆ ಸಲ್ಲಿಸಿರುತ್ತಾರೆ.

- ಸದರಿ ಈ ಘಟನೆಗೆ ಸಂಬಂಧಿಸಿದಂತೆ ಸುವರ್ಣ ಸೌಧದ ಪಶ್ಚಿಮ ಧ್ವಾರದ ಬಳಿಯಲ್ಲಿ ಕರ್ತವ್ಯನಿರತ ಪೊಲೀಸ್ ಅಧಿಕಾರಿಗಳು ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳಾದ ಎಸ್‌ಪಿ ಗದಗ ಹಾಗೂ ಹೆಚ್ಚುವರಿ ಎಸ್‌ಪಿ ಬೆಳಗಾವಿ ರವರು ಕೂಡಲೇ ಕಾರ್ಯಪ್ರವೃತ್ತರಾಗಿ ಪರಿಸ್ಥಿತಿಯನ್ನು ಹತೋಟಿಗೆ ತೆಗೆದುಕೊಂಡು ಮಾನ್ಯ ಶಾಸಕರುಗಳಿಗೆ ಯಾವುದೇ ರೀತಿ ಧಕ್ಕೆಯಾಗದಂತೆ ಸೂಕ್ತ ಭದ್ರತೆಯನ್ನು ಒದಗಿಸಿರುತ್ತಾರೆ.

- ಅಲ್ಲದೇ ಅಧಿವೇಶನ ಹಾಗೂ ಸುವರ್ಣ ಸೌಧದ ಒಳಗಡೆ ಹಾಗೂ ಸೂತ್ತಲೂ ಹೆಚ್ಚುವರಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನಿಯೋಜಿಸಿ ಸೂಕ್ತ ಬಂದೋಬಸ್ತ್ ವ್ಯವಸ್ಥೆಯನ್ನು ಮಾಡಲಾಯಿತು.

- ವಿಧಾನ ಪರಿಷತ್‌ನ ಕಲಾಪವು ಮುಂದೂಡಿದ ನಂತರ ಸುಮಾರು 1300 ಗಂಟೆಗೆ ಮಾನ್ಯ ಸಿ ಟಿ ರವಿ, ವಿಧಾನ ಪರಿಷತ ಸದಸ್ಯರು ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ, ಮಹಿಳಾ & ಮಕ್ಕಳ ಕಲ್ಯಾಣ ಅಭಿವೃದ್ಧಿ, ಸಚಿವರು ಇವರ ನಡುವೆ ನಡೆದ ಘಟನೆ ಕುರಿತು ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ ರವರು ನೀಡಿದ ದೂರಿನನ್ವಯ 16:00 ಗಂಟೆಗೆ ಹಿರೇಬಾಗೇವಾಡಿ ಪೊಲೀಸ್ ಠಾಣಾ ಅಪರಾಧ ಸಂಖ್ಯೆ:186/2024 ಕಲಂ:75, 79 ಬಿಎನ್‌ಎಸ್ 2023 ನೇದ್ದರಡಿಯಲ್ಲಿ ಪ್ರಕರಣ ದಾಖಲಾಗಿದ್ದು ಇರುತ್ತದೆ.

- ನಂತರ ಅಧಿವೇಶನ ಸಂದರ್ಭದಲ್ಲಿ ವಿಧಾನಸಭಾ ಮೊಗಸಾಲೆಯಿಂದ ವಿಧಾನ ಪರಿಷತ್ತಿನ ಸಭಾಂಗಣದ ಕಡೆಗೆ ಶ್ರೀ ಕಿಶೋರ ಬಿ ಆರ್ ಮಾನ್ಯ ಶಾಸಕರು ಶ್ರೀ ಸಿ ಟಿ ರವಿ, ಮಾನ್ಯ ವಿಧಾನ ಪರಿಷತ ಸದಸ್ಯರು ರವರೊಂದಿಗೆ ಸಾಯಂಕಾಲ ಸುಮಾರು 16:15 ಗಂಟೆಗೆ ಬರುತ್ತಿರುವಾಗ ಸುಮಾರು 10 ಜನರ ಗುಂಪು ಏಕಾಏಕಿ ಅಕ್ರಮವಾಗಿ ತಡೆದು ನಿಲ್ಲಿಸಿ, ಅವಾಚ್ಯ ಶಬ್ದಗಳಿಂದ ಶ್ರೀ ಸಿ ಟಿ ರವಿರವರಿಗೆ ನಿನ್ನನ್ನು ಕೊಲ್ಲುತ್ತೇವೆ ಮತ್ತು ನಿನ್ನ ಹೆಣ ಕಳುಹಿಸುತ್ತೇವೆಂದು ಜೀವ ಬೆದರಿಕೆ ಹಾಕಿದರು ಅದರಂತೆ ಶ್ರೀ ಕಿಶೋರ ಬಿ ಆರ್ ಮಾನ್ಯ ಶಾಸಕರಿಗೂ ಸಹ ನಿನ್ನನ್ನು ಸಾಯಿಸುತ್ತೇವೆ ಅಂತ ಬೆದರಿಕೆ ಹಾಕಿದರು. ಈ ಘಟನೆ ನಡೆದ ನಂತರ ವಿಧಾನ ಸಭೆಯ ಮಾರ್ಷಲ್‌ಗಳು ನಮಗೆ ರಕ್ಷಣೆಗೆ ಬಂದ ನಂತರವು ಕೂಡ ಗಲಾಟೆ ಮುಂದುವರೆಸಿ ಜೀವ ಬೆದರಿಕೆ ಹಾಕುತ್ತಿದ್ದರು ಈ ಸಂದರ್ಭದಲ್ಲಿ ಟಿ ವಿ ಮಾಧ್ಯಮದವರು ಸಾಕ್ಷಿಯಾಗಿದ್ದರು. ಈ ಹಿನ್ನೆಲೆಯಲ್ಲಿ ಸಮಗ್ರ ತನಿಖೆ ನಡೆಸಿ ಆರೋಪಿಗಳನ್ನು ಕಂಡು ಹಿಡಿದು ಕಾನೂನು ಕ್ರಮ ಜರುಗಿಸ ಅವರಿಗೆ ಮತ್ತು ಸಿ ಟಿ ರವಿ ರವರಿಗೆ ರಕ್ಷಣೆ ನೀಡಬೇಕು ಅಂತಾ ಮಾನ್ಯ ಸಭಾಪತಿಗಳಿಗೆ ಪತ್ರವನ್ನು ಸಲ್ಲಿಸಿರುತ್ತಾರೆ.

- ಈ ಮೇಲೆ ನಮೂದಿಸದ ಘಟನೆಗೆ ಸಂಬಂಧಿಸಿದಂತೆ ಮಾರ್ಷಲ್‌ಗಳು ಹಾಗೂ ಮೊಗಸಾಲೆಯಲ್ಲಿ ಕರ್ತವ್ಯದಲ್ಲಿರುವ ಹಿರಿಯ ಪೋಲೀಸ್ ಅಧಿಕಾರಿಗಳು ಸದರಿ ಘಟನೆಗೆ ಸಂಬಂಧಿಸಿದಂತೆ ಕೂಡಲೇ ಕಾರ್ಯಪ್ರವೃತ್ತರಾಗಿ ಗಲಾಟೆಯಲ್ಲಿ ಭಾಗವಹಿಸಿದ 06 ಜನರನ್ನು ವಶಕ್ಕೆ ಪಡೆದು ಪಿಐ, ತಿಲಕವಾಡಿ ರವರು ಮುಂಜಾಗೃತಾ ಕ್ರಮದಡಿಯಲ್ಲಿ ಸದರಿಯವರನ್ನು ಉದ್ಯಮಬಾಗ ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಮುಂದಿನ ಸೂಕ್ತ ಕಾನೂನು ಕ್ರಮ ಜರುಗಿಸಲಾಗಿರುತ್ತದೆ.
- ನಂತರ ಚಳಗಾಲ ಅಧಿವೇಶನದ ವಿಧಾನ ಸಭಾ ಕಲಾಪವು ಸಾಯಂಕಾಲ 17:30 ಗಂಟೆಗೆ ಅನಿರ್ಧಿಷ್ಟಾವಧಿಗೆ ಮುಂದೂಡಲಾಗಿರುತ್ತದೆ.

- ನಂತರ 18:34 ಗಂಟೆಗೆ ಸುಮಾರಿಗೆ ಸಿ ಟಿ ರವಿ , ಎಂ.ಎಲ್.ಸಿ ಹಾಗೂ ಅವರೊಂದಿಗೆ ಬಿಜೆಪಿ ಪಕ್ಷದ ಮಾನ್ಯ ಶಾಸಕರುಗಳಾದ ಶ್ರೀ ಆರ್ ಅಶೋಕ, ಶ್ರೀ ಬಸನಗೌಡ ಪಾಟೀಲ್ ಯತ್ನಾಳ, ಶ್ರೀ ಚಲವಾದಿ ನಾರಾಯಣಸ್ವಾಮಿ, ಶ್ರೀ ಸುನೀಲ್ ವಲ್ಯಾಪೂರೆ, ಶ್ರೀ ಅರವಿಂದ ಬೆಲ್ಲದ, ಎನ್ ಶ್ರೀ ರವಿಕುಮಾರ್ ಹಾಗೂ ಶ್ರೀ ಕೇಶವ ಪ್ರಸಾದ್ ರವರು ಸುವರ್ಣ ಸೌಧದ ಪಶ್ಚಿಮ ಗೇಟ್‌ಗೆ ಬಂದು 18:37 ಗಂಟೆಗೆ ಮೆಟ್ಟಿಲುಗಳ ಮೇಲೆ ಪ್ರತಿಭಟನೆ ಕುರಿತು ಕುಳಿತುಕೊಂಡರು. ಈ ವೇಳೆಯಲ್ಲಿ ಹಿರಿಯ ಪೋಲೀಸ್ ಅಧಿಕಾರಿಗಳು ಹಾಗೂ ಸುವರ್ಣ ಸೌಧ ಬಂದೋಬಸ್ತ್ ಕರ್ತವ್ಯದಲ್ಲಿರುವ ಪೋಲೀಸ್ ಅಧಿಕಾರಿಗಳು ಪ್ರತಿಭಟನಾ ನಿರತ ಶಾಸಕರುಗಳಿಗೆ ಪ್ರತಿಭಟನೆಯನ್ನು ಕೈಬಿಡುವಂತೆ ಸಾಕಷ್ಟು ವಿನಂತಿಸಿಕೊಂಡರೂ ಸಹ ಅವರುಗಳು ಸೂಕ್ತವಾಗಿ ಸ್ಪಂದಿಸಿರುವುದಿಲ್ಲ.

- ಅಧಿವೇಶನದ ಕೊನೆಯ ದಿನವಾಗಿದ್ದರಿಂದ ಪಾಸ್ ಪಡೆದುಕೊಂಡು ಬಂದ ಸಾರ್ವಜನಿಕರು ಮತ್ತು ಎಲ್ಲ ಜನಪ್ರತಿನಿಧಿಗಳು ಜಮಾಯಿಸಿದ್ದರಿಂದ ಇದನ್ನು ಗಮನಿಸಿ ಬಿ.ಜೆ.ಪಿ ಪಕ್ಷದ ಕಾರ್ಯಕರ್ತರು ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಲ್ಲದೇ ಕಲಾಪ ವೀಕ್ಷಣೆಗೆ ಬಂದಂತಹ ಎರಡು ಪಕ್ಷದ ಬೆಂಬಲಿಗರು ಹೆಚ್ಚಿನ ಪ್ರಮಾಣದಲ್ಲಿ ಸೇರುತ್ತಿದ್ದುದ್ದನ್ನು ಗಮನಿಸಿ ಪ್ರತಿಭಟನೆ ನಿರತ ಶಾಸಕರುಗಳಿಗೆ ಪ್ರತಿಭಟನೆ ಕೈಬೀಡುವಂತೆ ಸಾಕಷ್ಟು ವಿನಂತಿಸಿದರೂ ಸಹ ಪ್ರತಿಭಟನೆ ಮುಂದುವರೆಸಿದ್ದರಿಂದ, ಹೆಚ್ಚಿನ ಬೆಂಬಲಿಗರು ಸೇರಿದ್ದರಿಂದ ನಗರದ ಶಾಂತಿಭಂಗ ಉಂಟಾಗುವ ವಾತಾವರಣವಿದ್ದರಿಂದ ಸಿ.ಟಿ ರವಿ ರವರ ರಕ್ಷಣೆ ಹಾಗೂ ಸುರಕ್ಷೆತೆಯ ದೃಷ್ಟಿಯಿಂದ ಅವರನ್ನು ವಶಕ್ಕೆ ಪಡೆಯಲಾಯಿತು.

- ಅಲ್ಲದೇ, ಹೆಚ್ಚಿನ ಸಂಖ್ಯೆಯಲ್ಲಿ ಬೆಂಬಲಿಗರು ಜಮಾಯಿಸಿದ್ದರಿಂದ ಮಾನ್ಯ ಶಾಸಕರುಗಳ ರಕ್ಷಣೆ ಹಾಗೂ ಸುರಕ್ಷತೆಯ ಹಿತದೃಷ್ಟಿಯಿಂದ ಹಿರೇಬಾಗೇವಾಡಿ ಪೋಲೀಸ್ ಠಾಣೆಗೆ ಮಾನ್ಯ ಶಾಸಕರುಗಳಾದ ಚಲವಾದಿ ನಾರಾಯಣಸ್ವಾಮಿ, ಡಿ ಎಸ್ ಅರುಣ, ಎಂ ಕೆ ಪ್ರಾಣೇಶ್, ಪಿ ಹೆಚ್ ಪೂಜಾರ, ಕಿಶೋರ್ ಬಿ ಆರ್ ರವರುಗಳನ್ನು ಕರೆದುಕೊಂಡು ಹೋಗಿ ಬೆಂಬಲಿಗರು ಚದುರಿಸಿದ ನಂತರ ಸುರಕ್ಷಿತವಾಗಿ ಕಳುಹಿಸಲಾಯಿತು. ಮಾನ್ಯ ಶಾಸಕರುಗಳನ್ನು ಸುರಕ್ಷತೆಯ ಹಿತದೃಷ್ಟಿಯಿಂದ ಕರೆದುಕೊಂಡು ಹೋಗಿ ಕಳುಹಿಸಲಾಯಿತು.

- ಶ್ರೀ ಸಿ. ಟಿ. ರವಿ, ಮಾನ್ಯ ವಿಧಾನ ಪರಿಷತ್ ಸದಸ್ಯರನ್ನು ಸುರಕ್ಷತೆ ಹಾಗೂ ಭದ್ರತೆಯ ದೃಷ್ಟಿಯಿಂದ ವಶಕ್ಕೆ ಪಡೆದ ನಂತರ ಸಂಬಂಧ ಪಟ್ಟ ಪೊಲೀಸ್ ಠಾಣೆಯಾದ ಹಿರೇಬಾಗೇವಾ ಗೆ ಮಾರ್ಗದಲ್ಲಿ ಕರೆದುಕೊಂಡು ಹೋಗುವಾಗ ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ ಸಚಿವರ ಬೆಂಬಲಿಗರು, ಗ್ರಾಮಸ್ಥರು, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸಹ ಪೊಲೀಸ್ ಠಾಣೆಯ ಹತ್ತಿರ ಹಾಗೂ ಮಾರ್ಗದುದಕ್ಕೂ ಸೇರಿದ್ದು, ಹಲವಾರು ಪತ್ರಕರ್ತರು, ದೃಶ್ಯ ಮಾಧ್ಯಮದವರು ಕೂಡಾ ಜಮಾ ಆಗಿದ್ದರು. ಅಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ಬರುವ ಸಂಭವ ಕಂಡು ಬಂದಿರುವುದರಿಂದ ಹಾಗೂ ಶ್ರೀ ಸಿ. ಟಿ. ರವಿ, ವಿಧಾನ ಪರಿಷತ್ ಸದಸ್ಯ ರವರನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸುವ ಸಂಬಂಧವಾಗಿ ಮತ್ತು ಮಾನ್ಯ ಸಭಾಪತಿ ವಿಧಾನ ಪರಿಷತ ರವರ ಸೂಚನೆಯಂತೆ ಶ್ರೀ ಸಿ ಟಿ ರವಿ ರವರಿಗೆ ಸುರಕ್ಷತೆ ಹಾಗೂ ಭದ್ರತೆ ಒದಗಿಸುವ ದೃಷ್ಟಿಯಿಂದ ಅವರನ್ನು ಹಿರೇಬಾಗೇವಾಡಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗುವ ಬದಲಿಗೆ ಖಾನಾಪೂರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಲಾಯಿತು.

- ಶ್ರೀ ಸಿ. ಟಿ. ರವಿ ರವರಿಗೆ ಅವರ ವಿರುದ್ಧ ದಾಖಲಾದ ಪ್ರಕರಣದ ಬಗ್ಗೆ ತನಿಖಾಧಿಕಾರಿಗಳು ವಿವರಿಸಿದ್ದು. ಶ್ರೀ ಸಿ.ಟಿ. ರವಿ ರವರು 35(3)ಬಿಎನ್ಎಸ್ಎಸ್ ನೋಟೀಸ್ನ್ನು ಜಾರಿಮಾಡುವ ಸಂದರ್ಭದಲ್ಲಿ ನಿರಾಕರಿಸಿರುತ್ತಾರೆ. ಅವರು ವಿಚಾರಣೆಗೆ ಸಹಕರಿಸದೇ ಇರುವುದರಿಂದ, ತನಿಖಾಧಿಕಾರಿಗಳು ನಿಯಮಾನುಸಾರ ಬಂಧನದ ಕುರಿತಂತೆ ನೀಡಲಾದ ನೋಟಿಸಿಗೆ ಮಾನ್ಯ ಸಿ.ಟಿ ರವಿ ರವರು ಸಹಿ ಮಾಡದೇ ಅಸಹಕಾರ ನೀಡಿರುತ್ತಾರೆ. ತನಿಖಾಧಿಕಾರಿಗಳು ಅವರ ವಿರುದ್ಧ ದಸ್ತಗಿರಿ ನಿಯಮಗಳನ್ನು ಅನುಸರಿಸಿ ಕಾನೂನಾತ್ಮಕವಾಗಿ ವಶಕ್ಕೆ ಪಡೆದಿರುತ್ತಾರೆ.

- ಶ್ರೀ ಸಿ ಟಿ ರವಿ ರವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಸಂಬಂಧವಾಗಿ ಮಾನ್ಯ ನ್ಯಾಯಾಧೀಶರು 5ನೇ ಜೆಎಂಎಫ್ಸಿ ಕೋರ್ಟ್ ಬೆಳಗಾವಿ ರವರಿಗೆ ಪಿಐ ಸಿಸಿಬಿ ರವರು 186/2024 ರಲ್ಲಿ ಪ್ರಕರಣವನ್ನು ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಮನವಿ ಪತ್ರ ಸಲ್ಲಿಸಿದ್ದು ಇರುತ್ತದೆ. ಮನವಿ ಪತ್ರವನ್ನು ಸ್ವೀಕರಿಸಿ, ಪ್ರಕರಣದಲ್ಲಿ ಆರೋಪಿತನನ್ನು ಹಾಜರುಪಡಿಸುವುದಾದರೆ ನಾಳೆ ತೆರೆದ ನ್ಯಾಯಾಲಯದಲ್ಲಿ ಹಾಜರು ಪಡೆಸಲು ಮೌಖಿಕವಾಗಿ ತಿಳಿಸಿರುತ್ತಾರೆ.

- ಖಾನಾಪೂರ ಪೊಲೀಸ್ ಠಾಣೆಯಲ್ಲಿದ್ದಾಗ ರಾತ್ರಿ ಸಮಯದಲ್ಲಿ ಬಿಜೆಪಿ ಪಕ್ಷದ ಮುಖಂಡರು, ಕಾರ್ಯಕರ್ತರುಗಳು ಮತ್ತು ಶ್ರೀ ಸಿ ಟಿ ರವಿ ರವರ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದರು. ಅಲ್ಲದೆ ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ ಮಾನ್ಯ ಸಚಿವರ ಬೆಂಬಲಿಗರು, ಗ್ರಾಮಸ್ಥರು, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಪೊಲೀಸ್ ಠಾಣೆಯ ಹತ್ತಿರ ಸೇರುತ್ತಿದ್ದರು. ಹಲವಾರು ಪತ್ರಕರ್ತರು, ದೃಶ್ಯ ಮಾಧ್ಯಮದವರು ಜಮಾ ಆಗಿದ್ದರು. ಅಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ಬರುವ ಸಂಭವ, ನಗರದಲ್ಲಿ ಶಾಂತಿಭಂಗ ಉಂಟಾಗುವ ವಾತಾವರಣ ಕಂಡು ಬಂದಿರುವುದರಿಂದ ಹಾಗೂ ಶ್ರೀ ಸಿ ಟಿ ರವಿ ರವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಸಂಬಂಧವಾಗಿ ಮತ್ತು ಮಾನ್ಯ ಸಭಾಪತಿ ವಿಧಾನ ಪರಿಷತ್ ರವರ ಸೂಚನೆಯಂತೆ ಶ್ರೀ ಸಿ ಟಿ ರವಿ ರವರಿಗೆ ಸುರಕ್ಷತೆ

ಹಾಗೂ ಭದ್ರತೆ ಒದಗಿಸುವ ದೃಷ್ಟಿಯಿಂದ ಅವರನ್ನು ಪೊಲೀಸ್ ವಾಹನದಲ್ಲಿ ಸುರಕ್ಷಿತ ಸ್ಥಳಕ್ಕೆ ಕರೆದುಕೊಂಡು ಹೋಗಲು ಖಾನಾಪೂರ ಪೊಲೀಸ್ ಠಾಣೆಯಿಂದ ಸ್ಥಳಾಂತರಿಸಲಾಯಿತು.

- ಶ್ರೀ ಸಿ ಟಿ ರವಿರವರನ್ನು ಖಾನಾಪೂರ ಪೊಲೀಸ್ ಠಾಣೆಯಿಂದ ಸುರಕ್ಷಿತ ಸ್ಥಳಕ್ಕೆ ಕರೆದುಕೊಂಡು ಹೋಗುವಾಗ ಬಿಜೆಪಿ ಮುಖಂಡರು, ಕಾರ್ಯಕರ್ತರು, ಸಿ ಟಿ ರವಿ ರವರ ಬೆಂಬಲಿಗರು ತಮ್ಮ-ತಮ್ಮ ವಾಹನಗಳಲ್ಲಿ ನಿರಂತರವಾಗಿ ಹಿಂಬಾಲಿಸುತ್ತಿದ್ದರು ಅದೇ ರೀತಿ ಹಲವಾರು ಮೀಡಿಯಾದವರು ತಮ್ಮ ತಮ್ಮ ವಾಹನಗಳಲ್ಲಿ ನಿರಂತರವಾಗಿ ಹಿಂಬಾಲಿಸುತ್ತಿದ್ದರು.

- ಶ್ರೀ ಸಿ ಟಿ ರವಿರವರನ್ನು ಕರೆದುಕೊಂಡು ಹೋಗುವ ಮಾರ್ಗಗಳ ಮೂಲಕ ಸಂಚರಿಸುವ ಕಾಲಕ್ಕೂ ಸಹ ಅಲ್ಲಲ್ಲಿ ಬಿಜೆಪಿ ಪಕ್ಷದ ಮತ್ತು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದರು. ಆ ಕಾಲಕ್ಕೆ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಆಯಾ ಜಿಲ್ಲೆಯ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳು ಸಿ ಟಿ ರವಿ ರವರ ಸುರಕ್ಷತೆ ಮತ್ತು ಭದ್ರತೆ ಕುರಿತು ಅವರನ್ನು ಹಿಂಬಾಲಿಸುವವರನ್ನು ತಡೆಯಲು ಪ್ರಯತ್ನಿಸುತ್ತಿದ್ದರೂ ಸಹ ಅವರು ಚದುರದೇ ಹಿಂಬಾಲಿಸುತ್ತಿದ್ದರು. ಸಿ ಟಿ ರವಿ ರವರ ಸುರಕ್ಷತೆ ಮತ್ತು ಭದ್ರತೆ ಪ್ರಾಮುಖ್ಯವಾಗಿದ್ದರಿಂದ ಸ್ಥಳಾಂತರಿಸಲಾಯಿತು.

- ಖಾನಾಪೂರ ಪೊಲೀಸ್ ಠಾಣೆಯಲ್ಲಿದ್ದಾಗ ರಾತ್ರಿ ಸಮಯದಲ್ಲಿ ಬಿಜೆಪಿ ಪಕ್ಷದ ಮುಖಂಡರು, ಕಾರ್ಯಕರ್ತರುಗಳು ಮತ್ತು ಶ್ರೀ ಸಿ ಟಿ ರವಿ ರವರ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದರು. ಅಲ್ಲದೆ ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ ಮಾನ್ಯ ಸಚಿವರ ಬೆಂಬಲಿಗರು, ಗ್ರಾಮಸ್ಥರು, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸಹ ಪೊಲೀಸ್ ಠಾಣೆಯ ಹತ್ತಿರ ಸೇರುತ್ತಿದ್ದರು. ಹಲವಾರು ಪತ್ರಕರ್ತರು, ದೃಶ್ಯ ಮಾಧ್ಯಮದವರು ಜಮಾ ಆಗಿದ್ದರು. ಅಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ಬರುವ ಸಂಭವ ಕಂಡು ಬಂದಿರುವುದರಿಂದ ಹಾಗೂ ಶ್ರೀ ಸಿ ಟಿ ರವಿ ರವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಸಂಬಂಧವಾಗಿ ಮತ್ತು ಮಾನ್ಯ ಸಭಾಪತಿ ವಿಧಾನ ಪರಿಷತ ರವರ ಸೂಚನೆಯಂತೆ ಶ್ರೀ ಸಿ ಟಿ ರವಿ ರವರಿಗೆ ಸುರಕ್ಷತೆ ಹಾಗೂ ಭದ್ರತೆ ಒದಗಿಸುವ ದೃಷ್ಟಿಯಿಂದ ಅವರನ್ನು ಪೊಲೀಸ್ ವಾಹನದಲ್ಲಿ ಸುರಕ್ಷಿತ ಸ್ಥಳಕ್ಕೆ ಕರೆದುಕೊಂಡು ಹೋಗಲು ಖಾನಾಪೂರ ಪೊಲೀಸ್ ಠಾಣೆಯಿಂದ ಸ್ಥಳಾಂತರಿಸಲಾಯಿತು.

- ಶ್ರೀ ಸಿ ಟಿ ರವಿರವರನ್ನು ಖಾನಾಪೂರ ಪೊಲೀಸ್ ಠಾಣೆಯಿಂದ ಸುರಕ್ಷಿತ ಸ್ಥಳಕ್ಕೆ ಕರೆದುಕೊಂಡು ಹೋಗುವಾಗ ಬಿಜೆಪಿ ಮುಖಂಡರು, ಕಾರ್ಯಕರ್ತರು, ಸಿ ಟಿ ರವಿ ರವರ ಬೆಂಬಲಿಗರು ತಮ್ಮ-ತಮ್ಮ ವಾಹನಗಳಲ್ಲಿ ನಿರಂತರವಾಗಿ ಹಿಂಬಾಲಿಸುತ್ತಿದ್ದರು ಅದೇ ರೀತಿ ಹಲವಾರು ಮೀಡಿಯಾದವರು ತಮ್ಮ ತಮ್ಮ ವಾಹನಗಳಲ್ಲಿ ನಿರಂತರವಾಗಿ ಹಿಂಬಾಲಿಸುತ್ತಿದ್ದರು.

- ಶ್ರೀ ಸಿ ಟಿ ರವಿರವರನ್ನು ಕರೆದುಕೊಂಡು ಹೋಗುವ ಮಾರ್ಗಗಳ ಮೂಲಕ ಸಂಚರಿಸುವ ಕಾಲಕ್ಕೂ ಸಹ ಅಲ್ಲಲ್ಲಿ ಬಿಜೆಪಿ ಪಕ್ಷದ ಮತ್ತು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸಹ ಹೆಚ್ಚಿನ

ಸಂಖ್ಯೆಯಲ್ಲಿ ಸೇರುತ್ತಿದ್ದರು. ಆ ಕಾಲಕ್ಕೆ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಆಯಾ ಜಿಲ್ಲೆಯ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳು ಸಿ ಟಿ ರವಿ ರವರ ಸುರಕ್ಷತೆ ಮತ್ತು ಭದ್ರತೆ ಕುರಿತು ಅವರನ್ನು ಹಿಂಬಾಲಿಸುವವರನ್ನು ತಡೆಯಲು ಪ್ರಯತ್ನಿಸುತ್ತಿದ್ದರೂ ಸಹ ಅವರು ಚದುರದೇ ಹಿಂಬಾಲಿಸುತ್ತಿದ್ದರು. ಸಿ ಟಿ ರವಿ ರವರ ಸುರಕ್ಷತೆ ಮತ್ತು ಭದ್ರತೆ ಪ್ರಾಮುಖ್ಯವಾಗಿದ್ದರಿಂದ ಸ್ಥಳಾಂತರಿಸಲಾಯಿತು.

- ಮಾನ್ಯ ಸಿ.ಟಿ ರವಿರವರು ಖಾನಾಪೂರ ಠಾಣೆಯಲ್ಲಿ ಇದ್ದಾಗ ರಾತ್ರಿ ಅವರನ್ನು ದಸ್ತಗಿರಿ ಮಾಡಿದ ನಂತರ ಒಂದು ಲಿಖಿತ ದೂರನ್ನು ಖಾನಾಪೂರ ಪೊಲೀಸ್ ನಿರೀಕ್ಷಕರರು ಸ್ವೀಕರಿಸಿ ಪರಿಶೀಲಿಸಿ ಕಲಂ 173 (3) ಬಿಎನ್ಎಸ್ಎಸ್ ಅಡಿಯಲ್ಲಿ ಸೂಕ್ತ ಕ್ರಮ ಕೈಗೊಂಡಿರುತ್ತಾರೆ.

- ನಂತರ ಮುಂದಿನ ಕ್ರಮಕ್ಕಾಗಿ ಮಾನ್ಯ ಎಸ್ಪಿ ಬೆಳಗಾವಿ ಜಿಲ್ಲೆ ರವರ ಮುಖಾಂತರ ಪೊಲೀಸ್ ಆಯುಕ್ತರು, ಬೆಳಗಾವಿ ರವರಿಗೆ ಕಳುಹಿಸಿರುತ್ತಾರೆ. ಈ ಮಧ್ಯೆ ಮೇಲೆ ಉಲ್ಲೇಖಿಸಿದ ಹಿರೇಬಾಗೇವಾಡಿ ಪೊಲೀಸ್ ಠಾಣೆ ಗುನ್ನೆ ನಂ.187/2024 ನೇದ್ದು ದಾಖಲಾಗಿದ್ದರಿಂದ ಮತ್ತು ಎರಡೂ ದೂರುಗಳು ಒಂದೇ ಘಟನೆಗೆ ಸಂಬಂಧಿಸಿದ್ದರಿಂದ ಸದರಿ ದೂರನ್ನು ಪ್ರಕರಣದಲ್ಲಿ ಅಳವಡಿಸಿಕೊಂಡು ತನಿಖೆಯನ್ನು ಸಿಐಡಿ ಯವರಿಗೆ ಒಪ್ಪಿಸಲಾಯಿತು.

- ಶ್ರೀ ಸಿ ಟಿ ರವಿ ರವರಿಗೆ ರಾತ್ರಿ ವೇಳೆ ಅವರಿಗೆ ಆದ ಗಾಯದ ಕುರಿತು ಯೋಗ್ಯ ವೈದ್ಯಕೀಯ ಚಿಕಿತ್ಸೆಯನ್ನು ನೀಡಲಾಯಿತು. ಅಲ್ಲದೇ ಅವರಿಗೆ ಬೆಳಗಿನ ಜಾವ ಅಂಕಲಗಿ ಪೊಲೀಸ್ ಠಾಣೆಯಲ್ಲಿ ಉಪಹಾರದ ವ್ಯವಸ್ಥೆಯನ್ನು ಮಾಡಲಾಯಿತು. ನಂತರ ಅವರಿಗೆ ದಿನಾಂಕ:20.12.2024 ರಂದು 0950 ಗಂಟೆಗೆ ಮುತಗಾ ಗ್ರಾಮದ ಪಿಎಚ್ಸಿ ಯಲ್ಲಿ ವೈದ್ಯಕೀಯ ತಪಾಸಣೆ ಮಾಡಿಸಿ, 1100 ಗಂಟೆಗೆ ಬೆಳಗಾವಿಯ 5ನೇ ಜೆಎಂಎಫ್ಸಿ ನ್ಯಾಯಾಲಕ್ಕೆ ಕರೆದುಕೊಂಡು ಬಂದು ಸದರಿ ಪ್ರಕರಣದಲ್ಲಿ ತೆರದ ನ್ಯಾಯಾಲಯದಲ್ಲಿ ಹಾಜರುಪಡಿಸಲಾಯಿತು.

- ಮಾನ್ಯ ನ್ಯಾಯಾಲಯದ ಆದೇಶದಂತೆ ಆರೋಪಿ ಶ್ರೀ ಸಿ ಟಿ ರವಿ ಮತ್ತು ಪ್ರಕರಣದ ಕಡತವನ್ನು ಗೌರವಾನ್ವಿತ 42ನೇ ಸಿಜೆಎಂ ಕೋರ್ಟ್ ಬೆಂಗಳೂರು ಜನಪ್ರತಿನಿಧಿಗಳ ನ್ಯಾಯಾಲಯ ಮುಂದೆ ಹಾಜರುಪಡಿಸುವಂತೆ ಆದೇಶಿಸಿ ತನಿಖಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದು ಇರುತ್ತದೆ. ಅದರಂತೆ ಸಿ ಟಿ ರವಿ ರವರನ್ನು ಸೂಕ್ತ ಭದ್ರತೆಯಲ್ಲಿ ಬೆಂಗಳೂರಿಗೆ ಕರೆದುಕೊಂಡು ಹೋಗುತ್ತಿರುವಾಗ ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ಡಬ್ಲೂಪಿ ನಂ.35174/2024 ನೇದ್ದರ ಆದೇಶದಂತೆ 1930 ಗಂಟೆಗೆ ವಕೀಲರ ಸಮಕ್ಷಮದಲ್ಲಿ ಶ್ರೀ ಸಿ ಟಿ ರವಿ ರವರನ್ನು ತನಿಖಾಧಿಕಾರಿಗಳು ದಾವಣಗೆರೆಯಲ್ಲಿ ಬಿಡುಗಡೆ ಮಾಡಿರುತ್ತಾರೆ.

ಯಡಾ ಮಾರ್ಟಿನ್ ಖಾರ್ಬನ್ಯಾಂಗ್,ಐಪಿಎಸ್.,
ಪೊಲೀಸ್ ಆಯುಕ್ತರು,
ಬೆಳಗಾವಿ ನಗರ

ಕರ್ನಾಟಕ ಸರ್ಕಾರ

ಸಂಖ್ಯೆ: ಒಇ 179 ಪಿಇಜಿ 2025

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:20.05.2025

ಇವರಿಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಒಳಾಡಳಿತ ಇಲಾಖೆ,
ಬೆಂಗಳೂರು.

ಇವರಿಗೆ,
ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ : ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಎನ್. ರವಿಕುಮಾರ್ ಹಾಗೂ ಶ್ರೀ ಡಿ.ಎಸ್. ಅರುಣ್ ಇವರುಗಳು ಮಂಡಿಸಿರುವ ಹಕ್ಕುಚ್ಯುತಿ ಕುರಿತು.

ಉಲ್ಲೇಖ : 1) ತಮ್ಮ ಅರೆ ಸರ್ಕಾರಿ ಪತ್ರ ಸಂಖ್ಯೆ: ಕವಿಪ/ಶಾರಶಾ/24/ಹಚ್ಯುಸೂ/2024 ದಿನಾಂಕ 13.05.2025

2) ಡಿಜಿ ಮತ್ತು ಐಜಿಪಿ ರವರ ಕಚೇರಿಯ ಪತ್ರ ಸಂಖ್ಯೆ: ಕಾಮತ್ತುಸು(2)/99/2025, ದಿನಾಂಕ 19.05.2025

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1)ರ ತಮ್ಮ ಅರೆ ಸರ್ಕಾರಿ ಪತ್ರದಲ್ಲಿ ದಿನಾಂಕ. 19.12.2024 ಗುರುವಾರದಂದು ಬೆಳಗಾವಿ ವಿಧಾನ ಸೌಧದಲ್ಲಿ ಚಲಿಗಾಲದ ಅಧಿವೇಶನದ ಕಲಾಪದ ಕೊನೆಯ ದಿನದಂದು ಕಲಾಪ ನಡೆಯುವ ಸಂದರ್ಭದಲ್ಲಿ ಮಾನ್ಯ ಶಾಸಕರುಗಳು ಅಧಿವೇಶನದಲ್ಲಿ ಭಾಗವಹಿಸಲು ಕಾರಿನಲ್ಲಿ ಬರುವಾಗ ಮುಖ್ಯದ್ವಾರದ ಬಳಿ ದೈಹಿಕ ಹಲ್ಲೆ ಮಾಡಲು ಪ್ರಯತ್ನಿಸಿರುವುದು ಹಾಗೂ ದಿನಾಂಕ.19.12.2024 ರಂದು ಅಧಿವೇಶನವನ್ನು ಅನಿರ್ಧಿಷ್ಟ ಕಾಲದವರೆಗೆ ಮುಂದೂಡಿದ ನಂತರ ಮುಖ್ಯದ್ವಾರದ ಮೆಟ್ಟಿಲುಗಳ ಬಳಿ ಮಾನ್ಯ ಶಾಸಕರುಗಳು ಧರಣಿ ಕುಳಿತಿರುವಾಗ ಪೊಲೀಸರು ಅವರನ್ನು ಬಂಧಿಸಿ ಹಿರೇಬಾಗೇವಾಡಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿರುವುದಲ್ಲದೇ ಠಾಣೆಯಲ್ಲಿ ನಡೆದಿರುವ ಘಟನೆಗಳಿಂದಾಗಿ ಮಾನ್ಯ ಶಾಸಕರುಗಳ ಹಕ್ಕುಚ್ಯುತಿಯಾಗಿದೆ ಎಂದು ವಿಧಾನ ಪರಿಷತ್ತು ಶಾಸಕರಾದ ಶ್ರೀ. ಎನ್ ರವಿಕುಮಾರ ಮತ್ತು ಶ್ರೀ. ಡಿ ಎಸ್ ಅರುಣಕುಮಾರ ರವರು ಮಾಡಿದ ಹಕ್ಕುಚ್ಯುತಿ ಕುರಿತು ಕೈಗೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಕೋರಲಾಗಿದೆ.

ಅದರಂತೆ, ಉಲ್ಲೇಖ (2)ರಲ್ಲಿ ಡಿಜಿ ಮತ್ತು ಐಜಿಪಿ ರವರು ಸಲ್ಲಿಸಿರುವ ಹಕ್ಕುಚ್ಯುತಿ ಮಂಡನೆಗೆ ವಿವರಣೆಯನ್ನು ನಿಗಧಿತ ನಮೂನೆಯಲ್ಲಿ ತಯಾರಿಸಿ 30 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಎಂ.ಎನ್.ಅನರಜಯ) 2015

ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು–ಎ)

ನಮೂನೆ

ಕ್ರ ಸಂ.	ಮಾನ್ಯ ಶಾಸಕರು ನೀಡಿರುವ ಹಕ್ಕುಚ್ಯುತಿ ಪ್ರಕರಣದ ವಿವರ	ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ನೀಡಿದ ವಿವರಣೆ	
1.	ಕಲಾಪ ನಡೆಯುವ ಸಂದರ್ಭದಲ್ಲಿ ನಾವು ವಿಧಾನ ಪರಿಷತ್ ಶಾಸಕರು ಕಾರಿನಲ್ಲಿ ಮುಖ್ಯ ದ್ವಾರದಲ್ಲಿ ಬರುವಾಗ ಕೆಲವು ಕಿಡಿಗೇಡಿಗಳು ನಮ್ಮ ಮೇಲೆ ದೈಹಿಕವಾಗಿ ಹಲ್ಲೆ ಮಾಡಲು ಪ್ರಯತ್ನ ನಡೆಸಿದರು	ಈ ಘಟನೆಗೆ ಸಂಬಂಧಿಸಿದಂತೆ ದಿನಾಂಕ.19/12/2024 ರಂದು ಮಧ್ಯಾಹ್ನ 2.00 ಗಂಟೆಯ ಸುಮಾರು ಅಧಿವೇಶನ ನಡೆಯುತ್ತಿರುವಾಗ ಶ್ರೀ ಸಿ. ಟಿ. ರವಿ ರವರು ಶ್ರೀಮತಿ ಲಕ್ಷ್ಮಿ ಹೆಬ್ಬಾಳ್ಕರ್, ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಭಿವೃದ್ಧಿ ಸಚಿವರು ಇವರಿಗೆ ಅಸಂಸದೀಯ ಮತ್ತು ಆಕ್ಷೇಪಾರ್ಹ ಶಬ್ದ ಬಳಸಿದ್ದಾರೆ ಎಂದು ಪಾಸ್ ಪಡೆದುಕೊಂಡು ಒಳಗಡೆ ಬಂದ ಅವರ ಬೆಂಬಲಿಗರಲ್ಲಿ ಕೆಲವರು ರೊಚ್ಚಿಗೆದ್ದು ಗದ್ದಲ ಮಾಡುತ್ತಿದ್ದರಿಂದ ವಿಧಾನ ಸೌಧದ ಮುಖ್ಯದ್ವಾರ ಕಾರಿಡಾರ್ ಹಾಗೂ ಮೆಟ್ಟಿಲುಗಳ ಬಳಿ ಬಂದೋಬಸ್ತ ಮಾಡಿ ಅನುಚಿತವಾಗಿ, ಉಪದ್ರವ ನೀಡುತ್ತಿದ್ದವರನ್ನು ಅಲ್ಲಿದ್ದ ಪೊಲೀಸರು ತಡೆದಿದ್ದು, ನಾವು ಅಲ್ಲಿಗೆ ಹೋಗಿ ಅವರನ್ನು ಅಲ್ಲಿಂದ ಚದುರಿಸಿದ್ದು ಇರುತ್ತದೆ. ಆ ದಿನ ಸುವರ್ಣ ಸೌಧ, ಬೆಳಗಾವಿಯಲ್ಲಿ ನಡೆಯುತ್ತಿದ್ದ ಅಧಿವೇಶನದ ಕೊನೆಯ ದಿನವಾಗಿದ್ದರಿಂದ ಸಾರ್ವಜನಿಕರು ಮತ್ತು ಎಲ್ಲ ಜನಪ್ರತಿನಿಧಿಗಳು ವಿಧಾನ ಪರಿಷತ್ತಿನ ಆವರಣದಲ್ಲಿ ಜಮಾಯಿಸಿದ್ದರಿಂದ ಅದೇ ಕಾಲಕ್ಕೆ ಮೆಟ್ಟಿಲುಗಳ ಮೇಲೆ ಮಾನ್ಯ ಸಿ. ಟಿ. ರವಿ ರವರು ತಮ್ಮ ಬೆಂಬಲಿಗರೊಂದಿಗೆ ಕುಳಿತು ಪ್ರತಿಭಟನೆ ಮಾಡುತ್ತಿರುವಾಗ ಇದನ್ನು ಗಮನಿಸಿ ಬಿ.ಜೆ.ಪಿ ಪಕ್ಷದ ಕಾರ್ಯಕರ್ತರು ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಲ್ಲದೇ ಕಲಾಪ ವೀಕ್ಷಣೆಗೆ ಬಂದಂತ ಸಾರ್ವಜನಿಕರು ಹೆಚ್ಚಿನ ಪ್ರಮಾಣದಲ್ಲಿ ಸೇರುತ್ತಿದ್ದುದ್ದನ್ನು ಗಮನಿಸಿ ನಾನು ಮತ್ತು ಹಾಜರಿದ್ದ ಎಲ್ಲ ಪೊಲೀಸ್ ಅಧಿಕಾರಿಗಳು ಮೇಲಾಧಿಕಾರಿಗಳಿಗೆ ವಿಷಯ ತಿಳಿಸಿ, ಪರಿಸ್ಥಿತಿಯ ಗಂಭೀರತೆಯನ್ನು ಶ್ರೀ ಸಿ.ಟಿ. ರವಿ ರವರಿಗೆ ಸಹ ತಿಳಿಸಿ ವಿನಂತಿಸಿಕೊಂಡರೂ ಕೂಡ ಅವರು ಪ್ರತಿಭಟನೆಯನ್ನು ಮುಂದುವರೆಸಿದ್ದರು. ಇದರಿಂದ ಕಾನೂನು ಸುವ್ಯವಸ್ಥೆ ಹದೆಗೆಡುವ ಸಾಧ್ಯತೆ ಕಂಡು ಬಂದಿದ್ದರಿಂದ ಶ್ರೀ ಸಿ. ಟಿ. ರವಿ ರವರ ಭದ್ರತೆ ಮತ್ತು ಸುರಕ್ಷತೆಯ ದೃಷ್ಟಿಯಿಂದ ಅವರನ್ನು ನಮ್ಮ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಯವರ ಸಹಾಯದಿಂದ ಹಿರೇಬಾಗೇವಾಡಿ ಪೊಲೀಸ್ ಠಾಣೆ ಕಡೆಗೆ ಕರೆದುಕೊಂಡು ಹೋಗುವಾಗ ಹಾಗೂ ವಿಧಾನ ಪರಿಷತ್ ಶಾಸಕರು ಕಾರಿನಲ್ಲಿ ಮುಖ್ಯ ದ್ವಾರದಲ್ಲಿ ಬರುವಾಗ ಕೆಲವು ವ್ಯಕ್ತಿಗಳು ಅವರ ಕಾರನ್ನು ತಡೆಯಲು ಹಾಗೂ ಕಾರ ಕಡೆಗೆ ನುಗ್ಗಲು ಪ್ರಯತ್ನಿಸಿದ್ದರು ಆಗ ಅಲ್ಲಿಯೇ ಬಂದೋಬಸ್ತ ಕರ್ತವ್ಯದಲ್ಲಿದ್ದ ಪೊಲೀಸ್ ಅಧಿಕಾರಿ ಸಿಬ್ಬಂದಿಯವರು ಅವರನ್ನು ತಡೆದರು.	ಎ. ಇಲಾಖಾ ಮುಖ್ಯಸ್ಥರ ಅಭಿಪ್ರಾಯ: ಎಲ್ಲಾ ಅಂಶಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಿ ಮಾನ್ಯ ಸದನದ ಗೌರವಾನ್ವಿತ ಸದಸ್ಯರ ಘನತೆಗೆ ದಕ್ಕೆ ತರುವಂತಹ ಯಾವುದೇ ರೀತಿಯ ಕ್ರಮಗಳನ್ನು ಕೈಗೊಂಡಿರುವುದಿಲ್ಲ. ಮತ್ತು ನಿಯಮಾನುಸಾರ ಬಿಎನ್ಎಸ್ಎಸ್ ಅಡಿಯಲ್ಲಿಯೇ ಕರ್ತವ್ಯ ನಿರ್ವಹಿಸಿರುತ್ತೇನೆ ಎಂದು ಪೊಲೀಸ್ ಆಯುಕ್ತರು, ಬೆಳಗಾವಿ ನಗರ ರವರು ಸಲ್ಲಿಸಿರುವ ವರದಿಯನ್ನು ಡಿಜಿ ಮತ್ತು ಐಜಿಪಿ ರವರು ಅನುಮೋದಿಸಿರುತ್ತಾರೆ. ಬಿ. ಸರ್ಕಾರದ ಅಭಿಪ್ರಾಯ: ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ನೀಡಿದ

2.	ಸುವರ್ಣ ವಿಧಾನ ಸೌಧದ ಮೊಗಸಾಲೆಯಲ್ಲಿ ಮಾನ್ಯ ವಿಧಾನ ಪರಿಷತ್ತಿನ ಶಾಸಕರುಗಳು ನಡೆದುಕೊಂಡು ಹೋಗುವ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ವಿಕಲಚೇತನ, ಹಿರಿಯರ ಕಲ್ಯಾಣ ಇಲಾಖೆಯ ಸಚಿವರಾದ ಶ್ರೀಮತಿ ಲಕ್ಷ್ಮಿ ಹೆಬ್ಬಾಳಕರ ಇವರ ಆಪ್ತ ಸಹಾಯಕರು ಮತ್ತು ಕೆಲವು ಕಿಡಿಗೇಡಿಗಳು ಹಲ್ಲೆ ಮಾಡಿದರು.	ಈ ಘಟನೆಗೆ ಸಂಬಂಧಿಸಿದಂತೆ ಸಹ ಶ್ರೀ ಸಿ. ಟಿ ರವಿ ಇವರು ಬೆಳಗಾವಿಯ ಹಿರೇಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸುವಾಗ ಸದರಿ ಅಂಶಗಳನ್ನು ಸೇರ್ಪಡಿಸಿ ದೂರಿನಲ್ಲಿ ಕಾಣಿಸಿದ್ದು, ಸಿಐಡಿ ತನಿಖಾಧಿಕಾರಿಗಳು ಈ ಪ್ರಕರಣದ ತನಿಖೆ ಮುಂದುವರೆಸಿದ್ದು ಇರುತ್ತದೆ.	ವಿವರಣೆ ಹಾಗೂ ಸದರಿ ವಿವರಣೆಯನ್ನು ಇಲಾಖಾ ಮುಖ್ಯಸ್ಥರು ಅನುಮೋದಿಸಿರುವುದನ್ನು ಪರಾಮರ್ಶಿಸಲಾಯಿತು. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ವಿಧಾನಮಂಡಲದ ಸಾರ್ವಭೌಮತ್ವತೆಯನ್ನು ಹಾಗೂ ಸಂವಿಧಾನಬದ್ಧ ಅಧಿಕಾರವನ್ನು ಮಾನ್ಯ ಮಾಡಲೇಬೇಕಾಗುತ್ತದೆ. ಸಾರ್ವಜನಿಕ ಪ್ರತಿನಿಧಿಗಳಿಗೆ ಶಿಷ್ಟಾಚಾರದನ್ವಯ ಪೂರ್ಣ ಗೌರವ ನೀಡುವ ಮೂಲಕ ಸಂವಿಧಾನಬದ್ಧವಾಗಿ ಅವರ ಹಕ್ಕಿಗೆ ಚ್ಯುತಿಬಾರದಂತೆ ಕಾರ್ಯಾಂಗವು ಎಚ್ಚರಿಕೆವಹಿಸಬೇಕಾದುದು ಅತ್ಯಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಅಧಿಕಾರಿಗಳಿಗೆ ಭವಿಷ್ಯತ್ತಿನಲ್ಲಿ ಮಾನ್ಯ ಶಾಸಕರ ಹಕ್ಕುಚ್ಯುತಿಯಾಗದಂತೆ ವರ್ತಿಸಲು ತಿಳಿ ಹೇಳುವುದು ಸೂಕ್ತವೆಂದು ಅಭಿಪ್ರಾಯಿಸಿದೆ.
3.	ಕಲಾಪ ಮುಗಿದ ನಂತರ ಮುಖ್ಯದ್ವಾರದ ಮೆಟ್ಟಿಲುಗಳ ಮೇಲೆ ಶಾಂತಿಯುತ ಧರಣಿ ಕುಳಿತ ಸಂದರ್ಭದಲ್ಲಿ ನಮ್ಮನ್ನು ಏಕಾಏಕಿ ಪೊಲೀಸ್‌ರು ಎಳೆದುಕೊಂಡು ವಾಹನದಲ್ಲಿ ಕೆಲವು ಶಾಸಕರನ್ನು ಹಿರೇಬಾಗೇವಾಡಿ ಪೊಲೀಸ್ ಠಾಣೆಗೆ ಹಾಗೂ ಇನ್ನೂ ಕೆಲವು ಶಾಸಕರುಗಳನ್ನು ಖಾನಾಪೂರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದಾರೆ. ಹಿರೇಬಾಗೇವಾಡಿ ಪೊಲೀಸ್ ಠಾಣೆಗೆ ಯಾವ ಕಾರಣಕ್ಕೆ ನಮ್ಮನ್ನು ಬಂಧಿಸಿದ್ದೀರಿ ಕುರಿತು ಕೇಳಿದಾಗ ಅಲ್ಲಿಯ ಪೊಲೀಸ್ ಅಧಿಕಾರಿಗಳು ಯಾವುದೇ ರೀತಿಯ ಸೂಕ್ತ ಉತ್ತರ ನೀಡದೇ ನಮ್ಮನ್ನು ಹಿರೇಬಾಗೇವಾಡಿಯಿಂದ ಬಿಟ್ಟು ಕಳುಹಿಸಿದರು.	ದಿನಾಂಕ.19/12/2024 ರಂದು ಮಧ್ಯಾಹ್ನ 2.00 ಗಂಟೆಯ ಸುಮಾರು ಅಧಿವೇಶನ ನಡೆಯುತ್ತಿರುವಾಗ ಶ್ರೀ ಸಿ. ಟಿ ರವಿ ರವರು ಶ್ರೀಮತಿ ಲಕ್ಷ್ಮಿ ಹೆಬ್ಬಾಳಕರ, ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಭಿವೃದ್ಧಿ ಸಚಿವರು ಇವರಿಗೆ ಅಸಂಸದೀಯ ಮತ್ತು ಆಕ್ಷೇಪಾರ್ಹ ಶಬ್ದ ಬಳಸಿದ್ದಾರೆ ಎಂದು ಅವರ ಬೆಂಬಲಿಗರು ರೊಚ್ಚಿಗೆದ್ದು ಗದ್ದಲ ಮಾಡುತ್ತಿದ್ದರಿಂದ ವಿಧಾನ ಸೌಧದ ಮುಖ್ಯದ್ವಾರ ಕಾರಿಡಾರ್ ಹಾಗೂ ಮೆಟ್ಟಿಲುಗಳ ಬಳಿ ಬಂದೋಬಸ್ತ ಮಾಡಿ ಅನುಚಿತವಾಗಿ, ಉಪದ್ರವ ನೀಡುತ್ತಿದ್ದ ಕೆಲವರನ್ನು ಅಲ್ಲಿಂದ ಚದುರಿಸಿದ್ದು ಇರುತ್ತದೆ. ಆ ದಿನ ಸುವರ್ಣ ಸೌಧ, ಬೆಳಗಾವಿಯಲ್ಲಿ ನಡೆಯುತ್ತಿದ್ದ ಅಧಿವೇಶನದ ಕೊನೆಯ ದಿನವಾಗಿದ್ದರಿಂದ ಸಾರ್ವಜನಿಕರು ಮತ್ತು ಎಲ್ಲ ಜನಪ್ರತಿನಿಧಿಗಳು ವಿಧಾನ ಪರಿಷತ್ತಿನ ಆವರಣದಲ್ಲಿ ಜಮಾಯಿಸಿದ್ದರಿಂದ ಅದೇ ಕಾಲಕ್ಕೆ ಮೆಟ್ಟಿಲುಗಳ ಮೇಲೆ ಶ್ರೀ ಸಿ. ಟಿ. ರವಿ ರವರು ತಮ್ಮ ಬೆಂಬಲಿಗರೊಂದಿಗೆ ಕುಳಿತು ಪ್ರತಿಭಟನೆ ಮಾಡುತ್ತಿರುವಾಗ ಇದನ್ನು ಗಮನಿಸಿ ಬಿ.ಜೆ.ಪಿ ಪಕ್ಷದ ಕಾರ್ಯಕರ್ತರು ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಲ್ಲದೇ ಕಲಾಪ ವೀಕ್ಷಣೆಗೆ ಬಂದಂತ ಸಾರ್ವಜನಿಕರು ಹೆಚ್ಚಿನ ಪ್ರಮಾಣದಲ್ಲಿ ಸೇರುತ್ತಿದ್ದುದ್ದನ್ನು ಗಮನಿಸಿ ಕಾನೂನು ಮತ್ತು ಸುವ್ಯವಸ್ಥೆಯ ಹಿತದೃಷ್ಟಿಯಿಂದ ನಾನು ಮತ್ತು ಹಾಜರಿದ್ದ ಎಲ್ಲ ಪೊಲೀಸ್ ಅಧಿಕಾರಿಗಳು ಮೇಲಾಧಿಕಾರಿಗಳಿಗೆ ವಿಷಯ ತಿಳಿಸಿ, ಪರಿಸ್ಥಿತಿಯ ಗಂಭೀರತೆಯನ್ನು ಶ್ರೀ ಸಿ. ಟಿ. ರವಿ ರವರಿಗೆ ಸಹ ತಿಳಿಸಿ ವಿನಂತಿಸಿಕೊಂಡರೂ ಕೂಡ ಅವರು ಪ್ರತಿಭಟನೆಯನ್ನು ಮುಂದುವರೆಸಿದ್ದರು. ಅವರನ್ನು ಅಲ್ಲಿಯೇ ಇರಲು ಬಿಟ್ಟಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟು ಉದ್ವಿಗ್ನ/ ಗಲಭೆ ಆಗುವ ಪರಿಸ್ಥಿತಿ ಇದ್ದಿದ್ದರಿಂದ ಹಾಗೂ ನಗರದಲ್ಲಿ ವಾತಾವರಣ ಹದೆಗೆಡುವ ಸಾಧ್ಯತೆಗಳು ಕಂಡು ಬಂದಿದ್ದರಿಂದ ಶ್ರೀ ಸಿ. ಟಿ. ರವಿ ರವರ ಭದ್ರತೆ ಹಾಗೂ ಸುರಕ್ಷತೆಯ ದೃಷ್ಟಿಯಿಂದ ಅವರನ್ನು ಪೊಲೀಸ್ ಬೆಂಗಾವಲಿನಲ್ಲಿ	

		ಖಾನಾಪೂರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಲಾಯಿತು. ಆದ್ದರಿಂದ ವಿಧಾನ ಪರಿಷತ್ತು ಶಾಸಕರಾದ ಶ್ರೀ. ಎನ್ ರವಿಕುಮಾರ ಮತ್ತು ಶ್ರೀ. ಡಿ ಎಸ್ ಅರುಣಕುಮಾರ ರವರು ಪ್ರಸ್ತಾಪಿಸಿದಂತೆ ಅವರಿಗೆ ಮತ್ತು ಇನ್ನಿತರ ಶಾಸಕರನ್ನು ಬಂಧಿಸಿಲ್ಲ ಹಾಗೂ ಅವರಿಗೆ ಯಾವುದೇ ಉತ್ತರ ನೀಡದೇ ಕಳುಹಿಸಿ ಕೊಟ್ಟಿಲ್ಲ ಎನ್ನುವುದು ಸರಿ ಅಲ್ಲ.	
4.	ವಿಷಯ ತಿಳಿದಾಗ ನಾವುಗಳು ರಾತ್ರಿ 8.00 ಗಂಟೆಗೆ ಖಾನಾಪೂರ ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ನಮ್ಮ ಶಾಸಕರಾದ ಶ್ರೀ. ಸಿ. ಟಿ. ರವಿ ಯವರು ಠಾಣೆಯಲ್ಲಿ ಇದ್ದರು. ನಾವು ಶ್ರೀ. ಸಿ. ಟಿ ರವಿ ಯವರನ್ನು ಏಕೆ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದಿದ್ದಿರಾ ? ಬಂಧಿಸಲು ಮಾನ್ಯ ಸಭಾಪತಿಗಳ ಅನುಮತಿ ಪಡೆದಿದ್ದೀರಾ ? ನೀಡುವ ಯಾವುದೇ ನೋಟಿಸನ್ನು ನೀಡದೇ ಹೇಗೆ ಬಂಧಿಸಿರುವಿರಿ ? ಎಂದು ಕೇಳಿದಾಗ ಯಾವುದೇ ಉತ್ತರ ನಮಗೆ ಪೊಲೀಸ್ ಅಧಿಕಾರಿಗಳು ನೀಡಿರುವುದಿಲ್ಲ. ನಾವು ತಕ್ಷಣ ಪ್ರತಿ ದೂರನ್ನು ನೀಡಿದರೂ ಸಹ "0" ಎಫ್ಐಆರ್ ಕೂಡ ಹಾಕದೇ ನಮ್ಮ ದೂರಿಗೆ ಪೊಲೀಸ್ ಅಧಿಕಾರಿಗಳು ಸ್ವೀಕೃತಿ ನೀಡಲಿಲ್ಲ. ಯಾವುದೇ ರೀತಿ ಸ್ಪಂದನೆ ನೀಡಲಿಲ್ಲ. ಆಯುಕ್ತರಾದ ಶ್ರೀ. ಏಡಾ ಮಾರ್ಟಿನ್ ಐಪಿಎಸ್ ಹಾಗೂ ಡಿಸಿಪಿ ಶ್ರೀ. ರೋಹನ್ ಜಗದೀಶ ಉಪಸ್ಥಿತರಿದ್ದರೂ ಕೂಡಾ ನಮಗೆ ಸ್ಪಂದನೆ ಸಿಗಲಿಲ್ಲ. ನಂತರದಲ್ಲಿ ಏಕಾಏಕಿ ಶಾಸಕರನ್ನು ಹೊರಗೆ ದಬ್ಬಿ ನಂತರ ಶಾಸಕರಾದ ಶ್ರೀ. ಸಿ. ಟಿ. ರವಿ ಯವರನ್ನು ಬೆಂಗಳೂರಿಗೆ ಕರೆದುಕೊಂಡು ಹೋಗುತ್ತೇವೆ ಅಂತಾ ಹೇಳಿ ಪೊಲೀಸ್ ವಾಹನದಲ್ಲಿ ಕರೆದೊಯ್ದರು. ನಂತರ ಬೆಂಗಳೂರಿಗೆ ಹೋಗದೇ ರಾತ್ರಿ ಇಡೀ ಬೆಳಗಾವಿ ನಗರ ಹಾಗೂ ಬೆಳಗಾವಿಯ ಸುತ್ತಮುತ್ತಲಿನ	ಸುವರ್ಣ ಸೌಧದ ಮೆಟ್ಟಿಲುಗಳ ಮೇಲೆ ಕುಳಿತು ಪ್ರತಿಭಟನೆ ನಡೆಸುತಿದ್ದಾಗ ಮೇಲೆ ವಿವರಿಸಿದ ಭದ್ರತೆಯ ಕಾರಣಗಳ ಮೇಲೆ ಶ್ರೀ. ಸಿ. ಟಿ ರವಿ ರವರನ್ನು ಖಾನಾಪೂರ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದ ಬಗ್ಗೆ ಸೂಕ್ತವಾಗಿ ಮಾಹಿತಿ ನೀಡಲಾಗಿದೆ. ಶ್ರೀ ಸಿ. ಟಿ. ರವರ ವಿರುದ್ಧ ಮಾಡಲಾದ ಪ್ರಕರಣದ ತನಿಖಾಧಿಕಾರಿಗಳು ಅವರ ಮೇಲೆ ದಾಖಲಾದ ಪ್ರಕರಣದ ಬಗ್ಗೆ ವಿವರಿಸಿ ತನಿಖಾಧಿಕಾರಿಗಳು ನಿಯಮಾನುಸಾರ ಬಂಧನದ ಕುರಿತಂತೆ ನೀಡಲಾದ ನೋಟಿಸಿಗೆ ಮಾನ್ಯ ಸಿ.ಟಿ ರವಿ ರವರು ಸಹಿ ಮಾಡದೇ ಅಸಹಕಾರ ನೀಡಿದ್ದರಿಂದ ಬಂಧನದ ವಿಷಯವನ್ನು ಅವರ ಹಿತೈಶಿಯಾದ ಎಂ.ಎಲ್.ಸಿ ಶ್ರೀ. ಕೇಶವ ಪ್ರಸಾದ ಇವರಿಗೆ ದೂರವಾಣಿ ಮುಖಾಂತರ ತಿಳಿಸಿ ದಸ್ತಗಿರಿ ನಿಯಮಗಳನ್ನು ಅನುಸರಿಸಿ ಕಾನೂನಾತ್ಮಕವಾಗಿ ವಶಕ್ಕೆ ಪಡೆಯಲಾಗಿದೆ. ಅದರಂತೆ ಜನಪ್ರತಿನಿಧಿಗಳನ್ನು ವಶಕ್ಕೆ ಪಡೆದುಕೊಂಡಾಗ ಅನುಸರಿಬೇಕಾದ ನಿಯಮದಂತೆ ಮಾನ್ಯ ಸಭಾಪತಿಗಳಿಗೆ ಮಾಹಿತಿಯನ್ನು ಸಲ್ಲಿಸಲಾಗಿದೆ. ಶ್ರೀ ಸಿ ಟಿ ರವಿ ರವರು ಖಾನಾಪೂರ ಠಾಣೆಯಲ್ಲಿದ್ದಾಗ ರಾತ್ರಿ ಅವರನ್ನು ದಸ್ತಗಿರಿ ಮಾಡಿದ ನಂತರ ಒಂದು ಲಿಖಿತ ದೂರನ್ನು ನೀಡಿದ್ದರು. ಸದರಿ ದೂರನ್ನು ಖಾನಾಪೂರ ಪೊಲೀಸ್ ನಿರೀಕ್ಷಕರು ಸ್ವೀಕರಿಸಿಕೊಂಡು, ಎಸ್ಪಿ ಬೆಳಗಾವಿ ಜಿಲ್ಲೆ ರವರ ಮುಖಾಂತರ ಪೊಲೀಸ್ ಕಮೀಷನರ ಬೆಳಗಾವಿಗೆ ಕಳುಹಿಸಿರುತ್ತಾರೆ. ಈ ಮಧ್ಯೆ ಮೇಲೆ ಉಲ್ಲೇಖಿಸಿದ ಹಿರೇಬಾಗೇವಾಡಿ ಪೊಲೀಸ್ ಠಾಣೆ ಗುನ್ನೆ ನಂ.187/2024 ನೇದ್ದು ದಾಖಲಾಗಿದ್ದರಿಂದ ಮತ್ತು ಎರಡೂ ದೂರುಗಳು ಒಂದೇ ಘಟನೆಗೆ ಸಂಬಂಧಿಸಿದ್ದರಿಂದ ಸದರಿ ದೂರನ್ನು ಪ್ರಕರಣದಲ್ಲಿ ಅಳವಡಿಸಿಕೊಂಡು ತನಿಖೆಯನ್ನು ಸಿಐಡಿ ಯವರು ಮುಂದುವರೆಸಿದ್ದಾರೆ. ಇಲ್ಲಿ ಖುದ್ದಾಗಿ ನಾವೇ ಇದ್ದುದ್ದರಿಂದ ಹಾಗೂ ಅವರು ನೀಡಿದ ದೂರನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದೆಂದು ಶ್ರೀ ಸಿ. ಟಿ. ರವರಿಗೆ ನಾನೇ ತಿಳಿಸಿದ್ದರಿಂದ ಅವರ ದೂರನ್ನು ಸ್ವೀಕರಿಸಿ ನಿಯಮಾನುಸಾರ ನಮ್ಮ ಘಟಕಕ್ಕೆ ಪಿಐ ಖಾನಾಪೂರ ರವರು ಕಳುಹಿಸಿದ್ದು ಹೀಗಾಗಿ "0" ಎಫ್ಐಆರ್ ದಾಖಲಿಸಿರುವುದಿಲ್ಲ. ಆಮೇಲೆ ಪಿಐ ಖಾನಾಪೂರ ರವರ ಎಸ್ಪಿ ಬೆಳಗಾವಿ ಜಿಲ್ಲೆ ರವರ ಮುಖಾಂತರ ಕಳುಹಿಸಿದ ದೂರು ಪ್ರತಿ ನಮ್ಮ ಕಛೇರಿಗೆ	

	ಪ್ರದೇಶಗಳಿಗೆ ಪೊಲೀಸ್ ವಾಹನದಲ್ಲಿ ಸುತ್ತಾಡಿಸಿದ್ದಾರೆ. ದಿನಾಂಕ. 20.12.2021 ರಂದು ಶುಕ್ರವಾರದಂದು ಬೆಳಿಗ್ಗೆ. 10.30ಕ್ಕೆ ಬೆಳಗಾವಿಯ ಜಿಲ್ಲಾ ನ್ಯಾಯಾಲಯಕ್ಕೆ ಹಾಜರು ಪಡಿಸಿದಾಗ ನಮಗೆ ವಿಷಯ ತಿಳಿದಿರುತ್ತದೆ.	ಸ್ವೀಕರಿಸಿ ತಕ್ಷಣ ಎಫ್ಐಆರ್ ದಾಖಲಿಸಿಕೊಳ್ಳುವಂತೆ ಪಿಐ ಹಿರೇಬಾಗೇವಾಡಿ ರವರಿಗೆ ಜ್ಞಾಪನ ನೀಡಿರುತ್ತೇನೆ. ಆದರೆ ಈ ಮಧ್ಯ ಈ ಪ್ರಕರಣವನ್ನು ಪೊಲೀಸ್ ಪ್ರಧಾನ ಕಛೇರಿ ಪತ್ರ ಸಂಖ್ಯೆ ಕಾ&ಸು/2/261/2024-25 ದಿನಾಂಕ. 23/12/2024 ವರ್ಗಾಯಿಸಲು ಆದೇಶಿಸಿದಂತೆ ಹಿರೇಬಾಗೇವಾಡಿ ಪೊಲೀಸ್ ಠಾಣೆ ಪ್ರ ಸಂಖ್ಯೆ 186/2024 & 187/2024 ನೇದ್ದವುಗಳನ್ನು ಸಿಐಡಿ ಘಟಕಕ್ಕೆ ವರ್ಗಾಯಿಸಲಾಗಿತ್ತು. ಆದ್ದರಿಂದ ಮಾನ್ಯ ಸಿ. ಟಿ. ರವರ ದೂರನ್ನೂ ಸಹ ಕೂಡಲೇ ಸಿಐಡಿ ಘಟಕಕ್ಕೆ ವರ್ಗಾಯಿಸಲಾಗಿದೆ. ಶ್ರೀ ಸಿ. ಟಿ. ರವಿ ರವರು ತಮ್ಮ ಮೇಲೆ ದಾಖಲಾದ ಪ್ರಕರಣವನ್ನು ರದ್ದತಿ ಕೋರಿ ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರಿನಲ್ಲಿ ರಿಟ್ ಪಿಟಿಷನ್ ಸಂಖ್ಯೆ.791/2025 ರ ಪ್ರಕಾರ ಸಲ್ಲಿಸಿದ ಅರ್ಜಿಯನ್ನು ಮಾನ್ಯ ನ್ಯಾಯಾಲಯವು ದಿನಾಂಕ.02/05/2025 ರಂದು ವಜಾಗೊಳಿಸಿದ್ದು ಇರುತ್ತದೆ. ಸದರಿ ಪ್ರಕರಣದಲ್ಲಿ ತಮಗೆ ಸಲ್ಲಿಸಿದ ಮನವಿಯಲ್ಲಿ ಕಾಣಿಸಿದ ಅಂಶಗಳನ್ನು ಉಲ್ಲೇಖಿಸಿರುವುದಿಲ್ಲ. ಕಾರಣ ಎಲ್ಲ ಅಂಶಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಿ ನಾನು ಮಾನ್ಯ ಸದನದ ಗೌರವಾನ್ವಿತ ಸದಸ್ಯರ ಘನತೆಗೆ ದಕ್ಕೆ ತರುವಂತಹ ಯಾವುದೇ ರೀತಿಯ ಕ್ರಮಗಳನ್ನು ಕೈಕೊಂಡಿರುವುದಿಲ್ಲ ಮತ್ತು ನಿಯಮಾನುಸಾರ ಬಿಎನ್ಎಸ್ಎಸ್ ಅಡಿಯಲ್ಲಿಯೇ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ವಿವರಣೆಯನ್ನು ಮಾನ್ಯರು ಅಂಗೀಕರಿಸಲು ವಿನಂತಿ.	

(ಡಾ॥ ಮಂಗಳಾ ಜಿ.ಎಸ್) 2015/25

ಸರ್ಕಾರದ ವಿಶೇಷ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

ನಮೂನೆ

ಕ್ರ ಸಂ.	ಮಾನ್ಯ ಶಾಸಕರು ನೀಡಿರುವ ಹಕ್ಕುಚ್ಯುತಿ ಪ್ರಕರಣದ ವಿವರ	ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ನೀಡಿದ ವಿವರಣೆ	
1.	ಕಲಾಪ ನಡೆಯವ ಸಂದರ್ಭದಲ್ಲಿ ನಾವು ವಿಧಾನ ಪರಿಷತ್ ಶಾಸಕರು ಕಾರಿನಲ್ಲಿ ಮುಖ್ಯ ದ್ವಾರದಲ್ಲಿ ಬರುವಾಗ ಕೆಲವು ಕಿಡಿಗೇಡಿಗಳು ನಮ್ಮ ಮೇಲೆ ದೈಹಿಕವಾಗಿ ಹಲ್ಲೆ ಮಾಡಲು ಪ್ರಯತ್ನ ನಡೆಸಿದರು	ಈ ಘಟನೆಗೆ ಸಂಬಂಧಿಸಿದಂತೆ ದಿನಾಂಕ.19/12/2024 ರಂದು ಮಧ್ಯಾಹ್ನ 2.00 ಗಂಟೆಯ ಸುಮಾರು ಅಧಿವೇಶನ ನಡೆಯುತ್ತಿರುವಾಗ ಶ್ರೀ ಸಿ. ಟಿ. ರವಿ ರವರು ಶ್ರೀಮತಿ ಲಕ್ಷ್ಮಿ ಹೆಬ್ಬಾಳ್ಕರ್, ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಭಿವೃದ್ಧಿ ಸಚಿವರು ಇವರಿಗೆ ಅಸಂಸದೀಯ ಮತ್ತು ಆಕ್ಷೇಪಾರ್ಹ ಶಬ್ದ ಬಳಸಿದ್ದಾರೆ ಎಂದು ಪಾಸ್ ಪಡೆದುಕೊಂಡು ಒಳಗಡೆ ಬಂದ ಅವರ ಬೆಂಬಲಿಗರಲ್ಲಿ ಕೆಲವರು ರೊಚ್ಚಿಗೆದ್ದು ಗದ್ದಲ ಮಾಡುತ್ತಿದ್ದರಿಂದ ವಿಧಾನ ಸೌಧದ ಮುಖ್ಯದ್ವಾರ ಕಾರಿಡಾರ್ ಹಾಗೂ ಮೆಟ್ಟಿಲುಗಳ ಬಳಿ ಬಂದೋಬಸ್ತ ಮಾಡಿ ಅನುಚಿತವಾಗಿ, ಉಪದ್ರವ ನೀಡುತ್ತಿದ್ದವರನ್ನು ಅಲ್ಲಿದ್ದ ಪೊಲೀಸರು ತಡೆದಿದ್ದು, ನಾವು ಅಲ್ಲಿಗೆ ಹೋಗಿ ಅವರನ್ನು ಅಲ್ಲಿಂದ ಚದುರಿಸಿದ್ದು ಇರುತ್ತದೆ. ಆ ದಿನ ಸುವರ್ಣ ಸೌಧ, ಬೆಳಗಾವಿಯಲ್ಲಿ ನಡೆಯುತ್ತಿದ್ದ ಅಧಿವೇಶನದ ಕೊನೆಯ ದಿನವಾಗಿದ್ದರಿಂದ ಸಾರ್ವಜನಿಕರು ಮತ್ತು ಎಲ್ಲ ಜನಪ್ರತಿನಿಧಿಗಳು ವಿಧಾನ ಪರಿಷತ್ತಿನ ಆವರಣದಲ್ಲಿ ಜಮಾಯಿಸಿದ್ದರಿಂದ ಅದೇ ಕಾಲಕ್ಕೆ ಮೆಟ್ಟಿಲುಗಳ ಮೇಲೆ ಮಾನ್ಯ ಸಿ. ಟಿ. ರವಿ ರವರು ತಮ್ಮ ಬೆಂಬಲಿಗರೊಂದಿಗೆ ಕುಳಿತು ಪ್ರತಿಭಟನೆ ಮಾಡುತ್ತಿರುವಾಗ ಇದನ್ನು ಗಮನಿಸಿ ಬಿ.ಜೆ.ಪಿ ಪಕ್ಷದ ಕಾರ್ಯಕರ್ತರು ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಲ್ಲದೇ ಕಲಾಪ ವೀಕ್ಷಣೆಗೆ ಬಂದಂತ ಸಾರ್ವಜನಿಕರು ಹೆಚ್ಚಿನ ಪ್ರಮಾಣದಲ್ಲಿ ಸೇರುತ್ತಿದ್ದುದ್ದನ್ನು ಗಮನಿಸಿ ನಾನು ಮತ್ತು ಹಾಜರಿದ್ದ ಎಲ್ಲ ಪೊಲೀಸ್ ಅಧಿಕಾರಿಗಳು ಮೇಲಾಧಿಕಾರಿಗಳಿಗೆ ವಿಷಯ ತಿಳಿಸಿ, ಪರಿಸ್ಥಿತಿಯ ಗಂಭೀರತೆಯನ್ನು ಶ್ರೀ ಸಿ.ಟಿ. ರವಿ ರವರಿಗೆ ಸಹ ತಿಳಿಸಿ ವಿನಂತಿಸಿಕೊಂಡರೂ ಕೂಡ ಅವರು ಪ್ರತಿಭಟನೆಯನ್ನು ಮುಂದುವರೆಸಿದ್ದರು. ಇದರಿಂದ ಕಾನೂನು ಸುವ್ಯವಸ್ಥೆ ಹದೆಗೆಡುವ ಸಾಧ್ಯತೆ ಕಂಡು ಬಂದಿದ್ದರಿಂದ ಶ್ರೀ ಸಿ. ಟಿ. ರವಿ ರವರ ಭದ್ರತೆ ಮತ್ತು ಸುರಕ್ಷತೆಯ ದೃಷ್ಟಿಯಿಂದ ಅವರನ್ನು ನಮ್ಮ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಯವರ ಸಹಾಯದಿಂದ ಹಿರೇಬಾಗೇವಾಡಿ ಪೊಲೀಸ್ ಠಾಣೆ ಕಡೆಗೆ ಕರೆದುಕೊಂಡು ಹೋಗುವಾಗ ಹಾಗೂ ವಿಧಾನ ಪರಿಷತ್ ಶಾಸಕರು ಕಾರಿನಲ್ಲಿ ಮುಖ್ಯ ದ್ವಾರದಲ್ಲಿ ಬರುವಾಗ ಕೆಲವು ವ್ಯಕ್ತಿಗಳು ಅವರ ಕಾರನ್ನು ತಡೆಯಲು ಹಾಗೂ ಕಾರ ಕಡೆಗೆ ನುಗ್ಗಲು ಪ್ರಯತ್ನಿಸಿದ್ದರು ಆಗ ಅಲ್ಲಿಯೇ ಬಂದೋಬಸ್ತ ಕರ್ತವ್ಯದಲ್ಲಿದ್ದ ಪೊಲೀಸ್ ಅಧಿಕಾರಿ ಸಿಬ್ಬಂದಿಯವರು ಅವರನ್ನು ತಡೆದರು.	<u>ಎ. ಇಲಾಖಾ ಮುಖ್ಯಸ್ಥರ ಅಭಿಪ್ರಾಯ:</u> ಎಲ್ಲಾ ಅಂಶಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಿ ಮಾನ್ಯ ಸದನದ ಗೌರವಾನ್ವಿತ ಸದಸ್ಯರ ಘನತೆಗೆ ದಕ್ಕೆ ತರುವಂತಹ ಯಾವುದೇ ರೀತಿಯ ಕ್ರಮಗಳನ್ನು ಕೈಗೊಂಡಿರುವುದಿಲ್ಲ. ಮತ್ತು ನಿಯಮಾನುಸಾರ ಬಿಎನ್ಎಸ್ಎಸ್ ಅಡಿಯಲ್ಲಿಯೇ ಕರ್ತವ್ಯ ನಿರ್ವಹಿಸಿರುತ್ತೇನೆ ಎಂದು ಪೊಲೀಸ್ ಆಯುಕ್ತರು, ಬೆಳಗಾವಿ ನಗರ ರವರು ಸಲ್ಲಿಸಿರುವ ವರದಿಯನ್ನು ಡಿಜಿ ಮತ್ತು ಐಜಿಪಿ ರವರು ಅನುಮೋದಿಸಿರುತ್ತಾರೆ. <u>ಬಿ. ಸರ್ಕಾರದ ಅಭಿಪ್ರಾಯ:</u> ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ನೀಡಿದ

2.	ಸುವರ್ಣ ವಿಧಾನ ಸೌಧದ ಮೊಗಸಾಲೆಯಲ್ಲಿ ಮಾನ್ಯ ವಿಧಾನ ಪರಿಷತ್ತಿನ ಶಾಸಕರುಗಳು ನಡೆದುಕೊಂಡು ಹೋಗುವ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ವಿಕಲಚೇತನ, ಹಿರಿಯರ ಕಲ್ಯಾಣ ಇಲಾಖೆಯ ಸಚಿವರಾದ ಶ್ರೀಮತಿ ಲಕ್ಷ್ಮಿ ಹೆಬ್ಬಾಳಕರ ಇವರ ಆಪ್ತ ಸಹಾಯಕರು ಮತ್ತು ಕೆಲವು ಕಿಡಿಗೇಡಿಗಳು ಹಲ್ಲೆ ಮಾಡಿದರು.	ಈ ಘಟನೆಗೆ ಸಂಬಂಧಿಸಿದಂತೆ ಸಹ ಶ್ರೀ ಸಿ. ಟಿ ರವಿ ಇವರು ಬೆಳಗಾವಿಯ ಹಿರೇಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸುವಾಗ ಸದರಿ ಅಂಶಗಳನ್ನು ಸೇರ್ಪಡಿಸಿ ದೂರಿನಲ್ಲಿ ಕಾಣಿಸಿದ್ದು, ಸಿಐಡಿ ತನಿಖಾಧಿಕಾರಿಗಳು ಈ ಪ್ರಕರಣದ ತನಿಖೆ ಮುಂದುವರೆಸಿದ್ದು ಇರುತ್ತದೆ.	ವಿವರಣೆ ಹಾಗೂ ಸದರಿ ವಿವರಣೆಯನ್ನು ಇಲಾಖೆ ಮುಖ್ಯಸ್ಥರು ಅನುಮೋದಿಸಿರುವುದನ್ನು ಪರಾಮರ್ಶಿಸಲಾಯಿತು. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ವಿಧಾನಮಂಡಲದ ಸಾರ್ವಭೌಮತ್ವತೆಯನ್ನು ಹಾಗೂ ಸಂವಿಧಾನಬದ್ಧ ಅಧಿಕಾರವನ್ನು ಮಾನ್ಯ ಮಾಡಲೇಬೇಕಾಗುತ್ತದೆ. ಸಾರ್ವಜನಿಕ ಪ್ರತಿನಿಧಿಗಳಿಗೆ ಶಿಷ್ಟಾಚಾರದನ್ವಯ ಪೂರ್ಣ ಗೌರವ ನೀಡುವ ಮೂಲಕ ಸಂವಿಧಾನಬದ್ಧವಾಗಿ ಅವರ ಹಕ್ಕಿಗೆ ಚ್ಯುತಿಬಾರದಂತೆ ಕಾರ್ಯಾಂಗವು ಎಚ್ಚರಿಕೆವಹಿಸಬೇಕಾದುದು ಅತ್ಯಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಅಧಿಕಾರಿಗಳಿಗೆ ಭವಿಷ್ಯತ್ತಿನಲ್ಲಿ ಮಾನ್ಯ ಶಾಸಕರ ಹಕ್ಕುಚ್ಯುತಿಯಾಗದಂತೆ ವರ್ತಿಸಲು ತಿಳಿ ಹೇಳುವುದು ಸೂಕ್ತವೆಂದು ಅಭಿಪ್ರಾಯಿಸಿದೆ.
3.	ಕಲಾಪ ಮುಗಿದ ನಂತರ ಮುಖ್ಯದ್ವಾರದ ಮೆಟ್ಟಿಲುಗಳ ಮೇಲೆ ಶಾಂತಿಯುತ ಧರಣಿ ಕುಳಿತ ಸಂದರ್ಭದಲ್ಲಿ ನಮ್ಮನ್ನು ಏಕಾಏಕಿ ಪೊಲೀಸ್‌ರು ಎಳೆದುಕೊಂಡು ವಾಹನದಲ್ಲಿ ಕೆಲವು ಶಾಸಕರನ್ನು ಹಿರೇಬಾಗೇವಾಡಿ ಪೊಲೀಸ್ ಠಾಣೆಗೆ ಹಾಗೂ ಇನ್ನೂ ಕೆಲವು ಶಾಸಕರುಗಳನ್ನು ಖಾನಾಪೂರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದಾರೆ. ಹಿರೇಬಾಗೇವಾಡಿ ಪೊಲೀಸ್ ಠಾಣೆಗೆ ಯಾವ ಕಾರಣಕ್ಕೆ ನಮ್ಮನ್ನು ಬಂಧಿಸಿದ್ದೀರಿ ಕುರಿತು ಕೇಳಿದಾಗ ಅಲ್ಲಿಯ ಪೊಲೀಸ್ ಅಧಿಕಾರಿಗಳು ಯಾವುದೇ ರೀತಿಯ ಸೂಕ್ತ ಉತ್ತರ ನೀಡದೇ ನಮ್ಮನ್ನು ಹಿರೇಬಾಗೇವಾಡಿಯಿಂದ ಬಿಟ್ಟು ಕಳುಹಿಸಿದರು.	ದಿನಾಂಕ.19/12/2024 ರಂದು ಮದ್ಯಾಹ್ನ 2.00 ಗಂಟೆಯ ಸುಮಾರು ಅಧಿವೇಶನ ನಡೆಯುತ್ತಿರುವಾಗ ಶ್ರೀ ಸಿ. ಟಿ ರವಿ ರವರು ಶ್ರೀಮತಿ ಲಕ್ಷ್ಮಿ ಹೆಬ್ಬಾಳಕರ, ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಭಿವೃದ್ಧಿ ಸಚಿವರು ಇವರಿಗೆ ಅಸಂಸದೀಯ ಮತ್ತು ಆಕ್ಷೇಪಾರ್ಹ ಶಬ್ದ ಬಳಸಿದ್ದಾರೆ ಎಂದು ಅವರ ಬೆಂಬಲಿಗರು ರೊಚ್ಚಿಗೆದ್ದು ಗದ್ದಲ ಮಾಡುತ್ತಿದ್ದರಿಂದ ವಿಧಾನ ಸೌಧದ ಮುಖ್ಯದ್ವಾರ ಕಾರಿಡಾರ್ ಹಾಗೂ ಮೆಟ್ಟಿಲುಗಳ ಬಳಿ ಬಂದೋಬಸ್ತ ಮಾಡಿ ಅನುಚಿತವಾಗಿ, ಉಪದ್ರವ ನೀಡುತ್ತಿದ್ದ ಕೆಲವರನ್ನು ಅಲ್ಲಿಂದ ಚದುರಿಸಿದ್ದು ಇರುತ್ತದೆ. ಆ ದಿನ ಸುವರ್ಣ ಸೌಧ, ಬೆಳಗಾವಿಯಲ್ಲಿ ನಡೆಯುತ್ತಿದ್ದ ಅಧಿವೇಶನದ ಕೊನೆಯ ದಿನವಾಗಿದ್ದರಿಂದ ಸಾರ್ವಜನಿಕರು ಮತ್ತು ಎಲ್ಲ ಜನಪ್ರತಿನಿಧಿಗಳು ವಿಧಾನ ಪರಿಷತ್ತಿನ ಆವರಣದಲ್ಲಿ ಜಮಾಯಿಸಿದ್ದರಿಂದ ಅದೇ ಕಾಲಕ್ಕೆ ಮೆಟ್ಟಿಲುಗಳ ಮೇಲೆ ಶ್ರೀ ಸಿ. ಟಿ. ರವಿ ರವರು ತಮ್ಮ ಬೆಂಬಲಿಗರೊಂದಿಗೆ ಕುಳಿತು ಪ್ರತಿಭಟನೆ ಮಾಡುತ್ತಿರುವಾಗ ಇದನ್ನು ಗಮನಿಸಿ ಬಿ.ಜೆ.ಪಿ ಪಕ್ಷದ ಕಾರ್ಯಕರ್ತರು ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಲ್ಲದೇ ಕಲಾಪ ವೀಕ್ಷಣೆಗೆ ಬಂದಂತ ಸಾರ್ವಜನಿಕರು ಹೆಚ್ಚಿನ ಪ್ರಮಾಣದಲ್ಲಿ ಸೇರುತ್ತಿದ್ದುದ್ದನ್ನು ಗಮನಿಸಿ ಕಾನೂನು ಮತ್ತು ಸುವ್ಯವಸ್ಥೆಯ ಹಿತದೃಷ್ಟಿಯಿಂದ ನಾನು ಮತ್ತು ಹಾಜರಿದ್ದ ಎಲ್ಲ ಪೊಲೀಸ್ ಅಧಿಕಾರಿಗಳು ಮೇಲಾಧಿಕಾರಿಗಳಿಗೆ ವಿಷಯ ತಿಳಿಸಿ, ಪರಿಸ್ಥಿತಿಯ ಗಂಭೀರತೆಯನ್ನು ಶ್ರೀ ಸಿ. ಟಿ. ರವಿ ರವರಿಗೆ ಸಹ ತಿಳಿಸಿ ವಿನಂತಿಸಿಕೊಂಡರೂ ಕೂಡ ಅವರು ಪ್ರತಿಭಟನೆಯನ್ನು ಮುಂದುವರೆಸಿದ್ದರು. ಅವರನ್ನು ಅಲ್ಲಿಯೇ ಇರಲು ಬಿಟ್ಟಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟು ಉದ್ವಘ್ನ/ ಗಲಭೆ ಆಗುವ ಪರಿಸ್ಥಿತಿ ಇದ್ದಿದ್ದರಿಂದ ಹಾಗೂ ನಗರದಲ್ಲಿ ವಾತಾವರಣ ಹದೆಗೆಡುವ ಸಾಧ್ಯತೆಗಳು ಕಂಡು ಬಂದಿದ್ದರಿಂದ ಶ್ರೀ ಸಿ. ಟಿ. ರವಿ ರವರ ಭದ್ರತೆ ಹಾಗೂ ಸುರಕ್ಷತೆಯ ದೃಷ್ಟಿಯಿಂದ ಅವರನ್ನು ಪೊಲೀಸ್ ಬೆಂಗಾವಲಿನಲ್ಲಿ	

		ಖಾನಾಪೂರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಲಾಯಿತು. ಆದ್ದರಿಂದ ವಿಧಾನ ಪರಿಷತ್ತು ಶಾಸಕರಾದ ಶ್ರೀ. ಎನ್ ರವಿಕುಮಾರ ಮತ್ತು ಶ್ರೀ. ಡಿ ಎಸ್ ಅರುಣಕುಮಾರ ರವರು ಪ್ರಸ್ತಾಪಿಸಿದಂತೆ ಅವರಿಗೆ ಮತ್ತು ಇನ್ನಿತರ ಶಾಸಕರನ್ನು ಬಂಧಿಸಿಲ್ಲ ಹಾಗೂ ಅವರಿಗೆ ಯಾವುದೇ ಉತ್ತರ ನೀಡದೇ ಕಳುಹಿಸಿ ಕೊಟ್ಟಿಲ್ಲ ಎನ್ನುವುದು ಸರಿ ಅಲ್ಲ.	
4.	ವಿಷಯ ತಿಳಿದಾಗ ನಾವುಗಳು ರಾತ್ರಿ 8.00 ಗಂಟೆಗೆ ಖಾನಾಪೂರ ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ನಮ್ಮ ಶಾಸಕರಾದ ಶ್ರೀ. ಸಿ. ಟಿ. ರವಿ ಯವರು ಠಾಣೆಯಲ್ಲಿ ಇದ್ದರು. ನಾವು ಶ್ರೀ. ಸಿ. ಟಿ ರವಿ ಯವರನ್ನು ಏಕೆ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದಿದ್ದಿರಾ ? ಬಂಧಿಸಲು ಮಾನ್ಯ ಸಭಾಪತಿಗಳ ಅನುಮತಿ ಪಡೆದಿದ್ದೀರಾ ? ನೀಡುವ ಯಾವುದೇ ನೋಟಿಸನ್ನು ನೀಡದೇ ಹೇಗೆ ಬಂಧಿಸಿರುವಿರಿ ? ಎಂದು ಕೇಳಿದಾಗ ಯಾವುದೇ ಉತ್ತರ ನಮಗೆ ಪೊಲೀಸ್ ಅಧಿಕಾರಿಗಳು ನೀಡಿರುವುದಿಲ್ಲ. ನಾವು ತಕ್ಷಣ ಪ್ರತಿ ದೂರನ್ನು ನೀಡಿದರೂ ಸಹ "0" ಎಫ್ಐಆರ್ ಕೂಡ ಹಾಕದೇ ನಮ್ಮ ದೂರಿಗೆ ಪೊಲೀಸ್ ಅಧಿಕಾರಿಗಳು ಸ್ವೀಕೃತಿ ನೀಡಲಿಲ್ಲ. ಯಾವುದೇ ರೀತಿ ಸ್ಪಂದನೆ ನೀಡಲಿಲ್ಲ. ಆಯುಕ್ತರಾದ ಶ್ರೀ. ಏಡಾ ಮಾರ್ಟಿನ್ ಐಪಿಎಸ್ ಹಾಗೂ ಡಿಸಿಪಿ ಶ್ರೀ. ರೋಹನ್ ಜಗದೀಶ ಉಪಸ್ಥಿತರಿದ್ದರೂ ಕೂಡಾ ನಮಗೆ ಸ್ಪಂದನೆ ಸಿಗಲಿಲ್ಲ. ನಂತರದಲ್ಲಿ ಏಕಾಏಕಿ ಶಾಸಕರನ್ನು ಹೊರಗೆ ದಬ್ಬಿ ನಂತರ ಶಾಸಕರಾದ ಶ್ರೀ. ಸಿ. ಟಿ. ರವಿ ಯವರನ್ನು ಬೆಂಗಳೂರಿಗೆ ಕರೆದುಕೊಂಡು ಹೋಗುತ್ತೇವೆ ಅಂತಾ ಹೇಳಿ ಪೊಲೀಸ್ ವಾಹನದಲ್ಲಿ ಕರೆದೊಯ್ದರು. ನಂತರ ಬೆಂಗಳೂರಿಗೆ ಹೋಗದೇ ರಾತ್ರಿ ಇಡೀ ಬೆಳಗಾವಿ ನಗರ ಹಾಗೂ ಬೆಳಗಾವಿಯ ಸುತ್ತಮುತ್ತಲಿನ	ಸುವರ್ಣ ಸೌಧದ ಮೆಟ್ಟಿಲುಗಳ ಮೇಲೆ ಕುಳಿತು ಪ್ರತಿಭಟನೆ ನಡೆಸುತಿದ್ದಾಗ ಮೇಲೆ ವಿವರಿಸಿದ ಭದ್ರತೆಯ ಕಾರಣಗಳ ಮೇಲೆ ಶ್ರೀ. ಸಿ. ಟಿ ರವಿ ರವರನ್ನು ಖಾನಾಪೂರ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದ ಬಗ್ಗೆ ಸೂಕ್ತವಾಗಿ ಮಾಹಿತಿ ನೀಡಲಾಗಿದೆ. ಶ್ರೀ ಸಿ. ಟಿ. ರವರ ವಿರುದ್ಧ ಮಾಡಲಾದ ಪ್ರಕರಣದ ತನಿಖಾಧಿಕಾರಿಗಳು ಅವರ ಮೇಲೆ ದಾಖಲಾದ ಪ್ರಕರಣದ ಬಗ್ಗೆ ವಿವರಿಸಿ ತನಿಖಾಧಿಕಾರಿಗಳು ನಿಯಮಾನುಸಾರ ಬಂಧನದ ಕುರಿತಂತೆ ನೀಡಲಾದ ನೋಟಿಸಿಗೆ ಮಾನ್ಯ ಸಿ.ಟಿ ರವಿ ರವರು ಸಹಿ ಮಾಡದೇ ಅಸಹಕಾರ ನೀಡಿದ್ದರಿಂದ ಬಂಧನದ ವಿಷಯವನ್ನು ಅವರ ಹಿತೈಶಿಯಾದ ಎಂ.ಎಲ್.ಸಿ ಶ್ರೀ. ಕೇಶವ ಪ್ರಸಾದ ಇವರಿಗೆ ದೂರವಾಣಿ ಮುಖಾಂತರ ತಿಳಿಸಿ ದಸ್ತಗಿರಿ ನಿಯಮಗಳನ್ನು ಅನುಸರಿಸಿ ಕಾನೂನಾತ್ಮಕವಾಗಿ ವಶಕ್ಕೆ ಪಡೆಯಲಾಗಿದೆ. ಅದರಂತೆ ಜನಪ್ರತಿನಿಧಿಗಳನ್ನು ವಶಕ್ಕೆ ಪಡೆದುಕೊಂಡಾಗ ಅನುಸರಿಬೇಕಾದ ನಿಯಮದಂತೆ ಮಾನ್ಯ ಸಭಾಪತಿಗಳಿಗೆ ಮಾಹಿತಿಯನ್ನು ಸಲ್ಲಿಸಲಾಗಿದೆ. ಶ್ರೀ ಸಿ ಟಿ ರವಿ ರವರು ಖಾನಾಪೂರ ಠಾಣೆಯಲ್ಲಿದ್ದಾಗ ರಾತ್ರಿ ಅವರನ್ನು ದಸ್ತಗಿರಿ ಮಾಡಿದ ನಂತರ ಒಂದು ಲಿಖಿತ ದೂರನ್ನು ನೀಡಿದ್ದರು. ಸದರಿ ದೂರನ್ನು ಖಾನಾಪೂರ ಪೊಲೀಸ್ ನಿರೀಕ್ಷಕರು ಸ್ವೀಕರಿಸಿಕೊಂಡು, ಎಸ್ಪಿ ಬೆಳಗಾವಿ ಜಿಲ್ಲೆ ರವರ ಮುಖಾಂತರ ಪೊಲೀಸ್ ಕಮೀಷನರ ಬೆಳಗಾವಿಗೆ ಕಳುಹಿಸಿರುತ್ತಾರೆ. ಈ ಮಧ್ಯೆ ಮೇಲೆ ಉಲ್ಲೇಖಿಸಿದ ಹಿರೇಬಾಗೇವಾಡಿ ಪೊಲೀಸ್ ಠಾಣೆ ಗುನ್ನೆ ನಂ.187/2024 ನೇದ್ದು ದಾಖಲಾಗಿದ್ದರಿಂದ ಮತ್ತು ಎರಡೂ ದೂರುಗಳು ಒಂದೇ ಘಟನೆಗೆ ಸಂಬಂಧಿಸಿದ್ದರಿಂದ ಸದರಿ ದೂರನ್ನು ಪ್ರಕರಣದಲ್ಲಿ ಅಳವಡಿಸಿಕೊಂಡು ತನಿಖೆಯನ್ನು ಸಿಐಡಿ ಯವರು ಮುಂದುವರೆಸಿದ್ದಾರೆ. ಇಲ್ಲಿ ಖುದ್ದಾಗಿ ನಾವೇ ಇದ್ದುದ್ದರಿಂದ ಹಾಗೂ ಅವರು ನೀಡಿದ ದೂರನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದೆಂದು ಶ್ರೀ ಸಿ. ಟಿ. ರವರಿಗೆ ನಾನೇ ತಿಳಿಸಿದ್ದರಿಂದ ಅವರ ದೂರನ್ನು ಸ್ವೀಕರಿಸಿ ನಿಯಮಾನುಸಾರ ನಮ್ಮ ಘಟಕಕ್ಕೆ ಪಿಐ ಖಾನಾಪೂರ ರವರು ಕಳುಹಿಸಿದ್ದು ಹೀಗಾಗಿ "0" ಎಫ್ಐಆರ್ ದಾಖಲಿಸಿರುವುದಿಲ್ಲ. ಆಮೇಲೆ ಪಿಐ ಖಾನಾಪೂರ ರವರ ಎಸ್ಪಿ ಬೆಳಗಾವಿ ಜಿಲ್ಲೆ ರವರ ಮುಖಾಂತರ ಕಳುಹಿಸಿದ ದೂರು ಪ್ರತಿ ನಮ್ಮ ಕಛೇರಿಗೆ	

	ಪ್ರದೇಶಗಳಿಗೆ ಪೊಲೀಸ್ ವಾಹನದಲ್ಲಿ ಸುತ್ತಾಡಿಸಿದ್ದಾರೆ. ದಿನಾಂಕ. 20.12.2021 ರಂದು ಶುಕ್ರವಾರದಂದು ಬೆಳಿಗ್ಗೆ. 10.30ಕ್ಕೆ ಬೆಳಗಾವಿಯ ಜಿಲ್ಲಾ ನ್ಯಾಯಾಲಯಕ್ಕೆ ಹಾಜರು ಪಡಿಸಿದಾಗ ನಮಗೆ ವಿಷಯ ತಿಳಿದಿರುತ್ತದೆ.	ಸ್ವೀಕರಿಸಿ ತಕ್ಷಣ ಎಫ್‌ಐಆರ್ ದಾಖಲಿಸಿಕೊಳ್ಳುವಂತೆ ಪಿಐ ಹಿರೇಬಾಗೇವಾಡಿ ರವರಿಗೆ ಜ್ಞಾಪನ ನೀಡಿರುತ್ತೇನೆ. ಆದರೆ ಈ ಮಧ್ಯ ಈ ಪ್ರಕರಣವನ್ನು ಪೊಲೀಸ್ ಪ್ರಧಾನ ಕಛೇರಿ ಪತ್ರ ಸಂಖ್ಯೆ. ಕಾ&ಸು/2/261/2024–25 ದಿನಾಂಕ. 23/12/2024 ವರ್ಗಾಯಿಸಲು ಆದೇಶಿಸಿದಂತೆ ಹಿರೇಬಾಗೇವಾಡಿ ಪೊಲೀಸ್ ಠಾಣೆ ಪ್ರ ಸಂಖ್ಯೆ. 186/2024 & 187/2024 ನೇದ್ದವುಗಳನ್ನು ಸಿಐಡಿ ಘಟಕಕ್ಕೆ ವರ್ಗಾಯಿಸಲಾಗಿತ್ತು. ಆದ್ದರಿಂದ ಮಾನ್ಯ ಸಿ. ಟಿ. ರವರ ದೂರನ್ನೂ ಸಹ ಕೂಡಲೇ ಸಿಐಡಿ ಘಟಕಕ್ಕೆ ವರ್ಗಾಯಿಸಲಾಗಿದೆ. ಶ್ರೀ ಸಿ. ಟಿ. ರವಿ ರವರು ತಮ್ಮ ಮೇಲೆ ದಾಖಲಾದ ಪ್ರಕರಣವನ್ನು ರದ್ದತಿ ಕೋರಿ ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರಿನಲ್ಲಿ ರಿಟ್ ಪಿಟಿಷನ್ ಸಂಖ್ಯೆ.791/2025 ರ ಪ್ರಕಾರ ಸಲ್ಲಿಸಿದ ಅರ್ಜಿಯನ್ನು ಮಾನ್ಯ ನ್ಯಾಯಾಲಯವು ದಿನಾಂಕ.02/05/2025 ರಂದು ವಜಾಗೊಳಿಸಿದ್ದು ಇರುತ್ತದೆ. ಸದರಿ ಪ್ರಕರಣದಲ್ಲಿ ತಮಗೆ ಸಲ್ಲಿಸಿದ ಮನವಿಯಲ್ಲಿ ಕಾಣಿಸಿದ ಅಂಶಗಳನ್ನು ಉಲ್ಲೇಖಿಸಿರುವುದಿಲ್ಲ. ಕಾರಣ ಎಲ್ಲ ಅಂಶಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಿ ನಾನು ಮಾನ್ಯ ಸದನದ ಗೌರವಾನ್ವಿತ ಸದಸ್ಯರ ಘನತೆಗೆ ದಕ್ಕೆ ತರುವಂತಹ ಯಾವುದೇ ರೀತಿಯ ಕ್ರಮಗಳನ್ನು ಕೈಕೊಂಡಿರುವುದಿಲ್ಲ ಮತ್ತು ನಿಯಮಾನುಸಾರ ಬಿಎನ್‌ಎಸ್‌ಎಸ್ ಅಡಿಯಲ್ಲಿಯೇ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ವಿವರಣೆಯನ್ನು ಮಾನ್ಯರು ಅಂಗೀಕರಿಸಲು ವಿನಂತಿ.	

(ಡಾ॥ ಮಂಗಳ ಜಿ.ಎಸ್) 20/5/25

ಸರ್ಕಾರದ ವಿಶೇಷ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).